ಭಾನುವಾರ, ಸೆಪ್ಟೆಂಬರ್ 17, 2023 | ₹ 7.00
www.prajavani.net
prajavani.net prajavani prajavani prajavani
# ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಮಂದಹಾಸ**
ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಇಶಾ ದೇವೊಲ್ ಪಾಲ್ಗೊಂಡಿದ್ದರು

# ವಿಶ್ವಸೃಷ್ಟಿಯ ವಿಶ್ವಕರ್ಮತತ್ವ

• ವೀರೇಶ ಬಡಿಗೇರ

ಇಂದು ವಿಶ್ವಕರ್ಮ ಜಯಂತಿ



ಶ್ರುತಿ ಮತ್ತು ಪುರಾಣಗಳಲ್ಲಿ ಶಿವನನ್ನು ವಿಶ್ವಕರ್ಮನೆಂದು ವರ್ಣಿಸಲಾಗಿದೆ. ಅವನು ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ ಮತ್ತು ಅನುಗ್ರಹ ಎಂಬ ಐದು ಹೊಣೆಗಾರಿಕೆಯುಳ್ಳವನು. ಯಜುರ್ವೇದದ ಪ್ರಕಾರ ವಿಶ್ವಕರ್ಮನು ತನ್ನ ಸಂಕಲ್ಪ ಮಾತ್ರದಿಂದಲೇ ಈ ಸೃಷ್ಟಿಯನ್ನು ಮಾಡಿದನು. ತನ್ನ ಶ್ರುತ, ಧಾರಣ, ಪ್ರಜ್ಞಾಶಕ್ತಿಗಳ ಮೂಲಕ ಜಗತ್ತಿನ ಚೇತನ ಮತ್ತು ಅಚೇತನ ರೂಪಗಳಲ್ಲಿ ಅಸಾಧಾರಣ ಚೈತನ್ಯಶಕ್ತಿ ತುಂಬಿದವನು. ಸೃಷ್ಟಿಯಲ್ಲಿರುವ ಚರಾಚರವಾಗಲೀ ಮೂರ್ತಾಮೂರ್ತವಾಗಲೀ, ಯಾವುವೂ ನಿಷ್ಕರ್ಮವಾಗಿರುವುದು ಸಾಧ್ಯವಿಲ್ಲ. ಎಲ್ಲ ಕರ್ಮಗಳಿಗೆ ವಿಶ್ವಕರ್ಮನೇ ಅಧಿಷ್ಠಾನ ಕರ್ತೃ. ಈ ಅರ್ಥದಲ್ಲಿ ವಿಶ್ವಕರ್ಮನೆಂದರೆ ಸಕಲ ಶಕ್ತಿವಂತ ಹಾಗೂ ಸರ್ವಸ್ಯ ಕರ್ತಾರ.

ವಿಶ್ವಕರ್ಮನೆಂದರೆ ಕೇವಲ ನಾಮ–ರೂಪಗಳಲ್ಲ; ಅದೊಂದು ಸಕರ್ಮಕ ತತ್ವ. ಮೌನೇಶ್ವರರು 'ನಾನಾ ದೇವರು ಚಾಣಿನ ಮಕ್ಕಳು' ಎಂದು ಹೇಳುತ್ತಾರೆ. ಎಂದರೆ ಮೂವತ್ತಮೂರು ಕೋಟಿ ದೇವತೆಗಳಿಗೆ ನಾಮ–ರೂಪಗಳನ್ನು ಕೊಟ್ಟು, ಅವರಿಗೆ ಕರ್ತೃತ್ವ ಮತ್ತು ಕರ್ತವ್ಯಗಳನ್ನು ನಿಯಮಿಸಿದ ವಿಶ್ವಕರ್ಮನಿಗೆ ನಾಮ–ರೂಪಗಳಿಲ್ಲ. ರುದ್ರತ್ವ, ವಿಷ್ಣುತ್ವ, ಬ್ರಹ್ಮತ್ವ, ನಾರಾಯಣತ್ವ, ಇಂದ್ರತ್ವ, ಅಗ್ನಿತ್ವ ಮುಂತಾದ ಎಲ್ಲ ರೂಪ ಮತ್ತು ಕರ್ಮಗಳು ಗುಣಾತ್ಮಕವಾಗಿ ವಿಶ್ವಕರ್ಮನಲ್ಲಿ ಅಡಕವಾಗಿವೆ.

ಅಖಂಡ ಕೋಟಿ ಬ್ರಹ್ಮಾಂಡದಲ್ಲಿ ಯಾವುದು ಉಂಟೋ, ಯಾವುದನ್ನು ನಮ್ಮ ಕಣ್ಣಿನಿಂದ ನೋಡುತ್ತೇವೆಯೋ, ಯಾವುದನ್ನು ಕೇಳುತ್ತೇವೆಯೋ, ಯಾವುದರ ಕುರಿತು ಆಲೋಚಿಸುತ್ತೇವೆಯೋ, ಯಾವುದರ ಕುರಿತು ತಿಳಿಯುತ್ತೇವೆಯೋ, ಅವೆಲ್ಲವೂ ವಿಶ್ವಕರ್ಮನಲ್ಲಿ ಬಯಲುರೂಪದಲ್ಲಿ ಬೆರೆತಿವೆ. ಅಥರ್ವಶ್ರುತಿ ಹೇಳುವಂತೆ ವಿಶ್ವಕರ್ಮನೆಂದರೆ 'ವಾಚಸ್ಪತಿ'. ವಾಣಿಯ ಮೂಲಕ ಉಂಟಾಗುವ ಎಲ್ಲ ವಿಧದ ಜ್ಞಾನಕ್ಕೆ ಕರ್ತೃಸ್ಥಾನದಲ್ಲಿರುವವನು. ಅವನು ಸ್ವಯಂಭೂ ಮತ್ತು ಸ್ವತಂತ್ರ; ತ್ರಿಮೂರ್ತಿಗಳಿಗೆ ಈ ಜಗದ ಹೊಣೆಗಾರಿಕೆಯನ್ನು ವಹಿಸಿದವನು. ಬ್ರಹ್ಮನನ್ನೇ ಸೃಷ್ಟಿಸಿ ಅವನಿಗೆ ವೇದಗಳನ್ನು ಕಲಿಸಿದವನು ಅವನು ಎಂದು ಶ್ವೇತಾಶ್ವತರೋಪನಿಷತ್ತು ಹೇಳುತ್ತದೆ. ಅವನು ಸುಂದರರೂಪವನ್ನು ನಿರ್ಮಿಸುವವನು ಎಂದು ಋಗ್ವೇದ ಹೇಳುತ್ತದೆ.

ಅನಂತಮಯವಾದ ಸಕಲಕರ್ಮಗಳನ್ನು ಯಾರು ಆಚರಿಸಬಲ್ಲರೋ ಆತನೇ ವಿಶ್ವಕರ್ಮ; ಅವನು ಜ್ಞಾನ ಮತ್ತು ವಿಜ್ಞಾನಗಳಿಂದ ಆವೃತವಾದವನು. ಶಿಲ್ಪಶಾಸ್ತ್ರವನ್ನು ಅಮರಕೋಶದಲ್ಲಿ 'ವಿಜ್ಞಾನ'ವೆಂದು ಕರೆಯಲಾಗಿದೆ. ಜ್ಞಾನ ಮತ್ತು ವಿಜ್ಞಾನಗಳಿಂದ ಕೂಡಿದ ವಿಶ್ವಕರ್ಮನು ಯಾವಾಗಲೂ ಒಂದೇ ರೀತಿ ಇರುವನು. ಮಣ್ಣು, ಕಲ್ಲು, ಚಿನ್ನಗಳ ವ್ಯತ್ಯಾಸವನ್ನು ನೋಡದೇ ಒಂದೇ ಸಮನಾಗಿ ಭಾವಿಸುವವನೇ ಯೋಗಿ. ಅಂತಹ ಸಮಭಾವವುಳ್ಳವನೇ ವಿಶ್ವಕರ್ಮ.

ವಿಶ್ವಕರ್ಮನು ಆತ್ಮಸಂಸ್ಕೃತಿಯ ಪ್ರತಿನಿಧಿ. ಈ ಆತ್ಮಸಂಸ್ಕೃತಿಯ ಪ್ರತೀಕವಾದ ಶಿಲ್ಪಗಳ ಆರಾಧನೆಯಿಂದ ಆರಾಧಕ ತನ್ನನ್ನು ತಾನು ಸಂಸ್ಕಾರ ಮಾಡಿಕೊಳ್ಳಬೇಕೆಂದು ಐತ್ತರೇಯ ಬ್ರಾಹ್ಮಣ ಹೇಳುತ್ತದೆ. ಅಂತಹ ಶಿಲ್ಪಗಳನ್ನು ಒದಗಿಸುವ ಶಿಲ್ಪಿಯೇ ವಿಶ್ವಕರ್ಮ ಅಥವಾ ಪಾಂಚಾಳ. ಶೈವಾಗಮದಲ್ಲಿ ಸ್ವರ್ಣಾದಿ ಪಂಚಶಿಲ್ಪಗಳಿಂದ ಲೋಕೋಪಕಾರಿಯಾಗಿ ಲೋಕದ ಸೌಂದರ್ಯವನ್ನು ಹೆಚ್ಚಿಸುವವನೇ ಪಾಂಚಾಳ ಎಂದು ಹೇಳಲಾಗಿದೆ. ಪಂಚಮಹರ್ಷಿಗಳಿಗೆ ಕ್ರಮವಾಗಿ ಮನು, ಮಯ, ತ್ವಷ್ಟ್ರ, ಶಿಲ್ಪಿ, ವಿಶ್ವಜ್ಞ ಎಂಬ ಹೆಸರುಗಳಿವೆ. ಅವರೇ ಕಬ್ಬಿಣ, ಮರ, ಕಂಚು, ಶಿಲೆ ಮತ್ತು ಸುವರ್ಣಾದಿಗಳಲ್ಲಿ ಕೆಲಸ ಮಾಡುವ ಪಾಂಚಾಳರು. ಇವರು ವಿಶ್ವಕರ್ಮನ ಗೋತ್ರೋದ್ಭವರು.

ವಿಶ್ವಕರ್ಮ ಪಂಚವದನನಾಗಿದ್ದಾನೆ. ಸದ್ಯೋಜಾತ (ಪೂರ್ವ), ವಾಮದೇವ (ದಕ್ಷಿಣ), ಅಘೋರ (ಪಶ್ಚಿಮ), ತತ್ಪುರುಷ (ಉತ್ತರ), ಈಶಾನ್ಯ (ಊರ್ಧ್ವ) – ಈ ಐದು ರೂಪಗಳಿಂದ ಸಾಕಾರನಾದವನೇ ವಿಶ್ವಕರ್ಮ ಪರಮಾತ್ಮ.

ಒಟ್ಟಿನಲ್ಲಿ ವಿಶ್ವಕರ್ಮ ಪರಮಾತ್ಮನೆಂದರೆ ಅದೊಂದು ಲೋಕತತ್ತ್ವ; ಲೋಕದ ಜ್ಞಾನ ಮತ್ತು ಕರ್ಮಮಾರ್ಗಗಳನ್ನು ಆಗುಮಾಡುತ್ತ, ಆಯಾ ಮತ ಮತ್ತು ವೃತ್ತಿಯವರು ತಮ್ಮ ತಮ್ಮ ಕೆಲಸಗಳ ಮೂಲಕವೇ ತಮ್ಮ ಬದುಕಿನ ಕ್ರಮಗಳನ್ನು ರೂಪಿಸಿಕೊಳ್ಳಲು ಪ್ರೇರಕವಾದ ಜೀವಪರತತ್ವ. ❖

## ಸುದ್ದಿ 2 ನಿಮಿಷ

### 'ಮೂವರು ಡಿಸಿಎಂ ಹೈಕಮಾಂಡ್‌ಗೆ ಪತ್ರ'

ತುಮಕೂರು: ರಾಜ್ಯದಲ್ಲಿ ಮೂವರು ಉಪಮುಖ್ಯಮಂತ್ರಿಗಳನ್ನು ನೇಮಕ ಮಾಡುವಂತೆ ಕೋರಿ ಕಾಂಗ್ರೆಸ್ ಹೈಕಮಾಂಡ್‌ಗೆ ಪತ್ರ ಬರೆಯಲಾಗುವುದು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ಪರಿಶಿಷ್ಟ ಜಾತಿ–ಪಂಗಡ, ಅಲ್ಪಸಂಖ್ಯಾತರು ಮತ್ತು ವೀರಶೈವ–ಲಿಂಗಾಯತ ಸಮುದಾಯಕ್ಕೆ ತಲಾ ಒಂದು ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಕೇಳಿಕೊಳ್ಳಲಾಗುವುದು. ಅಕ್ಟೋಬರ್ ಮೊದಲ ವಾರ ದೆಹಲಿಯಲ್ಲಿ ಹೈಕಮಾಂಡ್ ಭೇಟಿಯಾಗಿ ಮೂವರು ಉಪ ಮುಖ್ಯಮಂತ್ರಿ ನೇಮಕದ ಅಗತ್ಯ ಕುರಿತು ಮನವರಿಕೆ ಮಾಡಿಕೊಡಲಾಗುವುದು ಎಂದರು.

'ನನ್ನ ಈ ವಿಚಾರಕ್ಕೆ ಸಹಮತ ವ್ಯಕ್ತಪಡಿಸುವ ಮುಖಂಡರನ್ನು ಒಳಗೊಂಡ ನಿಯೋಗವನ್ನು ಹೈಕಮಾಂಡ್ ಭೇಟಿಯಾಗಲು ದೆಹಲಿಗೆ ಕರೆದುಕೊಂಡು ಹೋಗುವ ಬಗ್ಗೆ ಚಿಂತಿಸಲಾಗುವುದು' ಎಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ನಗರದಲ್ಲಿ ಶನಿವಾರ ಹೇಳಿದರು.

ಮುಂದಿನ ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅತಿ ಹೆಚ್ಚು ಸ್ಥಾನ ಗೆಲ್ಲಬೇಕಿದೆ. ಇದಕ್ಕೆ ಎಲ್ಲಾ ಸಮುದಾಯಗಳ ಬೆಂಬಲ ಬೇಕಾಗುತ್ತದೆ. ಈ ದೃಷ್ಟಿಯಿಂದ ಮೂವರು ಉಪಮುಖ್ಯಮಂತ್ರಿಗಳನ್ನು ನೇಮಕ ಮಾಡಿದರೆ ಚುನಾವಣೆಯಲ್ಲಿ ಅನುಕೂಲವಾಗಲಿದೆ ಎಂದು ತಮ್ಮ ವಾದವನ್ನು ಸಮರ್ಥಿಸಿಕೊಂಡರು.

'ನನ್ನ ಈ ಬೇಡಿಕೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ಡಿ.ಕೆ. ಸುರೇಶ್ ವಿರುದ್ಧ ಎಂದು ಭಾವಿಸಬೇಕಿಲ್ಲ. ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿ ಇದ್ದಾರೆ. ಇತರರಿಗೂ ಅವಕಾಶ ನೀಡಬೇಕು ಎನ್ನುವುದು ನನ್ನ ವಾದ. ಅವಕಾಶ ಕೇಳುವುದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.

ಬಿಜೆಪಿ ಶಾಸಕರಾದ ಎಸ್.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್ ಕಾಂಗ್ರೆಸ್‌ಗೆ ಸೇರುವ ಮಾಹಿತಿ ಇದೆ ಎಂದರು.

### 'ಪ್ರತಿಪಕ್ಷ ನಾಯಕನ ಆಯ್ಕೆಗೆ ಟೆಂಡರ್ ಪ್ರಕ್ರಿಯೆ ಮುಗಿದಿಲ್ಲ'

ಕನಕಗಿರಿ (ಕೊಪ್ಪಳ ಜಿಲ್ಲೆ): 'ವಿಧಾನಸಭೆ ವಿರೋಧ ಪಕ್ಷದ ನಾಯಕನ ಆಯ್ಕೆಗೆ ಇಂತಿಷ್ಟು ಹಣ ನೀಡಬೇಕು ಎಂದು ಮಾತುಕತೆ ಆಗಿದೆ. ಆದರೆ, ಹಣದ ಟೆಂಡರ್ ಪ್ರಕ್ರಿಯೆ ಮುಗಿದಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಆರೋಪ ಮಾಡಿದರು.

ಸಮೀಪದ ಆದಾಪುರ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಉದ್ಯಮಿಯೊಬ್ಬರಿಂದ ಬಹುಕೋಟಿ ರೂಪಾಯಿ ಪಡೆದುಕೊಂಡಿರುವ ಚೈತ್ರಾ ಕುಂದಾಪುರ ವಿಷಯ ಇಡೀ ರಾಜ್ಯಕ್ಕೇ ಗೊತ್ತು. ಶೇ 79ರಷ್ಟು ಬಿಜೆಪಿಗರು ಡೀಲ್ ಮಾಸ್ಟರ್‌ಗಳು' ಎಂದರು.

'ಕನಕಗಿರಿ ಕ್ಷೇತ್ರದ ತಿಮ್ಮರೆಡ್ಡಿ ಗಿಲ್ಲೆಸೂಗೂರು ಅವರು ಸಹ ಬಿಜೆಪಿ ಟಿಕೆಟ್ ಪಡೆಯಲು ₹21 ಲಕ್ಷ ನೀಡಿರುವುದು ಮಾಧ್ಯಮಗಳ ವರದಿಯಿಂದ ಗೊತ್ತಾಗಿದೆ. ಬಿಜೆಪಿಯಲ್ಲಿ ಸಚಿವರಾಗಲು ₹60 ಕೋಟಿಯಿಂದ ₹70 ಕೋಟಿ ಕೊಡಬೇಕು. ಮುಖ್ಯಮಂತ್ರಿಯಾಗಲು ₹2,000 ಕೋಟಿ ಕೊಡಬೇಕು ಎಂದು ಅವರದೇ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಈ ಹಿಂದೆ ಬಹಿರಂಗವಾಗಿಯೇ ಹೇಳಿಕೆ ನೀಡಿದ್ದರು' ಎಂದು ಹೇಳಿದರು.

ಟಿಕೆಟ್‌ಗೆ ಹಣ ಪಡೆದು ವಂಚನೆ • ಕುಮಾರಕೃಪಾದಲ್ಲಿ ಘಟನೆ ಮರುಸೃಷ್ಟಿ • ಉಡುಪಿ ಜಿಲ್ಲೆಯಲ್ಲಿ ಸಿಸಿಬಿ ಶೋಧ

# ಚೈತ್ರಾ–ಆಪ್ತರ ಬಳಿ ₹81 ಲಕ್ಷ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಟಿಕೆಟ್ ವಂಚನೆ ಪ್ರಕರಣದ ಆರೋಪಿಗಳ ಮನೆ ಹಾಗೂ ಖಾತೆ ಇರುವ ಬ್ಯಾಂಕ್‌ಗಳಲ್ಲಿ ಸಿಸಿಬಿ ಪೊಲೀಸರು ಶನಿವಾರ ಶೋಧ ನಡೆಸಿದ್ದು, ₹81 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

'ಆರೋಪಿ ಚೈತ್ರಾ ಕುಂದಾಪುರ ಹಾಗೂ ಇತರೆ ಆರೋಪಿಗಳಿಗೆ ಸಂಬಂಧಪಟ್ಟ ಸ್ಥಳಗಳಲ್ಲಿ ಶೋಧ ನಡೆಸಲು ನ್ಯಾಯಾಲಯದಿಂದ ವಾರೆಂಟ್ ಪಡೆಯಲಾಗಿತ್ತು. ಅದರಂತೆ ಉಡುಪಿ ಜಿಲ್ಲೆಗೆ ಹೋಗಿರುವ ವಿಶೇಷ ತಂಡ, ಶನಿವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಶೋಧ ನಡೆಸಿತು' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಚೈತ್ರಾ ಹಾಗೂ ಇತರರಿಗೆ ಸೇರಿದ್ದ ₹ 81 ಲಕ್ಷ ನಗದು, ₹ 23 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬ್ಯಾಂಕ್‌ನಲ್ಲಿದ್ದ 8 ಲಕ್ಷ ಮೊತ್ತದ ಠೇವಣಿ ಜಪ್ತಿ ಮಾಡಲಾಗಿದೆ. ಚೈತ್ರಾ ಲಾಕರ್‌ನಲ್ಲಿ ಚಿನ್ನಾಭರಣ ಪತ್ತೆಯಾಗಿದೆ' ಎಂದರು.

'ತಮ್ಮೂರಿನಲ್ಲಿ ಚೈತ್ರಾ ಮನೆ ನಿರ್ಮಾಣ ಮಾಡುತ್ತಿದ್ದು, ವಂಚನೆಯಿಂದ ಬಂದ ಹಣವನ್ನು ಬಳಕೆ ಮಾಡಿರುವ ಮಾಹಿತಿ ಇದೆ. ಮನೆ ನಿರ್ಮಾಣದ ದಾಖಲೆ ಹಾಗೂ ಆಸ್ತಿ ದಾಖಲೆಗಳನ್ನು ಸುಪರ್ದಿಗೆ ಪಡೆಯಲಾಗಿದೆ. ಇತರೆ ಆರೋಪಿಗಳ ಆಸ್ತಿ ದಾಖಲೆಗಳನ್ನೂ ಕಲೆಹಾಕಲಾಗಿದೆ' ಎಂದು ಅಧಿಕಾರಿ ಹೇಳಿದರು.

**ಆಸ್ಪತ್ರೆಯಲ್ಲಿ ಚೈತ್ರಾ:** ಚಾಮರಾಜಪೇಟೆಯಲ್ಲಿರುವ ಸಿಸಿಬಿ ಕಚೇರಿಯಲ್ಲಿ ಕುಸಿದುಬಿದ್ದಿದ್ದ ಚೈತ್ರಾ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿರುವುದಾಗಿ ಹೇಳಿರುವ ವೈದ್ಯರು, 'ಚೈತ್ರಾ ಪದೇ ಪದೇ ನಿತ್ರಾಣ ಸ್ಥಿತಿಗೆ ಹೋಗುತ್ತಿದ್ದಾರೆ. ಅವರಿಗೆ ಚಿಕಿತ್ಸೆ ನೀಡಿ, ತೀವ್ರ ನಿಗಾ ಘಟಕದಿಂದ ವಾರ್ಡ್‌ಗೆ ಸ್ಥಳಾಂತರಿಸಲಾಗುವುದು. ಬಳಿಕವೇ ಹೊರಗೆ ಹಳುಹಿಸಲಾಗುವುದು' ಎಂದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು, 'ಚೈತ್ರಾ ಅವರನ್ನು ಶನಿವಾರ ಕಳುಹಿಸುವುದಾಗಿ ವೈದ್ಯರು ಹೇಳಿದ್ದರು. ಆದರೆ, ರಾತ್ರಿಯವರೆಗೂ ಬಿಡುಗಡೆ ಮಾಡಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಆರೋಗ್ಯದ ಬಗ್ಗೆ ನಿಗಾ ವಹಿಸಿರುವುದಾಗಿ ತಿಳಿಸಿದ್ದಾರೆ. ಹೀಗಾಗಿ, ವೈದ್ಯರ ಸಲಹೆಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಚೈತ್ರಾ ಆತ್ಮಹತ್ಯೆಗೆ ಯತ್ನಿಸುವ ಸಾಧ್ಯತೆ ಇದೆ. ಮಹಿಳಾ ಸಾಂತ್ವನ ಕೇಂದ್ರದ ಸಿಬ್ಬಂದಿಯೂ ಈ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಭಾನುವಾರ, ಚೈತ್ರಾ ಬಿಡುಗಡೆಯಾಗುತ್ತಿದ್ದಂತೆ ಮಹಿಳಾ ಸಾಂತ್ವನ ಕೇಂದ್ರಕ್ಕೆ ಹೋಗುವುದಕ್ಕೂ ಮುನ್ನವೇ ವಿಚಾರಣೆ ನಡೆಸಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದರು.

**ಸ್ವಾಮೀಜಿ ಸುಳಿವು ಪತ್ತೆಗೆ ವಿಚಾರಣೆ:** 'ದೂರುದಾರ ಗೋವಿಂದ ಬಾಬು ಪೂಜಾರಿ ಅವರಿಂದ ₹1.50 ಕೋಟಿ ಪಡೆದಿದ್ದರು ಎನ್ನಲಾದ ಹೊಸಪೇಟೆಯ ಹಿರೇಹಡಗಲಿಯ ಅಭಿನವ ಹಾಲಶ್ರೀ ಸ್ವಾಮೀಜಿ ಸದ್ಯ ತಲೆಮರೆಸಿಕೊಂಡಿದ್ದಾರೆ. ಇವರು ಎಲ್ಲಿದ್ದಾರೆ ಎಂಬುದರ ಸುಳಿವು ಪತ್ತೆ ಮಾಡಲು, ಅವರ ಕಾರು ಚಾಲಕನನ್ನು ವಿಚಾರಣೆ ನಡೆಸಲಾಯಿತು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಸ್ವಾಮೀಜಿ ಬಳಿ ಹಲವು ವರ್ಷಗಳಿಂದ ಚಾಲಕ ಕೆಲಸ ಮಾಡುತ್ತಿದ್ದ. ಪ್ರಕರಣ ದಾಖಲಾಗುವುದಕ್ಕೂ ಮೂರು ದಿನ ಮುಂಚೆಯೇ ಸ್ವಾಮೀಜಿ ಮಠ ತೊರೆದಿದ್ದಾರೆ. ದೂರುದಾರರಿಂದ ಹಣ ಪಡೆದಿದ್ದ ಸಂಗತಿ ಚಾಲಕನಿಗೆ ಗೊತ್ತಿದೆ. ಆದರೆ, ಸ್ವಾಮೀಜಿ ಎಲ್ಲಿದ್ದಾರೆಂಬುದು ಚಾಲಕನಿಗೆ ಗೊತ್ತಿಲ್ಲ' ಎಂದು ಮೂಲಗಳು ತಿಳಿಸಿವೆ.

**ಕುಮಾರಕೃಪಾದಲ್ಲಿ ಮರುಸೃಷ್ಟಿ:** ಆರೋಪಿ ಬಿ.ಎಲ್. ಚನ್ನ ನಾಯ್ಕ ಸಮೇತ ಕುಮಾರಕೃಪಾ ಅತಿಥಿ ಗೃಹಕ್ಕೆ ಶನಿವಾರ ಹೋಗಿದ್ದ ಸಿಸಿಬಿ ಪೊಲೀಸರು, ಪ್ರಕರಣದ ಮರುಸೃಷ್ಟಿ ಮಾಡಿ ಮಹಜರು ನಡೆಸಿದರು.

### ಶಾಮೀಲಾಗಿರುವ ಎಲ್ಲರ ಬಂಧನ: ಕಮಿಷನರ್ ದಯಾನಂದ್

'ಬಿಜೆಪಿ ಟಿಕೆಟ್ ವಂಚನೆ ಪ್ರಕರಣದಲ್ಲಿ ಹಲವರು ಶಾಮೀಲಾಗಿದ್ದಾರೆ. ಸದ್ಯ 7 ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದ ಎಲ್ಲರನ್ನೂ ಬಂಧಿಸುತ್ತೇವೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇದೊಂದು ವಂಚನೆ ಪ್ರಕರಣವಾಗಿರುವುದರಿಂದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ. ವಂಚನೆ ಹಣ ಎಲ್ಲಿದೆ ಎಂಬುದನ್ನು ಪತ್ತೆ ಮಾಡಿ, ಜಪ್ತಿ ಮಾಡಲಾಗುವುದು' ಎಂದರು.

### ದೂರುದಾರರ ಕಚೇರಿಯಲ್ಲಿ ಆತ್ಮಹತ್ಯೆಗೆ ಯತ್ನ

ಬಿಜೆಪಿ ಟಿಕೆಟ್ ವಂಚನೆ ಪ್ರಕರಣ ದಾಖಲಾಗುವುದಕ್ಕೂ ಮುನ್ನ ದೂರುದಾರರ ಜೊತೆ ಚೈತ್ರಾ ಕುಂದಾಪುರ, ಗಗನ್ ಕಡೂರು ಹಾಗೂ ಇತರರು ಸಂಧಾನ ನಡೆಸಿದ್ದ ಸಂಗತಿ ಪತ್ತೆಯಾಗಿದೆ. ಇದೇ ಸಂದರ್ಭದಲ್ಲಿ ಆರೋಪಿ ಗಗನ್, ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಿ.ಸಿ.ಟಿ.ವಿ ದೃಶ್ಯಗಳನ್ನು ದೂರುದಾರ ಸಿಸಿಬಿ ಪೊಲೀಸರಿಗೆ ನೀಡಿದ್ದಾರೆ. ಅವುಗಳನ್ನು ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

ಏಪ್ರಿಲ್ 24ರಂದು ಮಧ್ಯಾಹ್ನ ಚೈತ್ರಾ ಕುಂದಾಪುರ ಹಾಗೂ ಗಗನ್, ದೂರುದಾರರ ಕಚೇರಿಗೆ ಹೋಗಿದ್ದರು. ಹಣ ವಾಪಸು ನೀಡುವ ಸಂಬಂಧ ಮಾತುಕತೆ ನಡೆಸುತ್ತಿದ್ದರು. ಇದೇ ಸಂದರ್ಭದಲ್ಲಿ ಗಗನ್, 'ನಾನು ಸಾಯುತ್ತೇನೆ' ಎಂದು ಹೇಳಿ ಬಾಟಲಿಯಲ್ಲಿದ್ದ ವಿಷ ಕುಡಿಯಲು ಯತ್ನಿಸಿದ್ದರು. ಸ್ಥಳದಲ್ಲಿದ್ದ ಕಚೇರಿ ಸಿಬ್ಬಂದಿ, ವಿಷದ ಬಾಟಲಿ ಕಸಿದುಕೊಂಡಿದ್ದರು. ನಂತರ, ಕುಸಿದು ಬಿದ್ದಿದ್ದ ಗಗನ್‌ನನ್ನು ಹೊರಗಡೆ ಕರೆದೊಯ್ದಿದ್ದರು. ಈ ದೃಶ್ಯ ವಿಡಿಯೊದಲ್ಲಿದೆ.

### ಶಾಸಕರ ಹೆಸರು ಪ್ರಸ್ತಾಪ: ಆಡಿಯೊ ಹರಿದಾಟ

ಬಿಜೆಪಿ ಟಿಕೆಟ್ ವಂಚನೆ ಪ್ರಕರಣದ ಆರೋಪಿ ಚೈತ್ರಾ ಕುಂದಾಪುರ ಹಾಗೂ ಪ್ರಸಾದ್ ಬೈಂದೂರು ನಡುವೆ ನಡೆದಿದೆ ಎನ್ನಲಾದ ಮಾತುಕತೆಯ ಆಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಸುನೀಲ್‌ಕುಮಾರ್ ಎಂಬ ಹೆಸರು ಪ್ರಸ್ತಾಪವಾಗಿದೆ. ಆಡಿಯೊ ವಿವರ ಇಂತಿದೆ

**ಪ್ರಸಾದ್ ಬೈಂದೂರು:** ಹರಿ ಓಂ
**ಚೈತ್ರಾ ಕುಂದಾಪುರ:** ಹಾ. ಪ್ರಸಾದ್
**ಪ್ರಸಾದ್:** ಮುಟ್ಟಿಸಿದೆ
**ಚೈತ್ರಾ:** ಓ ಆಯ್ತಾ...
**ಪ್ರಸಾದ್:** ಹಾ..
**ಚೈತ್ರಾ:** ಇಷ್ಟ ಬೇಗ.. ಓ ಗಂಟೆ 6.22 ಆಯ್ತಲ್ಲ.. ಬೇಗ ಹೋಗಿದ್ರಾ?
**ಪ್ರಸಾದ್:** 6 ಗಂಟೆ ಹೇಳಿದ್ರಲ್ಲ. ಆರು ಮುಕ್ಕಾಲಿಗೆ ಮುಟ್ಟಿಸಿದೆ.
**ಚೈತ್ರಾ:** ಅವರಿಗೆ ಫೋನ್ ಮಾಡಿ ಹೇಳಬೇಕಿತ್ತು.
**ಪ್ರಸಾದ್:** ಹಾ. ಗಗನ್‌ಗೆ ಹೇಳಿದೆ. ಗಗನ್‌ಗೆ ಮಾಡಿ ನಿಮಗೆ ಮಾಡಿದೆ.
**ಚೈತ್ರಾ:** ಸರಿ
**ಪ್ರಸಾದ್:** ಹಾ. ಅವರ ಸಂಘಟನೆ ಇಬ್ಬರು ಹುಡುಗರು ಇದ್ದರು.
**ಚೈತ್ರಾ:** ಎಲ್ಲಿ ಇದ್ದರು?
**ಪ್ರಸಾದ್:** ಅದು... ಕಾರ್ಕಳದ ರಸ್ತೆಯಲ್ಲಿ
**ಚೈತ್ರಾ:** ಬಹುಶಃ. ಸುನೀಲ್ ಕುಮಾರ್ ಮನೆಗೆ ಹೋಗ್ತಾರಾ?
**ಪ್ರಸಾದ್:** ಸುನೀಲ್‌ಕುಮಾರ್ ಮನೆಗಾ?
**ಚೈತ್ರಾ:** ಆ ಮತ್ತೆ ಅಲ್ಲಿ ಯಾಕೆ ಬರ್ತಾರೆ
**ಪ್ರಸಾದ್:** ಒಕೆ ಹೇಳ್ಬಿಡಿ. ನಾನು ಮಾಡಿದ್ದೇನೆ.
**ಚೈತ್ರಾ:** ಆಯ್ತು ಇನ್ನೊಂದು ಸಲ ಮಾಡಿ ಹೇಳುತ್ತೇನೆ.

### 'ಡಿಸಿಎಂ: ಹೈಕಮಾಂಡ್ ತೀರ್ಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೂರು ಉಪ ಮುಖ್ಯಮಂತ್ರಿ ಹುದ್ದೆ ಸೇರಿದಂತೆ ಎಲ್ಲ ತೀರ್ಮಾನಗಳನ್ನು ಹೈಕಮಾಂಡ್ ಮಾಡುತ್ತದೆ. ಈ ಬಗ್ಗೆ ಬಹಿರಂಗವಾಗಿ ಚರ್ಚಿಸುವ ಅಗತ್ಯವಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಾವೆಲ್ಲರೂ ಅವರ ಜೊತೆ ಇದ್ದೇವೆ. ಬೇರೆ ಯಾವುದೇ ವಿಷಯಗಳನ್ನು ಸದ್ಯ ಚರ್ಚಿಸುವ ಅವಶ್ಯವಿಲ್ಲ' ಎಂದರು.

'ಕಾಂಗ್ರೆಸ್ ಪಕ್ಷ ಸಾಮಾಜಿಕ ನ್ಯಾಯಕ್ಕಾಗಿ ಯಾವಾಗಲೂ ಮುಂದೆ ಇರುವ ಪಕ್ಷ. ಪಕ್ಷ ಯಾವುದೇ ಕಾರ್ಯಕ್ರಮಗಳನ್ನು ಮಾಡಿದರೂ ಎಲ್ಲ ಜನರಿಗೆ ತಲುಪುವಂತೆ ಮಾಡುತ್ತೇವೆ; ಅದು ಮುಖ್ಯ. ಅದರ ಹೊರತಾಗಿ ನಮ್ಮದು ಅಲ್ಪಸಂಖ್ಯಾತರು, ರೈತರು, ಮಹಿಳೆಯರು, ಬಡವರ ಪರ ಸರ್ಕಾರ' ಎಂದರು.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಪ್ರತಿಕ್ರಿಯಿಸಿ, 'ಕಳೆದ ಚುನಾವಣೆಯಲ್ಲಿ ಎಲ್ಲ ಸಮುದಾಯಗಳು ಕಾಂಗ್ರೆಸ್ ಅನ್ನು ಬೆಂಬಲಿಸಿವೆ. ಆದರೆ, ಎಷ್ಟು ಉಪ ಮುಖ್ಯಮಂತ್ರಿ ಇರಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ' ಎಂದರು.

### ನಿರ್ಮಲಾಗೆ ಅನಿರುದ್ಧ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಕಾರ್ಯದರ್ಶಿಯಾಗಿದ್ದ ಅನಿರುದ್ಧ ಶ್ರವಣ್, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಆಪ್ತ ಕಾರ್ಯದರ್ಶಿಯಾಗಿ ನೇಮಕವಾಗಿದ್ದಾರೆ.

ಈ ಬಗ್ಗೆ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಸೆ. 14ರಂದು ಪತ್ರ ಬರೆದಿರುವ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಉಪ ಕಾರ್ಯದರ್ಶಿ, ತಕ್ಷಣ ಅವರನ್ನು ಹಾಲಿ ಹುದ್ದೆಯಿಂದ ಬಿಡುಗಡೆ ಮಾಡಿ ಹೊಸ ಹುದ್ದೆಗೆ ತೆರಳುವಂತೆ ಸೂಚನೆ ನೀಡಬೇಕು ಎಂದು ತಿಳಿಸಿದ್ದಾರೆ.

2011ನೇ ಸಾಲಿನ ಐಎಎಸ್ ಅಧಿಕಾರಿಯಾಗಿರುವ ಅನಿರುದ್ಧ ಶ್ರವಣ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಆಯುಕ್ತ, ವಿಜಯನಗರ, ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲಾಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೇರಿದಂತೆ ಹಲವೆಡೆ ಕೆಲಸ ಮಾಡಿದ್ದರು.

## ವಂಚನೆ: ಶಿಕ್ಷಕ, ಜ್ಯೋತಿಷಿ ಬಂಧನ

ಬೆಂಗಳೂರು: ನಿವೃತ್ತ ಉಪ ತಹಶೀಲ್ದಾರ್ ಬಿ. ಹೊಂಬಯ್ಯ ಅವರಿಂದ ₹ 1.39 ಕೋಟಿ ಪಡೆದು ವಂಚಿಸಿದ್ದ ಇಬ್ಬರು ಆರೋಪಿಗಳನ್ನು ನೆಲಮಂಗಲ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನೆಲಮಂಗಲದ ಎನ್. ನಾಗರಾಜು ಹಾಗೂ ಬೆಂಗಳೂರು ಬನಶಂಕರಿಯ ಹರೀಶ್ ಶಾಸ್ತ್ರಿ ಬಂಧಿತರು. ಇವರಿಬ್ಬರು ಸಂಚು ರೂಪಿಸಿ ಹೊಂಬಯ್ಯ ಅವರಿಂದ ಹಣ ಪಡೆದು ವಂಚಿಸಿದ್ದರು. ಹೊಂಬಯ್ಯ ಅವರು ನೀಡಿದ್ದ ದೂರು ಆಧರಿಸಿ ಜುಲೈ 6ರಂದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣ ದಾಖಲಾಗುತ್ತಿದ್ದಂತೆ ದಾಖಲೆಗಳ ಪರಿಶೀಲನೆ ನಡೆಸಲಾಗಿತ್ತು. ಜೊತೆಗೆ, ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ಇದೀಗ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಇನ್ನಿಬ್ಬರು ಆರೋಪಿಗಳಿದ್ದು, ಅವರನ್ನು ವಿಚಾರಣೆ ನಡೆಸಬೇಕಿದೆ' ಎಂದು ತಿಳಿಸಿವೆ.

'ಆರೋಪಿ ನಾಗರಾಜು, ಶಿಕ್ಷಕ. ಇನ್ನೊಬ್ಬ ಆರೋಪಿ ಹರೀಶ್ ಶಾಸ್ತ್ರಿ, ಜ್ಯೋತಿಷಿ. ಯೂಟ್ಯೂಬ್ ಚಾನೆಲ್‌ಗಳಲ್ಲಿ ಜ್ಯೋತಿಷ್ಯ ಕಾರ್ಯಕ್ರಮ ನಡೆಸಿಕೊಡುತ್ತಿದ್ದರು' ಎಂದು ಹೇಳಿವೆ.

**2022ರಲ್ಲಿ ಹಣ ಪಡೆದಿದ್ದ ಆರೋಪಿಗಳು:** 'ಬಿ. ಹೊಂಬಯ್ಯ ಅವರಿಗೆ 2022ರಲ್ಲಿ ನಾಗರಾಜು ಹಾಗೂ ಹರೀಶ್ ಪರಿಚಯವಾಗಿತ್ತು. ₹ 49 ಕೋಟಿ ಮೌಲ್ಯದ ಎಸ್‌ಬಿಐ ಶಾಖೆಯ ಡಿ.ಡಿ ತೋರಿಸಿದ್ದ ಆರೋಪಿಗಳು, 'ಡಿ.ಡಿ.ಯನ್ನು ನಗದು ಮಾಡಲು ಹಣದ ಅವಶ್ಯಕತೆ ಇದೆ. ನೀವು ಕೊಟ್ಟರೆ, ಬಡ್ಡಿ ಸಮೇತ ಹಣ ವಾಪಸು ಕೊಡುತ್ತೇವೆ' ಎಂಬುದಾಗಿ ಕೋರಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳ ಮಾತು ನಂಬಿದ್ದ ಹೊಂಬಯ್ಯ, ₹ 1.39 ಕೋಟಿ ನೀಡಿದ್ದರು. ಆರು ತಿಂಗಳಾದರೂ ಆರೋಪಿಗಳು ಹಣ ವಾಪಸು ಕೊಟ್ಟಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಇದರಿಂದ ನೊಂದ ಹೊಂಬಯ್ಯ ಠಾಣೆಗೆ ದೂರು ನೀಡಿದ್ದರು' ಎಂದು ಹೇಳಿವೆ.

**ಟಿಕೆಟ್ ಆಮಿಷ ಶಂಕೆ:** 'ಡಿ.ಡಿ ಬಳಸಿ ನಗದು ಡ್ರಾ ಮಾಡಿಕೊಳ್ಳಲು ಹಣ ನೀಡಿದ್ದಾಗಿ ಹೊಂಬಯ್ಯ ಅವರು ದೂರಿನಲ್ಲಿ ತಿಳಿಸಿದ್ದಾರೆ. ಆದರೆ, ಇದರ ಹಿಂದೆ ಚುನಾವಣೆ ಟಿಕೆಟ್ ಆಮಿಷದ ಶಂಕೆ ಇದೆ. ಆದರೆ, ಈ ಬಗ್ಗೆ ದೂರುದಾರರು ಸದ್ಯಕ್ಕೆ ಯಾವುದೇ ಮಾಹಿತಿ ನೀಡಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೆಲಸದಿಂದ ನಿವೃತ್ತರಾದ ನಂತರ ಹೊಂಬಯ್ಯ ಅವರು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು. ಅವರಿಗೆ ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ಆರೋಪಿಗಳು ಹಣ ಪಡೆದಿದ್ದ ಮಾಹಿತಿ ಇದೆ. ಆದರೆ, ಇದಕ್ಕೆ ಸಂಬಂಧಪಟ್ಟ ಪುರಾವೆಗಳು ಸದ್ಯಕ್ಕೆ ಸಿಕ್ಕಿಲ್ಲ' ಎಂದು ಹೇಳಿವೆ.

## 'ಮೋಸ ಹೋಗುವವರಿಗೆ ಪಾಠವಾಗಲಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಹಣಕ್ಕೆ ಮಣೆ ಹಾಕಿ ಟಿಕೆಟ್ ಕೊಡುವ ಪರಿಸ್ಥಿತಿ ನಮ್ಮ ಪಕ್ಷದಲ್ಲಿ ಇಲ್ಲ. ಬಿಜೆಪಿ ಈಗ 'ಮಾಸ್ ಪಾರ್ಟಿ'. ಯಾರು ಬೇಕಾದರೂ ಸಂದರ್ಭವನ್ನು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಇದೆ. ಪ್ರವಾಹದ ಜೊತೆ ಒಳ್ಳೆಯ ನೀರೂ ಬರುತ್ತೆ. ಕಸ ಕಡ್ಡಿಗಳೂ ಬರುತ್ತವೆ. ಈ ಪ್ರಕರಣದ ಹಿಂದೆ ಯಾರು ಯಾರು ಇದ್ದಾರೆ ಎಂಬುದು ಸರಿಯಾದ ತನಿಖೆಯಿಂದ ಬಹಿರಂಗ ಆಗಬೇಕು' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಹೇಳಿದರು.

ಚೈತ್ರಾ ಕುಂದಾಪುರ ಬಂಧನದ ಕುರಿತು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, 'ಹಣವೇ ಪ್ರಧಾನ ಆಗಿದ್ದರೆ ಬೈಂದೂರಿನ ಟಿಕೆಟ್ ಒಬ್ಬ ಬಡ ಕಾರ್ಯಕರ್ತನಿಗೆ, ಸುಳ್ಯದಲ್ಲಿ ಭಾಗೀರಥಿ ಮುರುಳ್ಯ ಅವರಿಗೆ, ಶಿವಮೊಗ್ಗದಲ್ಲಿ ಚನ್ನಬಸಪ್ಪ ಅವರಿಗೆ ಪಕ್ಷದ ಟಿಕೆಟ್ ಸಿಗುತ್ತಿರಲಿಲ್ಲ. ಇಲ್ಲಿ ಗೋವಿಂದ ಪೂಜಾರಿ ಮೋಸ ಹೋಗಿದ್ದಾರೆ. ಅವರು ನೇರವಾಗಿ ಒಂದು ಫೋನ್ ಮಾಡಿದ್ದರೂ ಪಕ್ಷದ ಅಖಿಲ ಭಾರತ ಸಂಘಟನಾ ಪ್ರಧಾನ ಕಾರ್ಯದರ್ಶಿ ಅಥವಾ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಫೋನ್‌ಗೆ ಸಿಗುತ್ತಿದ್ದರು. ನಳಿನ್ ಕುಮಾರ್ ಕಟೀಲ್, ಶ್ರೀನಿವಾಸ ಪೂಜಾರಿ ಅವರನ್ನೇ ಕೇಳಬಹುದಿತ್ತು. ಮೋಸ ಮಾಡುವವರು ಇದ್ದೇ ಇರುತ್ತಾರೆ. ಮೋಸ ಹೋಗುವವರಿಗೆ ಇದೊಂದು ಪಾಠವಾಗಲಿ' ಎಂದರು.

'ಕಾಂಗ್ರೆಸ್ ಮುಖಂಡ ಹರಿಪ್ರಸಾದ್ ಅತಿ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಈಚೆಗೆ ಹ್ಯೂಬ್ಲೊ ವಾಚ್, ಸಮಾಜವಾದ, ಪಂಚೆ ಮತ್ತು ಅದರ ಒಳಗಿನ ಖಾಕಿ ಚಡ್ಡಿ ಪ್ರಸ್ತಾಪಿಸುವ ಮೂಲಕ, 'ಎಲ್ಲವನ್ನು ಪಂಚೆ ಒಳಗೆ ಮುಚ್ಚಿಡಲು ಸಾಧ್ಯವಿಲ್ಲ' ಎಂದು ಸಿದ್ದರಾಮಯ್ಯ ಅವರನ್ನೇ ಉದ್ದೇಶಿಸಿ ಹೇಳಿದ್ದಾರೆ. ಇದರ ಹಿಂದೆ ಡಿ.ಕೆ.ಶಿವಕುಮಾರ್ ಅವರ ಯೋಜನೆ ಇದೆ ಎಂದು ರಾಜಕೀಯ ವಿಶ್ಲೇಷಕರು ಮಾತನಾಡುತ್ತಿದ್ದಾರೆ. ಇದರ ಬೆನ್ನಲ್ಲೇ ಶಾಸಕ ರಾಜಣ್ಣ, 'ಕಾಂಗ್ರೆಸ್‌ಗೆ ಒಬ್ಬ ಡಿಸಿಎಂ ಸಾಕಾಗಲ್ಲ. ಮೂರು ಮಂದಿ ಬೇಕು' ಎಂದು ಹೇಳಿಕೆ ಕೊಟ್ಟಿದ್ದಾರೆ. ಇದರ ಹಿಂದೆ ಸಿದ್ದರಾಮಯ್ಯ ಯೋಚನೆ ಇದೆ ಎಂದು ವಿಶ್ಲೇಷಕರು ಮಾತನಾಡುತ್ತಿದ್ದಾರೆ. ಎಲ್ಲವೂ ಸರಿ ಇಲ್ಲ ಎಂಬ ಸಂದೇಶವನ್ನು ಇದು ರವಾನಿಸಿದೆ' ಎಂದರು.

'ಸಂವಿಧಾನ ತೆಗೆದು ಮನುಸ್ಮೃತಿಯನ್ನು ಜಾರಿಗೆ ತರುವ ಹುನ್ನಾರ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮನುಸ್ಮೃತಿಯನ್ನು ಸಂವಿಧಾನದ ಭಾಗವಾಗಿ ಮಾಡುತ್ತೇವೆ ಎಂದು ಯಾವ ರಾಜಕೀಯ ಪಕ್ಷವೂ ಪ್ರಣಾಳಿಕೆಯಲ್ಲಿ ಹೇಳಿಲ್ಲ. ಸಿದ್ದರಾಮಯ್ಯ ಸುಳ್ಳು ಹೇಳುತ್ತಿರುವುದು ಸ್ಪಷ್ಟ. ಅವರು ಆಧಾರ ಒದಗಿಸದಿದ್ದರೆ ಅವರ ವಿರುದ್ಧವೇ ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಬೇಕು' ಎಂದು ಸವಾಲು ಹಾಕಿದರು.

'ನಾವು ಶಾಸಕ, ಮಂತ್ರಿಗಳನ್ನೇ ಕರೆಸಿಕೊಂಡರೂ ಅಧಿಕಾರ ಉಳಿಯಲಿಲ್ಲ. ಕಾಂಗ್ರೆಸ್‌ನವರು ನಗರಸಭೆ ಸದಸ್ಯರನ್ನು ಸೇರಿಸಿಕೊಳ್ಳುತ್ತಿದ್ದಾರೆ. ನಾವು ಆಪರೇಷನ್ ಕಮಲ ಮಾಡಿದಾಗ ಜನ ನಮ್ಮ ಅಧಿಕಾರಕ್ಕೇ ಆಪರೇಷನ್ ಮಾಡಿದರು' ಎಂದರು.



## ಮಳೆ ಗುಂಡಿ...

ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬಿ.ಸಿ. ರೋಡ್-ಕಲ್ಲಡ್ಕ ಬಳಿ ಸುರಿಯುತ್ತಿರುವ ಮಳೆಯಿಂದ ಗುಂಡಿಗಳಲ್ಲಿ ತುಂಬಿದ್ದ ನೀರು ತೆರವು ಮಾಡಲಾಯಿತು –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

## '20ರಂದು ಕೇಂದ್ರ ಸಚಿವರ ಭೇಟಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಬರಗಾಲ ಆವರಿಸಿರುವುದರಿಂದ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಜನರಿಗೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮೂಲಕ ನೆರವಾಗುವುದಕ್ಕಾಗಿ ಪ್ರತಿಯೊಬ್ಬರಿಗೆ ಈಗ ನೀಡುತ್ತಿರುವ 100 ದಿನಗಳ ಉದ್ಯೋಗದ ಬದಲಾಗಿ 150 ದಿನಗಳಿಗೆ ವಿಸ್ತರಿಸಬೇಕಿದೆ. ಈ ಬಗ್ಗೆ ಚರ್ಚಿಸಲು ಇದೇ 20ರಂದು ದೆಹಲಿಗೆ ತೆರಳುತ್ತಿದ್ದು, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಪರಿಸ್ಥಿತಿಯ ಮನವರಿಕೆ ಮಾಡಿಕೊಡುತ್ತೇವೆ. ಆ ಬಳಿಕ ಒಬ್ಬರಿಗೆ ಹೆಚ್ಚುವರಿಯಾಗಿ 50 ದಿನಗಳ ಕೆಲಸ ನೀಡಲು ಅಧಿಸೂಚನೆ ಹೊರಬೀಳಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

> **ಕರ್ನಾಟಕ ಕೇಂದ್ರೀಯ ವಿ.ವಿ.ಯಲ್ಲಿ ಆರ್‌ಎಸ್‌ಎಸ್ ಕಚೇರಿ ತೆರೆಯುವುದಕ್ಕೆ ಬಿಡುವುದಿಲ್ಲ. ಅಲ್ಲಿ ಅಧ್ಯಯನಕ್ಕಿಂತ ಸಂಘ ಪರಿವಾರದ ಚಟುವಟಿಕೆಗಳೇ ಹೆಚ್ಚು ನಡೆದಿವೆ**
> **ಪ್ರಿಯಾಂಕ್ ಖರ್ಗೆ**
> ಗ್ರಾಮೀಣಾಭಿವೃದ್ಧಿ ಸಚಿವ

**ಬಿಜೆಪಿಯವರ ಬಳಿ ಸುಳ್ಳಿನ ಫ್ಯಾಕ್ಟರಿ:** ಬಿಜೆಪಿಯವರ ಬಳಿ ಸುಳ್ಳಿನ ಫ್ಯಾಕ್ಟರಿ ಇದೆ. ಆದ್ದರಿಂದಲೇ ಅವರು ರಾಜ್ಯದಲ್ಲಿ ಸುಳ್ಳು ಸುದ್ದಿ ತಡೆಯಲು ಆರಂಭಿಸುತ್ತಿರುವ ಫ್ಯಾಕ್ಟ್ ಚೆಕ್ ಘಟಕವನ್ನು ವಿರೋಧಿಸುತ್ತಿದ್ದಾರೆ ಎಂದು ಪ್ರಿಯಾಂಕ್ ಖರ್ಗೆ ಆರೋಪಿಸಿದರು.

'ಇದರಿಂದ ವಾಕ್ ಸ್ವಾತಂತ್ರ್ಯ ಹೋಗುತ್ತದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಸುಳ್ಳು ಸುದ್ದಿಗೆ ಕಡಿವಾಣ ಹಾಕುವುದನ್ನು ಸಾರ್ವಜನಿಕರು, ಮಾಧ್ಯಮದವರು ಸ್ವಾಗತಿಸುತ್ತಿದ್ದಾರೆ. ತಮ್ಮವರು ಜೈಲಿಗೆ ಹೋಗಬಹುದು ಎಂಬ ಆತಂಕದಿಂದ ಬಿಜೆಪಿಯವರು ವಿರೋಧಿಸುತ್ತಿದ್ದಾರೆ' ಎಂದರು.

ಸಂವಿಧಾನದ 371 (ಜೆ) ಕಲಂ ತಿದ್ದುಪಡಿಗೆ ದಶಮಾನೋತ್ಸವ

# ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಕಲಬುರಗಿ: ಹೈದರಾಬಾದ್ ನಿಜಾಮನ ಆಡಳಿತದಿಂದ ಮುಕ್ತಿ ಪಡೆದ ದಿನದ ಸ್ಮರಣೆಗಾಗಿ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿ ಸೆಪ್ಟೆಂಬರ್ 17ರಂದು ಬೆಳಿಗ್ಗೆ ರಾಷ್ಟ್ರ ಧ್ವಜಾರೋಹಣ ಮಾಡುವ ಮೂಲಕ 'ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವ' ಆಚರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಪ್ರಧಾನ ಕಾರ್ಯಕ್ರಮ ಕಲಬುರಗಿಯಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಿಗ್ಗೆ 9ಕ್ಕೆ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಲಿದ್ದಾರೆ. ಹೈದರಾಬಾದ್ ಕರ್ನಾಟಕದ ವಿಮೋಚನೆಗೆ ಕಾರಣರಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಗೆ ಇದಕ್ಕೂ ಮುನ್ನ ಮಾಲಾರ್ಪಣೆ ಮಾಡಲಿದ್ದಾರೆ.

2019ಕ್ಕಿಂತ ಮುಂಚೆ ಸೆಪ್ಟೆಂಬರ್ 17ರಂದು 'ಹೈದರಾಬಾದ್ ಕರ್ನಾಟಕ ವಿಮೋಚನಾ ದಿನ'ವನ್ನಾಗಿ ಆಚರಿಸಲಾಗುತ್ತಿತ್ತು. ಆಗ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನ ಎಂಬುದು ದಾಸ್ಯದ ಸಂಕೇತವಾಗಿದ್ದು, ಅದರ ಬದಲಾಗಿ 'ಕಲ್ಯಾಣ ಕರ್ನಾಟಕ ಉತ್ಸವ'ವನ್ನಾಗಿ ಆಚರಿಸಲಾಗುವುದು ಎಂಬ ತೀರ್ಮಾನ ಕೈಗೊಂಡಿತು. ಹೀಗಾಗಿ, ನಾಲ್ಕು ವರ್ಷಗಳಿಂದ ಕಲ್ಯಾಣ ಕರ್ನಾಟಕ ಉತ್ಸವವನ್ನಾಗಿ ಈ ಭಾಗದಲ್ಲಿ ಆಚರಿಸಲಾಗುತ್ತಿದೆ. ಹೈದರಾಬಾದ್ ನಿಜಾಮನ ಆಡಳಿತದಿಂದ ಮುಕ್ತಿ ಪಡೆದು 75 ವರ್ಷಗಳಾಗಿದ್ದರಿಂದ ಈ ವರ್ಷ ಅಮೃತ ಮಹೋತ್ಸವ ಆಚರಿಸಲಾಗುತ್ತಿದೆ.

ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಸಂವಿಧಾನದ 371 (ಜೆ) ಕಲಂ ತಿದ್ದುಪಡಿ ಮೂಲಕ ವಿಶೇಷ ಸ್ಥಾನಮಾನ ನೀಡಿದೆ. ಆ ತಿದ್ದುಪಡಿಯನ್ವಯ ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು (ಕೆಕೆಆರ್‌ಡಿಬಿ) ರಚಿಸುವ ಮೂಲಕ ಪ್ರತಿ ವರ್ಷ ಅನುದಾನ ನೀಡುತ್ತಿದೆ. ವಿಶೇಷ ಸ್ಥಾನಮಾನ ದೊರೆತು 10 ವರ್ಷಗಳಾಗಿದ್ದರಿಂದ ಈ ಬಾರಿ ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ.

ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವದ ಅಂಗವಾಗಿ ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿಗೆ ವಿದ್ಯುತ್ ದೀಪ ಅಲಂಕಾರ ಮಾಡಲಾಯಿತು –ಪ್ರಜಾವಾಣಿ ಚಿತ್ರ

### ಪಟೇಲರ ದಿಟ್ಟತನದ 'ಆಪರೇಶನ್ ಪೋಲೊ'

1947ರಲ್ಲಿ ಬಹುತೇಕ ಸಂಸ್ಥಾನಗಳು ಸ್ವತಂತ್ರ ಭಾರತದ ಭಾಗವಾಗಲು ಒಪ್ಪಿಕೊಂಡವು. ಆದರೆ, ಅಂದಿನ ಹೈದರಾಬಾದ್ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು ಜಿಲ್ಲೆಗಳನ್ನು ಆಳುತ್ತಿದ್ದ ಹೈದರಾಬಾದ್ ನಿಜಾಮ ಮೀರ್ ಉಸ್ಮಾನ್ ಅಲಿ ಭಾರತದ ಭಾಗವಾಗಲು ಸಿದ್ಧರಿರಲಿಲ್ಲ.

ನಿಜಾಮನ ದುರಾಡಳಿತದಿಂದ ನಲುಗಿದ್ದ ಈ ಮೂರು ಜಿಲ್ಲೆಗಳ ಹೋರಾಟಗಾರರು ಅಂದಿನ ಗೃಹಸಚಿವರಾಗಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರಿಗೆ ಹೈದರಾಬಾದ್ ಸಂಸ್ಥಾನದಿಂದ ವಿಮುಕ್ತಿ ಕೊಡಿಸುವಂತೆ ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಪಟೇಲರು, ಹೈದರಾಬಾದ್ ಸಂಸ್ಥಾನದ ಮೇಲೆ 1948ರ ಸೆಪ್ಟೆಂಬರ್ 13ರಂದು ಸೇನಾ ಕಾರ್ಯಾಚರಣೆ ಆರಂಭಿಸಿದರು. ಇದಕ್ಕೆ 'ಆಪರೇಶನ್ ಪೋಲೊ' ಎಂದು ಹೆಸರಿಡಲಾಗಿತ್ತು. ಐದು ದಿನಗಳ ಕಾರ್ಯಾಚರಣೆಯಿಂದ ಬೆದರಿದ ನಿಜಾಮ, ಸೆಪ್ಟೆಂಬರ್ 17ರಂದು ಶರಣಾಗುವ ಮೂಲಕ 'ಹೈದರಾಬಾದ್ ಸಂಸ್ಥಾನವನ್ನು ಭಾರತದಲ್ಲಿ ವಿಲೀನಗೊಳಿಸುತ್ತೇವೆ' ಎಂದು ಘೋಷಿಸಿದರು.

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


**ಹಬ್ಬದ ತಯಾರಿ**
ಗೌರಿ ಗಣೇಶ ಹಬ್ಬದ ಅಂಗವಾಗಿ ಬೆಂಗಳೂರಿನ ವಿಜಯನಗರದ ಮಾರುಕಟ್ಟೆಯಲ್ಲಿ ಶನಿವಾರ ಪರಿಸರಸ್ನೇಹಿ ಮಣ್ಣಿನ ಮೂರ್ತಿ ಖರೀದಿಸಿದ ಬಾಲಕಿ

ಭಾರತ ಸರಕಾರ

ವಿಶ್ವಕರ್ಮ ಜಯಂತಿಯ ಹಾರ್ದಿಕ ಶುಭಾಶಯಗಳು

## ನವಭಾರತದಲ್ಲಿ ವಿಶ್ವಕರ್ಮರ ಕೌಶಲ್ಯಗಳಿಗೆ ಗೌರವ ಸಮರ್ಪಣೆ

# ಪಿಎಂ ವಿಶ್ವಕರ್ಮ

ಉದ್ಘಾಟನೆ

## ನರೇಂದ್ರ ಮೋದಿ, ಪ್ರಧಾನಮಂತ್ರಿ

ಇವರ ಅಮೃತ ಹಸ್ತದಿಂದ

17ನೇ ಸೆಪ್ಟೆಂಬರ್, 2023 ರಂದು ಬೆಳಗ್ಗೆ 11:30 ಗಂಟೆ, ಯಶೋಭೂಮಿ, ದ್ವಾರಕಾ, ನವದೆಹಲಿ

### ಯೋಜನೆಯ ಪ್ರಯೋಜನಗಳು

- ವಿಶ್ವಕರ್ಮ ಸಹೋದರ ಮತ್ತು ಸಹೋದರಿಯರಿಗೆ ರೂ. 3 ಲಕ್ಷದವರೆಗೆ ಆಧಾರರಹಿತ ಸಾಲ
- ರೂ. 15 ಸಾವಿರವರೆಗಿನ ಟೂಲ್‌ಕಿಟ್
- ಕೌಶಲ್ಯಾಭಿವೃದ್ಧಿಗೆ ತರಬೇತಿ ಮತ್ತು ದೈನಂದಿನ ರೂ. 500 ಸಂಭಾವನೆ
- ಸಂಪೂರ್ಣ ತಯಾರಾದ ಉತ್ಪನ್ನಗಳಿಗೆ ಕ್ವಾಲಿಟಿ ಸರ್ಟಿಫಿಕೇಶನ್, ಬ್ರಾಂಡಿಂಗ್ ಮತ್ತು ಜಾಹೀರಾತು ಮಾದರಿಯಲ್ಲಿ ಮಾರ್ಕೆಟಿಂಗ್ ನೆರವು

### 18 ರೀತಿಯ ಸಾಂಪ್ರದಾಯಕ ಕುಶಲಕರ್ಮಿಗಳು ಹಾಗೂ ಕರಕುಶಲಿಗಳಿಗೆ ಲಾಭ

ಕಾರ್ಪೆಂಟರ್ । ಬೋಟ್ ಮೇಕರ್ । ಆರ್ಮರರ್ । ಬ್ಲಾಕ್‌ಸ್ಮಿತ್ । ಬಾಸ್ಕೆಟ್/ಮ್ಯಾಟ್/ಬ್ರೂಮ್ ಮೇಕರ್/ಕಾಯಿರ್ ವೀವರ್ ।
ಡಾಲ್ & ಟಾಯ್ ಮೇಕರ್ (ಸಾಂಪ್ರದಾಯಕ) । ಗೋಲ್ಡ್‌ಸ್ಮಿತ್ । ಪಾಟರ್ । ಕಾಬ್ಲರ್/ಶೂಸ್ಮಿತ್/ಫುಟ್‌ವೇರ್ ಆರ್ಟಿಸನ್ । ಹ್ಯಾಮರ್ ಅಂಡ್ ಟೂಲ್‌ಕಿಟ್ ಮೇಕರ್
। ಸ್ಕಲ್ಪಟರ್ (ಸ್ಟೋನ್ ಕಾರ್ವರ್), ಸ್ಟೋನ್ ಬ್ರೇಕರ್ । ಮೇಸನ್ । ಬಾರ್ಬರ್ । ಗಾರ್ಲಾಂಡ್ ಮೇಕರ್ । ವಾಷರ್‌ಮನ್ । ಟೈಲರ್
। ಫಿಶಿಂಗ್ ನೆಟ್ ಮೇಕರ್ ।

CBC 25101/13/0002/2324

**ಡಿಡಿ ಸುದ್ದಿವಾಹಿನಿಯಲ್ಲಿ ಈ ಕಾರ್ಯಕ್ರಮದ ನೇರಪ್ರಸಾರ ವೀಕ್ಷಿಸಿರಿ**

## 13 ಉಗ್ರರ ಆಸ್ತಿ ಮುಟ್ಟುಗೋಲಿಗೆ ಸಿದ್ಧತೆ

ಜಮ್ಮು (ಪಿಟಿಐ): ಪಾಕಿಸ್ತಾನದಲ್ಲಿದ್ದುಕೊಂಡು ಕಾರ್ಯಾಚರಣೆ ನಡೆಸುತ್ತಿರುವ ಜಮ್ಮು ಮತ್ತು ಕಾಶ್ಮೀರದ ಕಿಶ್ತವಾರ್ ಜಿಲ್ಲೆಯ 13 ಮಂದಿ ಭಯೋತ್ಪಾದಕರನ್ನು ನ್ಯಾಯಾಲಯವು 'ಘೋಷಿತ ಅಪರಾಧಿ'ಗಳೆಂದು ಘೋಷಿಸಿದ್ದು, 30 ದಿನಗಳೊಳಗೆ ನ್ಯಾಯಾಲಯಕ್ಕೆ ಹಾಜರಾಗದಿದ್ದರೆ ಅವರ ಆಸ್ತಿಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಿಶ್ತವಾರ್ ಜಿಲ್ಲೆಯಲ್ಲಿರುವ ಉಗ್ರರ ಕುಟುಂಬದವರಿಗೆ ಸ್ಥಳೀಯ ಪೊಲೀಸರ ವಿಶೇಷ ತನಿಖಾ ಘಟಕವು ನೋಟಿಸ್ ನೀಡಿದೆ ಎಂದು ವಿವರಿಸಿದ್ದಾರೆ.

ಗಡಿಯಾಚೆಯಿಂದ 13 ಮಂದಿ ಉಗ್ರರು ಜಿಲ್ಲೆಯಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಸಲು ಪ್ರಯತ್ನಿಸುತ್ತಿದ್ದಾರೆ. ಜಾಮೀನುರಹಿತ ವಾರಂಟ್ ಜಾರಿಗೊಳಿಸಿದ ನಂತರವೂ ವಿಶೇಷ ಎನ್ಐಎ ನ್ಯಾಯಾಲಯಕ್ಕೆ ಹಾಜರಾಗಿಲ್ಲ' ಎಂದು ಕಿಶ್ತವಾರ್‌ನ ಹಿರಿಯ ಎಸ್‌ಪಿ ಖಲೀಲ್ ಪೊಸ್ವಾಲ್ ತಿಳಿಸಿದ್ದಾರೆ.

### ಐಎಸ್ ಉಗ್ರರ ನೇಮಕಾತಿ ಶಂಕೆ: 31 ಸ್ಥಳಗಳಲ್ಲಿ ಎನ್ಐಎ ಕಾರ್ಯಾಚರಣೆ

# ತಮಿಳುನಾಡು, ತೆಲಂಗಾಣದಲ್ಲಿ ಶೋಧ

ನವದೆಹಲಿ (ಪಿಟಿಐ): ಐಎಸ್ ಉಗ್ರ ಸಂಘಟನೆಗೆ ನೇಮಕಾತಿ ಅಭಿಯಾನ ನಡೆಯುತ್ತಿರುವ ಶಂಕೆಯ ಮೇರೆಗೆ ರಾಷ್ಟ್ರೀಯ ತನಿಖಾ ದಳವು (ಎನ್ಐಎ) ಶನಿವಾರ ತಮಿಳುನಾಡು ಮತ್ತು ತೆಲಂಗಾಣದ 31 ಸ್ಥಳಗಳಲ್ಲಿ ಶೋಧಕಾರ್ಯ ನಡೆಸಿದೆ.

ಶೋಧದ ವೇಳೆ ಡಿಜಿಟಲ್ ಸಾಧನಗಳು, ದಾಖಲೆಗಳು, ಅರೆಬಿಕ್ ಮತ್ತು ಸ್ಥಳೀಯ ಭಾಷೆಗಳ ಪುಸ್ತಕಗಳು, ₹60 ಲಕ್ಷ ನಗದು ಹಾಗೂ ಅಂದಾಜು ₹15.12 ಲಕ್ಷ ಮೌಲ್ಯದ ಅಮೆರಿಕನ್ ಡಾಲರ್ ಲಭಿಸಿದೆ ಎಂದು ಎನ್ಐಎ ವಕ್ತಾರರು ತಿಳಿಸಿದ್ದಾರೆ. ವಶಕ್ಕೆ ಪಡೆದಿರುವ ಮೊಬೈಲ್, ಲ್ಯಾಪ್‌ಟಾಪ್ ಮತ್ತು ಹಾರ್ಡ್ ಡಿಸ್ಕ್‌ಗಳನ್ನು ಪರಿಶೀಲನೆಗೆ ಒಳಪಡಿಸಲಾಗುತ್ತಿದೆ ಎಂದಿದ್ದಾರೆ.

ತಮಿಳುನಾಡಿನ ಕೊಯಮತ್ತೂರಿನ 22 ಸ್ಥಳಗಳಲ್ಲಿ, ಚೆನ್ನೈನ ಮೂರು ಸ್ಥಳಗಳಲ್ಲಿ, ತೆಂಕಾಸಿ ಜಿಲ್ಲೆಯ ಒಂದು ಕಡೆ ಹಾಗೂ ಹೈದರಾಬಾದ್‌ನ 5 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ವಿವರಿಸಿದ್ದಾರೆ.

ಭಯೋತ್ಪಾದಕ ಸಂಘಟನೆಗಳಿಗೆ ನೇಮಕಾತಿ ನಡೆಸುವುದಕ್ಕೆ ಸಂಬಂಧಿಸಿ ಚೆನ್ನೈನ ಎನ್ಐಎ ಕಚೇರಿಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಆಧರಿಸಿ ಶೋಧ ಕಾರ್ಯ ನಡೆದಿದೆ ಎಂದಿದ್ದಾರೆ.

'ಸ್ಥಳೀಯ ಅಧ್ಯಯನ ಕೇಂದ್ರಗಳ ಮೂಲಕ ಅರೆಬಿಕ್‌ನಲ್ಲಿ ತರಗತಿಗಳನ್ನು ನಡೆಸಲಾಗುತ್ತಿತ್ತು ಮತ್ತು ಮೂಲಭೂತವಾದಿ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಾಮಾಜಿಕ ಮಾಧ್ಯಮಗಳು, ವಾಟ್ಸ್ ಆ್ಯಪ್ ಮತ್ತು ಟೆಲಿಗ್ರಾಮ್ ಮೂಲಕ ಪ್ರಚಾರ ಮಾಡಲಾಗುತ್ತಿತ್ತು' ಎಂದಿದ್ದಾರೆ. ಐಎಸ್‌ನಿಂದ ಪ್ರೇರಿತರಾದ ಏಜೆಂಟ್‌ಗಳು ದೇಶದ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ ತತ್ವಗಳಿಗೆ ವಿರುದ್ಧವಾದ 'ಖಿಲಾಫತ್' ಸಿದ್ಧಾಂತದ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದು ತನಿಖೆಯಿಂದ ಬಹಿರಂಗಗೊಂಡಿದೆ ಎಂದು ಎನ್ಐಎ ವಕ್ತಾರರು ವಿವರಿಸಿದ್ದಾರೆ.

ದೇಶದಲ್ಲಿ ಶಾಂತಿ ಹಾಗೂ ಕೋಮು ಸಾಮರಸ್ಯ ಕದಡಲು ಯತ್ನಿಸುತ್ತಿರುವ ಭಯೋತ್ಪಾದಕ ಸಂಘಟನೆಗಳಿಗೆ ಯುವಕರು ಸೇರದಂತೆ ತಡೆಯುವ ನಿಟ್ಟಿನಲ್ಲಿ ಎನ್ಐಎ ಕಾರ್ಯಪ್ರವೃತ್ತವಾಗಿದೆ ಎಂದೂ ಹೇಳಿದ್ದಾರೆ.

### ಗಡಿಯಲ್ಲಿ ಒಳನುಸುಳಲು ಯತ್ನ: ಮೂವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಒಳನುಸುಳಲು ಯತ್ನಿಸಿದ ಮೂವರು ಉಗ್ರರನ್ನು ಭದ್ರತಾ ಪಡೆಗಳು ಶನಿವಾರ ಹತ್ಯೆ ಮಾಡಿವೆ.

ಗುಪ್ತಚರ ಸಂಸ್ಥೆಗಳ ಮಾಹಿತಿಯ ಅನ್ವಯ ಉತ್ತರ ಕಾಶ್ಮೀರ ಜಿಲ್ಲೆಯ ಉರಿ ವಲಯದ ಹತ್ಲಂಗ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿರುವ ಸೇನೆ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಉಗ್ರರ ಒಳನುಸುಳುವ ಯತ್ನವನ್ನು ವಿಫಲಗೊಳಿಸಿದ್ದಾರೆ ಎಂದು ಸೇನೆಯ ಚಿನಾರ್ ಕೋರ್ 'ಎಕ್ಸ್' (ಟ್ವಿಟರ್) ವೇದಿಕೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

ಇಬ್ಬರು ಉಗ್ರರ ಮೃತದೇಹಗಳನ್ನು ವಶಕ್ಕೆ ಪಡೆಯಲಾಗಿದೆ. ಪಾಕಿಸ್ತಾನದ ಕಡೆಯಿಂದ ಗುಂಡಿನ ದಾಳಿ ನಡೆಯುತ್ತಿರುವುದರಿಂದ ಮೂರನೇ ಉಗ್ರನ ಮೃತದೇಹವನ್ನು ವಶಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಕಾರ್ಯಾಚರಣೆ ಮುಂದುವರಿದಿದೆ ಎಂದೂ ಹೇಳಿದೆ.

ಮೃತ ಉಗ್ರರು ಯಾವ ಸಂಘಟನೆಗೆ ಸೇರಿದ್ದಾರೆ ಎಂಬ ಮಾಹಿತಿ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಅನಂತನಾಗ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಅವಿತುಕೊಂಡಿರುವ ಉಗ್ರರನ್ನು ಸದೆಬಡಿಯಲು ನಾಲ್ಕನೇ ದಿನವಾದ ಶನಿವಾರವೂ ಕಾರ್ಯಾಚರಣೆ ಮುಂದುವರಿದಿದ್ದು, ಈ ನಡುವೆ ಉರಿ ವಲಯದಲ್ಲಿ ಭಯೋತ್ಪಾದಕರು ದೇಶದೊಳಕ್ಕೆ ನುಸುಳಲು ಯತ್ನಿಸಿದ್ದರು.

### ಸುದ್ದಿ 2 ನಿಮಿಷ

## 'ಒಂದು ದೇಶ, ಒಂದು ಚುನಾವಣೆ' 23ರಂದು ಮೊದಲ ಸಭೆ

ಭುವನೇಶ್ವರ (ಒಡಿಶಾ) (ಪಿಟಿಐ): 'ಒಂದು ದೇಶ, ಒಂದು ಚುನಾವಣೆ' ಕಾರ್ಯ ಸಾಧ್ಯತೆ ಬಗ್ಗೆ ಪರಿಶೀಲಿಸಲು ರಚಿಸಲಾಗಿರುವ ಉನ್ನತಮಟ್ಟದ ಸಮಿತಿಯ ಮೊದಲ ಸಭೆ ಇದೇ 23ರಂದು ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಶನಿವಾರ ಇಲ್ಲಿ ತಿಳಿಸಿದ್ದಾರೆ.

ಲೋಕಸಭೆ, ರಾಜ್ಯ ವಿಧಾನಸಭೆಗಳು, ನಗರಸಭೆಗಳು ಮತ್ತು ಪಂಚಾಯಿತಿಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸಲು ಕೇಂದ್ರ ಸರ್ಕಾರವು ಸೆಪ್ಟೆಂಬರ್ 2ರಂದು ಎಂಟು ಮಂದಿಯ ಸಮಿತಿಯನ್ನು ರಚಿಸಿತ್ತು.

## 23 ಹೊಸ ಸೈನಿಕ ಶಾಲೆ ಸ್ಥಾಪನೆಗೆ ರಕ್ಷಣಾ ಇಲಾಖೆ ಅನುಮೋದನೆ

ನವದೆಹಲಿ(ಪಿಟಿಐ): 'ಸಹಭಾಗಿತ್ವ ಮಾದರಿ'ಯಲ್ಲಿ 23 ಹೊಸ ಸೈನಿಕ ಶಾಲೆಗಳನ್ನು ಸ್ಥಾಪಿಸುವುದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅನುಮೋದನೆ ನೀಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಒ), ಖಾಸಗಿ ಶಾಲೆಗಳು ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ 100 ಹೊಸ ಸೈನಿಕ ಶಾಲೆಗಳನ್ನು ಪ್ರಾರಂಭಿಸುವುದಕ್ಕೆ ಕೇಂದ್ರ ಸರ್ಕಾರ ಇತ್ತೀಚೆಗೆ ಅನುಮೋದನೆ ನೀಡಿತ್ತು. ಅದರ ಭಾಗವಾಗಿ ಈಗ 23 ಸೈನಿಕ ಶಾಲೆಗಳ ಸ್ಥಾಪನೆಗೆ ಸಚಿವ ರಾಜನಾಥ್ ಸಿಂಗ್ ಅನುಮೋದನೆ ನೀಡಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಇದರೊಂದಿಗೆ, ಸೈನಿಕ ಶಾಲೆಗಳ ಸಂಘದ ವತಿಯಿಂದ ಸಹಭಾಗಿತ್ವ ಮಾದರಿಯಲ್ಲಿ ಕಾರ್ಯನಿರ್ವಹಿಸುವ ಹೊಸ ಸೈನಿಕ ಶಾಲೆಗಳ ಸಂಖ್ಯೆ 42ಕ್ಕೆ ಏರಿದಂತಾಗಲಿದೆ. ಹಳೆ ಮಾದರಿಯಂತೆ, ಸದ್ಯ 33 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

## ಕಾವೇರಿ ನೀರಿಗಾಗಿ ಕೇಂದ್ರಕ್ಕೆ ನಿಯೋಗ: ಸ್ಟಾಲಿನ್

ಚೆನ್ನೈ (ಪಿಟಿಐ): ರಾಜ್ಯಕ್ಕೆ ಕಾವೇರಿ ನೀರು ಬಿಡುವಂತೆ ಕರ್ನಾಟಕ ಸರ್ಕಾರಕ್ಕೆ ಸಲಹೆ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ತಮಿಳುನಾಡಿನ ಎಲ್ಲ ಪಕ್ಷಗಳ ಸಂಸದರು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಪತ್ರ ಸಲ್ಲಿಸಲಿದ್ದಾರೆ. ಇದಕ್ಕಾಗಿ ಸರ್ವ ಪಕ್ಷಗಳ ಸಂಸದರ ನಿಯೋಗವನ್ನು ಕೇಂದ್ರ ಸಚಿವರ ಬಳಿಗೆ ಕಳುಹಿಸಲಾಗುವುದು ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶನಿವಾರ ತಿಳಿಸಿದ್ದಾರೆ.

ತಮಿಳುನಾಡಿಗೆ ನೀರು ಬಿಡುವುದನ್ನು ವಿರೋಧಿಸಿರುವ ಕರ್ನಾಟಕದ ವಾದಗಳು ದೋಷಪೂರಿತ ಮತ್ತು ಆಧಾರರಹಿತವಾಗಿವೆ. ಹಾಗಾಗಿ ಇವುಗಳನ್ನು ಪರಿಗಣಿಸಬಾರದೆಂದು ಕೇಂದ್ರಕ್ಕೆ ತಿಳಿಸಲಾಗಿದೆ. ಕಾವೇರಿ ನೀರು ಕೋರಿ ಕೇಂದ್ರದ ಬಳಿಗೆ ತೆರಳಲಿರುವ ನಿಯೋಗದ ನೇತೃತ್ವವನ್ನು ರಾಜ್ಯ ಜಲಸಂಪನ್ಮೂಲ ಸಚಿವ ದುರೈಮುರುಗನ್ ವಹಿಸಲಿದ್ದಾರೆ ಎಂದು ಸ್ಟಾಲಿನ್ ತಿಳಿಸಿದ್ದಾರೆ.

ನಿಯೋಗದ ಸದಸ್ಯರು, ಶೇಖಾವತ್ ಅವರಿಗೆ ಮನವಿ ಸಲ್ಲಿಸಿ, ನಿಗದಿತ ಸಮಯದಲ್ಲಿ ನಿಗದಿತ ಪ್ರಮಾಣದಲ್ಲಿ ಕಾವೇರಿ ನೀರು ಬಿಡುವಂತೆ ಕರ್ನಾಟಕಕ್ಕೆ ಕೇಂದ್ರವು ಸಲಹೆ ನೀಡುವಂತೆ ಒತ್ತಾಯಿಸಲಿದ್ದಾರೆ ಎಂದರು.

'ಕರ್ನಾಟಕವು ಆಧಾರರಹಿತ ವಾದಗಳನ್ನು ಮುಂದಿಡುತ್ತಿದೆ ಮತ್ತು ತಮಿಳುನಾಡಿನ ನೀರಿನ ಅವಶ್ಯಕತೆಯ ಮನವಿಗೆ ವಿರುದ್ಧವಾಗಿ ಕೇಂದ್ರಕ್ಕೆ ಪತ್ರ ಬರೆದಿದೆ' ಎಂದು ಮುಖ್ಯಮಂತ್ರಿ ಸ್ಟಾಲಿನ್ ಆರೋಪಿಸಿದರು.

'ತಮಿಳುನಾಡಿನ ನೀರಿನ ಬೇಡಿಕೆಯು ಅಸಮಂಜಸ, ಅದು ನಿಯಮ ಮೀರಿ ತನ್ನ ನೀರಾವರಿ ಪ್ರದೇಶದ ವಿಸ್ತೀರ್ಣವನ್ನು ಹೆಚ್ಚಿಸಿಕೊಂಡಿದೆ ಎಂದು ಕರ್ನಾಟಕ ವಾದಿಸುತ್ತಿದೆ. ಈ ಸಂಬಂಧ ಇದೇ ತಿಂಗಳ 13 ರಂದು ಕರ್ನಾಟಕವು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಪತ್ರ ಬರೆದು, ಈಶಾನ್ಯ ಮಾನ್ಸೂನ್ ಸಮಯದಲ್ಲಿ ತಮಿಳುನಾಡಿಗೆ ಸಾಕಷ್ಟು ನೀರು ಸಿಗುತ್ತದೆ ಮತ್ತು ರಾಜ್ಯದ ಕಾವೇರಿ ಕಣಿವೆಯಲ್ಲಿ ಅಗತ್ಯ ಅಂತರ್ಜಲವಿದೆ' ಎಂದೂ ಕರ್ನಾಟಕ ತಿಳಿಸಿದೆ. ಇಂತಹ ದೃಷ್ಟಿಕೋನವು ದೋಷಪೂರಿತವಾದುದು. ಕೇಂದ್ರವು ಇದನ್ನು ಪರಿಗಣಿಸಬಾರದು ಎಂದು ಹೇಳಿದರು.

ಕಾವೇರಿ ಜಲವಿವಾದಗಳ ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನು ಉಲ್ಲೇಖಿಸಿದ ಸ್ಟಾಲಿನ್, ಮಳೆ ಕೊರತೆಯ ವರ್ಷದಲ್ಲಿ ರಾಜ್ಯಗಳ ನಡುವೆ 'ಅನುಪಾತ'ದ ಆಧಾರದ ಮೇಲೆ ನೀರು ಹಂಚಿಕೊಳ್ಳಬೇಕು ಎಂದರು.

ನವದೆಹಲಿಯಲ್ಲಿ ಸಂಗೀತ ನಾಟಕ ಅಕಾಡೆಮಿ ಅಮೃತ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರೊಂದಿಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಅಕಾಡೆಮಿ ಅಧ್ಯಕ್ಷೆ ಸಂಧ್ಯಾ ಪುರೇಚಾ, ಕೇಂದ್ರ ಸಂಸ್ಕೃತಿ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ, ಕಾನೂನು ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಇದ್ದಾರೆ – ಪಿಟಿಐ ಚಿತ್ರ

# ಕಲಾವಿದರಿಗೆ 'ಅಮೃತ' ಪ್ರಶಸ್ತಿ ಪ್ರದಾನ

ನವದೆಹಲಿ (ಪಿಟಿಐ): ಸಂಗೀತ, ನಾಟಕ ಹಾಗೂ ನೃತ್ಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಕರ್ನಾಟಕದ ನಾಲ್ವರು ಸಾಧಕರು ಸೇರಿ ವಿವಿಧ ರಾಜ್ಯಗಳ 84 ಕಲಾವಿದರಿಗೆ 'ಸಂಗೀತ ನಾಟಕ ಅಕಾಡೆಮಿ ಅಮೃತ ಪ್ರಶಸ್ತಿ'ಯನ್ನು ಶನಿವಾರ ಇಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಪ್ರದಾನ ಮಾಡಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ವತಿಯಿಂದ ಈ ಪ್ರಶಸ್ತಿಯನ್ನು ಕರ್ನಾಟಕದ ಕಲಾವಿದರಾದ ಅನಸೂಯ ಕುಲಕರ್ಣಿ (ಕರ್ನಾಟಕ ಸಂಗೀತ), ಲಲಿತಾ ಶ್ರೀನಿವಾಸನ್ (ಭರತನಾಟ್ಯ), ಅಬ್ಬೂರು ಜಯತೀರ್ಥ (ರಂಗಭೂಮಿ) ಹಾಗೂ ಚನ್ನದಾಸರ ಮಾರೆಪ್ಪ (ಜಾನಪದ ಕಲೆ) ಅವರಿಗೆ ಧನಕರ್ ಪ್ರದಾನ ಮಾಡಿ, ಗೌರವಿಸಿದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಧನಕರ್, 'ಈ ಎಲ್ಲಾ ಕಲಾವಿದರು 75 ವರ್ಷಗಳಲ್ಲಿ ಯಾವತ್ತೂ ಈ ರೀತಿ ಗೌರವಕ್ಕೆ ಭಾಜನರಾಗಿಲ್ಲ. ಇವರನ್ನು ಗುರುತಿಸಿ, ಗೌರವಿಸುವ ಮೂಲಕ ನಾವು ಭಾರತೀಯ ಸಂಸ್ಕೃತಿಯನ್ನು ಗೌರವಿಸುತ್ತಿದ್ದೇವೆ. ಇದು ವಿಶ್ವದಲ್ಲಿ ಭಾರತದ ಕೀರ್ತಿಯನ್ನೂ ಹೆಚ್ಚಿಸುತ್ತದೆ' ಎಂದು ಹೇಳಿದರು.

ಪ್ರಶಸ್ತಿಯು ಒಂದು ಲಕ್ಷ ನಗದು, ತಾಮ್ರಪತ್ರ ಮತ್ತು ಶಾಲು ಒಳಗೊಂಡಿದೆ. ಪ್ರಶಸ್ತಿಗೆ 70 ಮಂದಿ ಪುರುಷ ಕಲಾವಿದರು ಮತ್ತು 14 ಮಂದಿ ಮಹಿಳಾ ಕಲಾವಿದರನ್ನು ಗುರುತಿಸಲಾಗಿತ್ತು. ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್, ಸಂಸ್ಕೃತಿ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ, ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷೆ ಸಂಧ್ಯಾ ಪುರೇಚಾ ಅವರು ಹಾಜರಿದ್ದರು.

ಸಂಗೀತ ನಾಟಕ ಅಕಾಡೆಮಿಯು ನಾಲ್ಕು ದಿನಗಳ ಉತ್ಸವವನ್ನೂ ಅಕಾಡೆಮಿ ಸಂಕೀರ್ಣದಲ್ಲಿ ಆಯೋಜಿಸಿದ್ದು, 16ರಂದು ಆರಂಭವಾಗಿರುವ ಉತ್ಸವವು ಸೆ.20 ರವರೆಗೆ ನಡೆಯಲಿದೆ.

## ಗುಜರಾತ್: ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿ ಮೀಸಲಾತಿ ಶೇ 27ಕ್ಕೆ ಏರಿಕೆ

ಗಾಂಧಿನಗರ (ಪಿಟಿಐ): ಪಂಚಾಯಿತಿಗಳು, ಪಾಲಿಕೆಗಳು ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಪ್ರಮಾಣವನ್ನು ಈಗಿನ ಶೇ 10ರಿಂದ ಶೇ 27ಕ್ಕೆ ಹೆಚ್ಚಿಸುವ ಮಸೂದೆಯನ್ನು ಗುಜರಾತ್ ವಿಧಾನಸಭೆಯಲ್ಲಿ ಅಂಗೀಕರಿಸಲಾಗಿದೆ. 'ಗುಜರಾತ್ ಸ್ಥಳೀಯ ಪ್ರಾಧಿಕಾರಗಳ ಕಾಯ್ದೆ (ತಿದ್ದುಪಡಿ) ಮಸೂದೆ, 2023' ಅನ್ನು ವಿಧಾನಸಬೆಯಲ್ಲಿ ಶುಕ್ರವಾರ ಮಂಡಿಸಲಾಯಿತು.

ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎಸ್.ಜವೇರಿ ನೇತೃತ್ವದ ಆಯೋಗದ ವರದಿಯನ್ನು ಮಂಡಿಸಬೇಕು ಹಾಗೂ ಒಬಿಸಿಗಳಿಗೆ ಇನ್ನೂ ಅಧಿಕ ಪ್ರಮಾಣದ ಮೀಸಲಾತಿ ಒದಗಿಸಬೇಕು ಎಂದು ಆಗ್ರಹಿಸಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಅಮಿತ್ ಚಾವ್ಡಾ, ಹಿರಿಯ ಶಾಸಕ ಅರ್ಜುನ್ ಮೋಢ್ವಾಡಿಯಾ ಸೇರಿದಂತೆ 17 ಜನ ಕಾಂಗ್ರೆಸ್ ಶಾಸಕರು ಸಭಾತ್ಯಾಗ ಮಾಡಿದರು.

ನಂತರ, ಧ್ವನಿಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಯಿತು.

ನಿವೃತ್ತ ನ್ಯಾಯಮೂರ್ತಿ ಜವೇರಿ ನೇತೃತ್ವದ ಆಯೋಗದ ವರದಿ ಆಧಾರದಲ್ಲಿ ಒಬಿಸಿಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇ 27ರಷ್ಟು ಮೀಸಲಾತಿಯನ್ನು ಗುಜರಾತ್ ಸರ್ಕಾರ ಆಗಸ್ಟ್ 29ರಂದು ಘೋಷಿಸಿತ್ತು.

## ಕುಕ್ಕುರುಗಾಲಿನಲ್ಲಿ ಕೂರಿಸಿದ ಅಧಿಕಾರಿ

ಪ್ರಜಾವಾಣಿ ವಾರ್ತೆ

ಲಖನೌ: ದೇಶದಲ್ಲಿ ಅಧಿಕಾರಿಗಳು ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ಪ್ರತಿಬಿಂಬಿಸುವಂಥ ಘಟನೆಯೊಂದು ಉತ್ತರ ಪ್ರದೇಶದ ಬರೇಲಿಯಲ್ಲಿ ನಡೆದಿದೆ. ತನ್ನ ಗ್ರಾಮದ ಸ್ಮಶಾನಕ್ಕೆ ಸೇರಿದ್ದ ಭೂಮಿಯ ಕಬಳಿಕೆ ಕುರಿತು ದೂರು ನೀಡಲು ಹೋಗಿದ್ದ ಯುವಕನಿಗೆ ಜಿಲ್ಲಾ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ (ಎಸ್‌ಡಿಎಂ) ಅವರು ಕೋಳಿಯಂತೆ ಕುಕ್ಕುರುಗಾಲಿನಲ್ಲಿ ಕುಳಿತುಕೊಳ್ಳವಂತೆ ಶಿಕ್ಷೆ ನೀಡಿದ ಘಟನೆ ನಡೆದಿದೆ.

ಅಧಿಕಾರಿಯನ್ನು ಜಿಲ್ಲೆಯ ಮೀರ್ ಗಂಜ್‌ನ ಎಸ್‌ಡಿಎಂ ಉದಿತ್ ಪವಾರ್ ಎಂದು ಗುರುತಿಸಲಾಗಿದೆ. ಕೋಳಿಯಂತೆ ಕುಳಿತುಕೊಳ್ಳುವಂತೆ ಅಧಿಕಾರಿಯು ಯುವಕನಿಗೆ ಹೇಳಿದ್ದು ಪ್ರಾಥಮಿಕ ತನಿಖೆಗಳಿಂದ ಸಾಬೀತಾಗಿದೆ. ಹಾಗಾಗಿ ಅವರನ್ನು ಆ ಹುದ್ದೆಯಿಂದ ಕೆಳಗಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಂದನ್‌ಪುರ ಗ್ರಾಮದ ಸ್ಮಶಾನದ ಭೂಮಿಯನ್ನು ಕೆಲವರು ಕಬಳಿಸಿದ್ದಾರೆ. ಆ ಸ್ಥಳವನ್ನು ಅವರಿಂದ ಮುಕ್ತಗೊಳಿಸಿ ಎಂದು ಎಸ್‌ಡಿಎಂಗೆ ಮನವಿ ಮಾಡಲು ಗ್ರಾಮದ ಇತರರ ಜೊತೆ ಸಂತ್ರಸ್ತ ಯುವಕನು ಎಸ್‌ಡಿಎಂ ಕಚೇರಿಗೆ ತೆರಳಿದ್ದ ಎಂದು ಮೂಲಗಳು ತಿಳಿಸಿವೆ.

'ಮನವಿ ಸಲ್ಲಿಸುವ ವೇಳೆ ಕುಪಿತರಾದ ಅಧಿಕಾರಿ ಕೋಳಿಯಂತೆ ಕುಕ್ಕುರುಗಾಲಿನಲ್ಲಿ ಕೂರುವಂತೆ ತಾಕೀತು ಮಾಡಿದರು. ತಂಡದಲ್ಲಿದ್ದ ಮತ್ತೊಬ್ಬ ವ್ಯಕ್ತಿಯು ಈ ವೇಳೆ ವಿಡಿಯೊ ಚಿತ್ರೀಕರಿಸಿದ್ದಾರೆ' ಎಂದು ಯುವಕ ಹೇಳಿದ್ದಾನೆ. ಈ ಘಟನೆಗೆ ಸಂಬಂಧಿಸಿದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಈ ಕುರಿತು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಯುವಕ ಕಚೇರಿಗೆ ಬಂದಾಗಲೇ ಕೋಳಿಯಂತೆ ಬಾಗಿ ಕುಳಿತಿದ್ದ, ನಾನೇ ಅವನಿಗೆ ಎದ್ದು ನಿಲ್ಲುವಂತೆ ಹೇಳಿದೆ. ನನ್ನ ವಿರುದ್ಧ ಸಂಚು ರೂಪಿಸಲು ವಿಡಿಯೊ ಹರಿಬಿಡಲಾಗಿದೆ' ಎಂದು ಅಧಿಕಾರಿ ಹೇಳಿದ್ದಾರೆ.

## 'ಇಂಡಿಯಾ' ಒಗ್ಗಟ್ಟು: ಸೋನಿಯಾ ಸಂದೇಶ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪುನರ್‌ರಚನೆಗೊಂಡಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯನ್ನು, ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಒಗ್ಗಟ್ಟಿನಿಂದ ಬಿಜೆಪಿ ವಿರುದ್ಧ ಹೋರಾಡಬೇಕು ಎಂಬ ಸಂದೇಶವನ್ನು ರವಾನಿಸಲು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವೇದಿಕೆಯನ್ನಾಗಿ ಬಳಸಿಕೊಂಡರು.

ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರ ದೆಹಲಿ ನಿವಾಸದಲ್ಲಿ 'ಇಂಡಿಯಾ'ದ ಸಮನ್ವಯ ಸಮಿತಿ ಸಭೆ ನಡೆದ ಕೆಲವೇ ದಿನಗಳ ನಂತರ, ಸೋನಿಯಾ ಗಾಂಧಿ ಅವರು ಈ ಹೇಳಿಕೆ ನೀಡಿರುವುದು ಗಮನಾರ್ಹ.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿದಂತೆ ಇತರ ಮುಖಂಡರು, ದೇಶ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಪ್ರಸ್ತಾಪಿಸಿ, ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು.

ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ಜಂಟಿ ಸಂಸದೀಯ ಸಮಿತಿ (ಜೆಪಿಸಿ)ಯ ತನಿಖೆಗೆ ಸಮಿತಿ ಆಗ್ರಹಿಸಿತು.

ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ ಮಲ್ಲಿಕಾರ್ಜುನ ಖರ್ಗೆ, 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಎಲ್ಲ ರಂಗಗಳಲ್ಲಿಯೂ ಸಂಪೂರ್ಣ ವಿಫಲವಾಗಿದೆ. ಹಣದುಬ್ಬರ, ನಿರುದ್ಯೋಗ, ಹೆಚ್ಚುತ್ತಿರುವ ಅಸಮಾನತೆ, ರೈತರು–ಕಾರ್ಮಿಕರ ಸಂಕಷ್ಟ ಪರಿಹರಿಸಲು ಮೋದಿ ಸರ್ಕಾರಕ್ಕೆ ಸಾಧ್ಯವಾಗಿಲ್ಲ' ಎಂದು ಆರೋಪಿಸಿದರು.

'ಭಾರತವು ಅನೇಕ ಆಂತರಿಕ ಸವಾಲುಗಳನ್ನು ಎದುರಿಸುತ್ತಿದೆ. ಮಣಿಪುರದ ದುರಂತಗಳಿಗೆ ಇಡೀ ದೇಶವೇ ಸಾಕ್ಷಿಯಾಗಿದೆ. ಮಣಿಪುರದ ಬೆಂಕಿ ಹರಿಯಾಣದ ನೂಹ್ ತಲುಪಲು ಮೋದಿ ಸರ್ಕಾರವು ಅವಕಾಶ ಮಾಡಿಕೊಟ್ಟಿತು. ಈ ಘಟನೆಗಳು ಆಧುನಿಕ, ಪ್ರಗತಿಪರ ಮತ್ತು ಜಾತ್ಯತೀತ ಭಾರತ ಪರಿಕಲ್ಪನೆಗೆ ಕಳಂಕ ತಂದಿದೆ' ಎಂದು ಖರ್ಗೆ ಅಭಿಪ್ರಾಯಪಟ್ಟರು.

'ಆರ್ಥಿಕತೆಯು ಅಪಾಯದಲ್ಲಿದೆ. ಬೆಲೆ ಏರಿಕೆಯು ಸಾಮಾನ್ಯ ಜನರ ಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಚೀನಾದ ಅತಿಕ್ರಮಣಗಳ ನಿರ್ಲಕ್ಷ್ಯದಿಂದಾಗಿ ದೊಡ್ಡ ಅಪಾಯ ಸೃಷ್ಟಿಯಾಗುತ್ತಿದೆ. ಇಷ್ಟಾದರೂ, ಕೇಂದ್ರ ಸರ್ಕಾರ 'ಅಮೃತಕಾಲ' ಮತ್ತು 'ಮೂರನೇ-ದೊಡ್ಡ ಆರ್ಥಿಕತೆ' ಎನ್ನುವ ಮೂಲಕ ಪೊಳ್ಳು ಘೋಷಣೆಗಳನ್ನು ಮಾಡುತ್ತಿದೆ. ನೈಜ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರಯತ್ನವನ್ನು ಮುಂದುವರಿಸಿದೆ' ಎಂದರು.

'ಇಂಡಿಯಾ ಒಕ್ಕೂಟವು ಪ್ರಜಾಪ್ರಭುತ್ವ ವಿರೋಧಿ ಬಿಜೆಪಿ ಸರ್ಕಾರದ ವಿರುದ್ಧ ಹೋರಾಡಲು ಮುಂದಾಗುತ್ತಿದೆ. ಇದರಿಂದ ವಿಚಲಿತಗೊಂಡ ಬಿಜೆಪಿ ಸರ್ಕಾರವು ಪ್ರತಿಪಕ್ಷಗಳ ವಿರುದ್ಧ ಸೇಡಿನ ಕ್ರಮಕ್ಕೆ ಮುಂದಾಗಿದೆ. ಸಂಸತ್ತಿನಲ್ಲಿ ಅಭಿಪ್ರಾಯ ಭೇದವನ್ನು ಹತ್ತಿಕ್ಕುವ ಪ್ರಯತ್ನಗಳನ್ನು ಮಾಡಿದೆ' ಎಂದು ಟೀಕಿಸಿದರು.

## ಬೆಂಗಳೂರಿನ ಮಹಿಳೆ ದೋಷಿ ಎನ್ಐಎ ಕೋರ್ಟ್ ತೀರ್ಪು

### ನಕಲಿ ನೋಟು ಕಳ್ಳಸಾಗಣೆ, ಚಲಾವಣೆ ಪ್ರಕರಣ

ನವದೆಹಲಿ (ಪಿಟಿಐ): ನಕಲಿ ನೋಟುಗಳ ಕಳ್ಳಸಾಗಣೆ ಪ್ರಕರಣದ ಆರನೇ ಆರೋಪಿಯಾಗಿದ್ದ ಬೆಂಗಳೂರಿನ ಮಹಿಳೆಯನ್ನು ದೋಷಿ ಎಂದು ಪರಿಗಣಿಸಿರುವ ಎನ್ಐಎ ವಿಶೇಷ ನ್ಯಾಯಾಲಯ, ಆರೋಪಿಗೆ 13 ವರ್ಷಗಳ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿದೆ.

ಬೆಂಗಳೂರು ನಗರದ ವನಿತಾ ಅಲಿಯಾಸ್ ತಂಗಂ ಈ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾದ ಆರನೇ ಅಪರಾಧಿ. ಇವರಿಗೆ ಶಿಕ್ಷೆಯ ಜತೆಗೆ ₹20 ಸಾವಿರ ದಂಡವನ್ನೂ ನ್ಯಾಯಾಲಯ ವಿಧಿಸಿದೆ.

ಇವರಿಗೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 489ಬಿ (ನಕಲಿ ನೋಟು ಚಲಾವಣೆ) ಅಡಿಯಲ್ಲಿ ಆರು ವರ್ಷಗಳ ಜೈಲು ಶಿಕ್ಷೆ, ಸೆಕ್ಷನ್ 489ಸಿ(ನಕಲಿ ನೋಟುಗಳ ಹೊಂದಿರುವುದು) ಅಡಿಯಲ್ಲಿ ಐದು ವರ್ಷಗಳ ಜೈಲು ಶಿಕ್ಷೆ ಮತ್ತು ಸೆಕ್ಷನ್ 120ಬಿ (ಅಪರಾಧದ ಪಿತೂರಿ) ಅಡಿಯಲ್ಲಿ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಈ ಎಲ್ಲ ಶಿಕ್ಷೆಗಳು ಏಕಕಾಲದಲ್ಲಿ ಜಾರಿಯಾಗಲಿವೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಶನಿವಾರ ತಿಳಿಸಿದೆ.

2018 ಮತ್ತು 2022ರ ನಡುವೆ ಎನ್ಐಎ ಎಂಟು ಜನರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಿತ್ತು. ಇವರಲ್ಲಿ ಮೊಹಮ್ಮದ್ ಸಜ್ಜದ್ ಅಲಿ ಅಲಿಯಾಸ್ ಚಾಚು, ಎಂ.ಜಿ. ರಾಜು ಅಲಿಯಾಸ್ ಮಾಸ್ಟರ್ ಮತ್ತು ಅಬ್ದುಲ್ ಖಾದಿರ್, ಗಂಗಾಧರ್ ಖೋಲ್ಕರ್ ಮತ್ತು ಸಬಿರುದ್ದೀನ್ ಎಂಬುವವರಿಗೂ ವಿಶೇಷ ನ್ಯಾಯಾಲಯವು ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ ಎಂದು ಎನ್ಐಎ ತಿಳಿಸಿದೆ.

2018ರಲ್ಲಿ ಎನ್ಐಎ ಜತೆ ಜಂಟಿ ಕಾರ್ಯಾಚರಣೆ ನಡೆಸಿದ್ದ ಕರ್ನಾಟಕ ಪೊಲೀಸರು ₹4.34 ಲಕ್ಷ ಮುಖಬೆಲೆಯ ನಕಲಿ ನೋಟುಗಳೊಂದಿಗೆ ಇತರ ಮೂವರು ಆರೋಪಿಗಳನ್ನು ಬಂಧಿಸಿದ್ದರು. ಆರೋಪಿ ವನಿತಾ ಅವರಿಂದ ₹ 2.50 ಲಕ್ಷ ಮುಖಬೆಲೆಯ ನಕಲಿ ನೋಟುಗಳನ್ನು ವಶಪಡಿಸಿಕೊಂಡಿದ್ದರು.

ಎನ್ಐಎ ಅಧಿಕಾರಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಕರ್ನಾಟಕ ಪೊಲೀಸರು ಈ ಪ್ರಕರಣವನ್ನು ಆರಂಭದಲ್ಲಿ ದಾಖಲಿಸಿಕೊಂಡಿದ್ದರು.

ನಂತರ ಈ ಪ್ರಕರಣವನ್ನು ಮರುದಾಖಲಿಸಿಕೊಂಡು, ಪ್ರಮುಖ ಆರೋಪಿ ಪಶ್ಚಿಮ ಬಂಗಾಳ ಮಾಲ್ಡಾದ ಅಬ್ದುಲ್ ಖಾದಿರ್ ನೇತೃತ್ವದಲ್ಲಿ ಕಾರ್ಯಾಚರಿಸುತ್ತಿದ್ದ ನಕಲಿ ನೋಟು ಚಲಾವಣೆ ಮತ್ತು ಕಳ್ಳಸಾಗಣೆ ಜಾಲವನ್ನು ಭೇದಿಸಿ ತನಿಖೆ ಪೂರ್ಣಗೊಳಿಸಲಾಯಿತು ಎಂದು ರಾಷ್ಟ್ರೀಯ ತನಿಖಾ ಏಜೆನ್ಸಿ ಹೇಳಿದೆ.

ಪ್ರಮುಖ ಆರೋಪಿ ಅಬ್ದುಲ್ ಖಾದಿರ್, ಬಾಂಗ್ಲಾದೇಶದಿಂದ ದೊಡ್ಡ ಮುಖಬೆಲೆಯ ಭಾರಿ ಪ್ರಮಾಣದ ನಕಲಿ ನೋಟುಗಳನ್ನು ಕಳ್ಳಸಾಗಣೆ ಮೂಲಕ ಪಡೆದು, ಗುಪ್ತವಾಗಿಭಾರತದಲ್ಲಿರುವ ತನ್ನ ಸಹಚರರಿಗೆ ತಲುಪಿಸಿ, ಬೆಂಗಳೂರು ಸೇರಿ ವಿವಿಧ ಕಡೆಗಳಲ್ಲಿ ಚಲಾವಣೆ ಮಾಡಿಸುತ್ತಿದ್ದ ಎಂದು ಎನ್ಐಎ ಹೇಳಿತ್ತು.

ಪ್ರಜಾವಾಣಿ

#DivineDecoration

ಈ ಗಣೇಶನ ಹಬ್ಬಕ್ಕೆ ನಿಮ್ಮ ಕಲೆಯನ್ನು ಪರಿಚಯಿಸಿ!

'ಭಕ್ತಿ' ಮತ್ತು 'ಶ್ರದ್ಧೆಯಿಂದ' ಮಾಡಿರುವ ವಿಶೇಷ ಅಲಂಕಾರ ಹಾಗೂ ನಿಮ್ಮ ಮನೆ ಗಣೇಶನ ಪೂಜಿಸುವ ವಿಧಾನವನ್ನು ನಮ್ಮೊಂದಿಗೆ ಹಂಚಿಕೊಳ್ಳಿ.
ಭಕ್ತಿಭಾವದ ಈ ಹಬ್ಬವನ್ನು ನಾವೆಲ್ಲರೂ ಸಡಗರದಿಂದ ಆಚರಿಸೋಣ.

ನಿಯಮಗಳು:
- ಗಣೇಶನ ವಿಗ್ರಹ ಮತ್ತು ಸ್ಥಾಪನೆ ಮಾಡುವ ಸ್ಥಳವನ್ನು ಅಲಂಕರಿಸಿ
- ಒಂದು ಚಿತ್ರವನ್ನು ಸೆರೆಹಿಡಿಯಿರಿ
- ನಿಮ್ಮ ಹೆಸರು ಮತ್ತು ಸಂದೇಶದೊಂದಿಗೆ 7338018541 ಗೆ Whatsapp ಮಾಡಿ ಅಥವಾ pv@prajavani.co.in ಗೆ mail ಮಾಡಿ
- ಅಥವಾ ನಿಮ್ಮ SM ದಲ್ಲಿ post ಮಾಡಿ ಮತ್ತು #DivineDecoration ದೊಂದಿಗೆ @prajavani tag ಮಾಡಿ
- ಪ್ರವೇಶಗಳನ್ನು ಕಳುಹಿಸುವ ಕೊನೆಯ ದಿನಾಂಕ 20/09/2023

ಆಯ್ದ ಅತ್ಯುತ್ತಮ ಅಲಂಕಾರಗಳು ಪ್ರಜಾವಾಣಿ ಪತ್ರಿಕೆಯಲ್ಲಿ ಕಾಣಿಸಿಕೊಳ್ಳುವ ಸದವಕಾಶವನ್ನು ಪಡೆದುಕೊಳ್ಳಲಿವೆ.

Follow Us
*T&C Apply

### ಭಾರತದಲ್ಲಿ ಚೀತಾ ಮರು ಪರಿಚಯಿಸುವ ಯೋಜನೆಗೆ ಒಂದು ವರ್ಷ

# ಸೋಂಕಿಗೆ ತುತ್ತಾಗದ ಚೀತಾಗಳನ್ನು ತರಲು ಚಿಂತನೆ

ನವದೆಹಲಿ (ಪಿಟಿಐ): ಸೋಂಕಿಗೆ ತುತ್ತಾಗದ, ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುವ ಚೀತಾಗಳನ್ನೇ ಮುಂದಿನ ದಿನಗಳಲ್ಲಿ ಭಾರತಕ್ಕೆ ತರಲು ಯೋಜಿಸಲಾಗಿದೆ ಎಂದು ಚೀತಾ ಮರುಪರಿಚಯ ಯೋಜನೆಯ ಮುಖ್ಯಸ್ಥ, ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಎಸ್.ಪಿ ಯಾದವ್ ತಿಳಿಸಿದ್ದಾರೆ.

ನಮೀಬಿಯಾದಿಂದ ತಂದಿದ್ದ ಚೀತಾಗಳನ್ನು ಕಳೆದ ವರ್ಷ ಸೆ. 17ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಬಿಡುಗಡೆ ಮಾಡಿದ್ದರು. ಈ ಮೂಲಕ ಭಾರತಕ್ಕೆ ಚೀತಾವನ್ನು ಪರಿಚಯಿ ಸುವ ಯೋಜನೆಯನ್ನು ಉದ್ಘಾಟಿಸಿದ್ದರು. ಈ ಭಾನುವಾರ ಯೋಜನೆಗೆ ಒಂದು ವರ್ಷ ತುಂಬಲಿದೆ.

ಈ ಹಿನ್ನೆಲೆಯಲ್ಲಿ ಮಾತನಾಡಿರುವ ಎಸ್.ಪಿ ಯಾದವ್, 'ಯೋಜನೆಯ ಎರಡನೇ ವರ್ಷದಲ್ಲಿ ಚೀತಾಗಳ ಸಂತಾನೋತ್ಪತ್ತಿಗೆ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದ್ದಾರೆ.

ರೇಡಿಯೊ ಕಾಲರ್‌ಗಳಿಂದ ಚೀತಾಗಳ ಸಾವು ಸಂಭವಿಸಿದೆ ಎಂಬ ವಾದ ನಿರಾಕರಿಸಿರುವ ಅವರು, ದಕ್ಷಿಣ ಆಫ್ರಿಕಾದಿಂದಲೇ ತರಲಾದ ಹೊಸ

ರೇಡಿಯೊ ಕಾಲರ್‌ಗಳನ್ನು ಚೀತಾಗಳಿಗೆ ಅಳವಡಿಸಲಾಗುವುದು ಎಂದು ಹೇಳಿದ್ದಾರೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮುಖ್ಯಸ್ಥರೂ ಆಗಿರುವ ಯಾದವ್, 'ಚೀತಾಗಳ ಮುಂದಿನ ತಂಡವನ್ನು ದಕ್ಷಿಣ ಆಫ್ರಿಕಾದಿಂದ ತರಿಸಿಕೊಳ್ಳಲಾಗುವುದು. ಅವುಗಳನ್ನು ಮಧ್ಯಪ್ರದೇಶದ ಗಾಂಧಿ ಸಾಗರ್ ಅಭಯಾರಣ್ಯಕ್ಕೆ ಬಿಡಲಾಗುವುದು' ಎಂದು ತಿಳಿಸಿದರು.

'ಕುನೊ ರಾಷ್ಟ್ರೀಯ ಉದ್ಯಾನ 20 ಚೀತಾಗಳಿಗೆ ಆಶ್ರಯ ನೀಡುವ ಸಾಮರ್ಥ್ಯ ಹೊಂದಿದೆ ಎಂದು ಕ್ರಿಯಾ ಯೋಜನೆಯಲ್ಲಿ ಉಲ್ಲೇಖಿಸಲಾಗಿದೆ. ಈಗ, ಒಂದು ಮರಿ ಸೇರಿದಂತೆ 15 ಚೀತಾಗಳಿವೆ. ಮುಂದಿನ ಹಂತದಲ್ಲಿ ತರಲಾಗುವ ಚೀತಾಗಳನ್ನು ಇತರ ಅಭಯಾರಣ್ಯಗಳಲ್ಲಿ ಇರಿಸಲಾಗುವುದು. ಮಧ್ಯಪ್ರದೇಶದ ಗಾಂಧಿ ಸಾಗರ್ ಮತ್ತು ನೌರದೇಹಿ ಅಭಯಾರಣ್ಯ ಇದಕ್ಕೆ ಸೂಕ್ತವಾಗಿದೆ' ಎಂದರು.

ಚೀತಾಗಳನ್ನು ರಾಜಸ್ಥಾನದ ಮುಕುಂದ್ರ ಬೆಟ್ಟಗಳಲ್ಲಿ ಬಿಡಲು ಕೆಲವು ತಜ್ಞರು ಶಿಫಾರಸು ಮಾಡಿದ್ದಾರೆ. ಆದರೆ, ಇದು ಚೀತಾಗಳಿಗೆ ಪ್ರಶಸ್ತವಲ್ಲ. ಮುಕುಂದ್ರ ಹುಲಿ ಸಂರಕ್ಷಿತ ಪ್ರದೇಶ. ಆದರೆ, ಅಲ್ಲಿ ಹುಲಿಗಳ ಪರಿಚಯವೂ ಯಶಸ್ವಿಯಾಗಿಲ್ಲ! ಅಲ್ಲಿ ಪರಾವಲಂಬಿಗಳು ಹೆಚ್ಚು. ಉಣ್ಣಿಗಳ ಸೋಂಕಿನಿಂದ ಈಗಾಗಲೇ ಎರಡು ಹುಲಿಗಳು ಮತ್ತು ಮರಿಗಳು ಅಲ್ಲಿ ಮೃತಪಟ್ಟಿವೆ. ಮುಕುಂದ್ರದಲ್ಲಿ ಹಲವಾರು ಸಮಸ್ಯೆಗಳಿವೆ. ಹೀಗಾಗಿ ಮುಕುಂದ್ರ ಚೀತಾಗಳಿಗೆ ಯೋಗ್ಯ ಎಂದು ನಾನು ಭಾವಿಸಲಾರೆ' ಎಂದು ಯಾದವ್ ಹೇಳಿದರು.

'ಭಾರತದಲ್ಲಿ ಬೇಸಿಗೆ ಮತ್ತು ಮಾನ್ಸೂನ್ ಇದ್ದಾಗ ಆಫ್ರಿಕಾದ ಚೀತಾಗಳು ಚಳಿಗಾಲದ ನಿರೀಕ್ಷೆಯಲ್ಲಿ ದೇಹದ ಮೇಲೆ ದಪ್ಪನೆಯ ಪದರ (ವಿಂಟರ್ ಕೋಟ್)ವನ್ನು ಅನಿರೀಕ್ಷಿತವಾಗಿ ಬೆಳೆಸಿಕೊಂಡವು. ಇದು ಸೋಂಕು ಉಲ್ಬಣಗೊಳ್ಳಲು ಕಾರಣವಾಯಿತು. ಆಫ್ರಿಕನ್ ತಜ್ಞರೂ ಇದನ್ನು ನಿರೀಕ್ಷಿಸಿರಲಿಲ್ಲ' ಎಂದು ಅವರು ಹೇಳಿದ್ದಾರೆ.

'ಚೀತಾಗಳ ದೇಹದ ಮೇಲೆ ಮೂಡಿದ ದಪ್ಪನೆಯ ಪದರ, ತೇವಾಂಶದಿಂದಾಗಿ ಅವುಗಳಿಗೆ ತುರಿಕೆ ಉಂಟಾಗಿತ್ತು. ತುರಿಕೆ ನಿವಾರಣೆಗಾಗಿ ಚೀತಾಗಳು ಕುತ್ತಿಗೆ ಭಾಗವನ್ನು ಮರಕ್ಕೆ ಮತ್ತು ನೆಲಕ್ಕೆ ಉಜ್ಜಿದ್ದವು. ಇದರಿಂದ ಚರ್ಮದಲ್ಲಿ ಗಾಯಗಳಾದವು. ಈ ಗಾಯಗಳನ್ನು ಮುತ್ತಿಕೊಂಡ ನೊಣಗಳು ಮೊಟ್ಟೆ ಇಟ್ಟಿದ್ದವು. ಪರಿಣಾಮವಾಗಿ ಚರ್ಮದ ತೀವ್ರ ಸೋಂಕು ಉಂಟಾಗಿತ್ತು. ಅದು ಬ್ಯಾಕ್ಟಿರಿಯಾ ಸೋಂಕಿಗೂ ಕಾರಣವಾಗಿ, ರಕ್ತದಲ್ಲಿ ನಂಜುಂಟಾಗಿ ಸಾವು ಸಂಭವಿಸಿತ್ತು' ಎಂದು ಯಾದವ್ ವಿವರಿಸಿದ್ದಾರೆ.

ಆದರೆ, ಕೆಲವು ಚೀತಾಗಳಲ್ಲಿ ಸೋಂಕಿನ ಸಮಸ್ಯೆ ಕಾಣಿಸಿಕೊಳ್ಳಲಿಲ್ಲ. ಅವು ಭಾರತದ ಪರಿಸರಕ್ಕೆ ಹೊಂದಿಕೊಂಡಿವೆ. ಹೀಗಾಗಿ ಮುಂದಿನ ತಂಡದಲ್ಲಿ ಇಂಥ ಚೀತಾಗಳನ್ನೇ ತರಲು ನಿರ್ಧರಿಸಿಲಾಗಿದೆ ಎಂದು ಅವರು ಹೇಳಿದರು.

ಭಾನುವಾರ, ಸೆಪ್ಟೆಂಬರ್ 17, 2023 | ₹ 7.00

www.prajavani.net

prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಬಾಲಿವುಡ್ ನಟಿ ನರ್ಗಿಸ್ ಫಕ್ರಿ ಶನಿವಾರ ವಾರಾಣಸಿಗೆ ಭೇಟಿ ನೀಡಿದ್ದರು

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ), ಕಲಬುರಗಿ.



75 ನೇ ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವ

ಅನುಚ್ಛೇದ 371(ಜೆ) 10 2013 - 2023 ದಶಮಾನೋತ್ಸವ

ಶ್ರೀ ಸಿದ್ದರಾಮಯ್ಯ ರವರು

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರಿಂದ

ಏಕೀಕರಣದ ರೂವಾರಿ ಸರ್ದಾರ ವಲ್ಲಭಭಾಯಿ ಪಟೇಲ್‌ರವರ ಪ್ರತಿಮೆಗೆ ಮಾಲಾರ್ಪಣೆ,

ಸ್ಥಳ: ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತ, ಕಲಬುರಗಿ

ಸೆಪ್ಟೆಂಬರ್ 17, 2023 | ಬೆಳಿಗ್ಗೆ 8:30ಕ್ಕೆ

ಧ್ವಜಾರೋಹಣ: ಪೊಲೀಸ್ ಪರೇಡ್ ಮೈದಾನ, ಕಲಬುರಗಿ

ಸೆಪ್ಟೆಂಬರ್ 17, 2023 | ಬೆಳಿಗ್ಗೆ 9:00 ಕ್ಕೆ

ಸರ್ವರಿಗೂ ಆದರದ ಹಾರ್ದಿಕ ಸ್ವಾಗತ

**2023-24 ನೇ ವರ್ಷದಲ್ಲಿ:**

**₹5,000 ಕೋಟಿ**

ಮೊತ್ತದಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**2,618**

ಅಕ್ಷರ ಮಿತ್ರ ಶಿಕ್ಷಕ ಹುದ್ದೆ ಭರ್ತಿ

**25%**

ಅನುದಾನ ಶಿಕ್ಷಣ ಕ್ಷೇತ್ರಕ್ಕೆ ಮೀಸಲು

ಶ್ರೀ ಡಿ. ಸುಧಾಕರ್, ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು, ಕರ್ನಾಟಕ ಸರ್ಕಾರ, ಕ.ಕ.ಪ್ರ.ಅ ಮಂಡಳಿ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಸಾಂದರ್ಭಿಕ ಚಿತ್ರ.

ಅನುಚ್ಛೇದ 371(ಜೆ) ದಶಮಾನೋತ್ಸವದ ಅಂಗವಾಗಿ ಮಾನ್ಯ ರಾಜ್ಯಸಭಾ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ರವರಿಗೆ ಶ್ರೀ ಅಜಯ ಧರ್ಮಸಿಂಗ್, ಅಧ್ಯಕ್ಷರು, ಕ.ಕ.ಪ್ರ.ಅ ಮಂಡಳಿ ಇವರು ಶುಭಾಶಯ ತಿಳಿಸಿದ ಸಂದರ್ಭ.

ಶೈಕ್ಷಣಿಕವಾಗಿ ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ **ಅಕ್ಷರ ಆವಿಷ್ಕಾರ** ಯೋಜನೆ ರೂಪಿಸಲಾಗಿದೆ.

**ಅಕ್ಷರ, ಅರೋಗ್ಯ, ಅರಣ್ಯ** ಸೇರಿದಂತೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಮಂಡಳಿ ಸಂಕಲ್ಪ ಮಾಡಿದೆ.



**ಅನುಚ್ಛೇದ 371(ಜೆ) ದಶಮಾನೋತ್ಸವದ ಸಾಧನೆಗಳು**

**ಭೌತಿಕ ಪ್ರಗತಿಯ ನೋಟ:** (2013-2023)

**29,215** ಮಂಜೂರಾದ ಒಟ್ಟು ಕಾಮಗಾರಿಗಳ ಸಂಖ್ಯೆ.

**24,563** ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ.

**ಆರ್ಥಿಕ ಪ್ರಗತಿಯ ನೋಟ:** (2013-2023)

**₹10,228.80** ಕೋಟಿ ಸರ್ಕಾರದಿಂದ ಮಂಡಳಿಗೆ ಬಿಡುಗಡೆಯಾದ ಅನುದಾನ

**₹8,563.84** ಕೋಟಿ ಇದುವರೆಗಿನ ವೆಚ್ಚ

**ಡಾ|| ಅಜಯ್ ಸಿಂಗ್**

ಮಾನ್ಯ ಅಧ್ಯಕ್ಷರು,
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ,
ಹಾಗೂ ಶಾಸಕರು, ಜೇವರ್ಗಿ

ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ARE YOU A QUALIFIED & EXPERT TRAINER IN OET, IELTS OR GERMAN LANGUAGE WITH PASSION FOR TEACHING ?**

Join us. We offer a thriving and inclusive teaching environment with Competitive compensation package.
Share your CV to: pursuinginternationaleducation@gmail.com
Short-listed candidates will be called for personal interview.

**EAST WEST INSTITUTIONS**

EAST WEST

**EAST WEST INSTITUTE OF PHARMACEUTICAL SCIENCES**

187, Dodda Aalada Mara Main Road, Kumbalagodu, (Bheemanakuppe Cross) Kengeri Hobli, Bengaluru South. Mobile: 63601 67901

Require following personnel for immediate appointment

**PRINCIPAL | PROFESSORS**
**ASSOCIATE PROFESSORS**
**ASSISTANT PROFESSORS | LECTURERS**

SVM-23407

Faculty for: Pharmacognosy, Pharmaceutical Analysis Pharmaceutical Chemistry, Pharmaceutics & Pharmacology.

Qualification: M. Pharm. in the respective specialization. Preference will be given to Ph.D holders for the post of Professor. Industrial experience will also be considered. Qualification, experience & salary as per PCI norms

**ALSO WANTED:**
Admin Officer | Lab Technician
Lab Assistant | Lab Attendant

Apply within 10 days from the date of advertisement
E-mail: ewbsni2020@gmail.com

**TWO 30X40** Corner Site Sale. Varahasandra, Conversion "A" Khatha, Hemigepura ward, Rate 4,250/- negotiable -9731652042

**30X35** North, Revenue Site Sale, Opposite Podar International School, Vishweswaraiah Layout, Rate 3,800/- negotiable. -8105251219

## Vidyaranyapura

**NTI SOCIETY** Vidyaranyapura North East Corner 40X60 Site Top Location For Sale Contact: 9738111222 9341260828

## Mandya

**40X60 NORTH,** Mandya MUDA Site Sale, Vivekanandanagar 'A' Block no.2703, Rate 3250/- negotiable- 9731652042

Smt. N Leelavathi , Founder
True leaders don't create followers; they create more leaders.

ಶ್ರೀ ವಿದ್ಯಾ ಮಂದಿರ ಶಿಕ್ಷಣ ಸಂಸ್ಥೆ

**SRI VIDYA MANDIR EDUCATION SOCIETY**

**ADMISSIONS OPEN (2024-25)**

**PRE-KG, LKG, UKG, STD 1**

| Eligibility: | |
|---|---|
| PRE-KG | 1/6/2020-31/5/2021 |
| LKG | 1/6/2019-31/5/2020 |
| UKG | 1/6/2018-31/5/2019 |
| STD 1 | 1/6/2017-31/5/2018 |

Issue of applications & Time: 1/09/2023 Onwards 10.00 AM to 1.00 PM

**Highlights**
- Innovatively Curated Curriculum
- Creative Experiential Learning
- Thematic Learning
- Indoor & Outdoor Activities
- Cultural Awareness & Activities

**CORE VALUES**
We continue our humble journey with the goal of providing holistic, value-based education that would nurture and nourish the young minds of our students.
~ Smt. Bharathi Babu Doraiswamy, Principal

Value based holistic education is our Vision and Mission
~Sri. N Babu Doraiswamy, Secretary

**SRI VIDYA MANDIR EDUCATION SOCIETY (REGD)**
11th Cross, West Park Road, Opposite to Sri Venugopalaswamy Temple, Malleswaram, Bengaluru-560 003
080-23342658
[ www. srividyamandir.in /svmes2021@gmail.com]
(Nursery, Primary & High School)

**PLUG & PLAY OFFICE FOR RENT**
**AVAILABLE AT INDIRANAGAR CMH ROAD**
**INDEPENDENT BUILDING** 9000 Sq.ft
Ground Floor 1st, 2nd & 3rd Floor with CAFETERIA & TERRACE
- 65+ 20 work station
- Conference Room
- Training Room
- 6 Nos Cabins
- CENTRALISED AC
- 100 KVA Power with 100%
- Power Backup. Generator.
- UPS and Ample Car Parking
- RENT AS PER MARKET
- 400 meters from Metro Station

Immediately available at:
Indiranagar 80 Feet Road, Near CMH Hospital
Contact : AASHISU ESTATES
98445 93724 / 99860 39699

**ಸೈಟುಗಳು ಮಾರಾಟಕ್ಕಿವೆ**
**ನೆಲಮಂಗಲ ಹತ್ತಿರ**
**20x30**
**ರೂ.4 ಲಕ್ಷದಿಂದ ಆರಂಭ**
**ಕಿತ್ತನಹಳ್ಳಿ ಹತ್ತಿರ**
**ರೂ.999 per sq.ft**
ಸಂಪರ್ಕಿಸಿ:
**7406994547**

# REAL ESTATE SELLING

## Sites

### Banashankari

**30x40 BDA SITE**

BSK 6th STAGE, 10th BLOCK, BDA NORTH FACING, SITE FOR SALE 30X40, 1st ALLOTTE, CLEAR TITLE. Genuine Buyers Contact : 8088799686, 9611105595

**BANASHANKARI 6TH** STAGE- ANJANAPURA BDA- Available/ Wanted 20x30 30x40 40x60 50x80 Sites 'BRINDAVAN ASSOCIATES'- 9980863245

**30X40, 40X60** Both East Face for Sale in Banashankari 6th Stage. Call: MANOJ- 9731410616

**AVAILABLE: 30X35,20X36** 'E' khata sites Near Kumbalagodu 1.5KM from Mysore-road fully Developed good-location Call: 9844421127

### HRBR Layout

**HRBR BDA** Site Sale 40X60 with Ground & First Site Value 22500/Sft Negotiable, Call: 7349322223

### Koramangala

**SALE KORAMANGALA** 4th B Block 40x60 East-Facing BDA-Site 6 crore Near-BDA Complex & Parallel to 100 feet`Road Call:9845201710

### Kanakapura Road

**40X60 EAST** Facing Site Sale, Nitesh Rio (Adjacent to Vakil Garden City). Kanakapura Road. 9901244511.

### Kempegowda Layout

**KEMPEGOWDA LAYOUT** BDA COMMERCIAL/ RESIDENTIAL SITE FOR SALE 30X40, 40X60, 50X80 CONTACT UMESH KUMAR: 9945112279

### Mysore Road

**VAISHNAVI ENCLAVE** DC-Converted Fully Developed plots in Maargondanahalli Near Kempegowda BDA Layout @ 1999/- per sqft. Contact: 9538344284, 7353776211

### Nagarabhavi

**SALE/ RENT** 30X40 40X60 Sites,Houses Vishveshwaraiah Annapoorneshwarinagar Health, ITI, NGEF BEL. RUDRAPPA 9035334418 9141326819

**SITE FOR** SALE NAGARABHAVI D Group Layout, BDA Khatha 30x50 West Facing. Good Location. 9739113666.

**BDA PLOT** for Sale 2400 sqft East Facing, opp. MPM Park, Ambedkar Collage, Nagarabavi @ 12000/- sqft. Only genuine buyers call: 9845165177

### Rajarajeshwari Nagar

**SITE FOR** SALE @ 9000/- GATTIGERE SUDARSHAN LAYOUT RAJA RAJESHWARI NAGAR CALL: 9900036544 / 9740252729

### Sahakarnagar

**SAHAKARANAGAR 1620** sft Site North West Corner Top Location For Sale Contact: 9738111222 9341260828

**'FOR SALE** North East Corner Site, Kodigehalli, M V Layout, Thindlu Extension, BBMP Limits 31x22 682 Sqft 'A' Katha, 7500/-, Brokers Excuse, Contact 9900181111'

### Vishweshwariah Layout

**27X40 SOUTH/WEST** Corner Good Residential BDA approved Site-Sale [Close to 100.feet Road 1st Block Vishveshwaraiah Layout] Contact: 9845143579

**VISHVESHWARAIAH LAYOUT** 6th Block 30x40 N/F 40 feet Road,behind 100 feet Road,7000/- negotiable,very Good Location. 9844533371/ 9341733480

**30X40 VISHVESHWARAIAH** Layout 2nd Block 100ft Road Parall North 7500 & 40X60 Kempegowda Layout @ 4600 & 20X30 Sites Sale 46 Lak: 8310003509

***30X45 EAST** and North* Residential and Commercial Corner Property Sale VishveswaraiahLayout,Near Nammurathindi Hotel. 7411994069

**"VISHVESHWARAIAH LAYOUT** 4th Block 50x80 North 80 feet Road,2 crore White, Immediate Registration. 9448432633"

### Mysore

**50X80 RESIDENTIAL** Site for Sale, SBM Layout, Bogadhi, MYSORE, South Facing, Immediate Settlement. MUDA Approved. 9448364054, 9448365873.

**30X45 SOUTH/** west facing corner site for sale at Byatarayanapura, Mysore Road. Brokers Excuse. Contact +919845900432

## House

### Bommanahalli

**SALE GROUND** +3 Duplex House North West Corner, Hongasandra, 2.6Cr. `A`Khata. call:9980445588, 7026555599.

### HBR Layout

**HBR LAYOUT** 3rd Block, Silent Area, 30x40 BDA Site with House for Sale, Contact: 9980910229.

### J P Nagar

**SALE BRAND** New House JP.NAGAR 9th Phase 40x60 Royal Park Residency Phase-I 5BHK Modern Interiors Rs.4 Crores Negotiable. 'SHIVU' 9880004149

### Kengeri

**LUXURY DUPLEX** 4 BHK House, Ground 2 BHK 30x40 Vinayakanagar, Kodipalya, Kengeri, 2.45Cr. 9148914809, 9886763146.

### Rajarajeshwari Nagar

**SALE: BRAND** New Ready occupation Independent House- WF- 30'x40' GF 1BHK, Parking, FF, SF & TF. 5BHK Triplex, all amenities, Italian Marble/ All Teak, Main Door NF, Krishna Garden, RR.Nagar. 2.63 Cr. (Negotiable). Ph: 98451-82419

### Magadi

**SALE GF** Single Bedroom House 1st & 2nd Floor 3Bed House Kadabagere Contact Gangadhar: 9632824856

## Flat

### Basaveshwaranagar

**2 BHK** FLAT (North) 2nd Floor BDA Property Basaveswarnagar Water Tank Bus Stop. 60L: 9880443362

### Isro Layout

**3/4 BHK** New Luxurious Flats Sale, Fully Furnished, Italian Marble, Cauvery, Security, Car parking. 70L/90L. 9945224058, 6360501159.

### Kumaraswamy Layout

**3-BHK E/F** A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

### Jayanagar

Superb Duplex 4 BHK Apartment @ Jayanagar 5th Block for SALE.

High-end fittings and luxurious interiors.
Fully Furnished with all Fixed Furniture & Kitchen. East Facing and 100% Vastu Compliant.
Area: 3460 sft + 700 sft Private Terrace area.
Please call / WhatsApp
TANVI HOLDINGS
95132 21216

### Malleshwaram

**SALE 3BHK** apartment 1755sqft Renaissance Park-3,Malleshwaram West. 1.75 crores Contact: 9342139450

### Rajajinagar

**PURVA BLUEBELLE** Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

**DNR HIGHLINE** @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

### Vishweshwariah Layout

**3 BHK** fully furnished flat for sale Vishveshwaraiah layout near Ambedkar College Bengaluru. Contact: 9242299427.

### Sanjaynagar

**SANJAYNAGAR KALPANA** Chawla Road 3-BHK Flat 1770sqft North Facing Semi Furnished Vastu Compliance, Rs.1.85Cr, Owner:9448787599

## Agricultural Land

### Ramanagar

**5 ACRES** 27 GUNTAS, BEAUTIFUL COCONUT FARM LAND SALE. NEAR CHENNAPATNA, BETWEEN BANGALORE- MYSORE. 9916551395

### Whitefield

**SALE VARTHUR** 4 ACRE 'MAGNIFICENT AGRICULTURE LAND' BEHIND BRIGADE COMERSTONE UTOPIA, GENUINE BUYERS CONTACT: 9900001973

## Commercial Building

### Koramangala

**4750 SQFT.** Site, Tenanted Commercial Building Sale, Near Koramangala, Getting 7L, Price.10cr. Call: 9980577227.

### Malleshwaram

**FULLY FURNISHED** 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call: 9663001940/ 9845358544.

### Mysore Road

**MYSORE ROAD** Cross Near Chamrajpet Anantharamaiah Compound G +3 (Built-up area 5600 sqft) Commercial New Building with lift available for Sale. Contact: 9845173914.

### Nagarabhavi

**SKANDHA ESTATES** D Group Layout, BDA Commercial Building, 30x40, 4 Floors Brand New, North Facing, 60ft Road, 3.3Cr: 7019251303

## Commercial Land

### Out-Station

**NEAR YADIYUR** On NH-47 Highway 52 Guntas Commercial Land,North Facing, Nearly 230`Feet Front Road Side,Clear Title Deeds for Sale,Only Genuine Buyers Contact: 9148719991.

### Rajajinagar

**"RAJAJINAGAR PRIME-COMMERCIAL** Site 45x85, Dr.Rajkumar Road East Ideal for Hotels,Lodging, Showrooms 10crore Genuine buyers Call: 9845286505"

## Commerical

### BEL Layout

**SKANDHA ESTATES** Bharath Nagar Magadi Road BEL Layout, First Stage, BDA Commercial 40x60, North Facing 60ft Road: 7019251303

### Jayanagar

**JAYANAGAR 9TH** Block 48x30 Site E/F 3.10cr`Nego. and 55x30 Commercial 3 Floor Building 2 lacs Rental`income 5.85cr. Call:9945310899

### Bannerghatta Road

**KAMMANAHALLI MAIN** Road, Near Meenakshi Temple, 40x75 Commercial Property for Sale, A Khata. 9980445588, 7026555599.

### Vijayanagar

**40×60 WEST FACING** Commercial Site with building for Sale in Vijayanagar. Prime Location. Close to Metro Station. Contact: 9019939128. (Brokers Excuse).

## Farm House/ Land/ Resorts

### Devanahalli

**1/2ACRE LAND** gated converted eKhata 21K builtup 15 furnished AC rooms garden 9Cr non-nego Ph:7019346409

## General

### South

**CONTACT FOR** Rental House, Home Sites for Purchase, Residential & Commercial Properties in & around Banashankari 2nd Stage, Jayanagar, Basavangudi. Contact: 9535184028

## Industrial & Factory

### Tumkur

**PROPERTY FOR** sale in KSSIDC Industrial Estate BH road, Tumkur 5000 sft. mb 8105340624

### Tumkur Road

**SALE/ RENT** Industrial Warehouse, Commercial, Farm Land around Nelamangala Dabaspet. 1 to 100 acres. 9141326819

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

## Residential/ Commercial

### Bannerghatta Road

**IMMEDIATE SALE** 40x60 East Facing Well Furnished Good Location Two Years Old Building, 3 Floors- 2 BHK 6 Units, 4th Floor 3 BHK One Unit. Rental Income 2 Lakhs. SriNilaya, Syndicate Bank Colony, 1st Cross Arekere, Omkarnagar, Bannnerghata Road. Contact Girish 9945037353

### Kammanahalli

**ಬಿ.ಬಿ.ಎಮ್.ಪಿ ವಾರ್ಡ್ ನಂ.3 (ಯಶವಂತಪುರ) (ಪಿ.ಐ.ಡಿ ನಂ.3–16–43) ನಲ್ಲಿರುವ ಆಸ್ತಿ ನಂ.43, ಹಳೇ ನಂ.35/ಎ, 12ನೇ ಮುಖ್ಯ ರಸ್ತೆ, ಗೋಕುಲ 1ನೇ ಹಂತ, 1ನೇ ಫೇಸ್, ಬೆಂಗಳೂರು ಪೂರ್ವದಿಂದ ಪಶ್ಚಿಮಕ್ಕೆ – 30 ಅಡಿ, ಉತ್ತರದಿಂದ ದಕ್ಷಿಣಕ್ಕೆ – 51 ಅಡಿ ಇದ್ದು ಚಕ್ಕುಬಂದಿ ಪೂರ್ವಕ್ಕೆ–ಸೈಟ್ ನಂ.20 ಮತ್ತು 21; ಪಶ್ಚಿಮಕ್ಕೆ – ಸೈಟ್ ನಂ. 34 ಮತ್ತು 35; ಉತ್ತರಕ್ಕೆ – ರೋಡ್; ದಕ್ಷಿಣಕ್ಕೆ – ಸೈಟ್ ನಂ. 22 ಮತ್ತು 23.**

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ:**03.07.2023ರಂದು** ಈ ಕೆಳಗಿನ ಸಾಲಗಾರರರಾದ **ಶ್ರೀ ವೆಂಕಟರಾಮುಡು** (ನಿಧನರಾಗಿ) **ಇವರ ಹಕ್ಕುದಾರರುಗಳಾದ 1)ಶ್ರೀಮತಿ ಜಯಲಕ್ಷ್ಮಿ.ಆರ್, ಲೇಟ್ ಶ್ರೀ ವೆಂಕಟರಾಮುಡು ರವರ ಪತ್ನಿ, 2)ಶ್ರೀ ಸಂದೀಪ ಕುಮಾರ್.ವಿ.ಆರ್, ಲೇಟ್ ವೆಂಕಟರಾಮುಡು ರವರ ಪುತ್ರ, 3)ಶ್ರೀಮತಿ ಸಂಗೀತ.ವಿ.ಆರ್, ಲೇಟ್ ವೆಂಕಟರಾಮುಡು ರವರ ಪುತ್ರಿ, 4)ಶ್ರೀ ಸತೀಶ್ ಕುಮಾರ್.ವಿ. ಆರ್, ಲೇಟ್ ವೆಂಕಟರಾಮುಡು ರವರ ಪುತ್ರ, ನಂ.18, ಹಳೇ ನಂ.60, ಮುನೇಶ್ವರ 'ಬಿ' ಬ್ಲಾಕ್, ಮಟದಹಳ್ಳಿ, ಆರ್.ಟಿ.ನಗರ, ಬೆಂಗಳೂರು–560032** ಇವರಿಗೆ ದಿನಾಂಕ **03.07.2023**ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.18,80,519/–+ ರೂ.6,82,963/–+ 16,01,133/–+ ರೂ.11,15,245/– ಒಟ್ಟು ಮೊತ್ತ ರೂ.53,04,860/– (ಐವತ್ತಮೂರು ಲಕ್ಷ ನಾಲ್ಕು ಸಾವಿರದ ಎಂಟುನೂರ ಅರವತ್ತು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು **ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 11.09.2023 ರಂದು** ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್**, 156, 8ನೇ ಮೈನ್ ರೋಡ್, 17ನೇ ಕ್ರಾಸ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–560 055ಗೆ ದಿನಾಂಕ **31.05.2023** ರವರೆಗೆ ಬರಬೇಕಾದ ಬಾಕಿ **ರೂ.18,80,519/– + ರೂ.6,82,963/– + 16,01,133/– + ರೂ.11,15,245/– ಒಟ್ಟು ಮೊತ್ತ ರೂ.53,04,860/– (ಐವತ್ತಮೂರು ಲಕ್ಷ ನಾಲ್ಕು ಸಾವಿರದ ಎಂಟುನೂರ ಅರವತ್ತು ರೂಗಳು ಮಾತ್ರ)** ಪಾವತಿಸಬೇಕು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ) ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

**ಸ್ಥಿರಾಸ್ತಿಯ ವಿವರ**

**ಬಿ.ಬಿ.ಎಮ್.ಪಿ ವಾರ್ಡ್ ನಂ.97, ಆರ್.ಟಿ. ನಗರ, ಬೆಂಗಳೂರು (ಪಿ.ಐ.ಡಿ ನಂ. 97–27–18) ನಲ್ಲಿರುವ ಆಸ್ತಿ ನಂ. 18, (ಹಳೇ ನಂ.60) ಸರ್ವೆ ನಂ.17/2, ಮುನೇಶ್ವರ 'ಬಿ' ಬ್ಲಾಕ್, ಆರ್.ಟಿ.ನಗರ, ಬೆಂಗಳೂರು ಪೂರ್ವದಿಂದ ಪಶ್ಚಿಮಕ್ಕೆ – 25 ಅಡಿ ಉತ್ತರದಿಂದ ದಕ್ಷಿಣಕ್ಕೆ – 30 ಅಡಿ ಇದ್ದು ಚಕ್ಕುಬಂದಿ ಪೂರ್ವಕ್ಕೆ – ಖಾಸಗಿ ಸ್ವತ್ತು; ಪಶ್ಚಿಮಕ್ಕೆ – ರೋಡ್; ಉತ್ತರಕ್ಕೆ – 3ನೇ ಕ್ರಾಸ್ ರಸ್ತೆ; ದಕ್ಷಿಣಕ್ಕೆ – ಶ್ರೀ ಆರ್ ದೇವರಾಜು ರವರಿಗೆ ಸೇರಿದ ಆಸ್ತಿಯ ಉಳಿಕೆ ಭಾಗ.**

ದಿನಾಂಕ: 11.09.2023
ಬೆಂಗಳೂರು.

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.
ಅಧಿಕೃತ ಅಧಿಕಾರಿ


## ನಗರದಲ್ಲಿ ಇಂದು

**'ಪರಿಸರ ಗಣಪ' ಕಾರ್ಯಾಗಾರ:** ಉದ್ಘಾಟನೆ: ಸುಗುಣೇಂದ್ರತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ರವಿ ಸುಬ್ರಮಣ್ಯ, ಅತಿಥಿ: ರಮೇಶ, ಆಯೋಜನೆ: ಪ್ರಯೋಗ ಮಂಟಪ, ಸ್ಥಳ: ರಾಮಾಂಜನೇಯ ಬೆಟ್ಟ, ಹನುಮಂತನಗರ, ಬೆಳಿಗ್ಗೆ 8.30

**ಸಹಕಾರಿ ನೂತನ ಕಟ್ಟಡ ಉದ್ಘಾಟನೆ:** ಸಾನ್ನಿಧ್ಯ: ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಪ್ರಿಯಾಕೃಷ್ಣ, ಯತೀಂದ್ರ ಸಿದ್ದರಾಮಯ್ಯ, ಎಂ. ರಾಮಯ್ಯ, ಬಿ.ಎಸ್. ಶಿವಣ್ಣ, ಟಿ.ಬಿ. ಬಳಗಾವಿ, ನಿಂಗನಗೌಡ ವಿ. ಪಾಟೀಲ್, ಆಯೋಜನೆ ಮತ್ತು ಸ್ಥಳ: ಚಂದ್ರಗುಪ್ತ ಮೌರ್ಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್, ಹಂಪಿನಗರ, ಬೆಳಿಗ್ಗೆ 9

**ವೃಷಭಾವತಿನಗರ ಹಿರಿಯ ನಾಗರಿಕರ ವೇದಿಕೆ ಉದ್ಘಾಟನೆ:** ಸೌಮ್ಯನಾಥ ಸ್ವಾಮೀಜಿ, ಅತಿಥಿಗಳು: ಎಸ್. ಪಿ. ಹೇಮಲತಾ ಗೋಪಾಲಯ್ಯ, ಜಯರಾಮ್, ಚಂದ್ರಮ್ಮ ಕೆ. ಮಲ್ಲಪ್ಪ, ನಾಗರತ್ನಮ್ಮ ಲೋಕೇಶ್, ಶಿವಣ್ಣ, ಸ್ಥಳ: ಎನ್.ವಿ. ಕಲ್ಯಾಣ ಮಂಟಪ, ಕಾಮಾಕ್ಷಿಪಾಳ್ಯ, ಬೆಳಿಗ್ಗೆ 10

**ನಾಸ್ತಿಕ ದಿನಾಚರಣೆ:** ಅತಿಥಿಗಳು: ಸಿ.ಎಸ್. ಹನುಮಂತಪ್ಪ, ನಗರಗೆರೆ ರಮೇಶ್, ಉದಂತ ಶಿವಕುಮಾರ್, ವಿಷಯ ಮಂಡನೆ: ಬಿ.ಆರ್. ಮಂಜುನಾಥ್, ಎನ್. ಗಾಯತ್ರಿ, ಸಂಚಾಲನೆ: ಆರ್. ನಾಗೇಶ್ ಅರಳಕುಪ್ಪೆ, ಅಧ್ಯಕ್ಷತೆ: ಜಿ. ರಾಮಕೃಷ್ಣ, ಆಯೋಜನೆ: ಮಿದುಳತ್ವ ಸಂಸ್ಥೆ, ಸ್ಥಳ: ಬಿ.ವಿ. ಜಗದೀಶ್ ವಿಜ್ಞಾನ ಕೇಂದ್ರ, ನ್ಯಾಷನಲ್ ಕಾಲೇಜು, 7ನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

**ಪ್ರತಿಭಾ ಪುರಸ್ಕಾರ, ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಎಚ್. ಕಾಂತರಾಜು, ಉಪಸ್ಥಿತಿ: ಎಂ.ಆರ್. ಪೂಜಾರ್, ಎಂ. ನಾಗರಾಜ, ಅಧ್ಯಕ್ಷತೆ: ಚನ್ನೇಗೌಡ ಸಿ., ಆಯೋಜನೆ: ಕನಕಲೋಕ ಸೌಹಾರ್ದ ಕ್ರೆಡಿಟ್ ಸಹಕಾರಿ, ಸ್ಥಳ: ಆದಿತ್ಯ ಕನ್ವೆನ್ಷನ್ ಹಾಲ್, ಮೂಡಲಪಾಳ್ಯ, ನಾಗರಭಾವಿ, ಬೆಳಿಗ್ಗೆ 10.30

**ಪ್ರತಿಭಾ ಪುರಸ್ಕಾರ:** ಅತಿಥಿಗಳು: ಸಂತೋಷ್ ಹೆಗ್ಡೆ, ವೂಡೇ ಪಿ. ಕೃಷ್ಣ, ಆಯೋಜನೆ: ಭಾವಸಾರ ಕ್ಷತ್ರಿಯ ಎಜುಕೇಷನಲ್, ಎನ್‌ಕರೇಜ್‌ಮೆಂಟ್ ಟ್ರಸ್ಟ್, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

**ಅಂತರರಾಷ್ಟ್ರೀಯ ಯುಟಿಲಿಟಿ ಡಾಗ್ ಸ್ಪೋರ್ಟ್ಸ್ ಪ್ರದರ್ಶನ:** ಆಯೋಜನೆ: ಪೆಟ್‌ಗಾಲ, ಫಿಲೈನ್ ಕ್ಲಬ್ ಆಫ್ ಇಂಡಿಯಾ, ಸ್ಥಳ: ಜಯಮಹಲ್ ಅರಮನೆ, ಜಯಮಹಲ್ ರಸ್ತೆ, ಬೆಳಿಗ್ಗೆ 11

**ಇ.ವಿ. ರಾಮಸ್ವಾಮಿ ಪೆರಿಯಾರ್ ಜಯಂತಿ, 'ಪೆರಿಯಾರ್' ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಅತಿಥಿ: ಅಗ್ನಿ ಶ್ರೀಧರ್, ಪ್ರಶಸ್ತಿ ಪುರಸ್ಕೃತರು: ಮಂಟೇಲಿಂಗಯ್ಯ, ಆಯೋಜನೆ: ವಿಚಾರವಾದಿಗಳ ವೇದಿಕೆ ಕರ್ನಾಟಕ, ಸ್ಥಳ: ಯು.ವಿ.ಸಿ.ಇ. ಅಲ್ಯುಮ್ನಿ ಸಭಾಂಗಣ, ಕೆ.ಆರ್. ವೃತ್ತ, ಬೆಳಿಗ್ಗೆ 11.30

**'ಶ್ರದ್ಧಾ ಮತ್ತು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು' ನಾಟಕ ಪ್ರದರ್ಶನ:** ಆಯೋಜನೆ: ವಟ ಕುಟೀರ, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30

**ಸನ್ಮಾನ ಕಾರ್ಯಕ್ರಮ:** ಸನ್ಮಾನಿತರು: ಮಧುರೈ ಟಿ.ಎನ್. ಶೇಷಗೋಪಾಲನ್, ಅತಿಥಿ: ಎಂ.ಆರ್.ವಿ. ಪ್ರಸಾದ್, ಆಯೋಜನೆ: ನಾದಸುರಭಿ, ಸ್ಥಳ: ಗೋಲ್ಡನ್ ಜುಬ್ಲಿ ಬ್ಲಾಕ್, ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಕೋರಮಂಗಲ, ಸಂಜೆ 4.15

**ಡಾ. ಕೆ. ವೆಂಕಟಗಿರಿಗೌಡ ಅವರ ಜನ್ಮಶತಮಾನೋತ್ಸವ ಸಮಾರಂಭ:** ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಸ್.ಎಂ. ಕೃಷ್ಣ, ಉಪಸ್ಥಿತಿ: ಎಚ್.ಎನ್. ನಾಗಮೋಹನದಾಸ್, ಡಿ.ಕೆ. ಶಿವಕುಮಾರ್, ಡಿ.ವಿ. ಸದಾನಂದಗೌಡ, ಕೆ.ಎಚ್. ಮುನಿಯಪ್ಪ, ರಾಮಲಿಂಗಾರೆಡ್ಡಿ, ಎಂ. ಕೃಷ್ಣಪ್ಪ, ಸನ್ಮಾನಿತರು: ಮನಮೋಹನ್ ಸಿಂಗ್, ಚರಣ್ ಸಿಂಗ್, ಬಿ.ಎಸ್. ಶ್ರೀಕಂಠರಾಧ್ಯ, ಎಂ.ವಿ. ರಾಜೀವ್ ಗೌಡ, ಅಬ್ದುಲ್ ಅಜೀಜ್, ಕೆ.ಸಿ. ಬಸಪ್ಪ, ಕೆ. ಮಲ್ಲಯ್ಯ, ಎನ್. ಪುಟ್ಟಸ್ವಾಮಿ, ಆಯೋಜನೆ: ಕೆ. ವೆಂಕಟಗಿರಿಗೌಡ ಅವರ ಜನ್ಮಶತಮಾನೋತ್ಸವ ಸಮಿತಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಅರಮನೆ ರಸ್ತೆ, ಸಂಜೆ 4

**ಸಂಗೀತ ಕಾರ್ಯಕ್ರಮ:** ಕೊಳಲು: ಎಲ್. ವಿ. ಮುಕಂದ್, ಪಿಟೀಲು: ಜ್ಯೋತ್ಸ್ನಾ ಮಂಜುನಾಥ್, ಮೃದಂಗ: ಬಿ.ಆರ್. ಶ್ರೀನಿವಾಸ್, ಘಟ: ಆರ್. ಸತ್ಯಕುಮಾರ್, ಆಯೋಜನೆ: ತ್ಯಾಗರಾಜ ಗಾನಸಭಾ, ಸ್ಥಳ: ಬಾಲಮೋಹನ ಮಂದಿರ, ರಾಜಾಜಿನಗರ, ಸಂಜೆ 5

**ಕರ್ನಾಟಕ ಸಂಗೀತ ಕಛೇರಿ:** ಗಾಯನ: ಸ್ಫೂರ್ತಿ ರಾವ್, ವೈಭವ ರಮಣಿ, ಮೃದಂಗ: ಅನೂರು ವಿನೋದ್ ಶ್ಯಾಮ್, ಸುನಾದ್ ಅನೂರು, ಆಯೋಜನೆ ಮತ್ತು ಸ್ಥಳ: ದಿ ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5ರಿಂದ

**ಕೋಟಾ ಶ್ರೀಕರಿ ರಂಗಾಭಿವಂದನೆ:** ಪ್ರಸ್ತುತಿ: ಕೋಟಾ ಶ್ರೀಕರಿ, ಅತಿಥಿಗಳು: ಎಂ.ಎಸ್. ಸತ್ಯಕುಮಾರ್, ವೈ.ಕೆ. ಸಂಧ್ಯಾ ಶರ್ಮ, ತೇಜಸ್ ಕುಮಾರ್ ಎಂ., ಆಯೋಜನೆ: ನೃತ್ಯಮಾ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10.30

**ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ**
nagaradalli_indu@prajavani.co.in


## ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ:08156–270058
**EMail ID: eerdwsd.ckb2@gmail.com**

ಸಂಖ್ಯೆ:/ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ–1/2023–24

ದಿನಾಂಕ:11.09.2023

**(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ) ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 16/ 2023–24 ದಿನಾಂಕ: 11.09.2023**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು **2022–23ನೇ JJM** ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ & ಶಿಡ್ಲಘಟ್ಟ ತಾಲ್ಲೂಕಿನ **37** ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂದಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ **KW-4** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ **(Credit Card/ Direct Debit/ NEFT & OTC** ಮುಖೇನ) ಅಥವ ಚಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://kppp.karnataka.gov.in/** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.(1) ಟೆಂಡರ್ ಪ್ರಶ್ನೆಗಳು/ ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 25.09.2023 ರಂದು ಸಂಜೆ 5.30 ಗಂಟೆವರೆಗೆ, (2)** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 27.09.2023 ರಂದು ಸಂಜೆ 5.30 ಗಂಟೆವರೆಗೆ, (3)** ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 29.09.2023 ಬೆಳಗ್ಗೆ 11.00 ಗಂಟೆಗೆ, (4)** ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 03.10.2023 ಬೆಳಗ್ಗೆ 11.00 ಗಂಟೆಗೆ,** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

**ಸಹಿ/– ಕಾರ್ಯಪಾಲಕ ಅಭಿಯಂತರರು,**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,**
**ಚಿಕ್ಕಬಳ್ಳಾಪುರ**

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:84/ಕೆಎಸ್‌ಎಂಸಿಎ/2023–24


# ಲೇಖಕಿ ಗೀತಾ ಮೆಹ್ತಾ ನಿಧನ

**ನವದೆಹಲಿ (ಪಿಟಿಐ):** ಇಂಗ್ಲಿಷ್ ಲೇಖಕಿ, ಪತ್ರಕರ್ತೆ ಗೀತಾ ಮೆಹ್ತಾ (80)ಶನಿವಾರ ದೆಹಲಿಯಲ್ಲಿ ನಿಧನರಾಗಿದ್ದಾರೆ.

ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಅಕ್ಕ ಗೀತಾ ಅವರು ಅಮೆರಿಕದ ಖ್ಯಾತ ಪ್ರಕಾಶಕ ಸನ್ನಿ ಮೆಹ್ತಾ ಅವರನ್ನು ವಿವಾಹವಾಗಿದ್ದರು. ಗೀತಾ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ.ಕೇಂದ್ರ ಸರ್ಕಾರ 2019ರ ಜನವರಿಯಲ್ಲಿ ಗೀತಾ ಮೆಹ್ತಾ ಅವರಿಗೆ ಪದ್ಮಶ್ರೀ ಘೋಷಿಸಿತ್ತು. ಆದರೆ, ಪ್ರಶಸ್ತಿ ಸ್ವೀಕರಿಸಲು ಅವರು ನಿರಾಕರಿಸಿದ್ದರು.

# ಯುವ ಪ್ರಶಸ್ತಿಗೆ ಕೃತಿಗಳ ಆಹ್ವಾನ

**ಬೆಂಗಳೂರು:** ಬಿ.ಎಂ.ಶ್ರೀ. ಪ್ರತಿಷ್ಠಾನವು 'ಶಾ.ಬಾಲುರಾವ್ ಯುವ ಬರಹಗಾರ ಪ್ರಶಸ್ತಿ' ಮತ್ತು 'ಶಾ. ಬಾಲುರಾವ್ ಅನುವಾದ ಪ್ರಶಸ್ತಿ'ಗೆ ಕೃತಿಗಳನ್ನು ಆಹ್ವಾನಿಸಿದೆ.

ಈ ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಬಹುಮಾನವನ್ನು ಒಳಗೊಂಡಿವೆ.

ಲೇಖಕರು ಸ್ವವಿವರದ ಜತೆಗೆ ಪ್ರಕಟಗೊಂಡ ಕೃತಿಯ ಮೂರು ಪ್ರತಿಗಳನ್ನು ಗೌರವ ಕಾರ್ಯದರ್ಶಿ, ಬಿ.ಎಂ.ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು–560019 ಈ ವಿಳಾಸಕ್ಕೆ ಅ.5ರೊಳಗೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.

**ಸಂಪರ್ಕಕ್ಕೆ:** 9972812127

# ₹7,660 ಕೋಟಿ ಮೊತ್ತದ ಹೂಡಿಕೆ

## 91 ಪ್ರಸ್ತಾವಗಳಿಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ರಾಜ್ಯಮಟ್ಟದ ಏಕಗವಾಕ್ಷಿಯಿಂದ ಒಪ್ಪಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ವಿವಿಧೆಡೆ ₹ 7,660 ಕೋಟಿ ಮೊತ್ತದ ಹೂಡಿಕೆಯ 91 ಪ್ರಸ್ತಾವಗಳಿಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಶುಕ್ರವಾರ ಒಪ್ಪಿಗೆ ನೀಡಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಪ್ರಸ್ತಾವಗಳಿಗೆ ಒಪ್ಪಿಗೆ ನೀಡಲಾಗಿದೆ. ಈ ಎಲ್ಲ ಯೋಜನೆಗಳು ಅನುಷ್ಠಾನಕ್ಕೆ ಬಂದಲ್ಲಿ ರಾಜ್ಯದಲ್ಲಿ 18,146 ಉದ್ಯೋಗಗಳ ಸೃಜನೆ ಆಗಲಿದೆ.

ಅನುಮೋದನೆ ನೀಡಿರುವ ಪ್ರಸ್ತಾವಗಳಲ್ಲಿ ₹ 50 ಕೋಟಿಗೂ ಹೆಚ್ಚು ಹೂಡಿಕೆಯ 25 ಬೃಹತ್ ಮತ್ತು ಮಧ್ಯಮ ಯೋಜನೆಗಳಿವೆ. ಇವುಗಳಿಂದ ₹ 5,750.73 ಕೋಟಿ ಹೂಡಿಕೆಯಾಗಲಿದೆ. ಸುಮಾರು 13,742 ಉದ್ಯೋಗಗಳ ಸೃಜನೆಯಾಗಲಿದೆ ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

₹ 15 ಕೋಟಿಯಿಂದ ₹ 50 ಕೋಟಿ ಒಳಗಿನ ಹೂಡಿಕೆಯ 57 ಪ್ರಸ್ತಾವಗಳಿಗೆ ಒಪ್ಪಿಗೆ ನೀಡಲಾಗಿದೆ. ಇವುಗಳಲ್ಲಿ ಒಟ್ಟು ₹1,145 ಕೋಟಿ ಹೂಡಿಕೆಯಾಗಲಿದ್ದು, ಅಂದಾಜು 4,404 ಉದ್ಯೋಗಗಳ ಸೃಜನೆಯಾಗಲಿದೆ. ಹೆಚ್ಚುವರಿ ಹೂಡಿಕೆಯ ಎಂಟು ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇದರಿಂದ ₹ 763.85 ಕೋಟಿ ಹೂಡಿಕೆಯಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ, ಕಾರ್ಮಿಕ ಇಲಾಖೆ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಂ. ಮಹೇಶ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ನಿರ್ದೇಶಕ ಎಚ್. ವಿ. ದರ್ಶನ್, ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡಬಸವರಾಜು ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

### ಪ್ರಮುಖ ಯೋಜನೆಗಳು

- ಪ್ರತಿಭಾ ಪಾಟೀಲ್ ಶುಗರ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ವಿಜಯಪುರ ಜಿಲ್ಲೆ, ವಿಜಯಪುರ ತಾಲ್ಲೂಕಿನ ಕಣ್ಣೂರು ಗ್ರಾಮದಲ್ಲಿ ₹ 489.50 ಕೋಟಿ ಹೂಡಿಕೆ (275 ಉದ್ಯೋಗ ಸೃಷ್ಟಿ).
- ಗುರುದೇವ್ ರಿಫೈನರೀಸ್ ಆ್ಯಂಡ್ ಅಲೈಡ್ ಇಂಡಸ್ಟ್ರೀಸ್, ವಿಜಯಪುರ ಜಿಲ್ಲೆಯ ತಡವಳಗದಲ್ಲಿ ₹488.49 ಕೋಟಿ ಹೂಡಿಕೆ (255 ಉದ್ಯೋಗ ಸೃಷ್ಟಿ). ದೇವಶ್ರೀ ಇಸ್ಪಾತ್ ಪ್ರೈವೇಟ್ ಲಿಮಿಟೆಡ್‌ನಿಂದ ಕೊಪ್ಪಳ ಜಿಲ್ಲೆಯ ಹಳವರ್ತಿ ಗ್ರಾಮದಲ್ಲಿ ₹ 470 ಕೋಟಿ ಹೂಡಿಕೆ (800 ಉದ್ಯೋಗ ಸೃಷ್ಟಿ).
- ಏಕಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಧಾರವಾಡ ಜಿಲ್ಲೆಯ ಇತ್ತಿಗಟ್ಟಿ ಗ್ರಾಮದಲ್ಲಿ ₹ 456 ಕೋಟಿ ಹೂಡಿಕೆ (1,187 ಉದ್ಯೋಗ ಸೃಷ್ಟಿ).
- ಇಂಟಿಗ್ರೇಟೆಡ್ ಸೋಲಾರ್ ಪವರ್ ಪ್ರೈವೇಟ್ ಲಿಮಿಟೆಡ್‌ನಿಂದ ಕೋಲಾರ ಜಿಲ್ಲೆಯ ಮಿಂಡಹಳ್ಳಿ ಗ್ರಾಮದಲ್ಲಿ ₹ 441.08 ಕೋಟಿ ಹೂಡಿಕೆ (720 ಉದ್ಯೋಗ ಸೃಷ್ಟಿ).
- ಸೌತ್ ವೆಸ್ಟ್ ಮೈನಿಂಗ್ ಲಿಮಿಟೆಡ್‌ನಿಂದ ಬಳ್ಳಾರಿ ಜಿಲ್ಲೆಯ ಮೂಸಿನಾಯಕನಹಳ್ಳಿ ಗ್ರಾಮದಲ್ಲಿ ₹ 411 ಕೋಟಿ ಹೂಡಿಕೆ (65 ಉದ್ಯೋಗ ಸೃಷ್ಟಿ)
- ಶಶಿ ಅಲಾಯ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಭೈರನಾಯಕನಹಳ್ಳಿ ಗ್ರಾಮದಲ್ಲಿ ₹ 380 ಕೋಟಿ ಹೂಡಿಕೆ (400 ಉದ್ಯೋಗ ಸೃಷ್ಟಿ).

ಕೇಂದ್ರ ಸರ್ಕಾರಕ್ಕೆ ಸಿದ್ದರಾಮಯ್ಯ ಆಗ್ರಹ

# ‘ಬರ : ಮಾನದಂಡ ಬದಲಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬರಗಾಲದ ಘೋಷಣೆ ಮತ್ತು ಪರಿಹಾರಕ್ಕೆ ಸಂಬಂಧಿಸಿದ ಮಾನದಂಡಗಳನ್ನು ಬದಲಿಸದಿದ್ದರೆ ಬರಪೀಡಿತ ಪ್ರದೇಶದಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಂಡು, ನೊಂದ ಜನರಿಗೆ ನೆರವಾಗಲು ಸಾಧ್ಯವಾಗದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

‘ಕೇಂದ್ರ ಸರ್ಕಾರದ ‘ಬರ ನಿರ್ವಹಣೆ ಕೈಪಿಡಿ– 2020’ ಕಾರಣದಿಂದಾಗಿಯೇ ರಾಜ್ಯದಲ್ಲಿ ಬರ ಘೋಷಣೆ ವಿಳಂಬವಾಗಿದೆ. ಮಾನದಂಡಗಳನ್ನು ಮರುಪರಿಶೀಲಿಸಬೇಕಾದ ಅನಿವಾರ್ಯವನ್ನು ವಿವರಿಸಿ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರಿಗೆ ಹಿಂದೆಯೇ ಪತ್ರ ಬರೆದಿದ್ದರೂ ಉತ್ತರ ಬಂದಿಲ್ಲ. ಮಾನದಂಡಗಳಲ್ಲಿನ ಬದಲಾವಣೆ ಕೇವಲ ಕರ್ನಾಟಕದ ದೃಷ್ಟಿಯಿಂದ ಮಾತ್ರವೇ ಅಲ್ಲ, ಇಡೀ ದೇಶದ ಹಿತದೃಷ್ಟಿಯಿಂದಲೂ ಅಗತ್ಯವಾಗಿದೆ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಕೇಂದ್ರದ ಕೈಪಿಡಿಯಲ್ಲಿರುವ ಮಾನದಂಡಗಳನ್ನು ಅನ್ವಯಿಸುವಾಗ, ಅದನ್ನು ಭೌಗೋಳಿಕವಾಗಿ, ಕೃಷಿ ಚಟುವಟಿಕೆ ಹಾಗೂ ಬೆಳೆಯ ವೈವಿಧ್ಯತೆಯ ಹಿನ್ನೆಲೆಯಲ್ಲಿ ಹೆಚ್ಚು ಹೊಂದಿಕೆಯಾಗುವಂತೆ, ಹೆಚ್ಚು ರೈತ-ಸ್ನೇಹಿಯಾಗುವಂತೆ ಅಳವಡಿಸಬೇಕಿದೆ’ ಎಂದಿರುವ ಅವರು, ‘ಮಾನದಂಡಗಳನ್ನು ಪರಿಷ್ಕರಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಬೇಕಾದ ಬಿಜೆಪಿ ನಾಯಕರು ಆ ಕೆಲಸವನ್ನು ಮಾಡದೆ ಬರ ಪರಿಸ್ಥಿತಿಯ ರಾಜಕೀಯ ಲಾಭ ಪಡೆಯಲು ಮುಂದಾಗಿದ್ದಾರೆ. ಈ ದುರುದ್ದೇಶದಿಂದ ಸರ್ಕಾರದ ವಿರುದ್ಧ ಆಧಾರರಹಿತ ಆರೋಪಗಳನ್ನೂ ಮಾಡುತ್ತಿದ್ದಾರೆ’ ಎಂದು ಅವರು ದೂರಿದ್ದಾರೆ.

‘ಬರ ಘೋಷಣೆಗೆ ವಲಯವಾರು ನಿರ್ದಿಷ್ಟವಾದ ಸೂಚ್ಯಂಕಗಳನ್ನು ರೂಪಿಸುವುದು ಅಗತ್ಯವಾಗಿದೆ. ಶೇ 10 ಮಳೆ ಕೊರತೆಯನ್ನೂ ಬರದ ವರ್ಷ ಎಂದು ತೀರ್ಮಾನಿಸಿ ಹವಾಮಾನ ಇಲಾಖೆ ಘೋಷಿಸುತ್ತದೆ. ಆದರೆ, ಮಾನದಂಡಗಳ ಪ್ರಕಾರ ಮಳೆಯ ವ್ಯತ್ಯಯ ಸೂಚ್ಯಂಕವು ಶೇ 60ಕ್ಕಿಂತ ಹೆಚ್ಚಿರಬೇಕು. ಸೂಚ್ಯಂಕವು ಶೇ 20ರಿಂದ ಶೇ 59ರವರೆಗೆ ಇದ್ದರೂ ಬರ ಘೋಷಿಸಬಹುದೆಂಬ ಅಂಶವನ್ನು ಪರಿಗಣಿಸಬೇಕು. ಮಳೆ ಕುರಿತಾದ ಸೂಚ್ಯಂಕದಲ್ಲಿ ಒಣಹವೆಯ ಅವಧಿಯನ್ನು ಎರಡು ವಾರಗಳಿಗಿಂತ ಕಡಿಮೆ ಎಂದು ಪರಿಗಣಿಸಬೇಕು. ಬೆಳೆಹಾನಿ ಸಹಾಯಧನ ಪಡೆಯಲು ರೂಪಿಸಿರುವ ನಿಯಮವನ್ನೂ ಬದಲಿಸಬೇಕು’ ಎಂದೂ ಮುಖ್ಯಮಂತ್ರಿ ಆಗ್ರಹಿಸಿದ್ದಾರೆ.

ರಾಸಾಯನಿಕ ಮುಕ್ತ ಬೆಲ್ಲ ತಯಾರಿಸುವ ರೈತ ಉತ್ಪಾದಕರಿಂದ ವಿಶೇಷ ಪ್ರಯತ್ನ

# ‘ಬೆಲ್ಲ’ದಲ್ಲಿ ಜೀವ ತಳೆದ ಗೌರಿ–ಗಣೇಶ!

• ಎಂ.ಎನ್.ಯೋಗೇಶ್

**ಮಂಡ್ಯ:** ರಾಸಾಯನಿಕ ಮುಕ್ತ ‘ಮಂಡ್ಯ ಬೆಲ್ಲ’ದಲ್ಲಿ ಜೀವ ತಳೆದ ಗೌರಿ- ಗಣೇಶ ಮೂರ್ತಿಗಳಿಗೆ ಅಪಾರ ಬೇಡಿಕೆ ಸೃಷ್ಟಿಯಾಗಿದೆ.

ಮಂಡ್ಯ ಅಲ್ಲದೆ, ಮೈಸೂರು, ಹಾಸನ, ಚಾಮರಾಜನಗರ, ತುಮಕೂರು, ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಯಿಂದಲೂ ಬೇಡಿಕೆ ಬರುತ್ತಿದೆ. ಅರ್ಧ ಅಡಿಯಿಂದ 2 ಅಡಿವರೆಗಿನ ಗಣೇಶ ಮೂರ್ತಿಗಳು, 5 ಇಂಚಿನಿಂದ ಅರ್ಧ ಅಡಿವರೆಗಿನ ಗೌರಿ ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ.

ತಾಲ್ಲೂಕಿನ ಹಳುವಾಡಿಯ ಆಲೆಮನೆಯಲ್ಲಿ ಮೂರ್ತಿಗಳು ರೂಪ ಪಡೆಯುತ್ತಿವೆ. ಪ್ರತಿ ಬಾರಿ ಅಡುಗೆ (ಬೆಲ್ಲದ ಪಾಕ) ಬಂದಾಗ ಒಂದಷ್ಟು ಪಾಕವನ್ನು ಮೂರ್ತಿ ತಯಾರಿಕೆಗಾಗಿಯೇ ಬಳಸಲಾಗುತ್ತಿದೆ. ಅಚ್ಚು (ಮೌಲ್ಡ್) ಬಳಸುವ ಮೂಲಕ ಮೂರ್ತಿಗಳನ್ನು ತಯಾರಿಸಲಾಗುತ್ತಿದೆ. ಅರ್ಧ ಅಡಿ ಮೂರ್ತಿಗೆ ಒಂದೂವರೆ ಕೆ.ಜಿ ಬೆಲ್ಲ, 2 ಅಡಿ ಮೂರ್ತಿಗೆ 8–9 ಕೆ.ಜಿ ಬೆಲ್ಲ ಬಳಕೆಯಾಗುತ್ತಿದೆ. ಮೂರ್ತಿಗಳಿಗೆ ₹500– ₹2,000 ವರೆಗೆ ಬೆಲೆ ನಿಗದಿ ಮಾಡಲಾಗಿದೆ.

**ರೈತ ಉತ್ಪಾದಕರ ಯತ್ನ:** ರಾಸಾಯನಿಕ ಮುಕ್ತ ಬೆಲ್ಲ ತಯಾರಿಸುವ ಆಲೆಮನೆ ಮಾಲೀಕರು ಒಂದಾಗಿ ‘ಮಂಡ್ಯ ಬೆಲ್ಲ ರೈತ ಉತ್ಪಾದಕರ ಕಂಪನಿ’ ಕಟ್ಟಿಕೊಂಡಿದ್ದು, ತಾವು ತಯಾರಿಸಿದ ಬೆಲ್ಲಕ್ಕೆ ‘ಮಂಡ್ಯ ಬೆಲ್ಲ’ ಬ್ರ್ಯಾಂಡ್ ರೂಪ ಕೊಟ್ಟಿದ್ದಾರೆ. ಬೆಲ್ಲ ತಯಾರಿಕೆ ಮತ್ತು ಮಾರುಕಟ್ಟೆ ರೂಪಿಸಲು ಕೇಂದ್ರ ಸರ್ಕಾರದ ‘ರೈತ ಉತ್ಪಾದಕರ ಸಂಘ (ಎಫ್‌ಪಿಒ)- ಉತ್ತೇಜನ ಮತ್ತು ಬಲವರ್ಧನೆ’ ಕಾರ್ಯಕ್ರಮದಡಿ ಸಹಾಯವೂ ದೊರೆಯುತ್ತಿದೆ.

ಈ ಉತ್ಪಾದಕರಿಗೆ ‘ವಿಕಸನ ಗ್ರಾಮೀಣಾಭಿವೃದ್ಧಿ ಸಂಸ್ಥೆ’ಯೂ ಕೈಜೋಡಿಸಿದ್ದು, ಬೆಲ್ಲದಿಂದ ಗಣೇಶ ಮೂರ್ತಿ ತಯಾರಿಸಲು ಪ್ರೇರಣೆಯಾಗಿದೆ. ಸಂಸ್ಥೆಯವರು ಮಹಾರಾಷ್ಟ್ರದಿಂದ ಅಚ್ಚು ತರಿಸಿಕೊಟ್ಟಿದ್ದು ಮೂರ್ತಿಗಳ ಮಾರಾಟಕ್ಕೂ ಕೈ ಜೋಡಿಸಿದ್ದಾರೆ.

‘ರಾಜ್ಯದಾದ್ಯಂತ ಮೂರ್ತಿಗೆ ಬೇಡಿಕೆ ಇದೆ. ಅಚ್ಚುಗಳ ಕೊರತೆ ಕಾಡುತ್ತಿದ್ದು ಸಾಧ್ಯವಾದಷ್ಟು ತಯಾರಿಸುತ್ತಿದ್ದೇವೆ. ಕಳೆದ ವರ್ಷ 500 ಮೂರ್ತಿಗಳನ್ನಷ್ಟೇ ತಯಾರಿಸಿದ್ದೆವು, ಈ ಬಾರಿ 1,500 ಮೂರ್ತಿ ತಯಾರಿಸುವ ಗುರಿ ಇದೆ. ಮುಂದೆ ನಾವೇ ಅಚ್ಚು ರೂಪಿಸುವ ಚಿಂತನೆ ಇದ್ದು, ಹಬ್ಬಕ್ಕೆ 6 ತಿಂಗಳು ಮುಂಚೆಯೇ ಮೂರ್ತಿ ತಯಾರಿಕೆ ಆರಂಭಿಸುತ್ತೇವೆ’ ಎಂದು ಮಂಡ್ಯ ಬೆಲ್ಲ ರೈತ ಉತ್ಪಾದಕರ ಕಂಪನಿ ಅಧ್ಯಕ್ಷ ಕಾರಸವಾಡಿ ಮಹಾದೇವ ಹೇಳಿದರು.

ಬೆಲ್ಲದ ಮೂರ್ತಿಗಳು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

### ದಾವಣಗೆರೆಯಲ್ಲೂ ಬೆಲ್ಲದ ಗಣಪ

**ದಾವಣಗೆರೆ:** ‘ಮಂಡ್ಯದಲ್ಲಿ ಸಾವಯವ ಬೆಲ್ಲದಿಂದ ಗೌರಿ–ಗಣೇಶ ಮೂರ್ತಿಗಳನ್ನು ತಯಾರಿಸಲಾಗುತ್ತದೆ. ಈ ಬಗೆಯ ಬೆಲ್ಲದ ಗಣಪತಿಗಳನ್ನು ಜಿಲ್ಲೆಯಲ್ಲೂ ಪರಿಚಯಿಸಲಿದ್ದೇವೆ’ ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ತಿಳಿಸಿದರು.

‘ಈ ಹಿಂದೆ ಮಂಡ್ಯದ ಜಿಲ್ಲಾಧಿಕಾರಿಯಾಗಿದ್ದೆ. ಆಗ ಅಲ್ಲಿನ ರೈತ ಉತ್ಪಾದಕ ಸಂಸ್ಥೆಯ ಮೂಲಕ ಬೆಲ್ಲದ ಗಣಪತಿ ತಯಾರಿಸುವುದಕ್ಕೆ ಉತ್ತೇಜನ ನೀಡಲಾಗಿತ್ತು. ಈಗ ಆ ಸಂಸ್ಥೆಗೆ ಸಾಕಷ್ಟು ಬೇಡಿಕೆ ಬಂದಿದೆ. ದಾವಣಗೆರೆ ಜಿಲ್ಲೆಯಲ್ಲೂ ಮಾದರಿ ಗಣೇಶೋತ್ಸವ ಆಚರಿಸಬೇಕು. ಹೀಗಾಗಿಯೇ ಬೆಲ್ಲದ ಗಣೇಶ ಮೂರ್ತಿಗಳನ್ನು ಪರಿಚಯಿಸುತ್ತಿದ್ದೇವೆ. ಇದಕ್ಕಾಗಿ ರೈತ ಉತ್ಪಾದಕ ಸಂಸ್ಥೆಗಳು ಹಾಗೂ ಸ್ವ–ಸಹಾಯ ಸಂಘಗಳಿಗೆ ತಾಂತ್ರಿಕ ನೆರವು ನೀಡಲಾಗುವುದು’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಮುಂಬರುವ ದಿನಗಳಲ್ಲಿ ಮದುವೆ ಸಮಾರಂಭಗಳಲ್ಲಿ ಪಾಲ್ಗೊಳ್ಳುವವರು ವಧು–ವರರಿಗೆ ಬೆಲ್ಲದ ಮೂರ್ತಿಗಳನ್ನು ಉಡುಗೊರೆಯಾಗಿ ನೀಡಬಹುದು. ಹಬ್ಬಗಳಲ್ಲಿ ಬೆಲ್ಲದಿಂದ ಮಾಡಿದ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಬಹುದು. ರೈತ ಉತ್ಪಾದಕ ಸಂಘಗಳಿಗೆ ಜಿಲ್ಲೆಯಲ್ಲೇ ಮಾರುಕಟ್ಟೆ ಒದಗಿಸಲಾಗುತ್ತದೆ. ಇದರಿಂದ ರೈತರ ಆದಾಯ ವೃದ್ಧಿಯಾಗಲಿದ್ದು, ಪರಿಸರ ಮಾಲಿನ್ಯವನ್ನೂ ತಕ್ಕ ಮಟ್ಟಿಗೆ ತಡೆಯಬಹುದು’ ಎಂದರು.

### ವಿಸರ್ಜನೆ ಬೇಡ, ಪ್ರಸಾದ ಸೇವಿಸಿ!

ಬೆಲ್ಲದ ಗಣೇಶ ಮೂರ್ತಿಯನ್ನು ಭಕ್ತರು ನೀರಿನಲ್ಲಿ ವಿಸರ್ಜನೆ ಮಾಡುವುದಿಲ್ಲ. ಬದಲಾಗಿ ನೀರಿನಲ್ಲಿ ಮೂರ್ತಿಯನ್ನು ಕರಗಿಸಿ ಪ್ರಸಾದ ತಯಾರಿಸುತ್ತಾರೆ. ಬೆಲ್ಲದ ಅನ್ನ, ಪಾಯಸ ತಯಾರಿಸಬಹುದು. ಕಳೆದ ವರ್ಷ ಹಲವೆಡೆ ಇದೇ ರೀತಿ ಮಾಡಿದ್ದರು. ‘ಬೆಲ್ಲ ಎಂದೊಡನೆ ಇರುವೆಗಳು ಸಾಮಾನ್ಯ. ಆದರೆ ಇರುವೆಗಳು ಮೂರ್ತಿಯ ಹತ್ತಿರ ಸುಳಿಯದಂತೆ ಬೆಲ್ಲದ ಪಾಕಕ್ಕೆ ಅರಿಸಿನ ಪುಡಿ ಬೆರೆಸಿ ಮೂರ್ತಿ ತಯಾರಿಸಲಾಗುತ್ತದೆ’ ಎಂದು ವಿಕಸನ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮಹೇಶ್‌ಚಂದ್ರ ಗುರು ತಿಳಿಸಿದರು.

# ಮುಸ್ಲಿಂ ಮಹಿಳೆಯರಿಂದ ಮೂರ್ತಿ ಸಿದ್ಧ

## 60 ವರ್ಷಗಳಿಂದ ಶ್ರಮ • 60 ಕುಟುಂಬಗಳಿಗೆ ಆಸರೆ

• ಸಂತೋಷ ಈ. ಚಿನಗುಡಿ

**ಕೊಣ್ಣೂರ (ಬೆಳಗಾವಿ ಜಿಲ್ಲೆ):** ನಮಾಜ್ ಮಾಡುವ ಟೈಮಿಗೆ ನಮಾಜ್, ಗಣಪತಿ ಮೂರ್ತಿ ಮಾಡುವ ಟೈಮಿಗೆ ಮೂರ್ತಿ ಮಾಡತೇನ್ರಿ...

ಹೀಗೆ ಸರಳವಾಗಿ ಹೇಳಿದವರು ಶೈನಾಜ್ ಯರಗಟ್ಟಿ. ಗೋಕಾಕ ತಾಲ್ಲೂಕಿನ ಕೊಣ್ಣೂರಿನ ಸಹಕಾರ ಸಂಘದಲ್ಲಿ ಅವರು ಗಣಪತಿ ಮೂರ್ತಿ ತಯಾರಿಸುತ್ತಾರೆ. 400 ಜನ ಕೆಲಸ ಮಾಡುವ ಈ ಸಂಘದಲ್ಲಿ 20ಕ್ಕೂ ಹೆಚ್ಚು ಮುಸ್ಲಿಮರಿದ್ದಾರೆ.

‘ದುಡಿಮೆಯೇ ಧರ್ಮ ಎಂದು ನಂಬಿದ್ದೇನೆ. 5 ವರ್ಷಗಳಿಂದ ಗಣಪತಿ ಮೂರ್ತಿಗಳಿಗೆ ‘ಮಿಂಚಿಂಗ್’ ಮಾಡುತ್ತಿದ್ದೇನೆ. ದೇವರಿಂದ ನೆಮ್ಮದಿ ಸಿಕ್ಕಿದೆ’ ಎಂದು ಅವರು ಹೇಳಿದರು. ‘ಇದು ದೇವರ ಕೆಲಸ’ ಎಂದು ಶೈನಾಜ್ ಪಕ್ಕದಲ್ಲಿದ್ದ ಅಪ್ಸಾನಾ ಬೇಗ್ ದನಿಗೂಡಿಸಿದರು.

ಮೂರ್ತಿಗೆ ಬೇಕಾದ ಮಣ್ಣು ತರುವುದು, ಪುಡಿ ಮಾಡುವುದು, ಹದಗೊಳಿಸುವುದು, ಮೂರ್ತರೂಪ ಕೊಡುವುದು, ಬಣ್ಣ ಬಳಿಯುವುದು, ಅಲಂಕರಿಸಿ ದೈವೀ ಕಳೆ ನೀಡುವುದು ಸೇರಿ ಎಲ್ಲಾ ಹಂತದ ಕೆಲಸಗಳನ್ನೂ ಸಂಘದ ಕಾರ್ಮಿಕರು ಮಾಡುತ್ತಾರೆ. ಹಿಂದೂ, ಮುಸ್ಲಿಂ, ಲಿಂಗಾಯತ, ಕುಂಬಾರ, ಕಮ್ಮಾರ, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸೇರಿ ವಿವಿಧ ಸಮುದಾಯದ ಕಾರ್ಮಿಕರು ಇಲ್ಲಿದ್ದಾರೆ.

**60 ವರ್ಷಗಳ ಸಾಧನೆ:** 1963ರಲ್ಲಿ ಶಂಕರಪ್ಪ ಕುಂಬಾರ ಅವರು ಕೊಣ್ಣೂರಿನ ಶ್ರೀ ಕಾಡಸಿದ್ಧೇಶ್ವರ ಇಟ್ಟಂಗಿ ಮತ್ತು ಕುಂಬಾರಿಕೆ ಸಾಮಾನುಗಳ ಉತ್ಪಾದಕ ಸಹಕಾರಿ ಸಂಘ ಕಟ್ಟಿದರು. ಮಣ್ಣಿನ ಗಣಪತಿ ಮೂರ್ತಿ ತಯಾರಿಕೆಗೆಂದೇ ಕಟ್ಟಿಕೊಂಡ ಸಹಕಾರ ಸಂಘವಿದು. 6 ಜನರೊಂದಿಗೆ ಆರಂಭವಾದ ಸಂಘದಲ್ಲಿ ಈಗ 60 ಕುಟುಂಬಗಳಿವೆ. 400 ಜನರಿಗೆ ವರ್ಷಪೂರ್ತಿ ಕೆಲಸ ಸಿಗುತ್ತದೆ. ಪ್ರತಿಯೊಬ್ಬರಿಗೂ ಪ್ರತಿ ದಿನದ ₹300 ಕೂಲಿ.

‘ಪ್ರತಿ ವರ್ಷ 3 ಲಕ್ಷಕ್ಕೂ ಹೆಚ್ಚು ಮಣ್ಣಿನ ಮೂರ್ತಿಗಳನ್ನು ಸಿದ್ಧಪಡಿಸಿ, ನೈಸರ್ಗಿಕ ಬಣ್ಣ ಮಾತ್ರ ಬಳಸುತ್ತೇವೆ. ಮನೆ, ಮಂದಿರ ಮತ್ತು ಸಾರ್ವಜನಿಕ ಮಂಟಪಗಳಲ್ಲಿ ಪ್ರತಿಷ್ಠಾಪಿಸುವಂತಹ ₹50 ರಿಂದ ₹10 ಸಾವಿರದವರೆಗಿನ ದರದ ಮೂರ್ತಿಗಳು ಇಲ್ಲಿ ದೊರೆಯುತ್ತವೆ’ ಎಂದು ಸಂಘದ ನಿರ್ದೇಶಕ ಸುರೇಶ ಕುಂಬಾರ ತಿಳಿಸಿದರು.

‘ಹಿಡಕಲ್ ಜಲಾಶಯದ ಹಿನ್ನೀರಿನ ಸುತ್ತ ಇರುವ ಗ್ರಾಮಗಳಲ್ಲಿ ಕೆಂಪು ಮಣ್ಣು ಸಿಗುತ್ತದೆ. ಬಹಳಷ್ಟು ಮಣ್ಣು ಕಾಡಿನಲ್ಲಿದೆ. ಅರಣ್ಯ ಇಲಾಖೆ ನಿಯಮಗಳ ಕಾರಣ ಮಣ್ಣಿನ ಕೊರತೆ ಕಾಡುತ್ತಿದೆ’ ಎಂದು ಅವರು ತಿಳಿಸಿದರು.

ಗೋಕಾಕ ತಾಲ್ಲೂಕಿನ ಕೊಣ್ಣೂರ ಗ್ರಾಮದಲ್ಲಿ ಮಣ್ಣಿನ ಗಣಪತಿಗೆ ಮಿಂಚು ಸಿಂಪಡಿಸಿ ಅಲಂಕರಿಸುತ್ತಿರುವ ಶೈನಾಜ್ ಯರಗಟ್ಟಿ –ಪ್ರಜಾವಾಣಿ ಚಿತ್ರ

> **ಪ್ಲಾಸ್ಟರ್, ಪ್ಲಾಸ್ಟಿಕ್ ಮೂರ್ತಿಗಳು ವಿಘ್ನಗಳೇ ಹೊರತು ವಿಘ್ನನಿವಾರಕ ಅಲ್ಲ ಎಂದು ನಮ್ಮ ಅಜ್ಜ ಹೇಳಿದ್ದರು. ಅವರ ಮಾತಿನಂತೆ ಸಂಘವು ಕಾರ್ಯ ನಿರ್ವಹಿಸುತ್ತಿದೆ. ಸುರೇಶ ಕುಂಬಾರ,**
> ಶ್ರೀ ಕಾಡಸಿದ್ಧೇಶ್ವರ ಇಟ್ಟಂಗಿ ಮತ್ತು ಕುಂಬಾರಿಕೆ ಸಾಮಾನುಗಳ ಉತ್ಪಾದಕ ಸಹಕಾರಿ ಸಂಘ

ಚಿಕ್ಕೋಡಿ ತಾಲ್ಲೂಕಿನ ಸದಲಗಾಕ್ಕೆ ಸೈಕಲ್‌ನಲ್ಲಿ ಭೇಟಿ ನೀಡಿದ ಉಪವಿಭಾಗಾಧಿಕಾರಿ ಮಾಧವ ಗಿತ್ತೆ ಅವರು ಸ್ವಚ್ಛತಾ ಕಾಮಗಾರಿ ಪರಿಶೀಲಿಸಿದರು

# ಸೈಕಲ್ ಏರಿ ಸಮಸ್ಯೆ ಆಲಿಸುವ ಎ.ಸಿ

ಪ್ರಜಾವಾಣಿ ವಾರ್ತೆ

**ಚಿಕ್ಕೋಡಿ:** ಚಿಕ್ಕೋಡಿ ಉಪವಿಭಾಗಾಧಿಕಾರಿ ಮಾಧವ ಗಿತ್ತೆ ಅವರು ಪ್ರತಿದಿನ ಗ್ರಾಮೀಣ ಪ್ರದೇಶಕ್ಕೆ ಸೈಕಲ್‌ನಲ್ಲಿ ತೆರಳಿ ಜನರ ಸಮಸ್ಯೆ ಆಲಿಸುತ್ತಿದ್ದಾರೆ. ಶನಿವಾರ ಮಜಲಟ್ಟಿ ಗ್ರಾಮಕ್ಕೆ ಭೇಟಿ ನೀಡಿ, ವಿದ್ಯಾರ್ಥಿಗಳ ಸಮಸ್ಯೆಗೆ ಸ್ಪಂದಿಸಿದರು.

‘ಮಜಲಟ್ಟಿಯ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯವಿಲ್ಲ ಎಂಬುದು ಗೊತ್ತಾಯಿತು. ಅಲ್ಲಿಗೆ ಬಸ್ ಸೌಲಭ್ಯ ಕಲ್ಪಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಸದಲಗಾ ಪಟ್ಟಣದ ಬಸ್ ನಿಲ್ದಾಣದ ಶೌಚಾಲಯ ಸಮಸ್ಯೆ ಬಗೆಹರಿದಿದೆ. ನಾಗರಮುನ್ನೋಳಿ, ಕಬ್ಬೂರ ಮುಂತಾದ 20 ಕಿ.ಮೀ ಒಳಗಿನ ಗ್ರಾಮಗಳಿಗೆ ಒಂದೊಂದು ದಿನ ಭೇಟಿ ನೀಡುತ್ತಿರುವೆ. ಆರೋಗ್ಯ ಸುಧಾರಿಸಿದೆ. ಖುಷಿಯೂ ಆಗಿದೆ’ ಎಂದು ಮಾಧವ ಗಿತ್ತೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸೈಕಲ್ ಓಡಿಸುವುದು ನನ್ನ ಹವ್ಯಾಸ. ಪ್ರತಿ ದಿನ ಬೆಳಿಗ್ಗೆ 6 ಗಂಟೆಗೆ ಸೈಕಲ್‌ನಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲಿಸುತ್ತೇನೆ. ಗ್ರಾಮ ಸ್ವಚ್ಛತೆ, ಪಟ್ಟಣದಲ್ಲಿ ತ್ಯಾಜ್ಯ ವಿಲೇವಾರಿ, ಶಾಲಾ–ಕಾಲೇಜು ವಿದ್ಯಾರ್ಥಿಗಳ ಸಮಸ್ಯೆ ಬಗ್ಗೆಯೂ ಗಮನ ಹರಿಸುತ್ತೇನೆ. ಮೂರು ಗಂಟೆ ಸೈಕಲ್‌ನಲ್ಲಿ ಕಳೆದು, ಕಚೇರಿಗೆ ಸರಿಯಾದ ಸಮಯಕ್ಕೆ ಹಾಜರಾಗುತ್ತೇನೆ’ ಎಂದರು.

‘ಕಾಲೇಜು ದಿನಗಳಿಂದ ಸೈಕ್ಲಿಂಗ್ ರೂಢಿಯಿದೆ. 200 ಕಿ.ಮೀ.ವರೆಗೂ ಪ್ರಯಾಣಿಸಿದ್ದೇನೆ. ಇದೇ ಹವ್ಯಾಸವನ್ನು ಕೆಲಸಕ್ಕೂ ಬಳಸುತ್ತಿರುವೆ. ಹೀಗಾಗಿ ಆರೋಗ್ಯ ವೃದ್ಧಿಸಿದೆ. ಕೆಲಸದ ಒತ್ತಡವೂ ಕಡಿಮೆಯಾಗಿದೆ’ ಎಂದರು.

# ಸ್ವರ್ಣ ಜನ್ಮ ಜಯಂತಿ ಮಹೋತ್ಸವ ನಾಳೆಯಿಂದ

## ವರ್ಷವಿಡೀ ಸಾಮಾಜಿಕ, ಶೈಕ್ಷಣಿಕ ಸೇವೆಗೆ ಆದ್ಯತೆ: ಭಟ್ಟಾರಕ ಮಹಾಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಆಚಾರ್ಯ ಗುಣಧರ ನಂದಿ ಮಹಾರಾಜ

**ಹುಬ್ಬಳ್ಳಿ:** ‘ಹುಬ್ಬಳ್ಳಿ ಹೊರವಲಯದಲ್ಲಿನ ವರೂರಿನ ನವಗ್ರಹ ತೀರ್ಥಕ್ಷೇತ್ರದಲ್ಲಿ ಸಂತ ಆಚಾರ್ಯ ಗುಣಧರ ನಂದಿ ಮಹಾರಾಜರ 50ನೇ ಜನ್ಮದಿನದ ಪ್ರಯುಕ್ತ ಇದೇ ಸೋಮವಾರದಿಂದ (ಸೆ. 18) ಬುಧವಾರದವರೆಗೆ (ಸೆ.20) ಲೋಕ ಕಲ್ಯಾಣಕ್ಕಾಗಿ ‘ಸ್ವರ್ಣ ಜನ್ಮ ಜಯಂತಿ ಮಹಾ ಮಹೋತ್ಸವ’ ಎಂಬ ವಿಶೇಷ ಕಾರ್ಯಕ್ರಮ ನಡೆಯಲಿದೆ’ ಎಂದು ವರೂರಿನ ನವಗ್ರಹ ತೀರ್ಥಕ್ಷೇತ್ರದ ಧರ್ಮಸೇನಾ ಭಟ್ಟಾರಕ ಮಹಾಸ್ವಾಮೀಜಿ ಹೇಳಿದರು.

‘ಭಕ್ತರೇ ಈ ಕಾರ್ಯಕ್ರಮ ಆಯೋಜಿಸಿದ್ದು, ಸೆಪ್ಟೆಂಬರ್ 18 ಮತ್ತು 19ರಂದು ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ. 19ರಂದು ರಾತ್ರಿ 8ಕ್ಕೆ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸೆಪ್ಟೆಂಬರ್ 20ರಂದು ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ದೆಹಲಿಯ ಎನ್‌ಸಿಐಎಸ್‌ಎಂ ಅಧ್ಯಕ್ಷ ರಘುರಾಮ ಭಟ್ಟ, ಮೂರು ಸಾವಿರಮಠದ ಗುರುಸಿದ್ದ ರಾಜಯೋಗೀಂದ್ರ ಸ್ವಾಮೀಜಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಚಿವರು, ಶಾಸಕರು ಭಾಗವಹಿಸುವರು’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮೂರು ದಿನದ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮಹಿಳೆಯರಿಗೆ 1,500 ವಸ್ತ್ರದಾನ ಮಾಡಲಾಗುವುದು. 1,500 ಬಡವರಿಗೆ ಉಚಿತವಾಗಿ ಕರ್ನಾಟಕದ ತೀರ್ಥಕ್ಷೇತ್ರಗಳ ದರ್ಶನ ಮಾಡಿಸಲಾಗುವುದು. 50 ಅಂಗವಿಕಲರಿಗೆ ಉಚಿತವಾಗಿ ಕೃತಕ ಕಾಲು ಜೋಡಣೆ ಮಾಡಲಾಗುವುದು. 50 ಅನಾಥಾಶ್ರಮಗಳಿಗೆ ಆಹಾರ ಪೂರೈಸಲಾಗುವುದು’ ಎಂದು ಹೇಳಿದರು.

‘ಗುಣಧರ ನಂದಿ ಮಹಾರಾಜರು ಹಲವು ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ವರೂರು ಕ್ಷೇತ್ರದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮುಂಬರುವ ಶೈಕ್ಷಣಿಕ ವರ್ಷದಿಂದ ಐದು ಸಾವಿರ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲು ನಿರ್ಧರಿಸಿದ್ದಾರೆ. ಎಂಜಿನಿಯರಿಂಗ್, ಬಿಎಎಂಎಸ್, ಹೋಮಿಯೋಪಥಿ ಶಿಕ್ಷಣ ಮಹಾವಿದ್ಯಾಯದಲ್ಲಿ ಹತ್ತು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಿವಿಲ್ ಹಾಗೂ ಮೆಕ್ಯಾನಿಕಲ್ ಎಂಜಿನಿಯರಿಂಗ್ ಶಿಕ್ಷಣ ನೀಡಲು ನಿರ್ಧರಿಸಿದ್ದಾರೆ’ ಎಂದರು.

ಪ್ರಮುಖರಾದ ಸಂದೀಪ ಕ್ಯಾತನವರ್, ದೇವೇಂದ್ರಪ್ಪ ಕಾಗೇನವರ, ಅನಂತ ಕುಲಕರ್ಣಿ, ಬಾಹುಬಲಿ ದರೇಪ್ಪನವರ ಇದ್ದರು.

ಹುಬ್ಬಳ್ಳಿ ತಾಲ್ಲೂಕಿನ ವರೂರು ಗ್ರಾಮದ ನವಗ್ರಹ ತೀರ್ಥ ಕ್ಷೇತ್ರ

> **ಧಾರ್ಮಿಕ, ಸಾಮಾಜಿಕ ಸೇವೆ ಸಲ್ಲಿಸಿದ 50 ಗ್ರಾಮಗಳ ತಲಾ ಒಬ್ಬರಿಗೆ ‘ನವಗ್ರಹ ಪುರಸ್ಕಾರ’ ಪ್ರಶಸ್ತಿ ನೀಡಲಾಗುವುದು. ನೂರು ಊರುಗಳಲ್ಲಿ ವರ್ಷಪೂರ್ತಿ ರಕ್ತದಾನ ಶಿಬಿರ ನಡೆಯಲಿದೆ.**
> **ಧರ್ಮಸೇನಾ ಭಟ್ಟಾರಕ ಮಹಾಸ್ವಾಮೀಜಿ,** ನವಗ್ರಹ ತೀರ್ಥಕ್ಷೇತ್ರ, ವರೂರು

# ಲೈಂಗಿಕ ಕಿರುಕುಳ ಆರೋಪ ಮುಖ್ಯಶಿಕ್ಷಕನ ಬಂಧನ

ಶಿವರಾಂ

**ಮದ್ದೂರು:** ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪದಡಿಯಲ್ಲಿ ನಿಡಘಟ್ಟ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಶಿವರಾಂ (55) ಅವರನ್ನು ಮದ್ದೂರು ಪೊಲೀಸರು ಶನಿವಾರ ಶಾಲೆಯಲ್ಲೇ ಬಂಧಿಸಿದರು. ಆರೋಪಿ ವಿರುದ್ಧ ಪೋಕ್ಸೊ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಣ ಇಲಾಖೆಯ ಅನ್ನದಾಸೋಹ ಸಹಾಯಕ ನಿರ್ದೇಶಕಿ ಮಂಗಳಮ್ಮ ಸ್ಥಳಕ್ಕೆ ಭೇಟಿ ನೀಡಿ ಪೋಷಕರು ಹಾಗೂ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದು ನಂತರ ದೂರು ನೀಡಿದರು.

‘ಶಾಲೆಯಲ್ಲಿ ನಿತ್ಯವೂ ಲೈಂಗಿಕ ಕಿರುಕುಳ ನೀಡುವ ಜೊತೆಗೆ ಅಸಭ್ಯವಾಗಿ ವರ್ತಿಸುತ್ತಿದ್ದರು. ವಿದ್ಯಾರ್ಥಿನಿಯರ ದೇಹ ಸ್ಪರ್ಶಿಸಿ, ಅಸಭ್ಯ ಭಾಷೆ ಬಳಸುತ್ತಿದ್ದರು. ಕೆಲವೊಮ್ಮೆ ಬೈಕ್‌ನಲ್ಲಿ ಹೊರಗೆ ಕರೆದೊಯ್ಯುತ್ತಿದ್ದರು’ ಎಂದು ಪೋಷಕರು ಆರೋಪಿಸಿದ್ದಾರೆ.

‘ದುರ್ವರ್ತನೆ ಕುರಿತು ಮಕ್ಕಳು ಪೋಷಕರಿಗೆ ತಿಳಿಸಿದ್ದರು. ತಕ್ಷಣವೇ ಅವರು ಬಂದು ಇತರ ಶಿಕ್ಷಕರ ಗಮನಕ್ಕೆ ತಂದಿದ್ದರು’ ಎನ್ನಲಾಗಿದೆ. ಆದರೂ ದುರ್ವರ್ತನೆ ಮುಂದುವರಿದಿದ್ದರಿಂದ ಪೊಲೀಸರ ಗಮನಕ್ಕೆ ತರಲಾಯಿತು. ಪಿಎಸ್‌ಐ ಉಮೇಶ್ ನೇತೃತ್ವದ ತಂಡವು ಮುಖ್ಯ ಶಿಕ್ಷಕರನ್ನು ಬಂಧಿಸಿ ಠಾಣೆಗೆ ಕರೆತಂದು ವಿಚಾರಣೆ ನಡೆಸಿತು. ಸ್ಥಳದಲ್ಲಿ ಜಮಾಯಿಸಿದ್ದ ಸ್ಥಳೀಯರು ಮುಖ್ಯ ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡರು.

‘ಮುಖ್ಯ ಶಿಕ್ಷಕರನ್ನು ಅಮಾನತು ಮಾಡಿ, ಶಿಕ್ಷೆಗೆ ಒಳಪಡಿಸಬೇಕು’ ಎಂದು ಸ್ಥಳೀಯ ಮುಖಂಡ ಪ್ರಕಾಶ್ ಆಗ್ರಹಿಸಿದರು.

# ಬ್ರಿಟನ್: ವೀಸಾ ಶುಲ್ಕ ಹೆಚ್ಚಳ

**ಲಂಡನ್ (ಪಿಟಿಐ):** ವೀಸಾ ಶುಲ್ಕವನ್ನು ಬ್ರಿಟನ್ ಹೆಚ್ಚಳ ಮಾಡಿದ್ದು, ಅಕ್ಟೋಬರ್ 4ರಿಂದ ಪರಿಷ್ಕೃತ ಶುಲ್ಕ ಜಾರಿಗೆ ಬರಲಿದೆ. ಬ್ರಿಟನ್‌ಗೆ ಪ್ರವೇಶ ಬಯಸುವ ಎಲ್ಲಾ ದೇಶಗಳ ಆಕಾಂಕ್ಷಿಗಳಿಗೂ ಇದು ಅನ್ವಯವಾಗಲಿದೆ.

ಹೊಸ ಶುಲ್ಕ ನೀತಿ ಪ್ರಕಾರ ಆರು ತಿಂಗಳಿಗಿಂತ ಕಡಿಮೆ ಅವಧಿಗೆ ನೀಡುವ ಸಂದರ್ಶಕರ ವೀಸಾ ಶುಲ್ಕವನ್ನು 115 ಪೌಂಡ್ (₹11,835.30) ನಿಗದಿಪಡಿಸಲಾಗಿದೆ. ವಿದ್ಯಾರ್ಥಿ ವೀಸಾಗೆ 490 ಪೌಂಡ್ (₹50,428.66) ನಿಗದಿಪಡಿಸಲಾಗಿದೆ ಎಂದು ಬ್ರಿಟನ್‌ನ ಗೃಹ ಇಲಾಖೆ ತಿಳಿಸಿದೆ.

## ಸಂಕ್ಷಿಪ್ತ ಸುದ್ದಿ

### ಐತಿಹಾಸಿಕ ‘ಇಂಡಿಯಾ ಕ್ಲಬ್’ ಇಂದೇ ಕೊನೆ

**ಲಂಡನ್ (ಪಿಟಿಐ):** ಭಾರತದ ಸ್ವಾತಂತ್ರ್ಯ ಹೋರಾಟದ ದಿನಗಳ ನೆನಪುಗಳುಳ್ಳ ಇಲ್ಲಿನ ಐತಿಹಾಸಿಕ ಇಂಡಿಯಾ ಕ್ಲಬ್ ಭಾನುವಾರ (ಸೆ.17) ಬೀಗಮುದ್ರೆಗೆ ಒಳಗಾಗಲಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕೃಷ್ಣ ಮೆನನ್ ಸೇರಿದಂತೆ ಅನೇಕ ರಾಷ್ಟ್ರೀಯವಾದಿಗಳಿಗೆ ಇದು ನೆಲೆಯಾಗಿತ್ತು.

ಈ ಕ್ಲಬ್ ಭಾರತದ ಸ್ವಾತಂತ್ರ್ಯ ಹೋರಾಟ ದಿನಗಳಿಗೆ ಸಾಕ್ಷಿಯಾಗಿದೆ. ಬ್ರಿಟನ್‌ನಲ್ಲಿ ಹೋರಾಟ ಇಲ್ಲಿಂದಲೇ ಆರಂಭವಾಗಿತ್ತು. ಬ್ರಿಟನ್‌ನಲ್ಲಿ ಭಾರತದ ಮೊದಲ ಹೈಕಮಿಷನರ್ ಆಗಿದ್ದ ಕೃಷ್ಣ ಮೆನನ್ ಅವರು ಇದರ ಸ್ಥಾಪಕ ಸದಸ್ಯರಲ್ಲಿ ಒಬ್ಬರು. ಬ್ರಿಟನ್‌ನ ಪ್ರಥಮ ಭಾರತೀಯ ರೆಸ್ಟೋರಂಟ್ ಕೂಡ ಈ ಕ್ಲಬ್ ಕಟ್ಟಡದಲ್ಲಿಯೇ ಇತ್ತು. ಭಾರತದ ಸ್ವಾತಂತ್ರ್ಯ ನಂತರ ಬ್ರಿಟನ್‌ನ ದಕ್ಷಿಣ ಏಷ್ಯಾ ಸಮುದಾಯದವರು ಒಗ್ಗೂಡುವ ತಾಣವಾಗಿ ಇದು ಪರಿವರ್ತನೆಗೊಂಡಿತ್ತು.

ಲಂಡನ್‌ನ ಕೇಂದ್ರ ಭಾಗದಲ್ಲಿರುವ ಈ ಕಟ್ಟಡದ ಮಾಲೀಕರು, ಅದನ್ನು ಆಧುನಿಕ ಹೋಟೆಲ್ ಆಗಿ ಪರಿವರ್ತಿಸಲು ಬಯಸಿದ್ದು, ಕಟ್ಟಡ ತೆರವುಗೊಳಿಸುವಂತೆ ಇಂಡಿಯಾ ಕ್ಲಬ್‌ನ ಮಾಲೀಕರಿಗೆ ಬಹಳ ಹಿಂದೆಯೇ ನೋಟಿಸ್ ಜಾರಿ ಮಾಡಿದ್ದರು.

‘ತುಂಬಾ ಭಾರವಾದ ಹೃದಯದಿಂದಲೇ ಕ್ಲಬ್ ಅನ್ನು ಮುಚ್ಚುತ್ತಿದ್ದೇವೆ. ಸೆ.17ರಂದು ಕಡೆಯದಾಗಿ ಕಾರ್ಯನಿರ್ವಹಿಸಲಿದೆ’ ಎಂದು ಕ್ಲಬ್‌ನ ವ್ಯವಸ್ಥಾಪಕರಾದ ಫಿರೋಜಾ ಮಾರ್ಕರ್ ತಿಳಿಸಿದ್ದಾರೆ.

### ‘ಕೆನಡಾ ನಿಯೋಗದ ಭಾರತ ಭೇಟಿ ಮುಂದಕ್ಕೆ’

**ಒಟ್ಟಾವ (ರಾಯಿಟರ್ಸ್):** ಕೆನಡಾದ ವಾಣಿಜ್ಯ ಸಚಿವೆ ಮೇರಿ ಎನ್‌ಜಿ ಅವರು ತಮ್ಮ ನಿಯೋಗದ ಭಾರತ ಭೇಟಿಯನ್ನು ಮುಂದೂಡಿದ್ದಾರೆ ಎಂದು ಶುಕ್ರವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆದ ಜಿ–20 ಶೃಂಗದಲ್ಲಿ ಭಾರತ ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರನ್ನು ನಿರ್ಲಕ್ಷ್ಯ ಮಾಡಿದ ನಂತರ ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧದಲ್ಲಿ ಬಿರುಕುಂಟಾಗಿದೆ. ಹೀಗಾಗಿ ಮೇರಿ ಭಾರತ ಭೇಟಿಯನ್ನು ಮುಂದೂಡಿದ್ದಾರೆ ಎನ್ನಲಾಗುತ್ತಿದೆ.

ಜಸ್ಟಿನ್ ಟ್ರುಡೊ

ಸಚಿವರ ವಕ್ತಾರರಾದ ಶಾಂತಿ ಕೊಸೆಂಟಿನೊ ಅವರು ‘ಭಾರತಕ್ಕೆ ಕೆನಡಾ ನಿಯೋಗ ಭೇಟಿ ನೀಡುವುದನ್ನು ಸದ್ಯಕ್ಕೆ ಮುಂದೂಡಲಾಗಿದೆ’ ಎಂದು ತಿಳಿಸಿದ್ದಾರೆ. ಆದರೆ ಈ ನಿರ್ಧಾರಕ್ಕೆ ಕಾರಣ ಏನು ಎಂಬುದನ್ನು ಅವರು ತಿಳಿಸಿಲ್ಲ. ಜಿ–20 ಶೃಂಗದ ವೇಳೆ ಹಲವು ಜಾಗತಿಕ ನಾಯಕರೊಂದಿಗೆ ಔಪಚಾರಿಕ ಸಭೆ ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರನ್ನು ನಿರ್ಲಕ್ಷಿಸಿದ್ದರು.

ಭಾರತದ ಹೊರತಾಗಿ ಅತಿ ಹೆಚ್ಚುಸಂಖ್ಯೆಯ ಸಿಖ್ ಜನರು ಕೆನಡಾದಲ್ಲಿ ನೆಲೆಸಿದ್ದಾರೆ. ಭಾರತದ ವಿರುದ್ಧ ಅಲ್ಲಿ ಅನೇಕ ಪ್ರತಿಭಟನೆಗಳು ನಡೆಯುತ್ತಿವೆ.

ಅಪಾಯದಂಚಿನಲ್ಲಿ ಸ್ಮಾರಕ, ಶಿಲಾಸಮಾಧಿ

# ಕೊಡಗಿನಲ್ಲಿ 69 ಹೊಸ ಶಾಸನಗಳು ಪತ್ತೆ

• ಕೆ.ಎಸ್.ಗಿರೀಶ

**ಮಡಿಕೇರಿ:** ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕೊಡಗು ಜಿಲ್ಲೆಯ ಮಡಿಕೇರಿ, ಕುಶಾಲನಗರ ಹಾಗೂ ಸೋಮವಾರಪೇಟೆ ತಾಲ್ಲೂಕಿನಲ್ಲಿ 69 ಶಾಸನಗಳನ್ನು ಸಂಶೋಧಿಸಿದ್ದು, ಓದುವ ಕಾರ್ಯ ನಡೆಸುತ್ತಿದೆ.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಅತ್ಯಧಿಕ 34, ಕುಶಾಲನಗರ ತಾಲ್ಲೂಕಿನಲ್ಲಿ 18 ಹಾಗೂ ಮಡಿಕೇರಿ ತಾಲ್ಲೂಕಿನಲ್ಲಿ 17 ಶಾಸನಗಳು ಪತ್ತೆಯಾಗಿವೆ. ಇವುಗಳು ಈ ಹಿಂದೆ ಪ್ರಕಟಗೊಂಡಿರುವ ಶಾಸನ ಸಂಪುಟಗಳಾದ ‘ಎಪಿಗ್ರಾಫಿಯಾ ಕರ್ನಾಟಿಕಾ’, ‘ಇತಿಹಾಸ ದರ್ಶನ’ ಸೇರಿದಂತೆ ಯಾವುದೇ ಗ್ರಂಥದಲ್ಲೂ ಉಲ್ಲೇಖವಾಗಿಲ್ಲ.

ಸಿಕ್ಕಿರುವ ಶಾಸನಗಳು 7ನೇ ಶತಮಾನದಿಂದ 18ನೇ ಶತಮಾನಗಳವರೆಗಿನ ಕಾಲಕ್ಕೆ ಸೇರಿದವು. ಇದರ ಜೊತೆಗೆ, ಈ ಹಿಂದೆ ವಿವಿಧ ಸಂಪುಟಗಳಲ್ಲಿ ಪ್ರಕಟಗೊಂಡಿರುವ ಶಾಸನಗಳನ್ನೂ ಗುರುತಿಸಿ, ಅವುಗಳ ಈಗಿನ ಸ್ಥಿತಿಯನ್ನೂ ಪರಿಶೀಲಿಸಲಾಗಿದೆ.

2020ರಿಂದ ಇಲ್ಲಿಯವರೆಗೆ ಇಲಾಖೆಯ ಕ್ಯುರೇಟರ್ ರೇಖಾ ಅವರು ಒಟ್ಟು 406 ಹಳ್ಳಿಗಳಿಗೆ ಭೇಟಿ ನೀಡಿ ಪತ್ತೆ ಕಾರ್ಯ ನಡೆಸಿದ್ದಾರೆ. ಶಾಸನಗಳ ಜೊತೆಗೆ ಶಿಲಾಯುಗದಿಂದ 19ನೇ ಶತಮಾನದವರೆಗಿನ ಸ್ಮಾರಕಗಳೂ ಸಿಕ್ಕಿವೆ. ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ರೇಖಾ, ‘ಶಾಸನಗಳನ್ನು ಮೈಸೂರಿನ ವಿದ್ವಾಂಸ ಎಚ್.ಎಂ.ನಾಗರಾಜರಾವ್ ಅವರು ಓದುತ್ತಿದ್ದು, ಶೀಘ್ರದಲ್ಲಿ ಶಾಸನದ ಪಠ್ಯ ಸಿದ್ಧವಾಗಲಿದೆ’ ಎಂದರು.

‘ಅತಿ ಅಪರೂಪವೆನಿಸುವ ಐದು ಶಿಲಾಸಮಾಧಿಗಳು ಲಭ್ಯವಾಗಿದ್ದು, ಸೋಮವಾರಪೇಟೆ ತಾಲ್ಲೂಕಿನ ಮೋರಿಕಲ್ಲು ಗ್ರಾಮದಲ್ಲಿರುವ ಸಮಾಧಿಗಳು ಅಳಿವಿನಂಚಿನಲ್ಲಿವೆ. ಮಡಿಕೇರಿ ತಾಲ್ಲೂಕಿನಲ್ಲಿರುವ 175 ಸ್ಮಾರಕಗಳ ಪೈಕಿ ಕಾಂತೂರು ಹಾಗೂ ಐಕೊಳದ ಅರಮನೆಗಳು, ಕಗ್ಗೋಡ್ಲುವಿನ ಮಹಾವಿಷ್ಣು ದೇಗುಲ, ಕುಂದಚೇರಿಯ ಈಶ್ವರ ದೇಗುಲ, ಸಿಂಗತ್ತೂರಿನ ಮಹಾವಿಷ್ಣು ದೇಗುಲ, ಕೋಕೇರಿಯ ನೀಲ್ಯಾಟು ಸಾರ್ತಾವು ದೇವಾಲಯ, ಬಾವಲಿಯ ಶ್ರೀದುರ್ಗಾ ಭಗವತಿ ದೇವಾಲಯ, ಕುಯ್ಯಂಗೇರಿಯ ಶ್ರೀವಿಷ್ಣು ದೇವಾಲಯಗಳನ್ನು ತುರ್ತಾಗಿ ಸಂರಕ್ಷಿಸಬೇಕು’ ಎಂದು ಅವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಕೋರಿದ್ದಾರೆ.

‘ಕೊಡಗಿನಲ್ಲಿ ಮಾತ್ರವೇ ಕಂಡು ಬರುವ ಕೋಲೆಕಲ್ಲುಗಳು (ಮೃತಪಟ್ಟ ಹಿರಿಯರ ನೆನಪಿಗೆ ನೆಡುವ ಕಲ್ಲು) ಹೆಚ್ಚಿನ ಪ್ರಮಾಣದಲ್ಲಿ ಸಂಶೋಧನೆ ವೇಳೆ ಸಿಕ್ಕಿವೆ. ಸೋಮವಾರಪೇಟೆ ತಾಲ್ಲೂಕಿನಲ್ಲಿ 246 ಕೋಲೆಕಲ್ಲುಗಳು ಸಿಕ್ಕಿದ್ದರೆ, ಕುಶಾಲನಗರ ತಾಲ್ಲೂಕಿನಲ್ಲಿ 21 ಕೋಲೆಕಲ್ಲುಗಳು ಸಿಕ್ಕಿವೆ. ಇದರೊಂದಿಗೆ 12 ವೀರಗಲ್ಲುಗಳು, 11 ಸತಿಕಲ್ಲುಗಳು, 5 ಶಿಲಾಶಿಲ್ಪಗಳೂ ಸಿಕ್ಕಿವೆ. ಇದರೊಂದಿಗೆ 15 ಗ್ರಾಮಗಳ ಸ್ಮಾರಕಗಳು ಅಪಾಯದಂಚಿನಲ್ಲಿವೆ’ ಎಂದು ಅವರು ವರದಿಯಲ್ಲಿ ತಿಳಿಸಿದ್ದಾರೆ.

**ಮುಖ್ಯಾಂಶಗಳು**

- 406 ಹಳ್ಳಿಗಳಲ್ಲಿ ಸಮೀಕ್ಷೆ
- ತುರ್ತು ರಕ್ಷಣೆ ಅಗತ್ಯ:ಮನವಿ

ಶಾಸನದ ಪರಿಶೀಲನೆಯಲ್ಲಿರುವ ಕ್ಯುರೇಟರ್ ರೇಖಾ

ಕುಶಾಲನಗರ ತಾಲ್ಲೂಕಿನ ಚಿಕ್ಕಅಳುವಾರ ಗ್ರಾಮದಲ್ಲಿ ಮುರಿದು ಬಿದ್ದಿರುವ ವೀರಗಲ್ಲು

# ‘ಏಕಕಾಲ ಚುನಾವಣೆ ಅಸಾಧ್ಯ’

## ಸಂವಾದದಲ್ಲಿ ವಿವಿಧ ಸಂಘಟನೆಗಳ ಪ್ರಮುಖರ ಅಭಿಮತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬಹುತ್ವವು ಭಾರತದ ಪ್ರಜಾಪ್ರಭುತ್ವದ ಜೀವಾಳ. ಆದ್ದರಿಂದ ಒಂದು ದೇಶ ಒಂದು ಚುನಾವಣೆ ಅನಗತ್ಯ ಹಾಗೂ ಅಸಾಧ್ಯ’ ಎಂದು ಚಿಂತಕರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಅಭಿಮತ ವ್ಯಕ್ತಪಡಿಸಿದರು.

ಚಿಂತನ ಕರ್ನಾಟಕ ನಗರದಲ್ಲಿ ಶನಿವಾರ ಆಯೋಜಿಸಿದ ಸಂವಾದ ಕಾರ್ಯಕ್ರಮದಲ್ಲಿ ‘ಒಂದು ದೇಶ ಒಂದು ಚುನಾವಣೆ’ಯ ಪರಿಣಾಮದ ಬಗ್ಗೆ ಚರ್ಚಿಸಲಾಯಿತು.

ಚಿಂತಕ ಶಿವಸುಂದರ್, ‘ಪ್ರಜಾಪ್ರಭುತ್ವ ವಿರೋಧಿ ನಿಲುವು ಇದಾಗಿದೆ. ಇದರಿಂದ ಹಣ ಉಳಿತಾಯ ಆಗುತ್ತದೆ ಎನ್ನುವುದು ಶುದ್ಧ ಸುಳ್ಳು. 2019ರ ಚುನಾವಣೆಗೆ ಸಂಸ್ಥೆಯೊಂದರ ಮಾಹಿತಿ ಪ್ರಕಾರ ₹ 60 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ಚುನಾವಣಾ ಆಯೋಗಕ್ಕೆ ಖರ್ಚಾಗಿರುವುದು ಕೇವಲ ₹ 10 ಸಾವಿರ ಕೋಟಿ. ಬಿಜೆಪಿ ಒಂದೇ ₹ 27 ಸಾವಿರ ಕೋಟಿ ಖರ್ಚು ಮಾಡಿದೆ. ಇದು ರಾಜಕೀಯ ಪ್ರೇರಿತ ಪರಿಕಲ್ಪನೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬರಹಗಾರ ಎ. ನಾರಾಯಣ, ‘ಒಂದು ದೇಶ ಒಂದು ಚುನಾವಣೆ ಅಗತ್ಯವಿಲ್ಲ. ದೇಶದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಈ ಪರಿಕಲ್ಪನೆ ಮುನ್ನೆಲೆಗೆ ತರಲಾಗಿದೆ. ಹಣ, ಸಮಯ ಉಳಿತಾಯವಾಗುತ್ತದೆ ಎನ್ನುವುದ-ರಲ್ಲಿ ಸತ್ಯವಿಲ್ಲ. ಇದನ್ನು ಅನುಷ್ಠಾನ ಮಾಡಿದರೆ ಅದು ರಾಜ್ಯಗಳ ಮೇಲೆ ಮಾಡಿದ ನೇರ ಪ್ರಹಾರವಾಗಲಿದೆ’ ಎಂದು ಹೇಳಿದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ. ಪ್ರಕಾಶ್, ‘ಈ ಪರಿಕಲ್ಪನೆ ಪ್ರಾದೇಶಿಕ ಆಶಯಗಳನ್ನು ನಾಶ ಮಾಡುತ್ತದೆ. ಈಗಿರುವ ಚುನಾವಣೆ ವ್ಯವಸ್ಥೆಯಲ್ಲಿ ಸಮಸ್ಯೆಗಳಿ-ದ್ದರೂ ಸುಧಾರಣೆ ತಂದು, ಮತ್ತಷ್ಟು ಜನಪರ ಮಾಡಲು ಸಾಧ್ಯವಿದೆ. ಒಂದು ದೇಶ ಒಂದು ಚುನಾವಣೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಈ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕು’ ಎಂದು ಹೇಳಿದರು.

ಕಲಾವಿದೆ ಸುಷ್ಮಾವೀರ್, ‘ಚುನಾವಣಾ ವೆಚ್ಚ ಕಡಿತ ಮಾಡಲು ಸಹಕಾರಿಯೆಂದು ಒಂದೇ ಚುನಾವಣೆ ನಡೆಸುವುದು ಸರಿಯಲ್ಲ. ಇದರ ಬದಲಾಗಿ ಅಭ್ಯರ್ಥಿಗಳು ಪ್ರಚಾರಕ್ಕೆ ನಡೆಸುವ ವೆಚ್ಚವನ್ನು ಕಡಿಮೆ ಮಾಡಬೇಕು. ದೇಶದ ಸೌಂದರ್ಯ ವಿವಿಧತೆಯಲ್ಲಿದೆ’ ಎಂದು ಅಭಿಮತ ವ್ಯಕ್ತಪಡಿಸಿದರು.

ಸಂವಾದದಲ್ಲಿ ಕೆ. ಪ್ರಕಾಶ್ ಮಾತನಾಡಿದರು. (ಎಡದಿಂದ) ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿ ರೆಡ್ಡಿ, ಜೆಡಿಎಸ್ ಮುಖಂಡ ಸಿ.ಎಂ. ಫೈಜ್ ಮತ್ತು ಕಲಾವಿದೆ ಸುಷ್ಮಾವೀರ್ ಇದ್ದಾರೆ – ಪ್ರಜಾವಾಣಿ ಚಿತ್ರ

# ಕ್ಯಾನ್ಸರ್ ಮರಣ ತಡೆಗೆ 9 ಶಿಫಾರಸು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕ್ಯಾನ್ಸರ್ ಮರಣ ತಡೆ ಹಾಗೂ ಕ್ಯಾನ್ಸರ್ ಪೀಡಿತರ ಜೀವನ ಮಟ್ಟ ಸುಧಾರಿಸಲು ರಾಜ್ಯ ಸರ್ಕಾರದ ಸಹಯೋಗದಲ್ಲಿ ಬೆಂಗಳೂರು ಎಫ್‌ಐಸಿಸಿಐ ಕ್ಯಾನ್ಸರ್ ಕಾರ್ಯಪಡೆ ರಚನೆಯಾಗಿದ್ದು, ಇದು ರೋಗ ನಿಯಂತ್ರಣಕ್ಕೆ 9 ಶಿಫಾರಸುಗಳನ್ನು ಮಾಡಿದೆ.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘಗಳ ಒಕ್ಕೂಟ (ಎಫ್‌ಐಸಿಸಿಐ) ಈ ಕಾರ್ಯ ಪಡೆ ರಚಿಸಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ ಸೇರಿ ವಿವಿಧ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳು, ಕ್ಯಾನ್ಸರ್ ಚಿಕಿತ್ಸಾ ತಜ್ಞರು, ತಂತ್ರಜ್ಞರು, ಔಷಧ ಕಂಪನಿಗಳು ಹಾಗೂ ನಾಗರಿಕ ಸಂಸ್ಥೆಗಳನ್ನು ಒಳಗೊಂಡಿದೆ. ಈ ಕಾರ್ಯಪಡೆಯು 2028ರ ವೇಳೆಗೆ ರೋಗ ನಿಯಂತ್ರಕ್ಕೆ ಗುರಿ ಹಾಕಿಕೊಂಡಿದ್ದು, ಸರ್ಕಾರಕ್ಕೆ ಕೆಲವು ಶಿಫಾರಸುಗಳನ್ನು ಮಾಡಿದೆ.

‘ಅಧಿಕ ಕ್ಯಾನ್ಸರ್ ಪ್ರಕರಣಗಳನ್ನು ಹೊಂದಿರುವ ದೇಶಗಳ ಸಾಲಿನಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. ಕಳೆದ ವರ್ಷ ಈ ಕಾಯಿಲೆಗೆ 8 ಲಕ್ಷಕ್ಕೂ ಹೆಚ್ಚು ಭಾರತೀಯರು ಮೃತಪಟ್ಟಿದ್ದಾರೆ. ಈ ರೋಗ ತಡೆಗೆ ಕಾರ್ಯಪಡೆ ರಚಿಸಿ, ಗುರಿಗಳನ್ನು ಹಾಕಿಕೊಳ್ಳಲಾಗಿದೆ’ ಎಂದು ಕಾರ್ಯಪಡೆಯ ಸಹ ಅಧ್ಯಕ್ಷ ರಾಜ್ ಗೋರ್ ತಿಳಿಸಿದ್ದಾರೆ.

‘ಗರ್ಭಕಂಠ, ಸ್ತನ ಮತ್ತು ಬಾಯಿಯ ಕ್ಯಾನ್ಸರ್ ಪ್ರಕರಣಗಳ ಪತ್ತೆಗೆ ಸಂಬಂಧಿಸಿದಂತೆ ತಪಾಸಣೆ ಹೆಚ್ಚಿಸಬೇಕು. ಕ್ಯಾನ್ಸರ್ ಆರೈಕೆ ಬಲಪಡಿಸಲು ವೈದ್ಯಕೀಯ ಸೌಲಭ್ಯಕ್ಕೆ ಆದ್ಯತೆ ನೀಡಬೇಕು. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ವ್ಯಾಪ್ತಿ ವಿಸ್ತರಿಸಬೇಕು’ ಎಂದು ಹೇಳಿದ್ದಾರೆ.

**ಶಿಫಾರಸುಗಳು:** ಆರಂಭಿಕ ಹಂತದಲ್ಲಿ ಕ್ಯಾನ್ಸರ್ ಪತ್ತೆ ಮತ್ತು ತಡೆಗಟ್ಟುವಿಕೆಗೆ ಸಂಬಂಧಿಸಿದಂತೆ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಬೇಕು. ಆಸ್ಪತ್ರೆ ಮತ್ತು ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿ ಬಲಪಡಿಸಬೇಕು. ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಬೇಕು. ಕ್ಯಾನ್ಸರ್ ತಡೆಗೆ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ರೋಗದ ಬಗೆಗಿನ ತಪ್ಪು ಕಲ್ಪನೆ ಹೋಗಲಾಡಿಸಲು ಜಾಗೃತಿ ಮೂಡಿಸಬೇಕು. ಜನಸಂಖ್ಯೆ ಆಧಾರದಲ್ಲಿ ತಪಾಸಣೆ ನಡೆಸಬೇಕು. ಚಿಕಿತ್ಸೆಗೆ ಸಂಬಂಧಿಸಿದಂತೆ ವೈದ್ಯರಿಗೆ ಅಗತ್ಯ ತರಬೇತಿ ನೀಡಬೇಕು ಎಂದು ಕಾರ್ಯಪಡೆ ಶಿಫಾರಸು ಮಾಡಿದೆ.

# ‘ಊಸರವಳ್ಳಿ ಸರ್ಕಾರ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಚಾರದಲ್ಲಿ ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ಇದು ಊಸರವಳ್ಳಿ ಸರ್ಕಾರ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಕಾವೇರಿ ನದಿ ನೀರಿನ ವಿಚಾರದಲ್ಲಿ ರಾಜ್ಯ ಸರ್ಕಾರದ ಮೇಲೆ ತಮಿಳುನಾಡು ಸರ್ಕಾರದ ಪ್ರಭಾವ ವಿಪರೀತವಾಗಿದೆ. ಸುಪ್ರೀಂ ಕೋರ್ಟ್ ಆದೇಶ ಬಂದಿಲ್ಲ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯೂ ಆಗಿಲ್ಲ. ಆದರೂ, ತಮಿಳುನಾಡಿಗೆ ನೀರು ಹರಿಸುವ ಮೂಲಕ ರಾಜ್ಯ ಸರ್ಕಾರವು ಇಲ್ಲಿನ ಜನರಿಗೆ ಮೋಸ ಮಾಡಿದೆ’ ಎಂದರು.

‘ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಹರಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಮರುದಿನವೇ ನೀರು ಹರಿಸುವುದಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತೀರ್ಮಾನಿಸಿದ್ದರು. ತಮಿಳುನಾಡಿಗೆ ನೀರು ಹರಿಸುವ ತೀರ್ಮಾನವನ್ನು ಕೈಗೊಳ್ಳುವ ಉದ್ದೇಶವಿದ್ದರೆ ಸರ್ಕಾರ ಸರ್ವಪಕ್ಷಗಳ ಸಭೆ ಕರೆಯುವ ಅಗತ್ಯ ಏನಿತ್ತು’ ಎಂದು ಪ್ರಶ್ನಿಸಿದರು.

# ರಾಜ್ಯ ಪ್ರವಾಸಕ್ಕೆ ಇಂದು ಚಾಲನೆ

**ಮುಳಬಾಗಿಲು:** ಬಿ.ಎಸ್.ಯಡಿಯೂರಪ್ಪ ನೇತೃತ್ವ ದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಹಮ್ಮಿಕೊಂಡಿರುವ ಹೋರಾಟ ಮತ್ತು ರಾಜ್ಯವ್ಯಾಪಿ ಪ್ರವಾಸಕ್ಕೆ ತಾಲ್ಲೂಕಿನ ಕುರುಡುಮಲೆ ಗಣೇಶನಿಗೆ ಭಾನುವಾರ ಪೂಜೆ ಸಲ್ಲಿಸಿದ ನಂತರ ಚಾಲನೆ ದೊರೆಯಲಿದೆ.

ವಿಧಾನಸಭೆಯ ಸೋಲಿನ ಬಳಿಕ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯವ್ಯಾಪಿ ಕೈಗೊಂಡಿರುವ ಹೋರಾಟಕ್ಕೆ ಕುರುಡುಮಲೆಯಲ್ಲಿ ಕೊನೆ ಕ್ಷಣದ ಸಿದ್ಧತೆಗಳು ಮುಗಿದಿವೆ. ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದರಾದ ಡಿ.ವಿ.ಸದಾನಂದಗೌಡ, ಪಿ.ಸಿ.ಮೋಹನ್, ಶಾಸಕರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಮುಖಂಡರಾದ ಕೆ.ಎಸ್.ಈಶ್ವರಪ್ಪ, ಸಿ.ಟಿ.ರವಿ, ಗೋವಿಂದ ಕಾರಜೋಳ ಪಾಲ್ಗೊಳ್ಳಲಿದ್ದಾರೆ.

|| jai sri gurudev ||
ADICHUNCHANAGIRI UNIVERSITY
(Estd. under Karnataka Act No.18 of 2013)

Adichunchanagiri Institute of Medical Sciences
B.G.Nagara-571448, NH-75, Nagamangala Taluk, Mandya Dist, Karnataka, India.
Ph: 98455 67500, 98458 63779 | Email:aims@acu.edu.in | Web: www.acu.edu.in

ANNOUNCEMENT
FREE POST GRADUATE MEDICAL SEATS WITHOUT TUITION FEES
The Management of Adichunchanagiri Institute of Medical Sciences, B.G. Nagara - 571448, NH-75, Nagamangala Taluk, Mandya Dist, in order to encourage students to join the Pre and Para clinical courses in Medical under all categories at Adichunchanagiri Institute of Medical Sciences, B.G. Nagara announces FREE POST GRADUATE MEDICAL SEATS WITHOUT TUITION FEES allotted during counselling to be conducted by KEA for the Academic Year 2023-24 in below mentioned courses.

COURSES
• MD - Anatomy • MD - Biochemistry • MD - Physiology
• MD - Forensic Medicine • MD - Microbiology
• MD - Pharmacology • MD - Community Medicine

Interested and eligible candidates are requested to apply through KEA Portal within the last date of Admission.
Sd/-
Registrar

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕಲ್ಯಾಣ ಕರ್ನಾಟಕ ಉತ್ಸವ ಮತ್ತು 371(J) ಜಾರಿ ದಶಮಾನೋತ್ಸವ ಸಂಭ್ರಮ

ಕಲ್ಯಾಣ ಕರ್ನಾಟಕದ ಮಹಾಜನತೆಗೆ ಹಾರ್ದಿಕ ಶುಭಾಶಯಗಳು

**‘ಕಲ್ಯಾಣ ಕರ್ನಾಟಕ’ಭಾಗದ ಜನರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಹಾಗೂ ವಿಶೇಷ ಅನುದಾನ ಒದಗಿಸುವ ಸ್ಥಾನಮಾನಕ್ಕಾಗಿ ಒತ್ತಾಯಿಸಿ ನಡೆದ ಹಲವು ದಶಕಗಳ ಹೋರಾಟದ ಫಲವಾಗಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ 371(ಜೆ) ಕಾಯ್ದೆ ಜಾರಿಗೊಳಿಸಿ ಒಂದು ದಶಕವಾಗಿದೆ.**

ಬಸವಣ್ಣನವರ ‘ಅರಿವೇ ಗುರು’ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ‘ಪ್ರಬುದ್ಧ ಭಾರತ’ ತತ್ವದಂತೆ ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು “ಅರಿವು ಕೇಂದ್ರ’ ಗಳಾಗಿ ಮೇಲ್ದರ್ಜೆಗೇರಿಸಲಾಗುತ್ತಿದ್ದು, ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ 939 ಗ್ರಂಥಾಲಯಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಜೊತೆಗೆ ರಾಜ್ಯದ ಎಲ್ಲಾ ಗ್ರಂಥಪಾಲಕರ ಮಾಸಿಕ ವೇತನ ಹೆಚ್ಚಿಸಿ ಕನಿಷ್ಠ ಮೂಲ ವೇತನ ನಿಗದಿಪಡಿಸಲಾಗಿದೆ.

ರಾಜ್ಯದಾದ್ಯಂತ 4,000 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮೀಣ ಭಾಗದ ಕೂಲಿ ಕಾರ್ಮಿಕರ ಮಕ್ಕಳ ಪಾಲನೆಗೆ ‘ಕೂಸಿನ ಮನೆ’ ಶಿಶುಪಾಲನಾ ಕೇಂದ್ರಗಳು ಪ್ರಾರಂಭಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 881 ಕೇಂದ್ರ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 400 ಸಮುದಾಯ ಶೌಚಾಲಯ ಸಂಕೀರ್ಣಗಳ ನಿರ್ಮಾಣಕ್ಕಾಗಿ 100 ಕೋಟಿ ರೂ. ಅನುದಾನ ಮೀಸಲಿರಿಸಲಾಗಿದ್ದು ತಲಾ 25 ಲಕ್ಷ ರೂ. ವೆಚ್ಚದಲ್ಲಿ 7 ಜಿಲ್ಲೆಗಳ 218 ಗ್ರಾಮಗಳಲ್ಲಿ ಸಮುದಾಯ ಶೌಚಾಲಯ ಸಂಕೀರ್ಣ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು

ಕಲ್ಯಾಣ ಕರ್ನಾಟಕ ಭಾಗದ ನಿರುದ್ಯೋಗಿ ಪದವೀಧರರು ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಪಡೆಯಲು ಕಲಬುರಗಿ ನಗರದ ವಾಜಪೇಯಿ ಬಡಾವಣೆಯಲ್ಲಿ ನೈಸ್ (ನಾಗಾವಿ ಇನ್ಸಿಟ್ಯೂಟ್ ಆಫ್ ಕಾಂಪಿಟೇಟಿವ್ ಎಕ್ಸಾಮಿನೇಷನ್) ಕೇಂದ್ರ ಸ್ಥಾಪಿಸಲಾಗುತ್ತಿದೆ. ಪ್ರತಿ ವರ್ಷ ಸುಮಾರು 2000 ಸ್ಪರ್ಧಾರ್ಥಿಗಳಿಗೆ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗುವುದು.

ಗ್ರಾಮೀಣ ನೀರು ಸರಬರಾಜು ಯೋಜನೆಯಡಿ 658 ಕೋಟಿ ರೂ.ಅನುದಾನ ವಿನಿಯೋಗಿಸಿ 2.33 ಲಕ್ಷ ಮನೆಗಳಿಗೆ ನಲ್ಲಿ ನೀರು ಸಂಪರ್ಕ ಕಲ್ಪಿಸಲಾಗಿದೆ.

ನರೇಗಾ ಕಾಮಗಾರಿ ಸ್ಥಳದಲ್ಲಿ ಗ್ರಾಮ ಆರೋಗ್ಯ ಕಾರ್ಯಕ್ರಮದಡಿ ರಾಜ್ಯದ 21 ಲಕ್ಷ ಕೂಲಿಕಾರರ ಆರೋಗ್ಯ ತಪಾಸಣೆ ಮಾಡಲಾಗಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸುಸ್ಥಿರ ಆದಾಯಕ್ಕಾಗಿ 19,800 ರೈತರಿಗೆ 26,507 ಎಕರೆ ತೋಟಗಾರಿಕೆ ಬೆಳೆ ವಿಸ್ತರಣೆಗೆ ರೂ 1,201 ಕೋಟಿ ನೆರವು ನೀಡಲಾಗಿದೆ.

• ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ನುಡಿದಂತೆ ನಡೆವ ನಿಮ್ಮ ಸರ್ಕಾರ ಬದ್ಧವಾಗಿದೆ •

“ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ರಕ್ಷಿಸುವುದು ಮತ್ತು ಗೌರವಿಸುವುದು” - ಇದು ನಮ್ಮ ದೇಶದ ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯ. ಸಂವಿಧಾನದಲ್ಲಿ ಇದನ್ನು ಪ್ರತಿಪಾದಿಸಲಾಗಿದೆ.
ಪ್ರಕಟಣೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

### ಬಹುಮಾದರಿ ಸಾರಿಗೆಗೆ ಹತ್ತಿರವಾಗಿ ಬಿಎಸ್‌ಆರ್‌ಪಿ ನಿಲ್ದಾಣ ನಿರ್ಮಿಸಲು ನಿರ್ಧಾರ

# ಉಪನಗರ ರೈಲು ನಿಲ್ದಾಣಗಳ ಸ್ಥಳ ಬದಲು

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಬಹುಮಾದರಿ ಸಾರಿಗೆಗೆ ಉಪನಗರ ರೈಲು ನಿಲ್ದಾಣಗಳು ಹತ್ತಿರ ಇರಬೇಕು ಎಂಬ ಕಾರಣಕ್ಕೆ ಮೂಲ ನಕ್ಷೆ ಬದಲಾಯಿಸಿ ಕೆಲವು ನಿಲ್ದಾಣಗಳನ್ನು ಬೇರೆಡೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಬಳಿ ನಿರ್ಮಿಸಬೇಕಿದ್ದ ಬಿಎಸ್‌ಆರ್‌ಪಿ ನಿಲ್ದಾಣವೂ ಈ ಬದಲಾವಣೆ ಯೋಜನೆಯಲ್ಲಿದೆ.

ಬೆಂಗಳೂರು ಉಪನಗರ ರೈಲ್ವೆ ಯೋಜನೆಯು (ಬಿಎಸ್‌ಆರ್‌ಪಿ) ರೈಲ್ವೆ ಇಲಾಖೆ ಮಂಜೂರು ಮಾಡಿರುವ ದೇಶದ ಮೊದಲ ಉಪನಗರ ಯೋಜನೆ.

ಇದನ್ನು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆ-ರೈಡ್) ಜಾರಿಗೆ ತರುತ್ತಿದೆ. ಬೈಯಪ್ಪನಹಳ್ಳಿ-ಚಿಕ್ಕಬಾಣಾವರ ಕಾಮಗಾರಿಯನ್ನು (ಕಾರಿಡಾರ್-2) ಎಲ್ ಆ್ಯಂಡ್ ಟಿ ಸಂಸ್ಥೆಯು ನಡೆಸುತ್ತಿದೆ.

ಬೆನ್ನಿಗಾನಹಳ್ಳಿ, ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕನಗರ, ಹೆಬ್ಬಾಳ, ಮತ್ತಿಕೆರೆ, ಯಶವಂತಪುರ, ಶೆಟ್ಟಿಹಳ್ಳಿ, ಮೈದರಹಳ್ಳಿ, ಚಿಕ್ಕಬಾಣಾವರ ಸೇರಿ ಒಟ್ಟು 12 ನಿಲ್ದಾಣಗಳ ವಿನ್ಯಾಸ ಅಂತಿಮಗೊಂಡಿದೆ.

ಎರಡು ಎತ್ತರಿಸಿದ ನಿಲ್ದಾಣಗಳು, ಎರಡು ಎತ್ತರಿಸಿದ ಅಂತರ್ ಬದಲಾವಣೆಯ ನಿಲ್ದಾಣಗಳು, ಎಂಟು ನೆಲಸ್ತರದ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಯಶವಂತಪುರ ನಿಲ್ದಾಣವು ಆರ್‌ಟಿಒ ರಸ್ತೆ ಕಡೆಗೆ ನಿರ್ಮಾಣವಾಗಬೇಕಿತ್ತು. ಮೆಟ್ರೊ ನಿಲ್ದಾಣ ಮತ್ತು ನೈರುತ್ಯ ರೈಲ್ವೆ ನಿಲ್ದಾಣಕ್ಕೆ ಹತ್ತಿರವಾಗಲಿ ಎಂಬ ಕಾರಣಕ್ಕೆ ಹೆದ್ದಾರಿ ಬಳಿ ನಿಲ್ದಾಣ ನಿರ್ಮಾಣಗೊಳ್ಳಲಿದೆ. ಹೆಬ್ಬಾಳದಲ್ಲಿ ರೈಲು ನಿಲ್ದಾಣವು ಬಸ್ ನಿಲ್ದಾಣಕ್ಕಿಂತ ದೂರದಲ್ಲಿದೆ. ಅಲ್ಲೇ ಉಪನಗರ ರೈಲು ನಿಲ್ದಾಣವನ್ನೂ ನಿರ್ಮಿಸುವುದು ಮೂಲ ಯೋಜನೆಯಾಗಿತ್ತು. ಈಗ ಅದನ್ನು ಬದಲಾಯಿಸಿ ಬಸ್ ನಿಲ್ದಾಣಕ್ಕೆ ಸಮೀಪವಾಗುವಂತೆ ನಿರ್ಮಿಸಲು ಉದ್ದೇಶಿಸಲಾಗಿದೆ. ಚಿಕ್ಕಬಾಣಾವರದಲ್ಲಿ ನಿಲ್ದಾಣವನ್ನು ರಸ್ತೆಯ ಇನ್ನೊಂದು ಬದಿಗೆ ಸ್ಥಳಾಂತರಿಸಿ ನಿರ್ಮಿಸಲಾಗುತ್ತಿದೆ.

'ಬಿಎಂಟಿಸಿ, ಮೆಟ್ರೊ, ನೈರುತ್ಯ ರೈಲ್ವೆ, ವಿಮಾನ ನಿಲ್ದಾಣ ಹೀಗೆ ಇತರ ಸಾರಿಗೆಗಳಿಗೆ ಉಪನಗರ ರೈಲು ಪೂರಕವಾಗಿ ಇರಬೇಕು. ಮಲ್ಟಿ ಮೋಡೆಲ್ ಟ್ರಾನ್ಸಿಟ್ (ಬಹು ಮಾದರಿ ಸಾರಿಗೆ) ಎಂದು ಈ ವ್ಯವಸ್ಥೆಯನ್ನು ಕರೆಯಲಾಗುತ್ತದೆ. ನೀಲನಕ್ಷೆ ಆರಂಭದಲ್ಲಿ ತಯಾರಿಸಲಾಗುತ್ತದೆ. ಬಳಿಕ ಸಾಧಕ ಬಾಧಕ ನೋಡಿ ಕೆಲವು ಕಡೆ ಬದಲಾವಣೆ ಮಾಡಲು, ಪರಿಷ್ಕರಿಸಲು ಅವಕಾಶ ಇರುತ್ತದೆ. ಅದರಂತೆ ಕೆಲವು ನಿಲ್ದಾಣಗಳ ಸ್ಥಳಗಳನ್ನು ಬದಲಾಯಿಸಲಾಗಿದೆ' ಎಂದು ಕೆ-ರೈಡ್ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

**ಯಲಹಂಕದಲ್ಲೂ ಬದಲಾವಣೆ:** ಕಾರಿಡಾರ್-1 ಮತ್ತು 4 ಸಂಪರ್ಕಿಸುವ ಮಾರ್ಗದಲ್ಲಿ ಯಲಹಂಕ ನಿಲ್ದಾಣವನ್ನು ಕೂಡ ಬಸ್ ನಿಲ್ದಾಣ ಬಳಿಗೆ ಬದಲಾಯಿಸಲು ನಿರ್ಧರಿಸಲಾಗಿದೆ

ಪ್ರಜಾವಾಣಿ ವಿಶೇಷ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನೈರುತ್ಯ ರೈಲು ನಿಲ್ದಾಣದ ಬಳಿ ನಿರ್ಮಾಣವಾಗಬೇಕಿದ್ದ ಉಪನಗರ ರೈಲು ನಿಲ್ದಾಣವನ್ನು ಬಸ್‌ನಿಲ್ದಾಣ, ಮೆಟ್ರೊ ನಿಲ್ದಾಣಕ್ಕೆ ಸಮೀಪವಾಗುವಂತೆ ಯೋಜನೆ ಬದಲಿಸಲಾಗಿದೆ

1. ಬಿಎಸ್‌ಆರ್‌ಪಿ ನಿಲ್ದಾಣಕ್ಕೆ ಮೊದಲು ಯೋಜಿಸಿದ್ದ ಸ್ಥಳ
2. ಕೆಎಸ್‌ಆರ್ ಬೆಂಗಳೂರು ನಗರ ರೈಲು ನಿಲ್ದಾಣ
3. ಬಿಎಸ್‌ಆರ್‌ಪಿ ನಿಲ್ದಾಣಕ್ಕೆ ನಿರ್ಧರಿಸಿರುವ ಸ್ಥಳ
4. ಮೆಟ್ರೊ ರೈಲು ನಿಲ್ದಾಣ
5. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ
6. ಬಿಎಂಟಿಸಿ ಬಸ್ ನಿಲ್ದಾಣ

## 'ಉತ್ತಮ ಬೆಳವಣಿಗೆ'

'ಬೆಂಗಳೂರು ಉಪನಗರ ರೈಲು ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಉಪಯೋಗ ವಾಗುವಂತೆ ಕೆ-ರೈಡ್ ಕೆಲ ಬದಲಾವಣೆ ಮಾಡಿರುವುದು ಉತ್ತಮ ಬೆಳವಣಿಗೆ. ಒಂದು ಸಾರಿಗೆ ಮತ್ತು ಇನ್ನೊಂದು ಸಾರಿಗೆ ವ್ಯವಸ್ಥೆಗಳು ಒಂದಕ್ಕೊಂದು ಪೂರಕವಾಗಿ ಇದ್ದಾಗ ನಗರಕ್ಕೂ ಪ್ರಯಾಣಿಕರಿಗೂ ಉಪಯೋಗವಾಗುತ್ತದೆ. ಮೆಟ್ರೊ ನಿಲ್ದಾಣ ಗಳನ್ನು ಮಾಡುವಾಗ ಕೂಡ ಇದೇ ನಿಯಮ ಅಳವಡಿಸಿಕೊಳ್ಳಬೇಕಿತ್ತು. ಆದರೆ ಅವರು ಬಹಳ ಕಡೆಗಳಲ್ಲಿ ಬಸ್ ನಿಲ್ದಾಣಕ್ಕಿಂತ ಒಂದು ಕಿಲೋಮೀಟರ್‌ನಷ್ಟು ದೂರದಲ್ಲಿ ನಿಲ್ದಾಣ ಮಾಡಿದ್ದಾರೆ. ಬಿಎಸ್‌ಆರ್‌ಪಿ ಆ ರೀತಿ ಆಗದಂತೆ ಈಗ ಯೋಜನೆ ರೂಪಿಸಿರುವುದು ಒಳ್ಳೆಯ ನಿರ್ಧಾರ' ಎಂದು ಸಿಟಿಜನ್ಸ್ ಫಾರ್ ಸಿಟಿಜನ್ ಸಂಸ್ಥಾಪಕ ರಾಜಕುಮಾರ್ ದುಗರ್ ಪ್ರತಿಕ್ರಿಯಿಸಿದರು.

ರಾಜಕುಮಾರ್ ದುಗರ್

## ಮೆಜೆಸ್ಟಿಕ್‌ನಲ್ಲಿ ಬದಲಾವಣೆ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಬಳಿ ಉಪನಗರ ರೈಲು ಯೋಜನೆಯ ಕಾರಿಡಾರ್-1 (ಬೆಂಗಳೂರು ನಗರ-ದೇವನಹಳ್ಳಿ) ಮತ್ತು ಕಾರಿಡಾರ್-3 (ಕೆಂಗೇರಿ-ವೈಟ್‌ಫೀಲ್ಡ್) ಮಾರ್ಗಗಳು ಸಂಪರ್ಕಿಸುತ್ತವೆ. ಕೆಎಸ್‌ಆರ್ ರೈಲು ನಿಲ್ದಾಣದ ಬಳಿಯೇ ಉಪನಗರ ರೈಲು ನಿಲ್ದಾಣವೂ ನಿರ್ಮಾಣವಾಗಬೇಕಿತ್ತು. ಆದರೆ, ಮೆಟ್ರೊ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಪ್ರಯಾಣಿಕರಿಗೂ ಹತ್ತಿರವಾಗಬೇಕು ಎಂಬ ಕಾರಣಕ್ಕೆ ಮೆಟ್ರೊ ಮತ್ತು ಬಸ್ ನಿಲ್ದಾಣಗಳ ನಡುವೆ ಉಪನಗರ ರೈಲು ನಿಲ್ದಾಣ ನಿರ್ಮಿಸಲು ಯೋಜನೆ ತಯಾರಾಗುತ್ತಿದೆ ಎಂದು ಬಿಎಸ್‌ಆರ್‌ಪಿ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಅರುಣ್ ಕುಮಾರ್ ಆರ್. ಮತ್ತು ಎಂ.ಎಸ್. ಲಕ್ಷ್ಮೀಕಾರಂತ್ ಅವರಿಗೆ ರಂಗಗೌರವ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ವತ್ಸಲಾ ಮೋಹನ್, ಲೇಖಕಿ ಲತಾ ಶ್ರೀನಿವಾಸ್, ಟಿಟಿಡಿ ನಿರ್ದೇಶಕಿ ವಸಂತ ಕವಿತಾ, ಲೇಖಕಿಯರಾದ ಲಲಿತಾ ಶೇಷಾದ್ರಿ, ವಿಜಯಾ ಮತ್ತು ಕಮಲಾ ಹಂಪನಾ ಇದ್ದಾರೆ – ಪ್ರಜಾವಾಣಿ ಚಿತ್ರ

### ಸಾಹಿತಿ ಕಮಲಾ ಹಂಪನಾ ಅಭಿಮತ

# ಸಂಸ್ಕೃತಿ ಬೆಳವಣಿಗೆಗೆ ಕಲೆ ಅಗತ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವಿಜ್ಞಾನದ ಯುಗದಲ್ಲಿ ಕಲೆ, ಸಾಹಿತ್ಯ ಏಕೆ ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ. ಆದರೆ, ನಮ್ಮ ಸಂಸ್ಕೃತಿ ಬೆಳವಣಿಗೆ ಹೊಂದಬೇಕಾದರೆ ಇವು ಅತ್ಯಗತ್ಯ' ಎಂದು ಸಾಹಿತಿ ಕಮಲಾ ಹಂಪನಾ ಹೇಳಿದರು.

ರಂಗಚಂದಿರ ಮತ್ತು ಥಿಯೇಟರ್ ಥೆರಪಿ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ಬೇಲೂರು ರಘುನಂದನ್ ಅವರ ಏಕವ್ಯಕ್ತಿ ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದರು.

'ಹೂವಿನ ಮಾಲೆ ದೇವರ ಅಡಿಗೆ ಅಥವಾ ಹೆಣ್ಣಿನ ಮುಡಿಗೆ ಸೇರಬೇಕು. ಇಲ್ಲವಾದರೆ ಅದು ಬಾಡಿ, ವ್ಯರ್ಥವಾಗುತ್ತದೆ. ಅದೇ ರೀತಿ, ಕಲೆಯು ನಿಗದಿತ ಪ್ರೇಕ್ಷಕರನ್ನು ತಲುಪಬೇಕು. ಇತ್ತೀಚಿನ ದಿನಗಳಲ್ಲಿ ನಾಟಕಗಳಿಗೆ ಪ್ರೇಕ್ಷಕರು ನಿರೀಕ್ಷಿತ ಸಂಖ್ಯೆಯಲ್ಲಿ ಬರುತ್ತಿಲ್ಲ. ಇಂತಹ ಸಂದರ್ಭದಲ್ಲಿ ನಾಟಕೋತ್ಸವ ಆಯೋಜಿಸುವುದು ದೊಡ್ಡ ಸಾಹಸದ ಕೆಲಸ. ರಘುನಂದನ್ ಅವರು ವರ್ತಮಾನದ ಅಗತ್ಯಗಳಿಗೆ ಪೂರಕವಾಗಿ ಹೊಸ ಬಗೆಯ ನಾಟಕಗಳನ್ನು ನೀಡುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೇಖಕಿ ವಿಜಯಾ ಮಾತನಾಡಿ, 'ಲಿಂಗತ್ವ ಅಲ್ಪಸಂಖ್ಯಾತರಾಗಿದ್ದ ಮಂಜಮ್ಮ ಜೋಗತಿ ಅವರು ಕಟ್ಟುಪಾಡುಗಳನ್ನು ದಾಟಿ, ರಂಗಭೂಮಿ ಮೂಲಕ ತಮ್ಮ ಜೀವನ ಕಟ್ಟಿಕೊಂಡರು. ಯಾವುದು ನಮ್ಮ ಮೇಲೆ ಹೇರಲ್ಪಡುತ್ತದೆಯೋ ಅದನ್ನು ಕಿತ್ತು ಹಾಕಬೇಕು. ಕಟ್ಟುಪಾಡುಗಳನ್ನು ದಾಟಿ ಹೊರಗಡೆ ಬರುವುದೇ ಬಿಡುಗಡೆ. ರಘುನಂದನ್ ಅವರ ನಾಟಕದಲ್ಲಿ ಇಂತಹ ಸೂಕ್ಷ್ಮಗಳನ್ನು ನೋಡಬಹುದು' ಎಂದು ತಿಳಿಸಿದರು.

ಕಲಾವಿದರಾದ ಎಂ.ಎಸ್. ಲಕ್ಷ್ಮೀಕಾರಂತ್ ಹಾಗೂ ಅರುಣ್ ಕುಮಾರ್ ಆರ್. ಅವರಿಗೆ ರಂಗಗೌರವ ಪ್ರದಾನ ಮಾಡಲಾಯಿತು.

ಬೇಲೂರು ರಘುನಂದನ್ ನಿರ್ದೇಶನದ 'ಅಧಿ ನಾಯಕಿ' ಹಾಗೂ 'ಮಾತಾ' ಏಕವ್ಯಕ್ತಿ ರಂಗಪ್ರಯೋಗ ಪ್ರದರ್ಶನ ಕಂಡಿತು.

## ರಾಜಕಾಲುವೆ ಒತ್ತುವರಿ: ದೂರು ಸಲ್ಲಿಕೆಗೆ ಅವಕಾಶ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ಮಾಹಿತಿಯನ್ನು ಸೆ.20ರೊಳಗೆ ಒದಗಿಸಲು ಪಾಲಿಕೆ ನಾಗರಿಕರಿಗೆ ಅವಕಾಶ ನೀಡಿದೆ.

ಹೈಕೋರ್ಟ್ ಸೂಚನೆಯಂತೆ ಬೃಹತ್ ನೀರುಗಾಲುವೆಗಳ (ರಾಜಕಾಲುವೆ) ಒತ್ತುವರಿ ಗುರುತಿಸಲು ಬಿಬಿಎಂಪಿ ಕ್ರಮ ಕೈಗೊಳ್ಳುತ್ತಿದೆ. 9 ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಜವಾಬ್ದಾರಿ ವಹಿಸಿದ್ದು, ಸಾರ್ವಜನಿಕರೂ ಒತ್ತುವರಿಗಳ ಬಗ್ಗೆ ಮಾಹಿತಿ ನೀಡಬಹುದು ಎಂದು ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಕೂಡ ಆಗಿರುವ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳಿದ್ದಾರೆ.

ಪ್ರಾಥಮಿಕ ಮತ್ತು ದ್ವಿತೀಯ ಹಂತಗಳ ರಾಜಕಾಲುವೆಗಳಲ್ಲಿ ಒತ್ತುವರಿಗಳನ್ನು/ ಅತಿಕ್ರಮಣಗಳನ್ನು ಗುರುತಿಸಲು ಸಾರ್ವಜನಿಕರು ಕೈ ಜೋಡಿಸಿದಲ್ಲಿ ಹೆಚ್ಚಿನ ಒತ್ತುವರಿಗಳನ್ನು ಗುರುತಿಸುವಲ್ಲಿ ಸಹಕಾರಿಯಾಗುತ್ತದೆ.

ಇವುಗಳನ್ನು ತೆರವು ಮಾಡುವುದರಿಂದ ಮಳೆನೀರು ಸರಾಗವಾಗಿ ಹರಿದು ಪ್ರವಾಹ ಹಾನಿ ತಡೆಗಟ್ಟಬಹುದಾಗಿದೆ. ಆದ್ದರಿಂದ, ಸೆ.20ರ ಮಧ್ಯಾಹ್ನ 2ರವರೆಗೆ ಮಾಹಿತಿಯನ್ನು ಆಯಾ ಭಾಗದ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಕಳುಹಿಸಬಹುದು. ವಿಧಾನಸಭೆ ಕ್ಷೇತ್ರವಾರು ಕಾರ್ಯಪಾಲಕರ ಪಟ್ಟಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

**ದೂರು ಸಲ್ಲಿಸುವುದು ಯಾರಿಗೆ?**

ಕಾರ್ಯಪಾಲಕ ಎಂಜಿನಿಯರ್‌ಗಳು

| ವಲಯ | ವಿಧಾನಸಭಾ ಕ್ಷೇತ್ರ | ಇ-ಮೇಲ್ | ಮೊಬೈಲ್ |
|---|---|---|---|
| ಪೂರ್ವ | ಶಿವಾಜಿನಗರ, ಶಾಂತಿನಗರ, ಪುಲಕೇಶಿನಗರ, ಸರ್ವಜ್ಞನಗರ, ಹೆಬ್ಬಾಳ ಮತ್ತು ಸಿ.ವಿ. ರಾಮನ್‌ನಗರ | eeswdeast@gmail.com | 9480683667 |
| ಪಶ್ಚಿಮ | ರಾಜಾಜಿನಗರ, ಚಾಮರಾಜಪೇಟೆ, ಗೋವಿಂದರಾಜನಗರ, ಮಹಾಲಕ್ಷ್ಮೀ ಲೇಔಟ್, ಗಾಂಧಿನಗರ ಮತ್ತು ಮಲ್ಲೇಶ್ವರ | eewestzone@gmail.com | 9480685443 |
| ದಕ್ಷಿಣ | ವಿಜಯನಗರ, ಪದ್ಮನಾಭನಗರ ಮತ್ತು ಬಸವನಗುಡಿ | eeswdsouth2019@gmail.com | 9964843326 |
| ಕೋರಮಂಗಲ ಕಣಿವೆ | ಬಿಟಿಎಂ ಲೇಔಟ್, ಜಯನಗರ ಮತ್ತು ಚಿಕ್ಕಪೇಟೆ | eeswdkvp@gmail.com | 9342019909 |
| ಯಲಹಂಕ | ಬ್ಯಾಟರಾಯನಪುರ ಮತ್ತು ಯಲಹಂಕ | eeswdyelahanka@gmail.com | 8892939394 |
| ಮಹದೇವಪುರ | ಕೆ.ಆರ್.ಪುರಂ ಮತ್ತು ಮಹದೇವಪುರ | eeswdmdp@gmail.com | 9480683015 |
| ಬೊಮ್ಮನಹಳ್ಳಿ | ಬೆಂಗಳೂರು ದಕ್ಷಿಣ ಮತ್ತು ಬೊಮ್ಮನಹಳ್ಳಿ | eeswdbhbbmp2017@gmail.com | 9844254135 |
| ರಾಜರಾಜೇಶ್ವರಿ ನಗರ | ಯಶವಂತಪುರ ಮತ್ತು ರಾಜರಾಜೇಶ್ವರಿನಗರ | swdrrnagara2018@gmail.com | 9448303753 |
| ದಾಸರಹಳ್ಳಿ | ದಾಸರಹಳ್ಳಿ | eeswddhzbbmp@gmail.com | 9036888707 |

## 'ಭಾರತ ಜೋಡೊ –2 ಪರಿಗಣನೆಯಲ್ಲಿದೆ'

**ಹೈದರಾಬಾದ್ (ಪಿಟಿಐ):** ಭಾರತ್ ಜೋಡೋ ಯಾತ್ರೆ –2 ಪರಿಗಣನೆಯಲ್ಲಿದೆ ಎಂದು ಕಾಂಗ್ರೆಸ್ ಶನಿವಾರ ಹೇಳಿದೆ.

ದೇಶದ ಪೂರ್ವ ಭಾಗದಿಂದ ಪಶ್ಚಿಮಕ್ಕೆ ಜಾಥಾ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ)ಯ ಕೆಲ ಸದಸ್ಯರು ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಸಿಡಬ್ಲ್ಯುಸಿ ಮೊದಲ ಸಭೆಯ ಬಳಿಕ ಮಾತನಾಡಿದ ಸಮಿತಿ ಸದಸ್ಯ ಪಿ ಚಿದಂಬರಂ, 'ಭಾರತ್ ಜೋಡೋ ಯಾತ್ರೆ 2 ಆಯೋಜಿಸಲು ಸಮಿತಿಯ ಕೆಲ ಸದಸ್ಯರು ವಿನಂತಿಸಿದ್ದಾರೆ. ಆ ವಿಷಯವು ಪರಿಗಣನೆಯಲ್ಲಿದೆ' ಎಂದಷ್ಟೇ ಹೇಳಿದರು.

'ಬಯಲು ಬಳಗ' ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಅವರು 'ಪ್ರೇಮಬಿಕ್ಕು ಮತ್ತು ಬಾಪು ಬಟ್ಟೆ' ಕವನ ಸಂಕಲನ, 'ಓದಿನ ಒಕ್ಕಲು' ವಿಮರ್ಶಾ ಲೇಖನಗಳ ಸಂಕಲನ ಬಿಡುಗಡೆ ಮಾಡಿದರು. ಕನ್ನಡ ಪ್ರಾಧ್ಯಾಪಕ ರವಿಕುಮಾರ್ ಬಾಗಿ, ಕೃತಿಕಾರ ರಂಗನಾಥ ಕಂಟನಕುಂಟೆ, ಲೇಖಕ ಕಾ.ತ. ಚಿಕ್ಕಣ್ಣ, ವಿಮರ್ಶಕರಾದ ದೇವರಾಜು ಡಿ.ಆರ್. ಮತ್ತು ಗಂಗರಾಜು ಜೆ. ಇದ್ದರು ಪ್ರಜಾವಾಣಿ ಚಿತ್ರ

## 'ದ್ವಿಜ – ಶೂದ್ರ ಧರ್ಮ ರೂಪಿಸುವುದೊಳಿತು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸನಾತನ ಧರ್ಮದ ಬಗ್ಗೆ ಚರ್ಚೆಯಾಗುತ್ತಿದೆ. ಸನಾತನ ಧರ್ಮದ ಅವಾಂತರಗಳು ವ್ಯಾಪಕ ಮತ್ತು ನಿರಂತರವಾಗಿದೆ. ಹಾಗಾಗಿ ಇಂದು ದ್ವಿಜ ಧರ್ಮ ಮತ್ತು ಶೂದ್ರ ಧರ್ಮ ಎಂದು ಎರಡು ಪ್ರತ್ಯೇಕ ಧರ್ಮಗಳನ್ನು ರೂಪಿಸುವುದು ಒಳಿತು' ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ರಂಗನಾಥ ಕಂಟನಕುಂಟೆ ಅವರ 'ಪ್ರೇಮಬಿಕ್ಕು ಮತ್ತು ಬಾಪು ಬಟ್ಟೆ' ಕವನ ಸಂಕಲನ, 'ಓದಿನ ಒಕ್ಕಲು' ವಿಮರ್ಶಾ ಲೇಖನಗಳ ಸಂಕಲನ ಬಿಡುಗಡೆ ಮಾಡಿ ಮಾತನಾಡಿದರು.

ಇಂದು ಧರ್ಮದ ಚರ್ಚೆಗಳು ದಿಕ್ಕು ತಪ್ಪಿವೆ. ಒಮ್ಮೊಮ್ಮೆ ಏನು ಮಾತನಾಡಬೇಕು ಎಂಬುದೇ ಅರ್ಥವಾಗುತ್ತಿಲ್ಲ ಎಂದು ತಿಳಿಸಿದರು.

ಲೇಖಕ ಕಾ.ತ. ಚಿಕ್ಕಣ್ಣ ಅಧ್ಯಕ್ಷತೆ ವಹಿಸಿದ್ದರು. ವಿಮರ್ಶಕರಾದ ಗಂಗರಾಜು ಜೆ. ಮತ್ತು ದೇವರಾಜು ಡಿ.ಆರ್. ಕೃತಿಗಳನ್ನು ಪರಿಚಯಿಸಿದರು. ಲೇಖಕ ರಂಗನಾಥ ಕಂಟನಕುಂಟೆ, ಪ್ರಾಧ್ಯಾಪಕ ರವಿಕುಮಾರ್ ಬಾಗಿ ಇದ್ದರು.

## 'ರಾಜಣ್ಣ ಕೇಳುವುದರಲ್ಲಿ ತಪ್ಪೇನೂ ಇಲ್ಲ'

**ಬೆಂಗಳೂರು:** 'ಇನ್ನೂ ಕೆಲವರನ್ನು ಉಪ ಮುಖ್ಯಮಂತ್ರಿ ಮಾಡಬೇಕೆಂಬ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಉದ್ದೇಶ ಒಳ್ಳೆಯದು. ಆದರೆ, ಅದನ್ನು ಮಾಡುವುದು, ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ರಾಜಣ್ಣ ಹೇಳಿಕೆಯನ್ನು ಸಮರ್ಥಿಸಿ ಮಾತನಾಡಿದ ಅವರು, 'ರಾಜಣ್ಣ ಕೇಳುವುದರಲ್ಲಿ ತಪ್ಪೇನೂ ಇಲ್ಲ. ಮುಖ್ಯಮಂತ್ರಿ ಹಾಗೂ ಹೈಕಮಾಂಡ್‌ಗೂ ಈ ಬಗ್ಗೆ ಅವರೇ ತಿಳಿಸಬೇಕು. ಅದು ಅವರ ವೈಯಕ್ತಿಕ ಅಭಿಪ್ರಾಯವಾಗಿದ್ದರೂ ಉದ್ದೇಶ ಒಳ್ಳೆಯದಿದೆ' ಎಂದರು.

'ಲೋಕಸಭೆ ಚುನಾವಣೆಗೆ ಮೊದಲು ಎಲ್ಲ ಸಮುದಾಯಗಳಿಗೂ ಅವಕಾಶ ನೀಡುವಂತೆ ಕೇಳಿದ್ದಾರೆ. ಆದರೆ, ಈ ಬಗ್ಗೆ ತೀರ್ಮಾನ ಮಾಡುವವರು, ಬಿಡುವವರು ಎಐಸಿಸಿ ನಾಯಕರು. ಹೈಕಮಾಂಡ್ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ' ಎಂದರು.

ಚೈತ್ರಾ ಕುಂದಾಪುರ ಸೇರಿ ಹಲವರ ಬಂಧನವಾಗಿರುವ ಬಗ್ಗೆ ಪ್ರತಿಕ್ರಿಯಿಸಿರುವ ಪರಮೇಶ್ವರ, ' ಅವರೇ ಹಣ ತೆಗೆದುಕೊಂಡಿದ್ದಾರಾ? ಬೇರೆಯವರಿಗೆ ಕೊಟ್ಟಿದ್ದರಾ? ಎಂಬುದು ತನಿಖೆಯ ಬಳಿಕ ಬಯಲಾಗಲಿದೆ' ಎಂದರು.

**ನೈಋತ್ಯ ರೈಲ್ವೆ**

ಇ-ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/ಇಪಿಸಿ/100 ದಿನಾಂಕ : 26-10-2022 ಗೆ ತಿದ್ದುಪಡಿ – 6

| ಕೆಲಸದ ಹೆಸರು | ಅಂದಾಜು ಮೌಲ್ಯ |
|---|---|
| ಮಲುಗೂರು (ಚೈ : 0.000) ನಿಂದ ಪಾಲಸಮುದ್ರಂ (ಚೈ : 17180.000) ನಡುವೆ ಸಿಗ್ನಲಿಂಗ್ ಟೆಲಿಕಮ್ಯುನಿಕೇಶನ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ವಿದ್ಯುದೀಕೃತ ಹೊಸ ಬ್ರಾಡ್ ಗೇಜ್ ಮಾರ್ಗ ಟ್ರ್ಯಾಕ್‌ನ ನಿರ್ಮಾಣ (17.18 ಕಿ.ಮೀ) (ಟೆಂಡರ್ ಉಲ್ಲೇಖ ಸಂ. ಎಂಎಲ್‌ಯು-ಪಾಲಸಮುದ್ರಂ-ಇಪಿಸಿ-01) | ರೂ. 232,05,30,000/- |

ಬಿಡ್ ಮುಕ್ತಾಯದ ದಿನಾಂಕ

| ಹಾಲಿ ಇರುವ ದಿನಾಂಕ | ಪರಿಷ್ಕೃತ ದಿನಾಂಕ |
|---|---|
| 04-10-2023 (15:00 ಗಂಟೆಗೆ) | 25-10-2023 (15:00 ಗಂಟೆಗೆ) |

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/374/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

S.W.Railways SWRRLY SWRRLY

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**BUILDERS ESSENTIAL**

**Water Proofing**

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

**Building Contractors**

**KANTHI CONSTRUCTION** We Construct your Dream House. Premium Quality, Reasonable Price, Timely Completion: 9880785589/ 9066487178

**JOB OPPORTUNITIES**

**Teachers/ Professors**

**URGENTLY REQUIRED:** Female Teachers in WISOM INTERNATIONAL SCHOOL, Shantinagar, Near TV-9 office for English & Computer Subjects. Walk-in interview-9243104680

**WANTED SPECIAL** Educators to work in special children school. Contact -9036037737

**Multiple Vacancy**

**REQUIRED: ENGLISH** Speaking Ladies with Excel Knowledgeand DATA ENTRY OPERATORS at Banaswadi: 9845134371, 7022538710

**Accounts & Finance**

**EXCELSIOR TRAVELS** PRIVATE LIMITED, an IATA approved Travel agency needs ACCOUNTS ASSISTANT with experience of one year in Travel Agency or related field. Salary commensurate with qualification and experience. Please send in your Bio-Data to: xlsioraccounts@hotmail.com or Excelsior Travels Private Limited, 23/2, Hare Krishna Road, near Shivananda Stores, Bangalore- 560001. Tel: 080 22263617/ 22281817.

**General**

**WANTED HELPERS** Lady/ Gents, SSLC, PUC, Diploma, English Typing,Stereo Art Line, Rajajinagar, Bangalore. 9845149431.

**BHUMIKA BUILDERS** requires experienced OFFICE Asst. cum CAR DRIVER immediately Call : 9480316868

**SAFEGUARD SYSTEMS:** ADMIN MANAGER, OFFICE EXECUTIVES, MARKETING EXECUTIVES, Preferably Graduates Computer Knowledge, Communication Skills. 9343544350 9341220862 safeguard_systems@yahoo.com

**Hospital & Medical Jobs**

**A DOCTOR** With MBBS Wanted Immediately For Private Practice, For More Details Please Contact: 9972280981.

**Marketing & Sales**

WANTED FOR GOLD SHOWROOM
MANAGER (M)
SALES EXECUTIVE
OFFICE BOY
Exp.:in GOLD RETAIL SHOWROOM
Salary:15,000 to 21,000
Location : Hubli, Koppal, Mudhol, Bijapur
vinodskgp@gmail.com
9019659780

**MARKETING EXECUTIVES** for CHEMICALS BUSINESS DEVELOPMENT With 5-10Years Experience For South India Market In Bangalore. Apply aabharasayan@gmail.com

**REQUIRED SALES** EXECUTIVE for reputed electric vehicle showroom in Jayanagar. Attractive salary, incentive and TA/ DA. Call 9164705777.

**PUBLIC NOTICE**

**ಸಾರ್ವಜನಿಕ ನೋಟೀಸ್**

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., (ನೊಂ. ಜೆ.ಆರ್.ಬಿ.ಎಂಡಿ: 14:2009-2010) ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು- 560094. ಫೋ.ನಂ. 080-2351 1414 / 2341 1416

58ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆ

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯ 2022-23ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ 23-09-2023ರ ಶನಿವಾರ ಮಧ್ಯಾಹ್ನ 2-00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರ ಅಧ್ಯಕ್ಷತೆಯಲ್ಲಿ, ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಪೋಸ್ಟ್ ಆಫೀಸ್ ರಸ್ತೆ, ಸಂಜಯನಗರ, ಬೆಂಗಳೂರು- 560094 ಈ ಆವರಣದಲ್ಲಿ ನಡೆಸಲಾಗುವುದೆಂದು ಸಂಘದ ಸದಸ್ಯರೆಲ್ಲರಿಗೂ ಈಗಾಗಲೇ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಿದೆ, ಆಹ್ವಾನ ಪತ್ರ ತಲುಪದೇ ಇದ್ದ ಪಕ್ಷದಲ್ಲಿ ಇದೇ ಆಹ್ವಾನ ಪತ್ರ ಎಂದು ಸದಸ್ಯರು ತಿಳಿದು, ವಾರ್ಷಿಕ ಮಹಾ ಸಭೆಗೆ ಹಾಜರಾಗಲು ಕೋರಲಾಗಿದೆ. ಸಂಘದ ಉಪನಿಯಮದ ಸಂಖ್ಯೆ 7(6)ರ ಪ್ರಕಾರ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರು ಮಹಾ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ ಸಹಿ/- (ಮಹೇಶ್. ಎಂ.ಎನ್) ಕಾರ್ಯದರ್ಶಿ ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್. ಬೆಂಗಳೂರು- 560 094.
ಸ್ಥಳ: ಬೆಂಗಳೂರು
ದಿನಾಂಕ: 16-09-2023

**PUBLIC NOTICE**
To Place your Classified Ads Contact 9731810277

**THE TOWN CO-OPERATIVE BANK LTD., HOSKOTE**
Sahakara Bhavana, K.R.Road, Hoskote-562114, Bangalore Rural District
**110TH ANNUAL GENERAL BODY MEETING NOTICE**
The 110th Annual General Body Meeting for the year 2022-23 is convened to be held on 23.09.2023, Saturday at 10.45 a.m at "HJSS Convention Hall, Near Sree Avimukteshwara swamy Temple, Kote, Sulibele Road, Hoskote under the Chairmanship of Shri A.Afsar, President. The individual notices have been posted in time to the Members and if not received it is requested to treat this as Meeting Notice. Honourable members of the bank are requested to attend and participate in the meeting along with ID Card issued by the bank.
By order of the Board, Sd/- (M.ANJINAPPA) CEO
Place : Hoskote
Date: 10/09/2023

**MATRIMONIAL**

**Brides Wanted**

**Hindu**

BRIDE WANTED
Seeks South Indian Hindu Vegetarian Girl for Brahmin Bachelor boy 44 Asst Professor Bengaluru.
Contact: 9535225419

**WELL SETTLED** retired young looking healthy widower looking for lady partner widow or unmarried, age less than 50 healthy ,good looking ,forward outlook without ulterior motive may contact mob 9731831348.

**Grooms Wanted**

**Kannada**

WANTED GROOM
Valmiki Nayaka BE Civil Engineer 33 years Fair, Good Looking Girl working in Bangalore Seeks Suitable Match with Technical Background in Same Caste
9663061843 / 8453012198

**Matrimonial Bureaus**

ವೈವಾಹಿಕ
ಕನ್ನಡ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಧು-ವರರ ಅಂತರ್ಜಾಲ ತಾಣ.
http://www.hoysalakarnatakabrahmins.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಸುಮ ಗೋಪಾಲಕೃಷ್ಣ
9886908152

**PERSONAL**

**Change of Name**

CHANGE OF NAME
I, SAURABH RAHUL S/o. Jagdish Prasad Sinha R/a Fat #G2-2072, 7th floor, Sobha Amethyst, Kannamangala, near Jain Heritage School, Kannamangala, Bengaluru, Karnataka-560067 have changed my minor Daughter's name from YASHODHARA SAURABH ANAMOL alias YASHODHARA S ANAMOL to YASHOUDHRA SINHA (aged 13 years) vide affidavit dated 13.9.2023 before Notary V. Ganesh Rao, Chennai.

**I, SUMA,** have changed to New name SUMA SHETTY, residing at #301, Harsha Gateway, Kadugodi, Bangalore- 560067 vide affidavit dated 16/09/2023 before notary Veena J., Bangalore.

**I, HALEEMA,** W/o.Alijan R/a#9, Ground Floor,3rd cross,Maruthi Saw` mill`Road, Thanisandra Main`Road, SRKNagar Bangalore- 560077 declare`that my`son SYED AWAYZ, Educational documents my Name is incorrectly updated as HAVEMA instead of HALEEMA vide affidavit`dated: 4.9.2023`before Notary C.Sharada, Bangalore

CHANGE OF NAME
I, KRISHNAPURA SUBBARAYA SHASTRY MANJUNATHA S/o. Late Subbaraya Shastry Ex-Army NB Subedar Regiment of Artillery Army No. 1162326 R/a #261, 1st Cross, 2nd Block, BSK 3rd Stage, Bangalore-560085 have changed my name from K.S. MANJUNATHA to MANJANATHA K.S. vide affidavit dated 13.9.2023 before Notary R.J. Solanki, Bangalore.

**I, SAIMA** BEGUM, D/o Mohammed Rahmathullakhan, residing at 28, 5th Cross, Tamrind Drive, Dodsworth Layout, Whitefield Bangalore- 560066 I Have changed my Name from Saima Jabaraan Shaik to SAIMABEGUM vide affidavit dated 23-03-2023 before Notary Syed Masood Ahmed, Bangalore.

**I, VITTAL** RAO VENKATESH R/a 2204, 22 B MAIN, 15 B CROSS HSR Layout Sector 1, Bangalore 560102 have changed my Name to VENKATESH MODUR vide Affidavit dt 16.09.2023 before Notary B.M. Chandrashekar, Bangalore

**I, J.** SURABHI, Residing at #96, 3rd main, 3rd cross, Havnoor Extension, Bangalore-73 have changed my name as HITHASHREE. J., vide affidavit dated 16/09/2023 before Notary V.Anjanappa, Bangalore

**BUSINESS**

**Business to Business**

**Business**

**WHEN YOUR** family is not interested in your Business, whychasing money and getting stressed? For Sale/ Takeover or to find activepartners. Call Arun 9845077299.

**Electrical Goods/ Appliances**

**FOR SALE** Hot Air Oven 4' X6'X 5.5', 12KW, TEM:290C with Trolley for Paint Drying 9845000247

**Finance**

**LOANS** AVAILABLE Personal business mortgage property purchase construction from Bank/ Private with CIBIL also. 7019460997.

**Business Offers**

**Machinery & Tools**

USED MACHINES FOR SALE

Factory Printer Useful For Offset & Web Offset Printing, 2015 -MODEL RICOH PRO C5100S WITH LARGE CAPACITY TRAY- MULTI COLOR 300GSM, upto 13inch x 25inch Duplex upto 250 GSM
info.sketchmatrix@gmail.com
90032 58681 98407 68362

DH
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

DH Classifieds More value, more impact
JOB HUNT
ಪ್ರಜಾವಾಣಿ
Get your HIRING NEEDS answered
Get the right people for your company... Book your Ad with us now !
www.dhclassifieds.com
BOOK NOW
For more details contact:
+91 9901641752 | +91 9731810277 | +91 9900428036 | +91 9886213331 | +91 9845114560 | 080-45557163/164

ನಗರದ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ನೆರೆದಿದ್ದ ಪ್ರಯಾಣಿಕರು

# ಬಸ್, ರೈಲು ನಿಲ್ದಾಣದಲ್ಲಿ ಭಾರಿ ಜನದಟ್ಟಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗಣೇಶೋತ್ಸವದ ಪ್ರಯುಕ್ತ ಬೆಂಗಳೂರಿನಿಂದ ತಮ್ಮೂರಿನತ್ತ ಹೊರಟವರ ಸಂಖ್ಯೆ ಶನಿವಾರ ಒಂದೇ ಪ್ರಮಾಣದಲ್ಲಿ ಏರಿದ್ದರಿಂದ ಮೆಜೆಸ್ಟಿಕ್ ಸಹಿತ ವಿವಿಧ ಬಸ್ ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ಭಾರಿ ಜನದಟ್ಟಣೆ ಉಂಟಾಯಿತು.

ಶುಕ್ರವಾರವೇ ಜನಸಂದಣಿ ಕಂಡುಬಂದಿತ್ತು. ಶನಿವಾರ ದಟ್ಟಣೆ ಇನ್ನಷ್ಟು ಹೆಚ್ಚಾಯಿತು. ಜನರು ಲಗೇಜುಗಳೊಂದಿಗೆ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣ, ಸ್ಯಾಟ್‌ಲೈಟ್ ಬಸ್ ನಿಲ್ದಾಣಗಳ ಕಡೆಗೆ ಗುಂಪುಗುಂಪಾಗಿ ಬರತೊಡಗಿದ್ದರು.

ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಕಲಬುರ್ಗಿ ಸಹಿತ ವಿವಿಧ ನಗರಗಳಿಗೆ ಹೋಗುವವರು ನಿಲ್ದಾಣಗಳಲ್ಲಿ ಜಮಾಯಿಸಿದ್ದರಿಂದ ಬಸ್, ರೈಲು ನಿಲ್ದಾಣಗಳು ಕಿಕ್ಕಿರಿದವು. ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದ್ದ ಜನ, ನಿಲ್ದಾಣಕ್ಕೆ ಬಂದು ಬಸ್‌ಗಾಗಿ ಹುಡುಕಾಟ ನಡೆಸಿದರು.

ಚಾಲುಕ್ಯ ವೃತ್ತ, ಆನಂದರಾವ್ ವೃತ್ತ, ಮೈಸೂರು ರಸ್ತೆ, ಯಶವಂತಪುರ, ಆರ್‌ಎಂಸಿ ಯಾರ್ಡ್, ತುಮಕೂರು ರಸ್ತೆ, ಹೊಸೂರು ರಸ್ತೆಗಳಲ್ಲಿ ಸಹ ವಾಹನಗಳ ದಟ್ಟಣೆ ಅಧಿಕವಾಗಿತ್ತು. ಸವಾರರು ಹೈರಾಣಾದರು.

### ದುಪ್ಪಟ್ಟು ದರ: 742 ಪ್ರಕರಣ ದಾಖಲು

ಖಾಸಗಿ ಬಸ್‌ಗಳ ಪ್ರಯಾಣಿಕರಿಗೆ ದುಪ್ಪಟ್ಟು ದರ ನಿಗದಿ ಮಾಡಿದ್ದಕ್ಕಾಗಿ ಸಾರಿಗೆ ಇಲಾಖೆ ಎರಡು ದಿನಗಳಲ್ಲಿ 742 ಪ್ರಕರಣ ದಾಖಲಿಸಿಕೊಂಡಿದೆ. ₹ 9.24 ಲಕ್ಷ ದಂಡ ವಸೂಲಿ ಮಾಡಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಬಸವನಗುಡಿಯ ಗಾಂಧಿಬಜಾರ್ ಮುಖ್ಯ ರಸ್ತೆಯಲ್ಲಿ ಗಣೇಶ ಹಬ್ಬಕ್ಕಾಗಿ ಶನಿವಾರ ಜನರು ಹೂವು–ಹಣ್ಣು, ಬಾಳೆ ಕಂದು ಮತ್ತು ಇತರ ವಸ್ತುಗಳನ್ನು ಖರೀದಿಸಿದರು –ಪ್ರಜಾವಾಣಿ ಚಿತ್ರ:ರಂಜು ಪಿ

ಹೆಸರಘಟ್ಟದ ಕಲಾವಿದೆ ಗೌರಿ ಮನೆಯಲ್ಲಿ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳನ್ನು ಮಾರಾಟಕ್ಕೆ ಸಿದ್ಧಪಡಿಸಲಾಗಿದೆ ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

## ಮಳೆಯ ಕೊರತೆಯಿಂದ ಮಾರುಕಟ್ಟೆಗೆ ಹೂವಿನ ಆವಕ ಕಡಿಮೆ

# ಗೌರಿ–ಗಣೇಶ ಹಬ್ಬ: ಖರೀದಿ ಜೋರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗೌರಿ, ಗಣೇಶ ಹಬ್ಬವನ್ನು ಸಂಭ್ರಮ-ಸಡಗರದಿಂದ ಆಚರಿಸಲು ನಗರದ ಜನತೆ ಸಜ್ಜಾಗುತ್ತಿದ್ದು, ಹಬ್ಬಕ್ಕೆ ಬೇಕಾದ ವಿಗ್ರಹ, ಹೂವು, ಹಣ್ಣು, ಪೂಜಾ ಸಾಮಗ್ರಿಗಳ ಖರೀದಿ ಭರಾಟೆ ಶನಿವಾರ ಜೋರಾಗಿತ್ತು.

ವರಮಹಾಲಕ್ಷ್ಮಿ ಹಬ್ಬದಲ್ಲಿ ಗಗನಕ್ಕೇರಿದ್ದ ಹೂವು ಹಣ್ಣು-ಹಂಪಲು ಸೇರಿ ಅಗತ್ಯ ವಸ್ತುಗಳ ಬೆಲೆ ಈಗ ಇಳಿದಿದೆ. ಆದರೆ, ಆ ಪ್ರಮಾಣದ ಗ್ರಾಹಕರು ಮಾರುಕಟ್ಟೆಗಳಲ್ಲಿ ಈ ಬಾರಿ ಕಂಡುಬರಲಿಲ್ಲ. ಗೌರಿ-ಗಣೇಶ ಹಬ್ಬಕ್ಕೆ ತರಕಾರಿ, ಹಣ್ಣು, ಹೂವಿನ ದರಗಳ ಸಾಕಷ್ಟು ಕಡಿಮೆಯಾಗಿದೆ.

ಕೆ. ಆರ್. ಮಾರುಕಟ್ಟೆಯಲ್ಲಿ ಬೆಳಗಿನ ಜಾವದ ವೇಳೆಗೇ ಜನ ಜಮಾಯಿಸಿದ್ದರು. ಚಿಕ್ಕಪೇಟೆಯ ಅವೆನ್ಯೂ ರಸ್ತೆ ಮತ್ತು ಸುತ್ತಮುತ್ತಲ ರಸ್ತೆಗಳಲ್ಲಿ ಜನದಟ್ಟಣೆ ಹೆಚ್ಚಿತ್ತು.

'ಬಟಾಣಿ ಪ್ರತಿ ಕೆ.ಜಿಗೆ ₹100ರಂತೆ ಮಾರಾಟವಾಗುತ್ತಿದೆ. ಶತಕ ಬಾರಿಸಿದ್ದ ಟೊಮೆಟೊ ಕೆ.ಜಿ ₹15, ಈರುಳ್ಳಿ ₹ 30, ಹಸಿಮೆಣಸಿನಕಾಯಿ ₹80ರಂತೆ ಮಾರಾಟವಾಗುತ್ತಿವೆ. ಅದನ್ನು ಬಿಟ್ಟು ಬಹುತೇಕ ತರಕಾರಿ ದರಗಳ ಕಡಿಮೆಯಾಗಿದೆ. ಮಾರುಕಟ್ಟೆಗೆ ತರಕಾರಿ ಪೂರೈಕೆ ಹೆಚ್ಚಿದ್ದು, ಬೇಡಿಕೆ ಕಡಿಮೆ ಇದೆ. ಆದ್ದರಿಂದ ಬೆಲೆಗಳಲ್ಲಿ ಇಳಿಕೆಯಾಗಿದೆ' ಎಂದು ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿ ಅಕ್ರಂ, ತಬ್ರೇಜ್ ತಿಳಿಸಿದರು.

**ಹೆಚ್ಚಾದ ಹೂ ದರ:** 'ರಾಜ್ಯದಲ್ಲಿ ಮಳೆ ಕೊರತೆಯಿಂದ ಮಾರುಕಟ್ಟೆಗೆ ಹೂವು ಆವಕ ಕಡಿಮೆಯಾಗಿದ್ದು, ಆದ್ದರಿಂದ ಸ್ವಲ್ಪ ದುಬಾರಿಯಾಗಿದೆ. ಆದರೂ, ವರಮಹಾಲಕ್ಷ್ಮಿ ಹಬ್ಬದ ದರಕ್ಕೆ ಹೋಲಿಸಿದರೆ ಈ ಬಾರಿ ಕಡಿಮೆಯಾಗಿದೆ' ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿ ಮಂಜುನಾಥ್ ಹೇಳಿದರು.

'ಈ ಬಾರಿಯ ಗಣೇಶ ಹಬ್ಬದ ಸಂದರ್ಭದಲ್ಲಿ ಮಲ್ಲಿಗೆ ಕೆ.ಜಿ.ಗೆ ₹800, ಕನಕಾಂಬರ ₹1 ಸಾವಿರ ಇದೆ. ಸೇವಂತಿಗೆ ₹ 150, ಗುಲಾಬಿ ₹ 200, ಸುಗಂಧರಾಜ ₹200ರಂತೆ ಮಾರಾಟವಾಗುತ್ತಿವೆ' ಎಂದು ತಿಳಿಸಿದರು.

ಗರಿಕೆ, ಬೇಲದಹಣ್ಣು, ಎಕ್ಕದ ಹೂವಿನಹಾರಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿತ್ತು. ಜತೆಗೆ ಬಾಳೆಕಂಬ, ಹೂವಿನ ಹಾರ ಇತ್ಯಾದಿ ಪೂಜಾ ಸಾಮಗ್ರಿಗಳನ್ನು ಕೊಂಡೊಯ್ದರು. ಎಕ್ಕದ ಹಾರಕ್ಕೆ ₹50, ಗರಿಕೆಗೆ ₹30, ಪ್ರದೇಶವಾರು ದರದಲ್ಲಿ ವ್ಯತ್ಯಾಸವಿತ್ತು. ಬಾಳೆಕಂಬ ಜೋಡಿಗೆ ₹50ನಿಂದ ₹200 ವರೆಗೆ ಮಾರಾಟವಾಗುತ್ತಿದ್ದವು.

ಗಾಂಧಿ ಬಜಾರ್, ಜಯನಗರ, ಬಸವನಗುಡಿ, ಬನಶಂಕರಿ, ರಾಜಾಜಿನಗರ, ಮಲ್ಲೇಶ್ವರ ಸೇರಿ ನಗರದ ವಿವಿಧ ಭಾಗಗಳಲ್ಲಿ ಹೂವು, ಹಣ್ಣಿನ ತಾತ್ಕಾಲಿಕ ಮಳಿಗೆಗಳು, ಗಣೇಶ ಮೂರ್ತಿಯ ಅಂಗಡಿಗಳು ತಲೆ ಎತ್ತಿವೆ.

ಮಾರುಕಟ್ಟೆಗೆ ಬಗೆ ಬಗೆಯ ಗೌರಿ-ಗಣೇಶ ಮೂರ್ತಿಗಳು ಬಂದಿದ್ದು, ₹100 ರಿಂದ ₹5 ಸಾವಿರದವರೆಗೆ ಮೂರ್ತಿಗಳು ಮಾರಾಟವಾಗುತ್ತಿವೆ. ಮತ್ತೊಂದೆಡೆ ಗೌರಿ ಹಬ್ಬ ಆಚರಿಸುವವರು ಗಜಗೌರಿ, ಮಡಿಗೌರಿ ಮತ್ತಿತರ ಬಗೆಯ ಗೌರಿಯ ಮೂರ್ತಿಗಳನ್ನು ಮಹಿಳೆಯರು ಖರೀದಿಸಿದರು.

### ಕೆ.ಆರ್. ಮಾರುಕಟ್ಟೆಯ ದರಗಳು

| ಹೂವುಗಳ ದರ ಪ್ರತಿ ಕೆಜಿಗೆ (₹ಗಳಲ್ಲಿ) | ಕಳೆದ ವಾರ | ಈ ವಾರ |
|---|---|---|
| ಮಲ್ಲಿಗೆ | 400 | 800 |
| ಕನಕಾಂಬರ | 500 | 1000 |
| ಗುಲಾಬಿ | 150 | 200 |
| ಸೇವಂತಿಗೆ | 100 | 150 |
| ಸುಗಂಧರಾಜ | 100 | 200 |
| **ಹಣ್ಣುಗಳ ದರ ಪ್ರತಿ ಕೆ.ಜಿಗೆ** | | |
| ದ್ರಾಕ್ಷಿ | 160 | 200 |
| ಸೇಬು | 100 | 160 |
| ದಾಳಿಂಬೆ | 80 | 120 |
| ಏಲಕ್ಕಿ ಬಾಳೆ | 80 | 120 |
| ಸೀತಾಫಲ | 80 | 100 |
| ಕಿತ್ತಳೆ | 50 | 80 |
| ಬಾಳೆ | 30 | 40 |

| ತರಕಾರಿ ದರಗಳು ಪ್ರತಿ ಕೆಜಿಗೆ | | |
|---|---|---|
| ಬಟಾಣಿ | 120 | 100 |
| ಕ್ಯಾರೆಟ್ | 50 | 40 |
| ಕ್ಯಾಪ್ಸಿಕಮ್ | 40 | 50 |
| ಈರುಳ್ಳಿ | 25 | 30 |
| ಬೀನ್ಸ್ | 50 | 60 |
| ಟೊಮೆಟೊ | 30 | 15 |
| ಆಲೂಗಡ್ಡೆ | 25 | 15 |
| ಹೀರೇಕಾಯಿ | 50 | 40 |
| ಸೌತೆಕಾಯಿ | 30 | 20 |
| ಹಾಗಲಕಾಯಿ | 50 | 40 |
| ಬದನೆಕಾಯಿ | 50 | 40 |
| ಮೆಣಸಿನಕಾಯಿ | 120 | 80 |
| ಸೋರೆಕಾಯಿ | 60 | 40 |
| ಬೀಟ್‌ರೂಟ್ | 30 | 40 |
| ಮೂಲಂಗಿ | 50 | 60 |
| ಬೆಳ್ಳುಳ್ಳಿ | 200 | 150 |

| | | |
|---|---|---|
| ಶುಂಠಿ | 150 | 60 |
| **ಪ್ರತಿ ಕಟ್ಟಿಗೆ** | | |
| ಕೊತ್ತಂಬರಿ | 10 | 20 |
| ಪುದೀನಾ | 10 | 10 |
| ಪಾಲಾಕ್ | 10 | 20 |
| ಸಬ್ಬಕ್ಕಿ | 15 | 20 |
| ಮೆಂತೆ | 10 | 20 |
| **ಹಬ್ಬದ ವಿಶೇಷ** | | |
| ಬಾಳೆಕಂಬ ಜೋಡಿಗೆ | | 50 |
| ಮಾವಿನ ತೋರಣ | | 20 |
| 100 ವೀಳ್ಯದೆಲೆಗೆ | | 150 |
| 5 ತೆಂಗಿನಕಾಯಿಗೆ | | 100 |
| ಗರಿಕೆ | | 30 |
| ಬಿಲ್ವಪತ್ರೆ | | 20 |
| ತೋರಣ | | 20 |

# ಕಾಮಗಾರಿ ಪೂರ್ಣಗೊಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆ.ಪಿ. ನಗರ, ಅಂಜನಾಪುರ ಬಡಾವಣೆಗಳಲ್ಲಿ 95.56 ಕಿ.ಮೀ. ರಸ್ತೆ ಹಾಗೂ ಮೂಲ ಸೌಕರ್ಯ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಬಿಡಿಎ ಆಯುಕ್ತ ಕುಮಾರ ನಾಯಕ್ ಅಧಿಕಾರಿಗಳಿಗೆ ಸೂಚಿಸಿದರು.

ಜೆ.ಪಿ. ನಗರ 8ನೇ, 9ನೇ ಹಂತ, ಅಂಜನಾಪುರ ಟೌನ್ ಶಿಪ್, ಮುಂದುವರೆದ ಅಂಜನಾಪುರ ಬಡಾವಣೆ ಮತ್ತು ಆಲಹಳ್ಳಿ ಕೆರೆಗೆ ಹೊಂದಿಕೊಂಡಿರುವ ಬಡಾವಣೆಗೆ ಶನಿವಾರ ಹಠಾತ್ ಭೇಟಿ ನೀಡಿ ಕಾಮಗಾರಿಗಳನ್ನು ಆಯುಕ್ತರು ಪರಿಶೀಲಿಸಿದರು.

ಜೆ.ಪಿ. ನಗರ 9ನೇ ಹಂತ, 7ನೇ ಬ್ಲಾಕ್ ವ್ಯಾಪ್ತಿಗೆ ಒಳಪಡುವ ಆಲಹಳ್ಳಿ ಕೆರೆ ಹಿಂಭಾಗದಲ್ಲಿ ಅನುಮೋದಿತ ನಕ್ಷೆಯಂತೆ ಬಡಾವಣೆ ನಿರ್ಮಿಸಿ, ವಿವಿಧ ಅಳತೆಯ 71 ನಿವೇಶನ ರಚಿಸಲಾಗಿದೆ. ಈ ನಿವೇಶನಗಳು ರಸ್ತೆ ಮಟ್ಟದಿಂದ ಸುಮಾರು 5 ಅಡಿಗಳಷ್ಟು ಆಳದಲ್ಲಿರುವುದರಿಂದ ಮಳೆ ಬಂದಾಗ ಸಂಪೂರ್ಣ ಜಲಾವೃತವಾಗುತ್ತಿವೆ. ಈ ಪ್ರದೇಶವನ್ನು ಎತ್ತರಿಸಿ, ಮಳೆ ಬಂದಾಗ ಸುರಕ್ಷಿತವಾಗಿರುವಂತೆ ವ್ಯವಸ್ಥೆ ಕಲ್ಪಿಸಿ ಕಾಮಗಾರಿ ನಡೆಸಬೇಕು ಎಂದು ಆಯುಕ್ತರು ಎಂಜಿನಿಯರ್ ಸದಸ್ಯರಿಗೆ ಸೂಚಿಸಿದರು.

ಈ ಬಡಾವಣೆಗಳಲ್ಲಿ ವಿವಿಧ ಅಳತೆಯ 14,881 ಮಧ್ಯಂತರ ನಿವೇಶನ, 2,176 ಮೂಲೆ ನಿವೇಶನಗಳನ್ನು ರಚಿಸಲಾಗಿದೆ. 39 ಸಿ.ಎ. ನಿವೇಶನಗಳು, 37 ಉದ್ಯಾನಗಳನ್ನು ಪ್ರಾಧಿಕಾರದಿಂದ ನಿರ್ಮಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಬಾಗಿ ಮಾಹಿತಿ ನೀಡಿದರು.

ಆಲಹಳ್ಳಿ ಕೆರೆ ಸಮೀಪ ಬಿಡಿಎ ಬಡಾವಣೆಯ ಅಭಿವೃದ್ಧಿ ಕಾರ್ಯಗಳನ್ನು ಆಯುಕ್ತ ಕುಮಾರ್ ನಾಯಕ್ ಶುಕ್ರವಾರ ಪರಿಶೀಲಿಸಿದರು

## ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ: ಪೊಲೀಸರ ಎಚ್ಚರಿಕೆ

# 'ಗಣೇಶ ಪ್ರತಿಷ್ಠಾಪನೆ: ಅಪರಾಧಕ್ಕೆ ಆಯೋಜಕರೇ ಹೊಣೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗಣೇಶ ಪ್ರತಿಷ್ಠಾಪನೆ ಸ್ಥಳದಲ್ಲಿ ಯಾವುದಾದರೂ ಅಪರಾಧ ಘಟಿಸಿದರೆ ಆಯೋಜಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಪ್ರತಿಷ್ಠಾಪನೆ ಸಂದರ್ಭದಲ್ಲಿ ಅವಘಡ ಹಾಗೂ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಪೊಲೀಸರು, ತಾವು ರೂಪಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಆಯೋಜಕರಿಗೆ ತಿಳಿಸಿದ್ದಾರೆ.

'ಸೆ.18ರಿಂದ ನಗರದ ಹಲವೆಡೆ ಗಣೇಶ ಮೂರ್ತಿ ಪ್ರತಿಷ್ಠಾಪಿಸಲಾಗುತ್ತಿದೆ. ಪೆಂಡಾಲ್ ನಿರ್ಮಾಣ, ಮೆರವಣಿಗೆ ಹಾಗೂ ಇತರೆ ಪ್ರಕ್ರಿಯೆಗಳಲ್ಲಿ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇಲ್ಲದಿದ್ದರೆ, ಕಾನೂನು ಕ್ರಮ ಜರುಗಿಸಲಾಗುವುದು' ಎಂದೂ ಪೊಲೀಸರು ಹೇಳಿದ್ದಾರೆ.

**ಪೊಲೀಸರ ಸೂಚನೆಗಳು:**

- ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಪ್ರತಿಷ್ಠಾಪಿಸಲು ಸಂಬಂಧಪಟ್ಟ ಠಾಣೆ ಅನುಮತಿ ಪಡೆಯಬೇಕು. ನಾಗರಿಕರು ಹಾಗೂ ವಾಹನಗಳ ಸಂಚಾರಕ್ಕೆ ಅಡ್ಡಿಯಾಗದಂತೆ ಪೆಂಡಾಲ್ ನಿರ್ಮಿಸಬೇಕು
- ಗಣೇಶ ಪ್ರತಿಷ್ಠಾಪನೆಗೆ ಬಲವಂತವಾಗಿ ಹಾಗೂ ಕಾನೂನುಬಾಹಿರವಾಗಿ ವಂತಿಗೆ ಸಂಗ್ರಹಿಸಬಾರದು
- ಪೆಂಡಾಲ್ ನಿರ್ಮಾಣಕ್ಕೆ ಬಿಬಿಎಂಪಿ ಅನುಮತಿ ಪಡೆಯಬೇಕು
- ವಿವಾದಿತ ಸ್ಥಳಗಳಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಬಾರದು. ಇತರೆಡೆ ಮೂರ್ತಿ ಪ್ರತಿಷ್ಠಾಪನೆ ವೇಳೆ ಸ್ಥಳ ಮಾಲೀಕರ ಅನುಮತಿ ಕಡ್ಡಾಯ
- ಪ್ರತಿಷ್ಠಾಪನೆ ಸ್ಥಳದಲ್ಲಿ ದಿನದ 24 ಗಂಟೆಯೂ ಇಬ್ಬರು ಪ್ರತಿನಿಧಿಗಳು ಇದ್ದು, ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಬೇಕು
- ಪ್ರತಿಷ್ಠಾಪನೆ ಸ್ಥಳದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಬೇಕು. ಪೊಲೀಸರು, ಅಗ್ನಿಶಾಮಕದ ದಳದ ದೂರವಾಣಿ ಸಂಖ್ಯೆ ಹಾಗೂ ಆಯೋಜಕರ ಮೊಬೈಲ್ ನಂಬರ್ ಫಲಕ ಅಳವಡಿಸಬೇಕು
- ಮೂರ್ತಿ ಇರುವ ಸ್ಥಳದ ಸುತ್ತಮುತ್ತ ಅಡುಗೆಗೆ ಬಳಸುವ ಕಟ್ಟಿಗೆ, ಸೀಮೆಎಣ್ಣೆ ಇರಿಸಬಾರದು
- ವಿದ್ಯುತ್ ಸಂಪರ್ಕ, ವಿದ್ಯುತ್ ಅಲಂಕಾರಕ್ಕೆ ಸಂಬಂಧಪಟ್ಟಂತೆ ಬೆಸ್ಕಾಂ, ಅಗ್ನಿಶಾಮಕ ದಳ ಹಾಗೂ ಸಂಚಾರ ಪೊಲೀಸರಿಂದ ನಿರಾಪೇಕ್ಷಣಾ ಪತ್ರ ಪಡೆಯಬೇಕು
- ಬೆಳಿಗ್ಗೆ 6 ರಿಂದ ರಾತ್ರಿ 10ರ ವರೆಗೆ ಮಾತ್ರ ಧ್ವನಿವರ್ಧಕ ಬಳಸಬೇಕು. ಇದಕ್ಕೂ ಪೊಲೀಸ್ ಅನುಮತಿ ಪಡೆಯಬೇಕು
- ಸೂಕ್ಷ್ಮ, ಅತೀ ಸೂಕ್ಷ್ಮ ಸ್ಥಳ, ಪ್ರಾರ್ಥನಾ ಮಂದಿರಗಳ ಎದುರು ವಿಸರ್ಜನಾ ಮೆರವಣಿಗೆ ಸಾಗುವ ಸಂದರ್ಭದಲ್ಲಿ ಪಟಾಕಿ ಸಿಡಿಸಬಾರದು ಹಾಗೂ ಕರ್ಪೂರ ಹಚ್ಚಬಾರದು
- ವಿಸರ್ಜನಾ ಮೆರವಣಿಗೆ ರಾತ್ರಿ 10 ಗಂಟೆಯೊಳಗೆ ಮುಗಿಯಬೇಕು

### ಮಾಂಸ ಮಾರಾಟ ನಿಷೇಧ

ಗಣೇಶ ಚತುರ್ಥಿ ಪ್ರಯುಕ್ತ ಸೆ.18ರಂದು ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟ ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ಕಚೇರಿ ಅವಧಿಯಲ್ಲಿ ಸಂತೆ ಬೀದಿ ಸುತ್ತಾಟ: ಕಟಾರಿಯಾ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಂದಾಯ ಇಲಾಖೆಯ ನೌಕರರು ನಿತ್ಯ ಬೆಳಿಗ್ಗೆ 10.30ರ ಒಳಗೆ ಕಡ್ಡಾಯವಾಗಿ ಕಚೇರಿಗೆ ಹಾಜರಾಗಬೇಕು. ಕಚೇರಿಯಿಂದ ಸಂಜೆ ತೆರಳುವಾಗ ತಮ್ಮ ಶಾಖೆಯ ಸಂಬಂಧಪಟ್ಟ ಜಂಟಿ ಅಥವಾ ಉಪ ಕಾರ್ಯದರ್ಶಿಯ ಅನುಮತಿ ಪಡೆಯಬೇಕು' ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಫರ್ಮಾನು ಹೊರಡಿಸಿದ್ದಾರೆ.

'ಈ ಸೂಚನೆಯನ್ನು ಎಲ್ಲ ನೌಕರರು ಪಾಲಿಸಲೇಬೇಕು. ಪಾಲಿಸದವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಟಿಪ್ಪಣಿ ಹೊರಡಿಸಿರುವ ಕಟಾರಿಯಾ, ನಿಗದಿತ ವೇಳೆಯಲ್ಲಿ ಕಚೇರಿಗೆ ಹಾಜರಾಗಬೇಕೆಂದು ಸೂಚಿಸಲು ಕಾರಣವಾದ ಅಂಶವನ್ನೂ ವಿವರಿಸಿದ್ದಾರೆ.

'ಇಲಾಖೆಯ ಅಧೀನ ಶಾಖೆಗಳಿಗೆ ಹಲವಾರು ಬಾರಿ ನಾನು ಬೆಳಿಗ್ಗೆ 10.45ಕ್ಕೆ ತಪಾಸಣೆಗೆಂದು ಭೇಟಿ ನೀಡಿದಾಗ ಶಾಖೆಯ ಅಧಿಕಾರಿ, ಸಿಬ್ಬಂದಿ ವರ್ಗದವರು ಕರ್ತವ್ಯಕ್ಕೆ ಇನ್ನೂ ಹಾಜರಾಗರಾಗಿರಲಿಲ್ಲ. ಅಲ್ಲದೆ, ಕಚೇರಿಯ ತುರ್ತು ಕೆಲಸ ನಿರ್ವಹಣೆಗೆ ಸಂಜೆ ವೇಳೆಯಲ್ಲಿ ಸಿಬ್ಬಂದಿಯನ್ನು ಕರೆದಾಗಲೂ ಕಚೇರಿಯಿಂದ ಅತೀ ಬೇಗ ನಿರ್ಗಮಿಸಿರುವುದು ಕಂಡುಬಂದಿದೆ. ಇದರಿಂದ ಕಚೇರಿ ಕೆಲಸಕ್ಕೆ ಅಡ್ಡಿಯಾಗುತ್ತಿದೆ. ಸಾರ್ವಜನಿಕರು ಟಪಾಲು, ಕಡತ ವಿಚಾರಣೆಗಾಗಿ ಬಂದಾಗ ವಿನಾಕಾರಣ ಕಾಲಹರಣ ಮಾಡುತ್ತಿರುವುದು, ಗಂಟೆಗಟ್ಟಲೆ ಟೀ, ಕಾಫಿ, ಉಪಾಹಾರ ಸೇವನೆಗೆಂದು ಕಚೇರಿ ಬಿಟ್ಟು ಹೋಗುವುದು, ಸಂತೆ ಬೀದಿಗಳಲ್ಲಿ ಓಡಾಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇನ್ನು ಮುಂದೆ ಈ ರೀತಿಯ ವರ್ತನೆ ಪುನರಾವರ್ತನೆಯಾದರೆ ಅಂಥ ನೌಕರರ ವಿರುದ್ಧ ಕ್ರಮಕೈಗೊಳ್ಳಲಾಗುವುದು' ಎಂದೂ ಟಿಪ್ಪಣಿಯಲ್ಲಿ ಅವರು ಉಲ್ಲೇಖಿಸಿದ್ದಾರೆ.

# ವ್ಹೀಲಿಂಗ್: ವೃದ್ಧ ಸಾವು

ನಂಜನಗೂಡು(ಮೈಸೂರು ಜಿಲ್ಲೆ): ತಾಲ್ಲೂಕಿನ ಇಮ್ಮಾವು ಕೈಗಾರಿಕಾ ಪ್ರದೇಶದ ಏಷಿಯನ್ ಪೇಂಟ್ ಕಾರ್ಖಾನೆ ಬಳಿ ಶನಿವಾರ, ಪಟ್ಟಣದ ಸಂಚಾರ ಠಾಣೆಯ ಪೊಲೀಸ್ ಅಧಿಕಾರಿ ಮಗ ಸೈಯದ್ ಐಮಾನ್ ಬೈಕ್ ವ್ಹೀಲಿಂಗ್ ಮಾಡುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆ ಬದಿ ಕುಳಿತಿದ್ದವರಿಗೆ ಡಿಕ್ಕಿ ಹೊಡೆದಿದ್ದು, ಅದೇ ಗ್ರಾಮದ ನಿವಾಸಿ ಗುರುಸ್ವಾಮಿ (65) ಮೃತಪಟ್ಟರು.

ಗಣೇಶ ಮೂರ್ತಿ ವಿಸರ್ಜನೆ ಹಿನ್ನೆಲೆಯಲ್ಲಿ ಸದಾಶಿವನಗರದ ಸ್ಯಾಂಕಿ ಟ್ಯಾಂಕ್‌ನ ಕೊಳದ ಸುತ್ತಲು ಸುರಕ್ಷತೆ ದೃಷ್ಟಿಯಿಂದ ಕಾರ್ಮಿಕರು ಬ್ಯಾರಿಕೇಡ್ ಅಳವಡಿಸಿದರು

# ಏಕಗವಾಕ್ಷಿ ಕೇಂದ್ರ, ಕಲ್ಯಾಣಿ ಸ್ಥಾಪನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಅರ್ಜಿಗಳ ವಿಲೇವಾರಿಗೆ 63 ಏಕಗವಾಕ್ಷಿ ಕೇಂದ್ರ ಸ್ಥಾಪಿಸಲಾಗಿದೆ.

ಮೂರ್ತಿಗಳ ವಿಸರ್ಜನೆಗಾಗಿ 39 ಕೆರೆ ಅಂಗಳದದಲ್ಲಿ ತಾತ್ಕಾಲಿಕ ಕಲ್ಯಾಣಿಗಳು, 418 ತಾತ್ಕಾಲಿಕ ಮೊಬೈಲ್ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಲಾಗಿದೆ.

ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ವ್ಯವಸ್ಥೆಯ ಮೇಲ್ವಿಚಾರಣೆ ಹಾಗೂ ಮಾಹಿತಿಗಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಇದರ ಸಂಪೂರ್ಣ ಮಾಹಿತಿಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಡೆಯಬಹುದು ಅಥವಾ ವೆಬ್ ಸೈಟ್ https://apps.bbmpgov.in/ganesh2023 ಪಡೆಯಬಹುದಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

# ಶಿಕ್ಷಣ ತಜ್ಞರಿಗೆ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಷ್ಟ್ರೀಯ ಪಠ್ಯಕ್ರಮ ಪರಿಚಯಿಸುವುದರ ಜೊತೆಗೆ ವಿವಿಧ ಶೈಕ್ಷಣಿಕ ಕಾರ್ಯಗಳ ಕಾರ್ಯಾಗಾರ ನಗರದಲ್ಲಿ ಶನಿವಾರ ನಡೆಯಿತು.

ಓರಿಯಂಟ್ ಬ್ಲ್ಯಾಕ್‌ಸ್ವಾನ್ ವತಿಯಿಂದ ಶಿಕ್ಷಣ ತಜ್ಞರಿಗಾಗಿ ಸರಣಿ ಕಾರ್ಯಾಗಾರಗಳನ್ನು ದೇಶದಾದ್ಯಂತ ಹಮ್ಮಿಕೊಂಡಿದೆ. ಈ ಸರಣಿಯ 3ನೇ ಕಾರ್ಯಕ್ರಮ ನಗರದಲ್ಲಿ ಆಯೋಜಿಸಲಾಗಿತ್ತು. ವಿವಿಧ ಶಾಲೆಗಳ ನೂರಕ್ಕೂ ಅಧಿಕ ಶಿಕ್ಷಕರು ಭಾಗವಹಿಸಿದ್ದರು.

ಎನ್‌ಇಪಿ 2020 ಆರಂಭಿಕ ಆರೈಕೆ ಮತ್ತು ಶಿಕ್ಷಣದ (ಇಸಿಸಿಇ) ನಿರ್ಣಾಯಕ ಪಾತ್ರವನ್ನು ಗುರುತಿಸುತ್ತದೆ. ಕಲಿಯುವವರ ಸುಸಜ್ಜಿತ ಅಭಿವೃದ್ಧಿಗಾಗಿ ಸಮಗ್ರ ಶಿಕ್ಷಣವನ್ನು ಒದಗಿಸುವ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಎನ್‌ಇಪಿ ಮಾರ್ಗಸೂಚಿಗಳ ಪ್ರಕಾರ, ಈ ಹಂತದಲ್ಲಿ ಕಲಿಕೆಯು ಆಟದ ಆಧಾರಿತವಾಗಿರುತ್ತದೆ. ಅನುಭವದ ಅಗತ್ಯವೂ ಇದೆ ಎಂದು ಕಾರ್ಯಾಗಾರದಲ್ಲಿ ತಿಳಿಸಿಕೊಡಲಾಯಿತು.

'ಕಾರ್ಯಾಗಾರವು ಅನುಭವ ಮತ್ತು ಚಟುವಟಿಕೆ ಆಧಾರಿತ ಕಲಿಕೆಗೆ ಉದಾಹರಣೆಯಾಗಿದೆ. ಇದು ನಿಜವಾಗಿಯೂ ಎನ್‌ಇಪಿ ಮಾರ್ಗಸೂಚಿ ಅರ್ಥಮಾಡಿಕೊಳ್ಳಲು ಅನುವಾಯಿತು. ತರಗತಿ ಕೊಠಡಿಗಳಲ್ಲಿ ಅವುಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ನಮಗೆ ಸಹಾಯ ಮಾಡಿದೆ' ಎಂದು ಕಾರ್ಯಾಗಾರದ ನಂತರ ಸುರಭಿ ಗಾಂಧಿ ತಿಳಿಸಿದರು.

# ಶಾಲೆಯೊಂದು ಮೂರು ಬಾಗಿಲು

ಒಂದನೇ ಪುಟದಿಂದ

ಶಾಲೆ ಆವರಣ ಒಂದೇ ಆದರೂ ಪ್ರಾಥಮಿಕ–ಪ್ರೌಢ– ಪದವಿ ಪೂರ್ವ ಕಾಲೇಜು ಪ್ರತ್ಯೇಕವಾಗಿಯೇ ನಡೆಯುತ್ತಿವೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮಾರ್ಗಸೂಚಿಗೆ ಅನುಗುಣವಾಗಿ ಆರಂಭವಾಗಿರುವ ಶಾಲೆಗಳ ಉದ್ದೇಶ ಕಡತದಲ್ಲಷ್ಟೇ ಉಳಿದಿದೆ. ಮೂರು ವಿಭಾಗಗಳ ಶಿಕ್ಷಣವನ್ನು ಒಂದೆಡೆ ಕೂಡಿಸುವ ಪ್ರಯತ್ನ ಮೂಲದಲ್ಲೇ ವಿಫಲವಾಗಿದ್ದು, ಶಾಲೆಗಳ ಸ್ಥಿತಿ 'ಶಾಲೆಯೊಂದು ಮೂರು ಬಾಗಿಲು' ಎಂಬಂತಾಗಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೆಡ್ಡು ಹೊಡೆದು, ಸರ್ಕಾರಿ ಶಾಲೆಗಳಲ್ಲೇ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡುವ, ಈ ಶಾಲೆಗಳತ್ತ ಮಕ್ಕಳು–ಪೋಷಕರನ್ನು ಆಕರ್ಷಿಸುವ, ಶಿಕ್ಷಣ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಉದ್ದೇಶದಿಂದ, ಇರುವ ಶಾಲೆಗಳನ್ನೇ ವಿಲೀನಗೊಳಿಸಿ ಕೆಪಿಎಸ್ ಪರಿಕಲ್ಪನೆ ನೀಡಲಾಯಿತು. ಕರ್ನಾಟಕ ಜ್ಞಾನ ಆಯೋಗದ ಶಿಫಾರಸು ಆಧರಿಸಿ 2015ರಲ್ಲಿ ಹುಟ್ಟಿಕೊಂಡ ಯೋಜನೆಗೆ ಆಗಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ರೂಪ ಕೊಟ್ಟಿದ್ದರು.

ಶಾಲೆಗಳಿಗೆ ಮಕ್ಕಳ ಕೊರತೆಯಾಗಿಲ್ಲ, ಎಲ್‌ಕೆಜಿ ಯುಕೆಜಿ ತರಗತಿಗಳಿಗೆ ಭಾರಿ ಬೇಡಿಕೆ ಇದೆ. ಹಲವು ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಸಾವಿರ ದಾಟಿದೆ. ಆದರೆ ಆಡಳಿತಾತ್ಮಕ ಗೊಂದಲಗಳಿಂದ ಶಾಲೆಗಳು ಮಕ್ಕಳನ್ನು ಕಳೆದುಕೊಳ್ಳುವಂತಾಗಿದೆ. ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯವಿಲ್ಲ, ಇದ್ದರೂ ನೀರಿಲ್ಲ. ದಾನಿಗಳು ಕೊಟ್ಟಿರುವ ಕಂಪ್ಯೂಟರ್, ಫ್ಯಾನ್ ಬಳಸಲು ವಿದ್ಯುತ್ತಿಲ್ಲ. ವಿದ್ಯುತ್ ಬಿಲ್ ಕಟ್ಟದ ಕಾರಣ ಸಂಪರ್ಕ ಕಿತ್ತು ಹಾಕಿ ತಿಂಗಳುಗಳಾಗಿವೆ. ಕೊಠಡಿಗಳ ಕೊರತೆಯಿಂದ ತರಗತಿಗಳು ಕುರಿದೊಡ್ಡಿಯಂತಾಗಿವೆ. ಒಂದು ಕೊಠಡಿಯಲ್ಲಿ 120 ಮಕ್ಕಳು! ಹೀಗೆ ಮೂಲಸೌಲಭ್ಯಗಳ ಕೊರತೆ ಕಾಡುತ್ತಿದ್ದು, ಪೋಷಕರು ಮಕ್ಕಳ ಟಿ.ಸಿ ಪಡೆದು ಖಾಸಗಿ ಶಾಲೆಗಳತ್ತ ಹೊರಟಿದ್ದಾರೆ.

ಹಳೇ ಮೈಸೂರು, ಕರಾವಳಿ, ಉತ್ತರ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ, ಪ್ರೌಢ, ಪಿಯು ಕಾಲೇಜುಗಳು ಕಡೇಪಕ್ಷ ಒಂದೇ ಆವರಣದಲ್ಲಿವೆ. ಆದರೆ ಕಲ್ಯಾಣ ಕರ್ನಾಟಕದ ಹಲವೆಡೆ ಈ ಮೂರೂ ವಿಭಾಗಗಳು ಪ್ರತ್ಯೇಕವಾಗಿವೆ. ಶಿಕ್ಷಕರ ಕೊರತೆಯೂ ಹೆಚ್ಚಾಗಿದೆ.

**ನಿರ್ವಹಣೆ ಯಾರ ಹೊಣೆ?:** ಪಿಯು ಕಾಲೇಜು ಪ್ರಾಚಾರ್ಯ ಕೆಪಿಎಸ್ ಪ್ರಾಚಾರ್ಯರೂ ಆಗಿದ್ದು ಶಾಲೆಯ ಸಮಗ್ರ ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದಾರೆ. ಪ್ರೌಢಶಾಲೆಯ ಮುಖ್ಯ ಶಿಕ್ಷಕರು ಉಪ ಪ್ರಾಚಾರ್ಯರಾಗಿದ್ದು, ಬಿಸಿಯೂಟದ ಜವಾಬ್ದಾರಿ ನೋಡಿಕೊಳ್ಳುತ್ತಾರೆ. ಪ್ರಾಥಮಿಕ ಶಾಲೆಗಳ ಮುಖ್ಯಶಿಕ್ಷಕರಿಗೆ ಆಡಳಿತಾತ್ಮಕವಾಗಿ ಯಾವುದೇ ಜವಾಬ್ದಾರಿ ಇಲ್ಲ. ಅವರು ಉಪ ಪ್ರಾಚಾರ್ಯರ ಅಣತಿಯಂತೆ ನಡೆದುಕೊಳ್ಳುತ್ತಾರೆ.

'ಬಹುತೇಕ ಶಾಲೆಗಳಲ್ಲಿ ಪ್ರಾಚಾರ್ಯ ಹಾಗೂ ಉಪ ಪ್ರಾಚಾರ್ಯರ ನಡುವೆ ಸಮನ್ವಯವಿಲ್ಲ. ಪ್ರಾಚಾರ್ಯರು ಕಾಲೇಜು ಬಿಟ್ಟು ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳತ್ತ ನೋಡುವುದಿಲ್ಲ. ಅವುಗಳ ಜವಾಬ್ದಾರಿಯನ್ನೇಕೆ ಹೊರಬೇಕೆಂಬ ನಿರಾಸಕ್ತಿಯೇ ಕೆಪಿಎಸ್ ಪರಿಕಲ್ಪನೆ ಸಾಕಾರಗೊಳ್ಳದಿರಲು ಕಾರಣ' ಎಂದು ಶಿಕ್ಷಕರು ಆರೋಪಿಸುತ್ತಾರೆ.

ಕೆಪಿಎಸ್ ಅಡಿ ಬರುವ ಪಿಯು ವಿಭಾಗಗಳು ಈಗಲೂ 'ಪದವಿ ಪೂರ್ವ ಶಿಕ್ಷಣ ಇಲಾಖೆ' ವ್ಯಾಪ್ತಿಯಲ್ಲಿವೆ. ಪ್ರಾಥಮಿಕ–ಪ್ರೌಢಶಾಲೆಗಳು 'ಶಾಲಾ ಶಿಕ್ಷಣ ಮತ್ತು ಸಾರಕ್ಷತಾ ಇಲಾಖೆ'ಯ ಅಡಿಯಲ್ಲಿವೆ. ಸರ್ಕಾರದ ಹಂತದಲ್ಲೇ ಆಡಳಿತ ಬೇರೆಯಾಗಿರುವುದರಿಂದ ಪ್ರಾಥಮಿಕ–ಪ್ರೌಢ ಶಾಲೆ–ಪಿಯು ಕಾಲೇಜುಗಳನ್ನು ಬೆಸೆಯಲು ಸಾಧ್ಯವಾಗಿಲ್ಲ ಎನ್ನುವುದು ಸಾಕಷ್ಟು ಶಿಕ್ಷಕರ ಅಭಿಪ್ರಾಯ. ಶಾಲೆ ಮೂರು ಬಾಗಿಲಾಗಲು ಇದೇ ಮೂಲ ಕಾರಣವಾಗಿದೆ..

ಜಿಲ್ಲಾ ಮಟ್ಟದಲ್ಲಿ ಕೆಪಿಎಸ್ ಮೇಲುಸ್ತುವಾರಿ ಜವಾಬ್ದಾರಿ ಡಿಡಿಪಿಐ ಮೇಲಿದೆ. ಕೆಪಿಎಸ್ ಪ್ರಾಚಾರ್ಯರು ಹಾಗೂ ಡಿಡಿಪಿಐ ಸಮಾನ ಹುದ್ದೆಗಳಾಗಿದ್ದು ಇಬ್ಬರ ನಡುವೆ ಸಮನ್ವಯತೆ ಸಾಧ್ಯವಾಗುತ್ತಿಲ್ಲ. ಡಿಡಿಪಿಐ ಸೂಚನೆಗಳು ಪ್ರಾಥಮಿಕ–ಪ್ರೌಢಶಾಲೆಗಷ್ಟೇ ಅನ್ವಯವಾಗುತ್ತಿದ್ದು, ಪಿಯು ಕಾಲೇಜುಗಳಲ್ಲಿ ಪಾಲನೆಯಾಗುತ್ತಿಲ್ಲ. 'ಡಿಡಿಪಿಐಗಿಂತ ತಾವೇನೂ ಕಡಿಮೆಯಿಲ್ಲ, ಅವರ ಮಾತೇಕೆ ಕೇಳಬೇಕು' ಎಂಬ ಭಾವ ಕೆಪಿಎಸ್ ಪ್ರಾಚಾರ್ಯರಲ್ಲಿದೆ.

'ಪರಿಶೀಲನೆಗೆ ಬರುವ ಡಿಡಿಪಿಐ ಕೆಪಿಎಸ್ ಪ್ರಾಚಾರ್ಯರ ಬಳಿ ಹೋಗುವುದಿಲ್ಲ. ಉಪ ಪ್ರಾಚಾರ್ಯರನ್ನಷ್ಟೇ ಭೇಟಿ ಮಾಡುತ್ತಾರೆ. ಶಾಲೆಗಳ ಸಮರ್ಪಕ ಮೇಲುಸ್ತುವಾರಿಗೆ ಜಿಲ್ಲಾ ಮಟ್ಟದಲ್ಲಿ ಉನ್ನತ ಮಟ್ಟದ ನಿಯಂತ್ರಣ ವ್ಯವಸ್ಥೆ ಇರಬೇಕು. ಡಿಡಿಪಿಐಗಿಂತಲೂ ಹೆಚ್ಚು ಅಧಿಕಾರವುಳ್ಳ ಮೇಲಾಧಿಕಾರಿಯ ನೇಮಕವಾಗಬೇಕು' ಎಂದು ಶಿಕ್ಷಕರು ಒತ್ತಾಯಿಸುತ್ತಾರೆ.

**ಶೈಕ್ಷಣಿಕ ಪ್ರತ್ಯೇಕತೆ:** ಕೆಪಿಎಸ್ ಮಾರ್ಗಸೂಚಿ ಅನ್ವಯ ಪಿಯು ಕಾಲೇಜುಗಳ ಉಪನ್ಯಾಸಕರು ಪ್ರೌಢಶಾಲೆಗಳಿಗೂ ಪಾಠ ಮಾಡಬೇಕು. ಅದೇ ಉದ್ದೇಶಕ್ಕೆ ಅವರಿಗೆ ಬಿ.ಇಡಿ ಪದವಿ ಕಡ್ಡಾಯಗೊಳಿಸಲಾಗಿದೆ. ಆದರೆ ಅವರು ಪ್ರೌಢಶಾಲೆಗೆ ಪಾಠ ಮಾಡಲು ನಿರಾಸಕ್ತಿ ತೋರಿಸುತ್ತಿರುವುದು ಶೈಕ್ಷಣಿಕವಾಗಿಯೂ ಶಾಲೆಗಳು ಪ್ರತ್ಯೇಕವಾಗಿ ಉಳಿಯುವಂತಾಗಿದೆ. ಪ್ರಾಥಮಿಕ– ಪ್ರೌಢಶಾಲೆ ಹಾಗೂ ಪಿಯು ಕಾಲೇಜುಗಳ ತರಗತಿ ಅವಧಿ ಕೂಡ ಬೇರೆ ಬೇರೆಯಾಗಿದೆ, ಸಮವಸ್ತ್ರದಲ್ಲೂ ಏಕರೂಪವಿಲ್ಲ.

ಆರ್ಥಿಕ ಚಟುವಟಿಕೆಗಳೂ ಪ್ರತ್ಯೇಕವಾಗಿದ್ದು ವೇತನ ಬಟವಾಡೆ ಮಾಡುವ ಅಧಿಕಾರಿಗಳೂ (ಡ್ರಾಯಿಂಗ್ ಆಫೀಸರ್) ಬೇರೆಬೇರೆಯಾಗಿ ಕೆಲಸ ಮಾಡುತ್ತಾರೆ. ಪ್ರಾಥಮಿಕ ಶಾಲೆಗಳಲ್ಲಿ ಬಿಇಒ ವೇತನ ಹಂಚಿದರೆ, ಪ್ರೌಢಶಾಲೆಯಲ್ಲಿ ಉಪ ಪ್ರಾಚಾರ್ಯರು, ಪಿಯು ಕಾಲೇಜುಗಳಲ್ಲಿ ಪ್ರಾಚಾರ್ಯರು ವೇತನ ಬಟವಾಡೆ ಮಾಡುತ್ತಾರೆ. ಅನುದಾನಗಳ ಹಂಚಿಕೆ ಹೊರತುಪಡಿಸಿ ಮಿಕ್ಕೆಲ್ಲಾ ವಹಿವಾಟುಗಳಿಗೆ ಪ್ರತ್ಯೇಕ ಖಾತೆಗಳಿವೆ. ಈ ಪ್ರತ್ಯೇಕತೆಯೂ ಕೆಪಿಎಸ್‌ಗಳನ್ನು ಬೇರೆಬೇರೆ ಮಾಡಿದೆ.

ಕೆಪಿಎಸ್‌ಗಳು ಮೂರು ರೀತಿಯ ಅನುದಾನ ಪಡೆಯಬಹುದು. ನಿರ್ವಹಣೆಗೆ 'ಅಭಿವೃದ್ಧಿ ಅನುದಾನ' ಪ್ರತಿ ವರ್ಷ ದೊರಕುತ್ತದೆ. ಉನ್ನತೀಕರಣಕ್ಕೆ ಕ್ರಿಯಾ ಯೋಜನೆ ಸಲ್ಲಿಸಿ 'ವಿಶೇಷ ಅನುದಾನ' ಪಡೆಯಬಹುದು. ಮಾಸ್ಟರ್ ಪ್ಲಾನ್ ಸಲ್ಲಿಸಿದರೆ 'ಹೆಚ್ಚುವರಿ ವಿಶೇಷ ಅನುದಾನ' ಪಡೆದು ಶಾಲೆಗಳಿಗೆ ಹೈಟೆಕ್ ರೂಪ ನೀಡಬಹುದು.

ಶಾಲಾ ಅಭಿವೃದ್ಧಿಯ ಸ್ಪಷ್ಟ ರೂಪ ಸಲ್ಲಿಸಿ ವಿಶೇಷ ಅನುದಾನ ಪಡೆಯುವಲ್ಲಿ ಶಾಲಾ ಪ್ರಾಚಾರ್ಯರು ವಿಫಲರಾಗುತ್ತಿದ್ದಾರೆ, ಇದಕ್ಕೆ ಅವರ ನಿರಾಸಕ್ತಿಯೇ ಕಾರಣ. ಕುಡಿಯುವ ನೀರು, ಶೌಚಾಲಯಗಳ ಸ್ವಚ್ಛತೆ ಹಾಗೂ ಇತರ ಉದ್ದೇಶಕ್ಕೆ ಕೊಡುವ ಅಲ್ಪ ಪ್ರಮಾಣದ ಅಭಿವೃದ್ಧಿ ಅನುದಾನವನ್ನಷ್ಟೇ ಪಡೆಯಲು ಬಹುತೇಕ ಶಾಲೆಗಳು ಶಕ್ತವಾಗಿವೆ.

'ಕೆಪಿಎಸ್‌ಗಳಿಗೆ ಹಣ ಇಲ್ಲ ಎಂದು ಸರ್ಕಾರ ಎಲ್ಲೂ ಹೇಳಿಲ್ಲ, ಶಾಲೆ ಆರಂಭವಾಗಿ ನಾಲ್ಕೈದು ವರ್ಷವಾದರೂ ಇಲಾಖೆಗೆ ಒಮ್ಮೆಯೂ ಆ್ಯಕ್ಷನ್ ಪ್ಲಾನ್, ಮಾಸ್ಟರ್‌ಪ್ಲಾನ್‌ಗಳನ್ನೇ ಕಳುಹಿಸದ ಬಹಳಷ್ಟು ಶಾಲೆಗಳಿವೆ. ಆದರೆ ಪ್ರಾಚಾರ್ಯ, ಉಪ ಪ್ರಾಚಾರ್ಯರ ನಿರಾಸಕ್ತಿಯಿಂದಾಗಿ ವಿಶೇಷ ಅನುದಾನ ಪಡೆಯಲು ಸಾಧ್ಯವಾಗಿಲ್ಲ' ಎಂದು ಡಿಡಿಪಿಐವೊಬ್ಬರು ತಿಳಿಸಿದರು.

'ಈ ಬಾರಿ ನಮಗೆ ₹ 13,500 ಅನುದಾನ ಬಂದಿದೆ. ಬರಬೇಕಿದ್ದ ಅನುದಾನದಲ್ಲಿ ಕಾಲು ಭಾಗವದು. ಶೌಚಾಲಯ ಸ್ವಚ್ಛಗೊಳಿಸುವ ಕೆಲಸಗಾರನ ಕೂಲಿಗೂ ಸಾಕಾಗುತ್ತಿಲ್ಲ. ಇಷ್ಟು ಕಡಿಮೆ ಅನುದಾನದಲ್ಲಿ ಶಾಲೆ ನಿರ್ವಹಿಸುವುದು ಹೇಗೆ' ಎಂದು ಹೆಸರು ಬಹಿರಂಗ ಮಾಡಬಾರದು ಎನ್ನುವ ಷರತ್ತಿನ ಮೇಲೆ ಪ್ರಾಥಮಿಕ ಶಾಲೆಯೊಂದರ ಮುಖ್ಯಶಿಕ್ಷಕಿ ಅಸಹಾಯಕತೆ ವ್ಯಕ್ತಪಡಿಸಿದರು.

ಬೇಡಿಕೆಗೆ ಅನುಗುಣವಾಗಿ ಅನುದಾನ: ಐದು ವರ್ಷಗಳ ಹಿಂದೆ ಶಾಲೆಗಳನ್ನು ಆರಂಭಿಸಿದಾಗ ಪ್ರತಿ ತಾಲ್ಲೂಕಿಗೆ ಒಂದು ಕೆಪಿಎಸ್ ಎಂದು ನಿರ್ಧರಿಸಲಾಗಿತ್ತು. ಈಗ ಸಂಖ್ಯೆ ಹೆಚ್ಚಿದೆ. ಆರಂಭದಲ್ಲಿ ಶಾಲೆಗಳ ಮೂಲ ಸೌಕರ್ಯಕ್ಕೆ ಸರ್ವ ಶಿಕ್ಷಣ ಅಭಿಯಾನ ಹಾಗೂ ಇತರೆ ಅನುದಾನದ ಅಡಿ ಪ್ರತಿ ಶಾಲೆಗೆ ₹ 15 ಲಕ್ಷ ನೀಡಲಾಗಿತ್ತು. ನಂತರ ಬೇಡಿಕೆಗಳಿಗೆ ಅನುಗುಣವಾಗಿ ಮೂಲ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

2022–23ನೇ ಸಾಲಿನಲ್ಲಿ ಮೂಲ ಸೌಕರ್ಯಗಳಿಗೆ ಸಾಕಷ್ಟು ಅನುದಾನ ದೊರಕಿದೆ. ಕ್ರಿಯಾ ಯೋಜನೆ ಸಲ್ಲಿಸಿದ ಶಾಲೆಗಳಲ್ಲಿ ಕೊಠಡಿಗಳು, ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯಗಳಿಗೆ ₹ 70 ಕೋಟಿ ಬಿಡುಗಡೆ ಮಾಡಲಾಗಿತ್ತು. ಕಂಪ್ಯೂಟರ್ ಲ್ಯಾಬ್ ನಿರ್ಮಾಣ, ಕಂಪ್ಯೂಟರ್ ಖರೀದಿ, ಎಲ್‌ಇಡಿ ಪ್ರೊಜೆಕ್ಟರ್, ಪ್ಯಾನಲ್ ಬೋರ್ಡ್‌ಗಳ ಖರೀದಿಗೆ ₹ 15 ಕೋಟಿ ನೀಡಲಾಗಿದೆ. ವಿಜ್ಞಾನ ಪ್ರಯೋಗಾಲಯ, ಕಲೆ, ಕುಶಲ ಕೊಠಡಿಗಳು, ಗ್ರಂಥಾಲಯ ನಿರ್ಮಾಣಕ್ಕಾಗಿ ₹ 50 ಕೋಟಿ ದೊರೆತಿದೆ.

**ತಂತ್ರಜ್ಞಾನ ಆಧಾರಿತ ಶಿಕ್ಷಣವಿಲ್ಲ:** ಶಾಲಾ ಹಂತದಿಂದಲೇ ಮಕ್ಕಳಿಗೆ ಕಂಪ್ಯೂಟರ್‌ನ ಮೂಲ ಜ್ಞಾನ ಒದಗಿಸಲು ತಂತ್ರಜ್ಞಾನ ಆಧಾರಿತ ಕಲಿಕೆ (ಟಿಎಲ್‌ಪಿ) ಗೂ ಆದ್ಯತೆ ನೀಡಲಾಗಿತ್ತು. ವೃತ್ತಿ ಶಿಕ್ಷಣ, ಕಲೆ, ಸಂಗೀತದಂಥ ಪಠ್ಯೇತರ ಚಟುವಟಿಕೆಗಳ ತರಬೇತಿಗೂ ಒತ್ತು ನೀಡಲು ಉದ್ದೇಶಿಸಲಾಗಿತ್ತು. 'ಗುರು ಚೇತನ' ಕಾರ್ಯಕ್ರಮದಲ್ಲಿ ವಿಶೇಷ ಶಿಕ್ಷಕರನ್ನು ನೇಮಿಸಲು ಆದೇಶಿಸಲಾಗಿತ್ತು. ಆದರೆ ಇವೆಲ್ಲವೂ ಕಡತಗಳಲ್ಲಿ ಮಾತ್ರ ಇವೆ. ಅನುಷ್ಠಾನ ಆಗೇ ಇಲ್ಲ.

'ಕೆಪಿಎಸ್ ಉದ್ದೇಶಗಳು ಚೆನ್ನಾಗಿವೆ, ಆದರೆ ಎಷ್ಟು ಶಾಲೆಗಳಲ್ಲಿ ಸಾಕಾರಗೊಂಡಿವೆಯೆಂದು ಹುಡುಕಿದರೆ ಬೇಸರವಾಗುತ್ತದೆ. ಶಾಲೆಗಳ ರಚನೆಯ ಉದ್ದೇಶ, ಸೌಲಭ್ಯಗಳ ಬಗ್ಗೆ ಪ್ರಾಚಾರ್ಯರೂ ಸೇರಿದಂತೆ ಶಿಕ್ಷಕರಿಗೆ, ಸಿಬ್ಬಂದಿಗೆ ತರಬೇತಿ ಅವಶ್ಯಕ' ಎಂಬುದು ಹೆಸರು ಬಹಿರಂಗಪಡಿಸಲು ಬಯಸದ ಕ್ಷೇತ್ರ ಶಿಕ್ಷಣಾಧಿಕಾರಿಯೊಬ್ಬರ ಪ್ರತಿಪಾದನೆ.

'ಇಂಗ್ಲಿಷ್ ಮಾಧ್ಯಮದ ಹೆಸರಿನಲ್ಲಿ ಕೆಪಿಎಸ್‌ಗಳು ಕಂಗ್ಲಿಷ್ ಶಾಲೆಗಳಾಗಿಬಿಟ್ಟಿವೆ. ಕೇಂದ್ರೀಯ ವಿದ್ಯಾಲಯ, ಆದರ್ಶ ವಿದ್ಯಾಲಯ, ನವೋದಯ ವಿದ್ಯಾಲಯಗಳ ಮಾದರಿಯಲ್ಲಿ ಶಿಕ್ಷಕರ ನೇರ ನೇಮಕಾತಿಯಾಗಬೇಕು. ಇಂಗ್ಲಿಷ್ ಬಲ್ಲ ಶಿಕ್ಷಕರನ್ನು ನೇರವಾಗಿ ನೇಮಿಸಿದರೆ ಪಬ್ಲಿಕ್ ಶಾಲೆಯಲ್ಲಿರುವ ಭಾಷಾ ಮಾಧ್ಯಮದ ಗೊಂದಲ ಬಗೆಹರಿಯಬಹುದು. ಕೆಪಿಎಸ್‌ಸಿ ಮೂಲಕವೂ ನೇಮಕಾತಿ ಮಾಡಿಕೊಳ್ಳಲು ಅಡ್ಡಿಯಿಲ್ಲ' ಎಂದು ಶಿಕ್ಷಣ ತಜ್ಞೆ ಡಿ.ವಿ.ಸುವರ್ಣಾ ಅಭಿಪ್ರಾಯಪಡುತ್ತಾರೆ.

ಕನ್ನಡ ಮಾಧ್ಯಮಕ್ಕೆ ಪಾಠ ಮಾಡುತ್ತಿದ್ದವರೇ ಇಂಗ್ಲಿಷ್ ಮಾಧ್ಯಮದ ಕೆಪಿಎಸ್‌ಗಳಿಗೂ ಪಾಠ ಮಾಡಬೇಕೆಂದು ಸೂಚಿಸಿರುವುದು ಶಿಕ್ಷಕರಲ್ಲಿ ಅಸಮಾಧಾನ ತರಿಸಿದೆ. ಸರ್ಕಾರಿ ಶಾಲೆಗಳ ಬಹುತೇಕರಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸುವ ಕೌಶಲವಿಲ್ಲ. ಸಮರ್ಪಕ ತರಬೇತಿಯೂ ಇಲ್ಲದೆ, ಕನ್ನಡ ಮಾಧ್ಯಮದಲ್ಲೇ ಪಾಠ ಮಾಡುತ್ತಿದ್ದಾರೆ. ಇಂಗ್ಲಿಷ್‌ನಲ್ಲಿ ಬೋಧನೆ –ಕಲಿಕೆ ದೂರವೇ ಉಳಿದಿದೆ.

**ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಸಂಧ್ಯಾ ಹೆಗಡೆ, ಮನೋಜ್ ಕುಮಾರ್ ಗುದ್ದಿ, ಎಂ.ಮಹೇಶ್, ಜಿ.ಶಿವಕುಮಾರ, ಇಮಾಮ್‌ಹುಸೇನ್ ಗೂಡುನವರ, ಮೈಲಾರಿ ಲಿಂಗಪ್ಪ**

## ಶಿಕ್ಷಕರ ವಿವರ

| 11,124 | 7,276 | 3,848 |
|---|---|---|
| ಮಂಜೂರಾದ ಹುದ್ದೆ | ಭರ್ತಿಯಾಗಿರುವ ಹುದ್ದೆ | ಖಾಲಿ ಹುದ್ದೆಗಳು |

### ವಿಭಾಗವಾರು




### ಅತಿಥಿ ಶಿಕ್ಷಕರೇ ಆಧಾರ

ಬಹುತೇಕ ಶಾಲೆಗಳಲ್ಲಿ ವಿಜ್ಞಾನ, ಇಂಗ್ಲಿಷ್, ಗಣಿತ ಶಿಕ್ಷಕ ಹುದ್ದೆಗಳು ಖಾಲಿ ಇದ್ದು, ಅತಿಥಿ ಶಿಕ್ಷಕರೇ ಆಧಾರವಾಗಿದ್ದಾರೆ.

ಹೆಚ್ಚು ಮಕ್ಕಳು, ಪಾಠ ಬೋಧನೆಯ ಹೊರೆ, ಇಂಗ್ಲಿಷ್ ಮಾಧ್ಯಮದ ಕಾರಣಗಳಿಂದ ಶಿಕ್ಷಕರು ದೂರವೇ ಉಳಿಯುತ್ತಾರೆ. ಕೇಳಿದ ಶಾಲೆಗಳಿಗೆ ಕೊಟ್ಟರೂ ಕೇಂದ್ರ ಸ್ಥಾನಕ್ಕೆ ತೆರಳುವ ಅವಕಾಶ ಸಿಕ್ಕರೂ ಬೇಡವೆನ್ನುತ್ತಾರೆ. ಸಾಮಾನ್ಯ ವರ್ಗಾವಣೆ ಸಮಯದಲ್ಲೂ ಬೇಡವೆನ್ನುವವರೇ ಹೆಚ್ಚು.

'ಕೆಪಿಎಸ್‌ಗಳು ಸಮಸ್ಯೆಯ ಸುಳಿಯಲ್ಲಿವೆ ಎಂದು ಶಿಕ್ಷಕರೇ ಒಪ್ಪಿಕೊಂಡಿದ್ದಾರೆ. ಅದೇ ಕಾರಣಕ್ಕೆ ಅವರು ಆ ಕಡೆಗೆ ತಿರುಗಿಯೂ ನೋಡುತ್ತಿಲ್ಲ. ಇದೇ ರೀತಿಯಾದರೆ ಇನ್ನೊಂದೆರಡು ವರ್ಷದಲ್ಲಿ ಕೆಪಿಎಸ್‌ಗಳನ್ನು ಮುಚ್ಚುವ ಪರಿಸ್ಥಿತಿ ಬರಬಹುದು' ಎಂದು ಹೆಸರು ಬಹಿರಂಗಪಡಿಸಲು ಬಯಸದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರೊಬ್ಬರು ಆತಂಕ ವ್ಯಕ್ತಪಡಿಸಿದರು.

### ಎರಡು ವರ್ಷಗಳಲ್ಲಿ ಇನ್ನೂ 200 ಕೆಪಿಎಸ್

ಹೋಬಳಿ ಮಟ್ಟದಲ್ಲಿ ಪಬ್ಲಿಕ್ ಶಾಲೆ ಆರಂಭಿಸಲು ಸಾಕಷ್ಟು ಬೇಡಿಕೆ ಇದೆ. ಈಗಾಗಲೇ ಕೆಪಿಎಸ್ ಶಾಲೆಗಳ ಸಂಖ್ಯೆ 300 ಗಡಿ ತಲುಪಿದೆ. ಎರಡು ವರ್ಷದಲ್ಲಿ ಇನ್ನೂ 200 ಶಾಲೆಗಳನ್ನು ತೆರೆಯಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡುವ ಭರವಸೆ ನೀಡಿದ್ದಾರೆ. ಶೌಚಾಲಯ, ಸ್ವಚ್ಛತೆ ನಿರ್ವಹಣೆಗಾಗಿಯೇ ₹153 ಕೋಟಿ, ಕೊಠಡಿಗಳ ನಿರ್ಮಾಣಕ್ಕಾಗಿ ₹550 ಕೋಟಿ, ಶೌಚಾಲಯಗಳ ನಿರ್ಮಾಣಕ್ಕೆ ₹ 200 ಕೋಟಿ, ಶಿಥಿಲಗೊಂಡಿರುವ ಶಾಲೆಗಳ ದುರಸ್ತಿಗೆ ₹100 ಕೋಟಿ ಒದಗಿಸಲಾಗಿದೆ. ಹಂತಹಂತವಾಗಿ ಎಲ್ಲ ಶಾಲೆಗಳಿಗೂ ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಮಾಹಿತಿ ನೀಡಿದರು.

**ಹಲವೆಡೆ ಕೆಪಿಎಸ್ ಶಾಲೆಗಳು ಖಾಸಗಿ ಶಾಲೆಗಳನ್ನೂ ಮೀರಿಸಿವೆ. ಎಲ್ಲಾ ಶಾಲೆಗಳೂ ಆ ರೀತಿಯಾಗಲು ಅವಕಾಶವಿದೆ**
**ಎಂ.ರೇಣುಕಮ್ಮ**
ಹಿರಿಯ ಸಹ ಶಿಕ್ಷಕಿ, ಮಂಡ್ಯ ಕೆಪಿಎಸ್

**ಕೆಪಿಎಸ್‌ನ ಮೂರು ವಿಭಾಗಗಳನ್ನು ಶೀಘ್ರ ಆಡಳಿತಾತ್ಮಕವಾಗಿ ಒಂದುಗೂಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ**
**ಬಿ.ವಿ.ಕಾವೇರಿ**
ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ

**ಕಟಕೋಳ ಕೆಪಿಎಸ್‌ನಲ್ಲಿ ಕಲಿಕಾ ಚಟುವಟಿಕೆ ಉತ್ತಮವಾಗಿದೆ. ಆದರೆ ಇಲ್ಲಿ ಇಂಗ್ಲಿಷ್ ವಿಭಾಗಕ್ಕೆ ಪ್ರತ್ಯೇಕವಾಗಿ ಶಿಕ್ಷಕರನ್ನು ನೇಮಿಸಬೇಕು**
**ಸುಶೀಲ ಕುಮಾರ ತಂಗೋಜಿ**
ವಿದ್ಯಾರ್ಥಿಯ ತಂದೆ, ಕಟಕೋಳ, ಬೆಳಗಾವಿ ಜಿಲ್ಲೆ

## ಕೆಲ ಕೆಪಿಎಸ್‌ನಲ್ಲಿ ಆಶಾಕಿರಣ

ಕೆ.ಆರ್‌.ಪೇಟೆ ಕೆಪಿಎಸ್ ದಾಖಲಾತಿಗೆ ಪೋಷಕರು ಸಾಲುಗಟ್ಟಿ ನಿಂತಿರುವುದು

### ನಸುಕಿನಲ್ಲೇ ಸಾಲುಗಟ್ಟುವ ಪೋಷಕರು

ರಾಜ್ಯದ ಕೆಲವು ಕರ್ನಾಟಕ ಪಬ್ಲಿಕ್ ಶಾಲೆಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ವಿವಿಧ ಕ್ಷೇತ್ರಗಳ ಸಾಧಕರು ಧಾರಾಳವಾಗಿ ದಾನ ನೀಡುತ್ತಿದ್ದು ಮಕ್ಕಳ ಭವಿಷ್ಯಕ್ಕೆ ಬೆಂಗಾವಲಾಗಿದ್ದಾರೆ.

ಕೆ.ಆರ್.ಪೇಟೆಯ ಶತಮಾನದ ಶಾಲೆ ಕೆಪಿಎಸ್ ಹೊಸ ರೂಪ ಪಡೆದಿದ್ದು ಗುಣಮಟ್ಟದ ಶಿಕ್ಷಣದಿಂದ ರಾಜ್ಯದ ಗಮನ ಸೆಳೆದಿದೆ. ದಾಖಲಾತಿ ವೇಳೆಯಲ್ಲಿ ಪೋಷಕರು ನಸುಕಿನಿಂದಲೇ ಸರತಿ ಸಾಲಿನಲ್ಲಿ ನಿಲ್ಲುತ್ತಾರೆ. ರಾಜ್ಯದಲ್ಲಿ ಮೊದಲ ಬಾರಿಗೆ ಪೂರ್ವ ಪ್ರಾಥಮಿಕ ಶಾಲೆ ಆರಂಭಿಸಿದ್ದ ಕೀರ್ತಿ ಶಾಲೆಗಿದೆ.

ಚಿತ್ರನಟ ಪ್ರಕಾಶ್ ರಾಜ್ ಸೇರಿದಂತೆ ಹಲವರು ಅಪಾರ ಪ್ರಮಾಣ ಸಂಪನ್ಮೂಲ ಒದಗಿಸಿದ್ದಾರೆ.

### ಗಾವಡಗೆರೆಯಲ್ಲಿ ನವಚೈತನ್ಯ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನ ಗಾವಡಗೆರೆಯ ಕೆಪಿಎಸ್ ಸಮಗ್ರ ಮೂಲ ಸವಲತ್ತು ಹಾಗೂ ಕಲಿಕೆಗೆ ಪೂರಕವಾದ ಪರಿಸರದಿಂದ ಗ್ರಾಮೀಣ ಭಾಗದಲ್ಲಿ ಹೊಸ ಚೈತನ್ಯ ಮೂಡಿಸಿದೆ. 6 ಎಕರೆ ಪ್ರದೇಶದಲ್ಲಿ ಆರಂಭವಾದ ಶಾಲೆಯಲ್ಲಿ 1,235 ಮಕ್ಕಳಿದ್ದಾರೆ. ಸುಸಜ್ಜಿತ ಗ್ರಂಥಾಲಯದಲ್ಲಿ 2,330 ಪುಸ್ತಕಗಳಿವೆ. ಅಚ್ಚುಕಟ್ಟಾದ ವಿಜ್ಞಾನ ಪ್ರಯೋಗಾಲಯವಿದೆ.

ಪ್ರತ್ಯೇಕ ಶೌಚಾಲಯ, ಉದ್ಯಾನ, ತರಗತಿಯಲ್ಲಿ ಸ್ಮಾರ್ಟ್ ಬೋರ್ಡ್, ಸಿಸಿ ಕ್ಯಾಮೆರಾ ಕಣ್ಗಾವಲು ಪೋಷಕರ ಗಮನ ಸೆಳೆದಿದೆ. ವೈಜ್ಞಾನಿಕವಾಗಿ ಶಿಕ್ಷಣ ತಜ್ಞರ ಸಲಹೆ ಮೇರೆಗೆ ಪ್ರತಿ ತರಗತಿಯಲ್ಲಿ 30 ವಿದ್ಯಾರ್ಥಿಗೊಬ್ಬರಂತೆ ಶಿಕ್ಷಕರಿದ್ದಾರೆ.

'ಕೆಪಿಎಸ್ ಆರಂಭವಾದ ನಂತರ ನಮ್ಮ ಭಾಗದಲ್ಲಿ ಖಾಸಗಿಯವರ ಹಾವಳಿಯೂ ಕಡಿಮೆಯಾಗಿದೆ' ಎಂದು ಪ್ರಾಚಾರ್ಯ ಜನಾರ್ಧನ್ ಹೇಳುತ್ತಾರೆ.

### ಹೊಸ ಯಳನಾಡಿನಲ್ಲಿ ಹೈಟೆಕ್ ಸ್ಪರ್ಶ

ಚಿತ್ರದುರ್ಗದ ಹಿರಿಯೂರಿನ ಹೊಸ ಯಳನಾಡು ಕೆಪಿಎಸ್‌ಗೆ ಹೈಟೆಕ್ ಸ್ಪರ್ಶ ನೀಡಲಾಗಿದ್ದು, ಮಕ್ಕಳು–ಪೋಷಕರ ಗಮನ ಸೆಳೆಯುತ್ತಿದೆ. ವಿಶಾಲ ಮೈದಾನ, ಅತ್ಯಾಧುನಿಕ ತರಗತಿ ಕೊಠಡಿಗಳು, ಸುಸಜ್ಜಿತ ಪ್ರಯೋಗಾಲಯ, ಮಕ್ಕಳಿಗಾಗಿಯೇ ಮೀಸಲಿಟ್ಟಿರುವ ಬಸ್‌ಗಳು, ಜಿಮ್ –ಇಲ್ಲಿನ ವಿಶೇಷ.

ಕಲಾ, ವಾಣಿಜ್ಯ ವಿಭಾಗಕ್ಕೆ ಸೀಮಿತವಾಗಿದ್ದ ಕಾಲೇಜಿನಲ್ಲಿ ಕೆಲ ವರ್ಷಗಳ ಹಿಂದೆ ವಿಜ್ಞಾನ ವಿಭಾಗ ಆರಂಭವಾಗಿದೆ. ಅದರ ಬೆನ್ನಲ್ಲೇ 'ಸೈನ್ಸ್ ಪಾರ್ಕ್' ತಲೆ ಎತ್ತಿದೆ. ಕಂಪ್ಯೂಟರ್ ಲ್ಯಾಬ್, ಇ-ಲೈಬ್ರೆರಿ, ಇನ್ಫೋಸಿಸ್ ಸಂಸ್ಥೆಯ ನೆರವಿನಿಂದ ₹4 ಕೋಟಿ ವೆಚ್ಚದಲ್ಲಿ 'ಸುಜ್ಞಾನ ಭವನ'ವನ್ನೂ ನಿರ್ಮಿಸಲಾಗಿದೆ.

ಏಕಕಾಲಕ್ಕೆ ಒಂದು ಸಾವಿರ ಮಂದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು. ₹25 ಲಕ್ಷ ವೆಚ್ಚದಲ್ಲಿ ಕಬಡ್ಡಿ, ವಾಲಿಬಾಲ್, ಟೆನಿಸ್, ಅಂಕಣಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರೌಢಶಾಲೆಗೆ ಪ್ರತ್ಯೇಕ ಕಂಪ್ಯೂಟರ್ ಲ್ಯಾಬ್ ಇದೆ.

ಇಲ್ಲಿ ಪ್ರತಿ ವರ್ಷ ಜಿಲ್ಲೆಯ ವಿದ್ಯಾರ್ಥಿಗಳಿಗಾಗಿ ಉಚಿತವಾಗಿ ಸಿಇಟಿ ತರಬೇತಿ ನೀಡಲಾಗುತ್ತಿದೆ. 19 ಎಕರೆ ವಿಸ್ತೀರ್ಣದ ಶಾಲೆಯ 16 ಎಕರೆ ಭೂಮಿಯನ್ನು ದಾನಿಗಳೇ ನೀಡಿದ್ದಾರೆ.

ಬೆಳಗಾವಿ ಜಿಲ್ಲೆ ಯರಗಟ್ಟ ಗ್ರಾಮ ಕೆಪಿಎಸ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 400ರಿಂದ 1200ಕ್ಕೆ ತಲುಪಿದೆ. ಐದು ಸ್ಮಾರ್ಟ್ ಕ್ಲಾಸ್, 45 ಕಂಪ್ಯೂಟರ್, ಪ್ರಯೋಗಾಲಯಗಳಿವೆ. ಸ್ಯಾಮ್‌ಸಂಗ್ ಕಂಪನಿ 40 ಟ್ಯಾಬ್ ಕೊಟ್ಟಿದ್ದು ದಾನಿಗಳು ಶಾಲೆ ಸುಧಾರಣೆಗೆ ಬೆನ್ನಿಗೆ ನಿಂತಿದ್ದಾರೆ.

### ಸಿಎಂ ತವರು ಶಾಲೆಗೆ ಹೊಸ ಕೊಠಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಗ್ರಾಮ ಸಿದ್ದರಾಮನಹುಂಡಿಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಸದ್ಯ ಎಲ್ ಕೆಜಿಯಿಂದ 10ನೇ ತರಗತಿವರೆಗೆ 850 ವಿದ್ಯಾರ್ಥಿಗಳಿದ್ದಾರೆ. ಈ ವರ್ಷ ಎಲ್ ಕೆಜಿಗೆ 60 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಕನ್ನಡ–ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಸಾಕಷ್ಟು ಶಿಕ್ಷಕರೂ ಇದ್ದಾರೆ. 19 ಕೊಠಡಿಗಳ ಪೈಕಿ ಆರು ಶಿಥಿಲಗೊಳ್ಳುತ್ತಿದ್ದು, ಆರು ಹೊಸ ಕೊಠಡಿ ನಿರ್ಮಾಣಕ್ಕೆ ₹ 1.3 ಕೋಟಿ ಅನುದಾನ ಮಂಜೂರಾಗಿದೆ.

ಚಿತ್ರದುರ್ಗ ತಾಲ್ಲೂಕು ಹಿರಿಯೂರಿನ ಹೊಸ ಯಳನಾಡು ಕೆಪಿಎಸ್ ಶಾಲೆಯ ಪೂರ್ವ ಪ್ರಾಥಮಿಕ ಮಕ್ಕಳಿಗೆ ಪಾಠ ಮಾಡುತ್ತಿರುವುದು

## ಗುಂಡಣ್ಣ

## 25 ವರ್ಷಗಳ ಹಿಂದೆ

ಗುರುವಾರ, 17-9-1998

**● ಅಂತರರಾಷ್ಟ್ರೀಯ ವಿಮಾನ ಟರ್ಮಿನಲ್ ಎಚ್‌ಎಎಲ್‌ನಲ್ಲಿ**

**ನವದೆಹಲಿ, ಸೆ. 16**– ಬರುವ ಜನವರಿ 1ರಿಂದ ಪ್ರಸ್ತುತ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿಯೇ ಪ್ರತ್ಯೇಕ ಅಂತರರಾಷ್ಟ್ರೀಯ ವಿಮಾನ ಟರ್ಮಿನಲ್ ಕಾರ್ಯಾರಂಭ ಮಾಡಲಿದೆ ಎಂದು ನಾಗರಿಕ ವಿಮಾನಯಾನ ಖಾತೆ ಸಚಿವ ಅನಂತ್ ಕುಮಾರ್ ಇಂದು ಇಲ್ಲಿ ಪ್ರಕಟಿಸಿದರು.

ಈ ಮಧ್ಯೆ ಉದ್ದೇಶಿತ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯ ಬಗೆಗೆ ಇರುವ ಹಲವಾರು ಸಮಸ್ಯೆಗಳ ಬಗೆಗೆ ಈ ತಿಂಗಳ 18ರಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮತ್ತು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ಅವರೊಂದಿಗೆ ಚರ್ಚೆ ನಡೆಸುವುದಾಗಿ ಅವರು ಸ್ಪಷ್ಟಪಡಿಸಿದರು.

## 50 ವರ್ಷಗಳ ಹಿಂದೆ

ಸೋಮವಾರ, 17-9-1973

**● ಹಣದುಬ್ಬರ, ಕಪ್ಪುಹಣ ವಿರುದ್ಧ ಸಮಗ್ರ ಕ್ರಮ**

**ನವದೆಹಲಿ, ಸೆ. 16**– ಹಣದುಬ್ಬರದ ನಿಗ್ರಹಕ್ಕಾಗಿ ಉಗ್ರ ಕ್ರಮಗಳನ್ನು ತೆಗೆದುಕೊಂಡು, ರಾಷ್ಟ್ರದಲ್ಲಿ ಕಪ್ಪುಹಣದ ಪಿಡುಗನ್ನು ತಡೆಗಟ್ಟಲು ಸಮಗ್ರ ತಂತ್ರ ರೂಪಿಸಬೇಕೆಂದು ಎಐಸಿಸಿ ಇಂದು ಕರೆ ಕೊಟ್ಟಿದೆ.

ಆರ್ಥಿಕ ಪರಿಸ್ಥಿತಿ ಕುರಿತು ಕಾರ್ಯಕಾರಿ ಸಮಿತಿ ಸೂಚಿಸಿದಂತೆ ಅದು ಅಂಗೀಕರಿಸಿದ ನಿರ್ಣಯ, ಹಣಕಾಸು ರಂಗದ ವಿಷಯದಲ್ಲಿ 'ಸ್ವಲ್ಪ ಸಂಶಯ ಮತ್ತು ಭೀತಿ'ಗಳಿವೆ ಎಂದು ಒಪ್ಪಿಕೊಂಡು ವಿಳಂಬ ಮಾಡದೆ ನಿರ್ದಿಷ್ಟ ಧ್ಯೇಯ ಮತ್ತು ಕಾರ್ಯಕ್ರಮಗಳ ಗುರಿಗಳನ್ನು ನಿರೂಪಿಸುವುದು ಅವಶ್ಯವೆಂದೂ ತಿಳಿಸಿದೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಸೆಪ್ಟೆಂಬರ್ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದ್ವಿತೀಯ ಗಂ. 11-10 ನಕ್ಷತ್ರ: ಹಸ್ತ ಗಂ. 10-02 ಯೋಗ: ಬ್ರಹ್ಮ ಗಂ. 28-27 ಕರಣ: ಕೌಲವ ಗಂ. 11-10, ಸಿಂಹ ಮಾಸದ 31 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 2.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-23 ಸೂರ್ಯಾಸ್ತ: 06-27,
ಮುಸ್ಲಿಂ ದಿನಾಂಕ : 01 ರಬೀಉಲ್ಲಾವಲ್
ದಿನ ಭವಿಷ್ಯ: ವಿಶ್ವಕರ್ಮ ಪೂಜಾ, ಅದೃಷ್ಟ ಸಂಖ್ಯೆ: 7, 2

**ಮೇಷ:** ಉನ್ನತ ವಿದ್ಯಾಭ್ಯಾಸ ಮಾಡುವ ನಿಮ್ಮ ಕನಸಿಗೆ, ಪರಿಚಿತರಿಂದ ಆರ್ಥಿಕ ಬಲ ಸಿಗಲಿದೆ. ದೇವರ, ಹಿರಿಯರ ಅನುಗ್ರಹ ಸಂಪಾದಿಸುವುದರಿಂದ ಕುಟುಂಬದಲ್ಲಿನ ಸಮಸ್ಯೆಗಳಿಗೆ ಮುಕ್ತಿ. ಆರೋಗ್ಯ ಸುಧಾರಣೆಯಾಗುವುದು.

**ವೃಷಭ:** ಬದುಕಿನ ಕವಲುದಾರಿಯಲ್ಲಿರುವ ನಿಮಗೆ ದೇವತಾನುಗ್ರಹದಿಂದ ಸರಿಯಾದ ಮಾರ್ಗದರ್ಶನ ದೊರೆಯುವುದು. ಗುಂಪು ಚಟುವಟಿಕೆಗಳಿಗೆ ನಿಮ್ಮ ಮುಂದಾಳತ್ವ ಅಗತ್ಯವಾಗಿರುವುದು. ಆಪಾದನೆಗಳು ಬರುವ ಸಾಧ್ಯತೆಗಳಿದೆ.

**ಮಿಥುನ:** ಸಂಸ್ಥೆಯ ಅಭಿವೃದ್ಧಿಗಾಗಿ ಕಾರ್ಮಿಕ ವರ್ಗದೊಡನೆ ಸಕಾರಾತ್ಮಕ ಮಾತುಕತೆ ನಡೆಸಲು ನಿರ್ಧರಿಸಿ. ದಾಂಪತ್ಯ ಜೀವನ ಪರಸ್ಪರ ಹೊಂದಾಣಿಕೆಯಿಂದ ಸುಖಮಯವಾಗಿ ಸಾಗಲಿದೆ.

**ಕರ್ಕಾಟಕ:** ಉತ್ತಮ ಲಾಭಕರವಾದ ಆರ್ಥಿಕ ಪರಿಸ್ಥಿತಿಯಿಂದಾಗಿ ಪಾಲುದಾರಿಕೆಯಲ್ಲಿ ಮುಂದುವರಿಯಲು ಮತ್ತು ನಿಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಪೂರಕವಾಗುವುದು. ಮಗನಿಗೆ ಉದ್ಯೋಗ ದೊರೆತು ಸಂತೋಷ ಆಗುವುದು.

**ಸಿಂಹ:** ಹಿರಿಯರು ಹೇಳಿದಂತೆ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದನ್ನು ಕಲಿಯಿರಿ. ಈ ದಿನದಂದು ನಿಮ್ಮ ಸ್ವಲ್ಪ ಸ್ವಲ್ಪ ಪ್ರಯತ್ನಕ್ಕೂ ಹೆಚ್ಚಿನ ಉಪಯೋಗ ಪ್ರಾಪ್ತಿಯಾಗಲಿದೆ. ಬಂಧುಗಳ ಆಗಮನ ಸಂತೋಷ ಕೊಡಲಿದೆ.

**ಕನ್ಯಾ:** ನಿಮ್ಮ ದ್ವಿಸ್ವಭಾವದ ನಡವಳಿಕೆಯನ್ನು ಕೊಂಚ ಹಿಡಿತದಲ್ಲಿಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕುವುದು ತಪ್ಪುವುದು. ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ನಿಮಗೆ ಈ ದಿನ ತಿಳಿಯುವುದು.

**ತುಲಾ:** ಹೆಚ್ಚು ಜವಾಬ್ದಾರಿಯುತವಾದ ಹುದ್ದೆ ನಿಮ್ಮ ಪಾಲಿಗೆ ಬರಲಿದೆಯಾದ್ದರಿಂದ ಕರ್ತವ್ಯದಲ್ಲಿ ಯಾವುದೇ ಲೋಪವಾಗದಂತೆ ಗಮನಹರಿಸಿ. ಸ್ವತ್ತು ವಿಚಾರದಲ್ಲಿ ಇದ್ದಂತಹ ವಿವಾದಗಳು ಮುಕ್ತಾಯವಾಗಿ ನಿಮಗೆ ಜಯ ಸಿಗಲಿದೆ.

**ವೃಶ್ಚಿಕ:** ವಿಮೆ ಸಲಹೆಗಾರರಿಗೆ ವೃತ್ತಿ ರಂಗದಲ್ಲಿ ಉತ್ತಮ ಯಶಸ್ಸು ಕಂಡು ಬರಲಿದೆ. ಈ ದಿನ ಹೂಡಿಕೆಯ ವಿಚಾರದಲ್ಲಿ ಬಂಗಾರ ಖರೀದಿಯ ಬಗ್ಗೆ ಯೋಚಿಸಬಹುದು. ದೂರದ ಪ್ರಯಾಣ ಸುಖಕರವಾಗಿರುವುದು.

**ಧನು:** ನಿಮ್ಮ ಮನಸ್ಸು ಚಂಚಲವಾಗಿರುವುದು. ಯಾರ ಮಾತಿಗೂ ಮರುಳಾಗದೆ ನಿಮ್ಮ ನಿಲುವು ತೀರ್ಮಾನಿಸುವುದು ಉತ್ತಮ. ಗುರುಬಲವಿರುವ ಕಾರಣದಿಂದ ನೀವು ಕೈಹಾಕಿದ ಕೆಲಸಗಳು ಜಯಶೀಲವಾಗುವುವು.

**ಮಕರ:** ವಿದೇಶದಲ್ಲಿ ಉದ್ಯೋಗ ದೊರಕಿಸಿಕೊಳ್ಳಲು ನೀವು ಮಾಡಿದ ಪ್ರಯತ್ನ ಜಯ ಕಾಣಲಿದೆ. ದುಂದುವೆಚ್ಚದಿಂದ ದಿನಾಂತ್ಯದಲ್ಲಿ ಹಣದ ಅಭಾವ ಉಂಟಾಗುತ್ತದೆ. ನಿಜವಾದ ಗೆಳೆಯ ಯಾರೆಂದು ಈ ದಿನ ಅರಿತುಕೊಳ್ಳುವಿರಿ.

**ಕುಂಭ:** ಹತ್ತಾರು ಕೆಲಸದ ಸ್ವಲ್ಪ-ಸ್ವಲ್ಪ ಜವಾಬ್ದಾರಿ ಹೊರುವುದಕ್ಕಿಂತ ನಿರ್ದಿಷ್ಟ ಕೆಲಸಕ್ಕೆ ಸಂಪೂರ್ಣ ಗಮನ ಕೊಡಿ. ನಿಧಾನವಾಗಿಯಾದರೂ ಸ್ವಂತ ವ್ಯವಹಾರದ ಲಾಭವು ಬಂದು ಕೈ ಸೇರಿದ ಸಂತಸ ನಿಮ್ಮದಾಗುವುದು.

**ಮೀನ:** ಯಂತ್ರೋಪಕರಣ ಮಾರಾಟದಿಂದ, ಪಶು ಸಂಗೋಪನೆಯಿಂದ ಹೆಚ್ಚಿನ ಲಾಭ ಇರುವುದು. ವೃತ್ತಿಗೆ ಸಂಬಂಧಿಸಿದಂತೆ ಕಷ್ಟಪಟ್ಟು, ಜೊತೆಯಲ್ಲಿ ಬುದ್ಧಿವಂತಿಕೆಯನ್ನು ಬಳಸಿ ಕೆಲಸ ಮಾಡಬೇಕಾಗುತ್ತದೆ.

## ಪದಬಂಧ 5444

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಹೋಲಿಕೆಗೆ ಮೀರಿದುದು (4)
3.ಮಿತಿ ಮೀರಿದ ಕೋಪವಿದು (3)
4.ಮರವನ್ನು ಕೊಯ್ಯುವ ಸಾಧನ (4)
6.ರಂಗು ತುಂಬಿರುವ ಹಸೆ (3)
7.ನಾಮ ಹಚ್ಚಿಕೊಂಡವನ ಹೆಸರು (4)
8.ಕರಿಯ ಹತ್ತಿರವಿರುವ ಕಿರುಗತ್ತಿ (3)
9.ಮರುನುಡಿ ಅಥವಾ ಜವಾಬು (4)
12.ಭವದಲ್ಲಿ ಕೊನೆಗೊಂಡಿರುವ ಹುಟ್ಟು (2)
13.ಮಲಗುವ ಮನೆಯಿದು (4)
15.ಒಳ್ಳೆಯ ಗುಣಗಳಿಂದ ಕೂಡಿದ ಮನುಷ್ಯ (3)
16.ಎಳೆತನದಿಂದಲೂ ಬೆಳೆಸಿಕೊಂಡು ಬಂದಿರುವ ಸ್ನೇಹ (4)

**ಮೇಲಿಂದ ಕೆಳಕ್ಕೆ**
1.ಅಪರಿಚಿತನ ಬಳಿಯಲ್ಲಿರುವುದು ಚೊಕ್ಕ ಚಿನ್ನ! (4)
2.ಮಗಳ ಹತ್ತಿರವಿರುವ ಪುತ್ರ (2)
3.ಚಿತ್ರವಿದ್ದುದಕ್ಕೇ ಇಷ್ಟೊಂದು ಬೆರಗು! (3)
5.ಮಯನ ಬಳಿ ಕಳೆದ ಕಾಲ (3)
7.ನಾಗರಿಕತೆ ಕಲಿತ ಸ್ತ್ರೀ (2)
8.ಕಠೋರವಾಗಿರುವ ಕೈ! (2)
9.ವೇಷ ಧರಿಸಿಕೊಂಡು ಒಳಹೋಗುವಿಕೆ (3)
10.ಅವನ ಸಾವು ಹೀಗೆ ಬಂದಿದೆ! (4)
11.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
14.ಹಲಗೆಗಾಗಿ ಈ ವೈರವೇ? (2)

| | | | | | | | | |
|---|---|---|---|---|---|---|---|---|
| ■ | ■ | 1 | | | 2 | ■ | ■ | ■ |
| 3 | | | ■ | ■ | 4 | | | 5 |
| | ■ | 6 | | | ■ | ■ | ■ | |
| | ■ | | ■ | ■ | 7 | | | |
| ■ | ■ | ■ | 8 | | | ■ | ■ | ■ |
| 9 | | | | ■ | ■ | 10 | ■ | 11 |
| | ■ | ■ | ■ | 12 | | | ■ | |
| 13 | | | 14 | ■ | ■ | 15 | | |
| ■ | ■ | ■ | 16 | | | | ■ | ■ |

### 5443ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಆಗಂತುಕ 2.ಸಾಮರಸ್ಯ
4.ಸಾಕ್ಷಾತ್ಕಾರ 6.ಪ್ರಸಂಗ
7.ನೆಪ 9.ಕನಕ
11.ರವಿ 13.ಕವಲು
14.ಟಕ್ಕುತನ 16.ಮನೆತನ
17.ನಿರಾಯುಧ

**ಮೇಲಿಂದ ಕೆಳಕ್ಕೆ:**
1.ಅತ್ಮಸಾಧನೆ 2.ಸಾಮು
3.ರಕ್ತಸಂಚಾರ 5.ರಥಿಕ
8.ಪರಿವರ್ತನೆ 10.ಕರಟ
12.ವಿಧಾನಸೌಧ 15.ಮೌನ

## ಸುಡೊಕು 5830

| | | | | | | | | |
|---|---|---|---|---|---|---|---|---|
| | | 4 | 1 | 5 | | | 8 | |
| | 1 | | | 8 | | 5 | | 9 |
| 8 | | 3 | | | 9 | | 1 | |
| 3 | | 9 | 5 | | 1 | | | |
| | 6 | | | 9 | | | | |
| 5 | | 1 | 6 | | 8 | | | |
| | 7 | | | 3 | 5 | 2 | | 4 |
| 4 | | 5 | | | | | | |
| | 8 | | | 6 | | 3 | | 1 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5829 ಸುಡೊಕು

| | | | | | | | | |
|---|---|---|---|---|---|---|---|---|
| 4 | 7 | 5 | 3 | 9 | 8 | 2 | 6 | 1 |
| 1 | 2 | 9 | 6 | 4 | 7 | 5 | 8 | 3 |
| 3 | 6 | 8 | 5 | 1 | 2 | 4 | 9 | 7 |
| 9 | 5 | 2 | 7 | 8 | 1 | 3 | 4 | 6 |
| 6 | 4 | 1 | 9 | 5 | 3 | 8 | 7 | 2 |
| 8 | 3 | 7 | 2 | 6 | 4 | 1 | 5 | 9 |
| 7 | 1 | 6 | 4 | 3 | 5 | 9 | 2 | 8 |
| 5 | 9 | 3 | 8 | 2 | 6 | 7 | 1 | 4 |
| 2 | 8 | 4 | 1 | 7 | 9 | 6 | 3 | 5 |

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ದೇವಾಲಯದ ಪೂಜೆ ಕಾಯ್ದಿರಿಸಲು ಆ್ಯಪ್

**ಒಂದನೇ ಪುಟದಿಂದ**

ಶಕ್ತಿ ಯೋಜನೆ ಆರಂಭವಾದ ಬಳಿಕ ದೇವಾಲಯಗಳಿಗೆ ಬರುವ ಭಕ್ತರ ಪ್ರಮಾಣ ಹೆಚ್ಚಿದೆ. 'ಎ' ಮತ್ತು 'ಬಿ' ದರ್ಜೆಯ ದೇವಸ್ಥಾನಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಕಡ್ಡಾಯವಾಗಿ ಅಳವಡಿಸಬೇಕು. ತಾಯಂದಿರಿಗೆ ಶಿಶು ಆರೈಕೆ ಮಾಡಲು ಹಾಗೂ ಹಾಲು ಉಣಿಸಲು ಪ್ರತ್ಯೇಕ 'ಅಮ್ಮ' ಕೇಂದ್ರ ತೆರೆಯಬೇಕು. 65 ವರ್ಷ ದಾಟಿದ ಹಿರಿಯರಿಗೆ, ಅಂಗವಿಕಲರಿಗೆ ನೇರ ಮತ್ತು ಸರಾಗವಾಗಿ ದೇವರ ದರ್ಶನ ಪಡೆಯಲು ವ್ಯವಸ್ಥೆ ಮಾಡಬೇಕು. ಎಲ್ಲ ದೇವಸ್ಥಾನಗಳಲ್ಲಿ ಕುಡಿಯುವ ನೀರು, ಶೌಚಾಲಯ ಸಹಿತ ಮೂಲ ಸೌಲಭ್ಯಗಳಿರಬೇಕು. ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ನಡೆಯಬೇಕು. ಆರಂಭಿಕ ಹಂತವಾಗಿ 25 ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಲು ಮಾಸ್ಟರ್‌ಪ್ಲಾನ್ ತಯಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ದೇಗುಲಗಳ ಸುತ್ತ 100 ಮೀಟರ್ ಸುತ್ತಳತೆಯಲ್ಲಿ ಮದ್ಯ, ಸಿಗರೇಟು, ಗುಟ್ಕಾ ಹಾಗೂ ಇತರೆ ಮಾದಕ ವಸ್ತುಗಳ ಮಾರಾಟವನ್ನು ಕಡ್ಡಾಯವಾಗಿ ನಿಷೇಧಿಸಿ ಆದೇಶ ಹೊರಡಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

**ಒತ್ತುವರಿ ತೆರವಿಗೆ ಕ್ರಮ:** 'ದೇವಾಲಯಗಳ ಸ್ಥಿರ ಆಸ್ತಿಗಳನ್ನು ಸರ್ವೆ ಮಾಡಬೇಕು. ಒತ್ತುವರಿ ಇದ್ದರೆ ತೆರವುಗೊಳಿಸಬೇಕು. ಆಸ್ತಿ ದಾಖಲೀಕರಣ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

### ಅರ್ಜಿ ಸಲ್ಲಿಸಿದರೆ ಮಹಿಳೆಗೂ ಅರ್ಚಕ ಸ್ಥಾನ

ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳಿಗೆ ಅರ್ಚಕರಾಗಲು ಮಹಿಳೆಯರು ಅರ್ಜಿ ಸಲ್ಲಿಸಿದರೆ ಅವರ ನೇಮಕಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ರಾಮಲಿಂಗಾರೆಡ್ಡಿ ಹೇಳಿದರು.

ತಮಿಳುನಾಡಿನಲ್ಲಿ ಮಹಿಳಾ ಅರ್ಚಕರಿಯರಿಗೆ ಅವಕಾಶ ನೀಡಿದಂತೆ, ಕರ್ನಾಟಕದಲ್ಲೂ ಜಾರಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಅವರು ಉತ್ತರಿಸಿದರು.

ತಸ್ತೀಕ್ ಮೊತ್ತವನ್ನು ನೇರವಾಗಿ ಅರ್ಚಕರ ಖಾತೆಗೆ ಪಾವತಿ ಮಾಡಲು ಕ್ರಮ ವಹಿಸಲಾಗುವುದು ಎಂದರು.

# ತಿಮಿಂಗಿಲಗಳ ನಿಗೂಢ ಸಾವು

**ಒಂದನೇ ಪುಟದಿಂದ**

'10 ವರ್ಷಗಳಲ್ಲಿ ಜಿಲ್ಲೆಯ ವಿವಿಧೆಡೆ ಬೇರೆ ಬೇರೆ ಸಮಯದಲ್ಲಿ 10ಕ್ಕೂ ಹೆಚ್ಚು ತಿಮಿಂಗಿಲಗಳ ಕಳೇಬರ ಪತ್ತೆಯಾಗಿದ್ದವು. ಆದರೆ, ಒಂದೇ ಪ್ರದೇಶದಲ್ಲಿ ತಿಮಿಂಗಿಲಗಳ ಸರಣಿ ಸಾವು ಸಂಭವಿಸಿಲ್ಲ. ಸೆ.9ರಂದು ಸಿಕ್ಕ ತಿಮಿಂಗಿಲದ ಕಳೇಬರ ಮರಣೋತ್ತರ ಪರೀಕ್ಷೆ ನಡೆಸಲಾಗದಷ್ಟು ಜೀರ್ಣಾವಸ್ಥೆಯಲ್ಲಿತ್ತು. ವಯೋಸಹಜವಾಗಿ ಮೃತಪಟ್ಟಿರಬಹುದು' ಎಂದು ಕಾರವಾರದ ಕಡಲಜೀವಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಶಿವಕುಮಾರ ಹರಗಿ 'ಪ್ರಜಾವಾಣಿ'ಗೆ ತಿಳಿಸಿದ್ದರು.

> ಬಲೀನ್ ತಿಮಿಂಗಿಲ ಸೇರಿ ಅಪರೂಪದ ಕಡಲಜೀವಿಗಳು ಇರುವ ಹೊನ್ನಾವರ ಭಾಗದಲ್ಲಿ ಅರಣ್ಯ ಇಲಾಖೆಯು ಕಡಲಜೀವಿ ವಿಭಾಗ ಆರಂಭಿಸಬೇಕು. ತಿಮಿಂಗಿಲಗಳ ಸಾವು ಸಂಭವಿಸದಂತೆ ಎಚ್ಚರವಹಿಸಬೇಕು
>
> **ಪ್ರಕಾಶ್ ಮೇಸ್ತ,** ಕಡಲಜೀವ ವಿಜ್ಞಾನಿ

'ಬಲೀನ್ ತಿಮಿಂಗಿಲಗಳು ಮುಂಗಾರು ಅವಧಿಯಲ್ಲಿ ನೇತ್ರಾಣಿ ದ್ವೀಪ, ಮುಗಳಿ ಕಡಲಧಾಮ ವ್ಯಾಪ್ತಿಯ ಸಮುದ್ರ ಪ್ರದೇಶಕ್ಕೆ ವಲಸೆ ಬರುತ್ತವೆ. ಅರಬ್ಬಿ ಸಮುದ್ರದ ಹಲವೆಡೆ ತಳಭಾಗದಲ್ಲಿ ಕಲ್ಲುಹಾಸು ಇದ್ದರೆ, ಇಲ್ಲಿ ತಳಭಾಗ ಸಂಪೂರ್ಣ ಮರಳಿನ ಪ್ರದೇಶವಿದೆ. ಅವುಗಳಿಗೆ ಮಿಲನ ಕ್ರಿಯೆ, ಸಂತಾನೋತ್ಪತ್ತಿಗೆ ಹೇಳಿಮಾಡಿಸಿದ ತಾಣ. ಸಾವಿರಾರು ಕಿ.ಮೀ ದೂರದ ಫೆಸಿಫಿಕ್ ಸಾಗರದ ಶೀತವಲಯದಿಂದ ಇಲ್ಲಿನ ಉಷ್ಣವಲಯಕ್ಕೆ ಅವು ಬರುವ ವೇಳೆ ಹಡಗುಗಳು ಡಿಕ್ಕಿಯಾಗಿ ಸಾವನ್ನಪ್ಪಿರುವ ಸಾಧ್ಯತೆ ಹೆಚ್ಚು' ಎಂದು ಕಡಲಜೀವ ವಿಜ್ಞಾನಿ ಪ್ರಕಾಶ್ ಮೇಸ್ತ ಹೇಳಿದರು.

'ವಿದೇಶಗಳಲ್ಲಿ ತಿಮಿಂಗಿಲಗಳ ಸಂಚಾರದ ಮೇಲೆ ನಿಗಾ ಇಡಲು ಪ್ರತ್ಯೇಕ ಸಿಬ್ಬಂದಿ, ವ್ಯವಸ್ಥೆ ಇರುತ್ತದೆ. ಇಲ್ಲಿಯೂ ಸಂತಾನೋತ್ಪತ್ತಿಗೆ ಬರುವ ತಿಮಿಂಗಿಲಗಳ ಮೇಲೆ ನಿಗಾ ಇಡುವ ಕೆಲಸವಾಗಬೇಕು' ಎಂದರು.

# ಕೇಂದ್ರದ ವಿರುದ್ಧ 'ಕೈ' ವಾಗ್ದಾಳಿ

**ಒಂದನೇ ಪುಟದಿಂದ**

ನಿರುದ್ಯೋಗ, ಅಗತ್ಯವಸ್ತುಗಳ ಬೆಲೆಗಳು ಹೆಚ್ಚಳವಾಗುತ್ತಿರುವ ಬಗ್ಗೆಯೂ ಸಮಿತಿಯು ತನ್ನ ನಿರ್ಣಯದಲ್ಲಿ ಕಳವಳ ವ್ಯಕ್ತಪಡಿಸಿದೆ.

**ಕಾರ್ಯಕಾರಿ ಸಮಿತಿಯಲ್ಲಿ ಕೈಗೊಂಡ ಇತರ ನಿರ್ಣಯಗಳು ಹೀಗಿವೆ:**

- ಸೋಮವಾರದಿಂದ ಆರಂಭವಾಗುವ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು
- ನ್ಯಾಯ ಮತ್ತು ಮುಕ್ತ ಚುನಾವಣೆಗಳನ್ನು ನಡೆಸುವ ಚುನಾವಣಾ ಆಯೋಗದ ಸ್ವಾತಂತ್ರ್ಯಕ್ಕೆ 'ಚುನಾವಣಾ ಆಯುಕ್ತರ ನೇಮಕಾತಿ ಮಸೂದೆ' ಧಕ್ಕೆ ತರಲಿದ್ದು, ವಾಪಸ್ ಪಡೆಯಬೇಕು
- ವಿಭಜಕ ರಾಜಕಾರಣದಿಂದ ದೇಶವನ್ನು ಮುಕ್ತಗೊಳಿಸಬೇಕು. 'ಇಂಡಿಯಾ' ಮೈತ್ರಿಕೂಟಕ್ಕೆ ಸೈದ್ಧಾಂತಿಕವಾಗಿ, ಚುನಾವಣೆಗಳಲ್ಲಿ ಯಶಸ್ಸು ತಂದುಕೊಡುವಲ್ಲಿ ಶ್ರಮಿಸಬೇಕು
- ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿಗಳಿಗೆ ಪ್ರಸ್ತುತ ಇರುವ ಮೀಸಲಾತಿ ಗರಿಷ್ಠ ಮಿತಿಯನ್ನು ಹೆಚ್ಚಿಸಬೇಕು

ಹೈದರಾಬಾದ್‌ನಲ್ಲಿ ಶನಿವಾರ ಆರಂಭವಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ಆಗಮಿಸಿದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ —ಪಿಟಿಐ ಚಿತ್ರ

# ದೇಶದ ಹೆಸರು ಭಾರತವೆಂದೇ ಇರಲಿ: ಆರ್‌ಎಸ್‌ಎಸ್ ಆಗ್ರಹ

**ಒಂದನೇ ಪುಟದಿಂದ**

'ಧರ್ಮಕ್ಕೆ ಯಾವಾಗ ಸಂಕಷ್ಟ ಎದುರಾಗುತ್ತದೆಯೋ ಅಂತಹ ಸಂದರ್ಭಗಳಲ್ಲಿ ಅದರ ರಕ್ಷಣೆಗೆ ನಾನು ಅವತಾರವೆತ್ತಿ ಬರುವೆ ಎಂದು ಭಗವಾನ್ ಕೃಷ್ಣ ಹೇಳಿದ್ದಾನೆ. ಆರ್‌ಎಸ್‌ಎಸ್ ಈ ಮಾರ್ಗದಲ್ಲಿಯೇ ಮುನ್ನಡೆಯುತ್ತಿದೆ' ಎಂದೂ ಹೇಳಿದರು.

'ಮಣಿಪುರದಲ್ಲಿನ ಪರಿಸ್ಥಿತಿ ಕುರಿತು ಕೆಲ ಪ್ರತಿನಿಧಿಗಳು ಸಮಾವೇಶದಲ್ಲಿ ಪ್ರಸ್ತಾಪಿಸಿದರು. ಕಣಿವೆ ರಾಜ್ಯದ ಪರಿಸ್ಥಿತಿ ಚಿಂತೆಗೀಡು ಮಾಡುವಂತಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೀಸಲಾತಿ ಕುರಿತ ಪ್ರಶ್ನೆಗೆ, 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಶಿಕ್ಷಣ, ಗೌರವ ದೃಷ್ಟಿಯಿಂದ ಅನ್ಯಾಯಕ್ಕೆ ಒಳಗಾಗಿದ್ದಾರೆ. ಸಂವಿಧಾನ ಆಧಾರದಲ್ಲಿ ಅವರಿಗೆ ಮೀಸಲಾತಿ ಒದಗಿಸಿ, ಅವರನ್ನು ನಮ್ಮೊಂದಿಗೆ ಕರೆದೊಯ್ಯುವುದು ಅಗತ್ಯ' ಎಂದರು.

ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರು ಮೂರು ದಿನಗಳ ಬೈಠಕ್‌ನ ಅಧ್ಯಕ್ಷತೆ ವಹಿಸಿದ್ದರು.

# ಪ್ರತಿ ತಿಂಗಳು ಜಿಲ್ಲೆಗಳಲ್ಲಿ 'ಜನತಾ ದರ್ಶನ'

**ಒಂದನೇ ಪುಟದಿಂದ**

ಇದೇ 25ರಂದು ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಆಯಾ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳನ್ನು ಸೇರಿಸಿಕೊಂಡು ಜನತಾ ದರ್ಶನ ಹಮ್ಮಿಕೊಳ್ಳುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಅದರಂತೆ ಅಗತ್ಯ ಕ್ರಮಗಳನ್ನು ತೆಗೆದು ಕೊಳ್ಳಬೇಕು. ಜನತಾ ದರ್ಶನ ನಡೆಯುವ ದಿನ ಎಲ್ಲ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಹಾಜರಿರಬೇಕು. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿ, ಮನವಿಗಳನ್ನು ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (ಐಪಿಜಿಆರ್‌ಎಸ್) ತಂತ್ರಾಂಶದಲ್ಲಿ ದಾಖಲಿಸಿಕೊಂಡು ವಿಲೇವಾರಿ ಮಾಡಬೇಕು. ನಿಗದಿತ ಸಮಯದ ಒಳಗೆ ಎಲ್ಲ ಅರ್ಜಿಗಳಿಗೆ ಪರಿಹಾರ ಒದಗಿಸಬೇಕು ಎಂದೂ ಅವರು ತಿಳಿಸಿದ್ದಾರೆ.


ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

ನಾಡಿನ ಸಮಸ್ತ ಜನತೆಗೆ ಗಣೇಶ ಚತುರ್ಥಿಯ ಹಾರ್ದಿಕ ಶುಭಾಶಯಗಳು

ಪೂಜಿಸೋಣ ಪರಿಸರ ಸ್ನೇಹಿ ಗಣಪನ; ತ್ಯಜಿಸೋಣ ಪಿಒಪಿ ಮೂರ್ತಿಯನ; ಇತರರನ್ನೂ ಪ್ರೇರೇಪಿಸೋಣ

ಪಾಲಿಸುವುದು
- ಮಣ್ಣಿನ ಗಣೇಶ ವಿಗ್ರಹಗಳನ್ನು ಮಾತ್ರ ಖರೀದಿಸಿ, ಪೂಜಿಸಿ, ವಿಸರ್ಜಿಸಿ
- ಪ್ರಾಕೃತಿಕ ಬಣ್ಣ ಲೇಪಿತ ಗಣೇಶನನ್ನು ಮನೆಗೆ ತನ್ನಿ
- ಸೂಚಿತ ಸ್ಥಳಗಳಲ್ಲಿ ಅಥವಾ ನಿಮ್ಮ ಮನೆಗಳಲ್ಲಿ ಮಾತ್ರ ಗಣೇಶ ವಿಗ್ರಹಗಳನ್ನು ವಿಸರ್ಜಿಸಿ
- ಮಂಟಪ, ಚಪ್ಪರವನ್ನು ಪ್ರಾಕೃತಿಕ ಬಣ್ಣ ಹಾಗೂ ಸಾಮಗ್ರಿಗಳಿಂದ ಮಾತ್ರ ಅಲಂಕರಿಸಿ

ನಿಷೇಧಿಸಿರುವುದು
- ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣೇಶ ವಿಗ್ರಹಗಳನ್ನು ಖರೀದಿಸಬೇಡಿ
- ಹಾನಿಕರ ಲೋಹ ಮಿಶ್ರಿತ, ಬಣ್ಣಲೇಪಿತ ಗಣೇಶ ವಿಗ್ರಹಗಳನ್ನು ಖರೀದಿಸದಿರಿ
- ಗಣೇಶ ವಿಗ್ರಹಗಳನ್ನು ಕೆರೆಗಳಲ್ಲಿ, ಬಾವಿಗಳಲ್ಲಿ ಹಾಗೂ ನದಿಗಳಲ್ಲಿ ವಿಸರ್ಜಿಸಬೇಡಿ
- ಭಾರೀ ಶಬ್ದ ಮಾಡುವ ಪಟಾಕಿಗಳನ್ನು ಉಪಯೋಗಿಸದಿರಿ
- ಗಣೇಶ ವಿಗ್ರಹಗಳೊಂದಿಗೆ ಇತರೆ ಪೂಜಾ ಸಾಮಗ್ರಿಗಳನ್ನು ವಿಸರ್ಜಿಸಬೇಡಿ

ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ಮೂರ್ತಿಗಳನ್ನು ತ್ಯಜಿಸಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಮಣ್ಣಿನ ಗಣೇಶ ಮೂರ್ತಿಗಳನ್ನು ಪೂಜಿಸಿ

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ **ಶ್ರೀ ಈಶ್ವರ ಬಿ ಖಂಡ್ರೆ**ರವರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡಿರುವ ದೃಶ್ಯ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ".

ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಿಸಿದವರು : **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ** # 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು 560001
ದೂರವಾಣಿ: 080 2558 6520 / 9112 / 8142 ಫ್ಯಾಕ್ಸ್ : 080 -2558 6321 ಇ-ಮೇಲ್ :ho@kspcb.gov.in ವೆಬ್‌ಸೈಟ್ : W: www.kspcb.karnataka.gov.in/
kspcb.gok karnatakapcb kspcb.wordpress.com


# ಬಡ, ಮಧ್ಯಮ ವರ್ಗದ ಆಶಾಕಿರಣ ಗೃಹಜ್ಯೋತಿ

ಗೃಹಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಉಳ್ಳವರು ಶಿವಾಲಯ ಮಾಡುವರು? ನಾನೇನು ಮಾಡಲಿ ಬಡವನಯ್ಯ... ಎನ್ನುವ ಜನಸಾಮಾನ್ಯರಿಗೆ ಒಂದಿಷ್ಟು ಆರ್ಥಿಕವಾಗಿ ಉಸಿರಾಡಲು ಅವಕಾಶ ಕಲ್ಪಿಸಿರುವ ರಾಜ್ಯ ಸರ್ಕಾರ ರಾಜ್ಯದಲ್ಲಿ ನೂತನ ಅಭಿವೃದ್ಧಿ ಮಾದರಿಯನ್ನು 'ಪಂಚ ಖಾತ್ರಿ ಯೋಜನೆ'ಗಳ ಮೂಲಕ ಜಾರಿಗೆ ತಂದಿದೆ. ಅದರಲ್ಲೊಂದು 'ಗೃಹಜ್ಯೋತಿ ಯೋಜನೆ'. ಈ ಯೋಜನೆ ರಾಜ್ಯದ ಎಲ್ಲ ಐದು ಎಸ್ಕಾಂಗಳ ವ್ಯಾಪ್ತಿಯಲ್ಲಿ ಯಶಸ್ವಿ ಅನುಷ್ಠಾನಗೊಂಡಿದ್ದು ಗ್ರಾಹಕರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ.

ಈ ಯೋಜನೆಯ ವಿಶೇಷ ಗುಣವೆನೆಂದರೆ ಕರ್ನಾಟಕದ ಪ್ರತಿ ಮನೆಯ ಗೃಹ ಬಳಕೆಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವುದಾಗಿದೆ. ರಾಜ್ಯದ ಎಲ್ಲ ಗೃಹ ಬಳಕೆ ವಿದ್ಯುತ್ ಗ್ರಾಹಕರು ಈ ಯೋಜನೆಗೆ ಅರ್ಹರಾಗಿರುತ್ತಾರೆ. ಬಡವರ, ಮಧ್ಯಮ ವರ್ಗದವರ, ರೈತರ, ಹಿಂದುಳಿದ ವರ್ಗದವರ ಬದುಕಲ್ಲಿ ಸರ್ಕಾರ ಬೆಳಕನ್ನು ತಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ದೇಶದಲ್ಲಿ ಮಾದರಿಯೆಂಬಂತೆ ಅನುಷ್ಠಾನಗೊಳಿಸಿರುವ ಗೃಹಜ್ಯೋತಿ ಯೋಜನೆ ರಾಜ್ಯದ ಶೇ.99 ರಷ್ಟು ಕುಟುಂಬಗಳನ್ನು ತಲುಪುವ ನಿರೀಕ್ಷೆಯಿದ್ದು, ಯೋಜನೆಗೆ ಅರ್ಜಿ ಸಲ್ಲಿಕೆ ಆರಂಭಗೊಂಡ ದಿನದಿಂದ ಈವರೆಗೂ ಚೇತೋಹಾರಿ ಸ್ಪಂದನೆ ದೊರೆತಿದೆ.

## ಯಾರಿಗೆ ಯೋಜನೆ ಅನ್ವಯ

2022-23ರ ಆರ್ಥಿಕ ವರ್ಷದಲ್ಲಿ ಗೃಹ ವಿದ್ಯುತ್ ಬಳಕೆಯ ಸರಾಸರಿ ಮತ್ತು ಹೆಚ್ಚುವರಿಯಾಗಿ ಶೇ.10 ರಷ್ಟು ಯೂನಿಟ್ ಲೆಕ್ಕದ ಆಧಾರದಲ್ಲಿ ಸರಾಸರಿ ಮಾಸಿಕ 200 ಯೂನಿಟ್‌ಗಿಂತ ಕಡಿಮೆ ಬಳಸಿದ್ದವರಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ. ಅದಕ್ಕನುಗುಣವಾಗಿ ವಿದ್ಯುತ್ ಬಿಲ್ಲಿನ ಮೊತ್ತವನ್ನು ಉಚಿತವಾಗಿ ಒದಗಿಸಲು ಹಾಗೂ 200 ಯೂನಿಟ್‌ಗಳ ಬಳಕೆಯನ್ನು ಮೀರಿದ ಗ್ರಾಹಕರು ಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಬೇಕಾಗುತ್ತದೆ. ಗೃಹಜ್ಯೋತಿ ಯೋಜನೆ ವಾಣಿಜ್ಯ ಬಳಕೆದಾರರ ವ್ಯಾಪ್ತಿಗೆ ಬರುವುದಿಲ್ಲ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

## 1.55 ಕೋಟಿ ಫಲಾನುಭವಿಗಳು

ಗೃಹಜ್ಯೋತಿ ಯೋಜನೆಯ ನೋಂದಣಿ ಪ್ರಕ್ರಿಯೆ ಸರ್ಕಾರದ ಅಧಿಕೃತ ವೆಬ್ ಪೋರ್ಟಲ್ 'ಸೇವಾ ಸಿಂಧು'ವಿನಲ್ಲಿ ಜೂನ್ 18 ರಿಂದಲೇ ಪ್ರಾರಂಭವಾಗಿದೆ. ಇತ್ತೀಚಿನ ಮಾಹಿತಿ ಪ್ರಕಾರ 1.55 ಕೋಟಿ ಗ್ರಾಹಕರು ನೋಂದಾಯಿಸಿಕೊಂಡು ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ. ಜೊತೆಗೆ ಯೋಜನೆ ಜುಲೈ 2023 ತಿಂಗಳ ವಿದ್ಯುತ್ ಬಳಕೆಗೆ ಅನ್ವಯವಾಗಿದ್ದು, ಆ.1 ಹಾಗೂ ನಂತರದ ಮಾಪಕ ಓದುವ ದಿನಾಂಕದಿಂದ ಅನುಷ್ಠಾನಕ್ಕೆ ಬಂದಿದೆ.

**ಸೇವಾ ಸಿಂಧು ಪೋರ್ಟಲ್:** ಯೋಜನೆಯ ಲಾಭ ಪಡೆಯಲು ಇಚ್ಛಿಸುವವರು ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕಾಗಿದೆ. ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ, ಗ್ರಾಮ ಪಂಚಾಯತ್, ನಾಡ ಕಚೇರಿ ಅಥವಾ ಎಲ್ಲ ವಿದ್ಯುತ್ ಕಚೇರಿಗಳಲ್ಲಿ ಯೋಜನೆಗೆ ನೋಂದಾಯಿಸಿಕೊಳ್ಳಬಹುದು. ಆಧಾರ್ ಸಂಖ್ಯೆ, ವಿದ್ಯುತ್ ಬಿಲ್‌ನಲ್ಲಿ ನಮೂದಿಸಲಾಗಿರುವ ಖಾತೆ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯನ್ನು ನಮೂದಿಸಿ ನೋಂದಾಯಿಸಬೇಕು.

ಜೊತೆಗೆ ಕುಟೀರ ಜ್ಯೋತಿ, ಭಾಗ್ಯಜ್ಯೋತಿ ಹಾಗೂ ಅಮೃತಜ್ಯೋತಿ ಫಲಾನುಭವಿಗಳನ್ನು ಗೃಹಜ್ಯೋತಿ ಯೋಜನೆಯಡಿಯಲ್ಲಿ ಸೇರಿಸಲಾಗಿದೆ. ಹಾಗಾಗಿ ಒಟ್ಟು ಫಲಾನುಭವಿಗಳ ಸಂಖ್ಯೆ 1.55 ಕೋಟಿ.

ಸೌಲಭ್ಯ ಪಡೆಯಲಿಚ್ಛಿಸುವ ವ್ಯಕ್ತಿ ಬಾಡಿಗೆದಾರನಾಗಿದ್ದು, ಬಿಲ್ ಮಾಲೀಕರ ಹೆಸರಿನಲ್ಲಿದ್ದರೂ ಯೋಜನೆಯ ಲಾಭ ಪಡೆಯಬಹುದು. ಅಪಾರ್ಟ್‌ಮೆಂಟ್ ಮಾಲಿಕರಾಗಿದ್ದರೂ ಸಹ ಈ ಯೋಜನೆಗೆ ನೋಂದಾಯಿಸಬಹುದು. ಪ್ರತ್ಯೇಕ ಮೀಟರ್ ಅಳವಡಿಸಿದ್ದರೆ ಯೋಜನೆಯ ಪ್ರಯೋಜನ ಪಡೆಯಲು ಅವಕಾಶವಿದೆ. ಸರ್ಕಾರ ನಿಗದಿಪಡಿಸಿರುವ ವಿದ್ಯುತ್‌ಗಿಂತ ಹೆಚ್ಚುವರಿ ಯೂನಿಟ್ ವಿದ್ಯುತ್ ಬಳಸಿದರೆ ಮಾತ್ರ ಹೆಚ್ಚುವರಿ ಯೂನಿಟ್‌ಗೆ ಬಿಲ್ಲನ್ನು ಪಾವತಿಸಬೇಕಾಗುತ್ತದೆ. ಹೊಸ ಬಳಕೆದಾರರಿಗೆ ರಾಜ್ಯದ ಸರಾಸರಿ 58 ಯೂನಿಟ್ ಉಚಿತ ವಿದ್ಯುತ್ ನಿಗದಿಪಡಿಸಲಾಗಿದೆ. ಒಂದು ವರ್ಷದ ಸರಾಸರಿ ಲಭ್ಯವಾದ ಬಳಿಕ, ದತ್ತಾಂಶವನ್ನು ಆಧರಿಸಿ ಯೂನಿಟ್ ನಿಗದಿಪಡಿಸಲಾಗುತ್ತಿದೆ.

**ಗಡುವು ನಿಗದಿ ಇಲ್ಲ:** ಗೃಹಜ್ಯೋತಿ ಯೋಜನೆ ನೋಂದಣಿಗೆ ಯಾವುದೇ ಗಡುವು ವಿಧಿಸಲಾಗಿಲ್ಲ. ಗ್ರಾಹಕರು ಯಾವಾಗ ಬೇಕಾದರೂ ನೋಂದಾಯಿಸಿ ಯೋಜನೆಯ ಲಾಭ ಪಡೆಯಬಹುದು.

### ಫಲಾನುಭವಿಗಳ ಮಾತು

> ಗೃಹಜ್ಯೋತಿ ಯೋಜನೆಯಿಂದ ನಮಗೆ ಬಹಳ ಸಹಾಯವಾಗಿದೆ. ಒಂದೊಂದು ಸಾರಿ ಕರೆಂಟ್ ಬಿಲ್ ಕಟ್ಟುವುದಕ್ಕೂ ನಮಗೆ ಸಾಧ್ಯವಾಗುತ್ತಿರಲಿಲ್ಲ. ಸರ್ಕಾರದ ಈ ಹೊಸ ಯೋಜನೆಯಿಂದ ನಮಗೆ ಆಗಸ್ಟ್ ತಿಂಗಳ ಬಿಲ್ ಶೂನ್ಯ ಬಂದಿದೆ. ಇದರಿಂದ ತುಂಬ ಖುಷಿಯಾಗಿದೆ.
>
> **ತುಳಸಿ,** ರಾಯಚೂರು

> ನಾನು ನಿವೃತ್ತ ಪ್ರಾಧ್ಯಾಪಕನಾಗಿದ್ದು, ಪ್ರತಿ ತಿಂಗಳು ನನಗೆ ₹350 ರಿಂದ ₹400 ಬಿಲ್ ಬರುತ್ತಿತ್ತು. ಈ ತಿಂಗಳು ಗೃಹಜ್ಯೋತಿ ಯೋಜನೆಯಿಂದ ಶೂನ್ಯ ಬಿಲ್ ಬಂದಿದೆ. ನನಗೂ ಕೂಡ ಇದರಿಂದ ಪ್ರಯೋಜನವಾಗಿದೆ. ಸರ್ಕಾರಕ್ಕೆ ಅತ್ಯಂತ ಋಣಿಯಾಗಿದ್ದೇನೆ.
>
> **ಸಂಗಮೇಶ್,** ಬೆಳಗಾವಿ

### ಅನಗತ್ಯ ವಿದ್ಯುತ್ ಕಡಿತ ಮಾಡುವುದಿಲ್ಲ: ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟನೆ

ರಾಜ್ಯದ ಪ್ರತಿಯೊಬ್ಬ ಪ್ರಜೆಯ ಬದುಕು ಹಸನು ಮಾಡಲು, ಕೆಳ ಮಧ್ಯಮ ವರ್ಗದ ಜನರಿಗೆ ನೆರವಾಗಲು ರಾಜ್ಯ ಸರ್ಕಾರ ತಂದಿರುವ ಯೋಜನೆ ಗೃಹಜ್ಯೋತಿ, ಮಾಸಿಕ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡುವ ಮೂಲಕ ಬೆಲೆಯೇರಿಕೆಯ ಬಿಸಿ ಬಡವರಿಗೆ ತಟ್ಟದಂತೆ ಸರಕಾರ ನೀಡಿದ ಒಂದು ಕೊಡುಗೆ. ಈ ಯೋಜನೆಗಾಗಿ ಅನಗತ್ಯವಾಗಿ ವಿದ್ಯುತ್ ಕಡಿತ ಮಾಡುವುದಿಲ್ಲ ಎಂಬ ಸ್ಪಷ್ಟತೆಯನ್ನು ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ನೀಡಿದ್ದಾರೆ.

ವಿದ್ಯುತ್ ಸೋರಿಕೆ, ಆದಾಯದ ಸಮರ್ಥ ಬಳಕೆ, ದುಂದು ವೆಚ್ಚಕ್ಕೆ ಕಡಿವಾಣ, ಕಲ್ಲಿದ್ದಲುಗಳ ಅನುಪಾತ ಆಧಾರಿತ ಮಿಶ್ರಣ, ದುಬಾರಿ ದರದಲ್ಲಿ ವಿದ್ಯುತ್ ಖರೀದಿಯ ಒಪ್ಪಂದ ಪರಿಷ್ಕರಣೆ ಮುಂತಾದವುಗಳ ಮೂಲಕ ಎಸ್ಕಾಂಗಳ ಮೇಲಾಗುವ ಆರ್ಥಿಕ ಹೊರೆ ಕಡಿಮೆ ಮಾಡುವ ಯೋಚನೆಯಿದೆ. ಪ್ರಮುಖವಾಗಿ ರಾಜ್ಯದಲ್ಲಿ ಹೇರಳವಾಗಿರುವ ಸೌರಶಕ್ತಿ, ಪವನ ಶಕ್ತಿಯಂತಹ ನವೀಕೃತ ಇಂಧನ ಸಾಮರ್ಥ್ಯ ಬಳಸಿಕೊಳ್ಳುವ ಮೂಲಕ ದುಬಾರಿ ವಿದ್ಯುತ್ ಉತ್ಪಾದನೆ ತಗ್ಗಿಸುವ ಆಲೋಚನೆಗಳು ನಡೆದಿವೆ. ಇವೆಲ್ಲದರ ಹೊರತಾಗಿ ಗೃಹಜ್ಯೋತಿ ಯೋಜನೆಯಿಂದ ಎಸ್ಕಾಂಗಳಿಗೆ ಎದುರಾಗುವ ಆರ್ಥಿಕ ನಷ್ಟವನ್ನು ಸರ್ಕಾರ ಪಾವತಿಸಲಿದೆ.

### 13,910 ಕೋಟಿ ವಿನಿಯೋಗ

ರಾಜ್ಯದ 2.14 ಕೋಟಿ ಗೃಹ ಬಳಕೆದಾರರು 200 ಯೂನಿಟ್‌ಗಳ ಬಳಕೆಯ ಮಿತಿಯಲ್ಲಿದ್ದು, ಅದಕ್ಕನುಗುಣವಾಗಿ ಗೃಹಜ್ಯೋತಿ ಯೋಜನೆಗೆ ರಾಜ್ಯ ಸರ್ಕಾರ ವಾರ್ಷಿಕ 13,910 ಕೋಟಿ ರೂ. ವಿನಿಯೋಗಿಸಲು ಅಂದಾಜಿಸಿದೆ. ಆಯವ್ಯಯದಲ್ಲಿ ಇದಕ್ಕಾಗಿ ₹9000 ಕೋಟಿ ಹಂಚಿಕೆ ಮಾಡಿದೆ.

**ಗೃಹಜ್ಯೋತಿಯಲ್ಲಿ ಸೇರಿರುವ ಯೋಜನೆಗಳು:** ಪ್ರಸ್ತುತ ಚಾಲ್ತಿಯಲ್ಲಿರುವ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಹಾಗೂ ಅಮೃತ ಜ್ಯೋತಿ ಯೋಜನೆಯ ಫಲಾನುಭವಿಗಳನ್ನು ಗೃಹ ಜ್ಯೋತಿ ಯೋಜನೆಯಡಿಯಲ್ಲಿ ಸೇರಿಸಲಾಗಿದೆ. ಈಗಾಗಲೇ ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಯೋಜನೆಯಡಿ 40 ಯೂನಿಟ್ ಉಚಿತ ವಿದ್ಯುತ್ ನೀಡಲಾಗುತ್ತಿದ್ದು, ಈ ಎಲ್ಲ ಗ್ರಾಹಕರಿಗೆ ಗೃಹಜ್ಯೋತಿ ಯೋಜನೆಯಡಿ ಪ್ರತಿ ತಿಂಗಳಿಗೆ ಸರಾಸರಿ 54 ಯೂನಿಟ್ ಹಾಗೂ ಹೆಚ್ಚುವರಿಯಾಗಿ ಶೇ.10 ರಷ್ಟು ಯೂನಿಟ್ ಹೆಚ್ಚುವರಿ ನೀಡಲಾಗುತ್ತಿದೆ.

ಅಮೃತ ಯೋಜನೆಯಡಿ 75 ಯೂನಿಟ್ ವಿದ್ಯುತ್ ದರವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡ ಕುಟುಂಬಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಅಡಿ ಖಾತೆಗೆ ಜಮಾ ಮಾಡಲಾಗುತ್ತಿದ್ದು, ಈ ಫಲಾನುಭವಿಗಳನ್ನು ಗೃಹಜ್ಯೋತಿ ಯೋಜನೆಗೆ ಸೇರಿಸಿ ಹೆಚ್ಚುವರಿ ಶೇ.10 ರಷ್ಟು ಯೂನಿಟ್ ಉಚಿತವಾಗಿ ನೀಡಲು ಸರ್ಕಾರ ಆದೇಶ ಹೊರಡಿಸಿದೆ. ಈ ಮೂರು ಯೋಜನೆಗಳ ಒಳಗೊಂಡ ಸುಮಾರು 50 ಲಕ್ಷ ಫಲಾನುಭವಿಗಳು ಗೃಹಜ್ಯೋತಿ ವ್ಯಾಪ್ತಿಗೆ ಬರಲಿದ್ದಾರೆ. ಈ ಯೋಜನೆಯಡಿ ಗೃಹ ವಿದ್ಯುತ್ ಗ್ರಾಹಕರ ಮೀಟರ್‌ಗಳಿಗೆ ಮಾಪಕವನ್ನು ಅಳವಡಿಸುವುದು ಹಾಗೂ ಮಾಪಕ ಓದುವುದು ಕಡ್ಡಾಯವಾಗಿರುತ್ತದೆ.

ಯಾವ ಮನೆಗಳಿಗೆ ಪ್ರತ್ಯೇಕ ಮೀಟರ್ ಇದೆಯೋ ಹಾಗೂ ಮೀಟರ್ ರೀಡಿಂಗ್ ಮಾಡಲಾಗುತ್ತಿದೆಯೋ ಅಂತಹ ಎಲ್ಲ ಮನೆಗಳಿಗೆ ಈ ಯೋಜನೆ ಅನ್ವಯವಾಗಲಿದೆ.

ಗೃಹ ವಿದ್ಯುತ್ ಬಳಕೆದಾರರ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಮೀಟರ್‌ಗಳಿದ್ದಲ್ಲಿ, ಒಂದು ಮೀಟರ್‌ಗೆ ಮಾತ್ರ ಉಚಿತ ಸೌಲಭ್ಯ ದೊರಕಲಿದೆ.

## ಲೆಕ್ಕಾಚಾರ ಹೇಗಿರುತ್ತದೆ?

ಗೃಹಜ್ಯೋತಿ ಯೋಜನೆಯಲ್ಲಿ ನೀಡಿರುವ 200 ಯೂನಿಟ್‌ವರೆಗಿನ ವಿದ್ಯುತ್ ಬಳಕೆಗೆ ಶೂನ್ಯ ಶುಲ್ಕ ನಿಗದಿಪಡಿಸಲಾಗಿದೆ. 200 ಯೂನಿಟ್‌ಗಿಂತ ಮೀರಿ ವಿದ್ಯುತ್ ಬಳಕೆ ಮಾಡುವ ವಿದ್ಯುತ್‌ಗೆ ಗ್ರಾಹಕರು ಸಂಪೂರ್ಣ ಶುಲ್ಕವನ್ನು ಭರಿಸಬೇಕಾಗುತ್ತದೆ. ಒಂದು ವೇಳೆ ಗೃಹಜ್ಯೋತಿ ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗಿದ್ದು ಆಗಸ್ಟ್ ಮಾಸದಿಂದ ಫಲಾನುಭವಿಗಳಾಗಿದ್ದವರು, ಯಾವುದಾದರೂ ಒಂದು ತಿಂಗಳಲ್ಲಿ ಅರ್ಹ ಮಿತಿ ದಾಟಿ ವಿದ್ಯುತ್ ಬಳಕೆ ಮಾಡಿದ್ದರೆ ಆ ತಿಂಗಳ ಶುಲ್ಕವನ್ನು ಸಂಪೂರ್ಣವಾಗಿ ಪಾವತಿಸಬೇಕಾಗುತ್ತದೆ. ಮುಂದಿನ ತಿಂಗಳು 200 ಯೂನಿಟ್ ಒಳಗೆ ಬಳಕೆ ಮಾಡಿದರೆ ಮತ್ತೆ ಸೌಲಭ್ಯದ ವ್ಯಾಪ್ತಿಗೆ ಒಳಪಡುತ್ತಾರೆ.

**ಉದಾ:** ವಾರ್ಷಿಕ ಸರಾಸರಿ 100 ಯೂನಿಟ್ ಬಳಕೆ ಮಾಡುವವರಿಗೆ ಶೇ.10 ರಷ್ಟು ಹೆಚ್ಚುವರಿ ಬಳಕೆಗೆ ಅನುಮತಿ ನೀಡಿ 110 ಯೂನಿಟ್ ಬಳಕೆಗೆ ಯೋಜನೆ ಅನ್ವಯವಾಗಲಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | | | | | |
|---|---|---|---|---|---|
| **ಅಡಿಕೆ** | | **ಪುತ್ತೂರು** | | ರಾಶಿ | 45508-50639 |
| **ಬಂಟ್ವಾಳ** | | ಕೋಕ | 11000-25000 | ಕೆಂಪುಗೋಟು | 24199-34599 |
| ಕೋಕ | 13000-25000 | ಹೊಸತು | 34000-45000 | **ಸೊರಬ** | |
| ಹೊಸತು | 28000-45000 | **ಶಿರಸಿ** | | ಬಿಳಿಗೋಟು | 28989-28989 |
| **ಕಾರ್ಕಳ** | | ಬೆಟ್ಟೆ | 43808-43808 | ಚಾಲಿ | 32989-37799 |
| ಹೊಸತು | 30000-45000 | ಬಿಳಿಗೋಟು | 25699-35708 | ಕೆಂಪುಗೋಟು | 10313-20313 |
| ಹಳತು | 40000-48500 | ಚಾಲಿ | 36399-41208 | ರಾಶಿ | 43509-48199 |

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

44ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಡಿ.ವಿ. ಮುದ್ದು ಓಬಳಪ್ಪನವರು
ನಿಧನ: 17-09-1979
ಮಾಜಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು ಮತ್ತು
ಮಾಜಿ ಪುರಸಭಾ ಅಧ್ಯಕ್ಷರು, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾ. ಜಿಲ್ಲೆ
ಇಂದ: Er. ಶ್ರೀಮತಿ C. ಶೋಭ & Er. ಶ್ರೀ S. ದೀಪಕ್ ಮತ್ತು
ಮಕ್ಕಳು–ಕೆನಡ. & ಶ್ರೀ D.C. ರಾಕೇಶ್ ಯಾದವ್,
ಶ್ರೀಮತಿ ಆರ್. ಭಾಗ್ಯ ಮತ್ತು ಶ್ರೀ ಡಿ.ವಿ. ಚಂದ್ರಶೇಖರ್,
ಉಪ ನಿಯಂತ್ರಣಾಧಿಕಾರಿ (ನಿ) KPTCL, Advocate ಹಾಗೂ ಕುಟುಂಬವರ್ಗ

# ಬಂಗಾಳದಲ್ಲಿ ಉಕ್ಕು ಘಟಕ ಸ್ಥಾಪನೆ: ಸೌರವ್ ಗಂಗೂಲಿ

**ಕೋಲ್ಕತ್ತ (ಪಿಟಿಐ):** ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಅವರು ಪಶ್ಚಿಮ ಬಂಗಾಳದ ಸಾಲ್ಬನಿಯಲ್ಲಿ ಉಕ್ಕು ಘಟಕ ಸ್ಥಾಪಿಸಲು ಮುಂದಾಗಿದ್ದಾರೆ. 'ಈ ಯೋಜನೆಗೆ ಕ್ಯಾಪ್ಟನ್ ಸ್ಟೀಲ್ ಪ್ರಮುಖ ಹೂಡಿಕೆದಾರ ಆಗಿರಲಿದೆ' ಎಂದು ಕಂಪನಿಯ ನಿರ್ದೇಶಕ ಸಂಜಯ್ ಗುಪ್ತಾ ಹೇಳಿದ್ದಾರೆ.

'ನಾನು ಕೇವಲ ಕ್ರಿಕೆಟ್ ಮಾತ್ರ ಆಡುತ್ತೇನೆ ಎಂದು ಹಲವರು ಭಾವಿಸಿರಬಹುದು. ಆದರೆ, 2007ರಲ್ಲಿ ನಾನು ಚಿಕ್ಕದಾದ ಉಕ್ಕು ಘಟಕ ಆರಂಭಿಸಿದೆ' ಎಂದು ಗಂಗೂಲಿ ಹೇಳಿದ್ದಾರೆ.

'ಬಂಗಾಳ ಜಾಗತಿಕ ಉದ್ದಿಮೆ ಶೃಂಗ'ದ ರೋಡ್ ಶೋಗಾಗಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೊಂದಿಗೆ ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ಇರುವ ಗಂಗೂಲಿ, ಐದರಿಂದ ಆರು ತಿಂಗಳಿನಲ್ಲಿ ಹೊಸ ಘಟಕದ ನಿರ್ಮಾಣ ಕಾರ್ಯ ಆರಂಭ ಆಗುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಸೌರವ್ ಅವರು ಆಪ್ತ ಸ್ನೇಹಿತರಾಗಿದ್ದು, ದೀರ್ಘ ಸಮಯದಿಂದ ಅವರೊಂದಿಗೆ ಒಡನಾಟ ಇದೆ. ಗಂಗೂಲಿ ಅವರ ಬೆಂಬಲದಿಂದ ಪಶ್ಚಿಮ ಬಂಗಾಳದಲ್ಲಿ ಉಕ್ಕು ಘಟಕ ಸ್ಥಾಪಿಸಲಾಗುವುದು. 600–700 ಎಕರೆ ಜಾಗ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ' ಎಂದು ಗುಪ್ತಾ ಮಾಹಿತಿ ನೀಡಿದ್ದಾರೆ.

# ಆಕಸ್ಮಿಕ ಲಾಭ ತೆರಿಗೆ ಹೆಚ್ಚಳ

**ನವದೆಹಲಿ (ಪಿಟಿಐ):** ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರವು ಶನಿವಾರದಿಂದ ಜಾರಿಗೆ ಬರುವಂತೆ ಹೆಚ್ಚಿಸಿದೆ. ಆದರೆ ಡೀಸೆಲ್ ಹಾಗೂ ವಿಮಾನ ಇಂಧನ (ಎಟಿಎಫ್) ರಫ್ತು ಮೇಲಿನ ತೆರಿಗೆಯನ್ನು ಇಳಿಕೆ ಮಾಡಿದೆ.

ದೇಶದಲ್ಲಿ ತಯಾರಾಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಪ್ರತಿ ಟನ್‌ಗೆ ₹6,700 ರಿಂದ ₹10 ಸಾವಿರಕ್ಕೆ ಏರಿಕೆ ಮಾಡಿದೆ. ಸೆಪ್ಟೆಂಬರ್ 1 ರಂದು ಮಾಡಿದ್ದ ದರ ಪರಿಷ್ಕರಣೆಯಲ್ಲಿ ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ಇಳಿಕೆ ಮಾಡಲಾಗಿತ್ತು

ಡೀಸೆಲ್ ರಫ್ತು ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹6 ರಿಂದ ₹5.50ಕ್ಕೆ ಇಳಿಕೆ ಮಾಡಲಾಗಿದೆ.

ವಿಮಾನ ಇಂಧನದ (ಎಟಿಎಫ್) ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹4ರಿಂದ ₹3.5ಕ್ಕೆ ತಗ್ಗಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪೆಟ್ರೋಲ್ ರಫ್ತು ಮೇಲೆ ಶೂನ್ಯ ತೆರಿಗೆಯನ್ನು ಮುಂದುವರಿಸಲಾಗಿದೆ.

ಹಿಂದಿನ ಎರಡು ವಾರಗಳಲ್ಲಿ ಇಂಧನದ ಸರಾಸರಿ ದರದ ಆಧಾರದ ಮೇಲೆ ಪ್ರತಿ 15 ದಿನಗಳಿಗೆ ಒಮ್ಮೆ ತೆರಿಗೆ ದರಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ. 2022ರ ಜುಲೈ 1ರಂದು ಮೊದಲಿಗೆ ಆಕಸ್ಮಿಕ ಲಾಭ ತೆರಿಗೆಯನ್ನು ಜಾರಿಗೊಳಿಸಯಿತು.

## ರಾಮನಗರ ರೇಷ್ಮೆಗೂಡು ಧಾರಣೆ

| | |
|---|---|
| ಮಿಶ್ರತಳಿ (ಸಿ.ಬಿ) | ₹200-570 |
| ದ್ವಿತಳಿ (ಬಿ.ವಿ) | ₹305-650 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| **ಬೆಂಗಳೂರು** | |
| 100 ಮೊಟ್ಟೆಗೆ | ₹515 |
| 12 ಮೊಟ್ಟೆಗೆ | ₹70 |
| **ಮೈಸೂರು** | |
| 100 ಮೊಟ್ಟೆಗೆ | ₹515 |

## ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹143 |
| ಆರ್‌ಎಸ್‌ಎಸ್-5 | ₹137 |
| ಗುಡ್ ಲಾಟ್ | ₹125 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1840 (1840) |
| ಸೋಯಾ (ರಿಫೈನ್ಡ್) | ₹895 (890) |
| ಸೂರ್ಯಕಾಂತಿ (ರಿಫೈನ್ಡ್) | ₹885 (885) |
| ಪಾಮೋಲಿನ್ | ₹820 (820) |

### ಲಾಭ ಮಾಡಿಕೊಳ್ಳುವತ್ತ ವಿದೇಶಿ ಹೂಡಿಕೆದಾರರ ಗಮನ

# ದೇಶಿ ಸಾಂಸ್ಥಿಕ ಹೂಡಿಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶದ ಷೇರುಪೇಟೆಗಳು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ನಡೆಸುತ್ತಿದ್ದು, ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಷೇರುಗಳನ್ನು ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ನಿರಂತರವಾಗಿ ಷೇರುಗಳನ್ನು ಖರೀದಿಸುತ್ತಿರುವುದರಿಂದ ಷೇರು ಪೇಟೆಗಳು ಇಳಿಕೆ ಕಾಣುವುದು ತಪ್ಪಿದೆ.

ಶುಕ್ರವಾರದ ವಹಿವಾಟಿನ ಅಂತ್ಯಕ್ಕೆ ಬಿಎಸ್‌ಇ ಸೆನ್ಸೆಕ್ಸ್ ಮತ್ತು ನಿಫ್ಟಿ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ. ಬಿಎಸ್‌ಇ ಮಾರುಕಟ್ಟೆ ಬಂಡವಾಳ ಮೌಲ್ಯ ₹323.40 ಲಕ್ಷ ಕೋಟಿಗೆ ತಲುಪಿದ್ದು, ದಾಖಲೆ ಮಟ್ಟ ಇದಾಗಿದೆ.




ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ಸೆಪ್ಟೆಂಬರ್ 15ರವರೆಗೆ ನಡೆದಿರುವ ವಹಿವಾಟಿನಲ್ಲಿ ಎಫ್‌ಪಿಐ ₹9,579 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ಅವಧಿಯಲ್ಲಿ ದೇಶಿ ಸಾಂಸ್ಥಿಕ ಹೂಡಿಕೆದಾರರು ₹8,309 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಮುಂದಿನ ದಿನಗಳಲ್ಲಿಯೂ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡಲು ಹೆಚ್ಚು ಗಮನ ನೀಡಲಿದ್ದಾರೆ. ಅಮೆರಿಕದ 10 ವರ್ಷಗಳ ಬಾಂಡ್ ಗಳಿಕೆಯು ಸದ್ಯ ಶೇ 4.28ರಷ್ಟು ಗರಿಷ್ಠ ಮಟ್ಟದಲ್ಲಿ ಇದೆ. ಅಮೆರಿಕದ ಡಾಲರ್ ಮೌಲ್ಯವೂ ಏರಿಕೆ ಕಾಣುತ್ತಿದೆ. ಈ ಕಾರಣಗಳಿಂದಾಗಿ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವ ಪ್ರಮಾಣ ಇನ್ನಷ್ಟು ಏರಿಕೆ ಕಾಣುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

ಬ್ಯಾಂಕ್ ನಿಫ್ಟಿಯು 46 ಸಾವಿರದ ಗರಿಷ್ಠ ಮಟ್ಟವನ್ನು ತಲುಪಿದ್ದು, ಅಲ್ಪಾವಧಿಯಲ್ಲಿ 46,700 ರಿಂದ 47 ಸಾವಿರ ಅಂಶಗಳವರೆಗೆ ತಲುಪುವ ಸಾಧ್ಯತೆ ಇದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ರೂಪಕ್ ದೇ ತಿಳಿಸಿದ್ದಾರೆ.

# ಚೀನಾ ರಕ್ಷಣಾ ಸಚಿವ ಪದಚ್ಯುತಿ: ಹೆಚ್ಚಿದ ವದಂತಿ

### ಉನ್ನತ ಮಟ್ಟದ ಸೇನಾ ಸಭೆಗೆ ಗೈರು ● ದಂಗೆಯ ಊಹಾಪೋಹಗಳಿಗೆ ಪುಷ್ಟಿ

**ಬೀಜಿಂಗ್ (ಪಿಟಿಐ):** ಚೀನಾದ ಸೆಂಟ್ರಲ್ ಮಿಲಿಟರಿ ಕಮಿಷನ್ (ಸಿಎಂಸಿ) ಸಭೆಗೆ ರಕ್ಷಣಾ ಸಚಿವ ಜನರಲ್ ಲಿ ಶಂಗ್‌ಫು ಗೈರುಹಾಜರಾಗಿರುವುದು ವದಂತಿಗಳಿಗೆ ಎಡೆ ಮಾಡಿಕೊಟ್ಟಿದೆ. ಜನರಲ್ ಲಿ ಅವರನ್ನು ಸಚಿವ ಸ್ಥಾನದಿಂದ ತೆಗೆದು ಹಾಕಿ, ಬಂಧನದಲ್ಲಿ ಇರಿಸಿರಬಹುದು ಎನ್ನಲಾಗುತ್ತಿದೆ.

ಜನರಲ್ ಲಿ ಶಂಗ್‌ಫು

ಆಡಳಿತಾರೂಢ ಚೀನಾ ಕಮ್ಯುನಿಸ್ಟ್ ಪಾರ್ಟಿಯ ಪದಾಧಿಕಾರಿ ಹಾಗೂ ಉನ್ನತ ಸ್ಥಾನದಲ್ಲಿರುವವರಲ್ಲಿ ಕಳೆದ ಜುಲೈನಿಂದ ಇಬ್ಬರು ನಾಪತ್ತೆಯಾಗಿದ್ದು, ಜನರಲ್ ಲಿ ಎರಡನೆಯವರು.

ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಆಪ್ತ ಎಂದೇ ಕರೆಯಲಾಗುವ ಜನರಲ್ ಲಿ, ಶುಕ್ರವಾರ ನಡೆದ ಸಿಎಂಸಿ ಸಭೆಗೆ ಹಾಜರಾಗಿರಲಿಲ್ಲ. ಕಳೆದ ಕೆಲ ದಿನಗಳಿಂದ ಸಾರ್ವಜನಿಕವಾಗಿಯೂ ಕಾಣಿಸಿಕೊಳ್ಳದ ಅವರು, ಸೆ. 7 ಮತ್ತು 8ರಂದು ವಿಯೆಟ್ನಾಂ ರಕ್ಷಣಾ ಸಚಿವಾಲಯದ ಅಧಿಕಾರಿಗಳ ಜೊತೆಗೆ ನಡೆದ ಸಭೆಯಲ್ಲೂ ಪಾಲ್ಗೊಂಡಿರಲಿಲ್ಲ ಎಂದು ಹಾಂಗ್‌ಕಾಂಗ್ ಮೂಲದ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ಶನಿವಾರ ವರದಿ ಮಾಡಿದೆ.

ಜನರಲ್ ಲಿ ಅವರು ಸಿಎಂಸಿ ಸಭೆಗೆ ಗೈರುಹಾಜರಾಗಿರುವ ಕುರಿತು ಯಾವುದೇ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ. ರಕ್ಷಣಾ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮಾಹಿತಿಯಲ್ಲಿ ಜನರಲ್ ಲಿ ಅವರನ್ನು ಈಗಲೂ ಸಿಎಂಸಿ ಸದಸ್ಯ ಎಂದೇ ಉಲ್ಲೇಖಿಸಲಾಗಿದೆ.

ಏರೋಸ್ಪೇಸ್ ಎಂಜಿನಿಯರ್ ಆಗಿರುವ ಜನರಲ್ ಲಿ ಅವರನ್ನು 2018ರಲ್ಲಿ ರಕ್ಷಣಾ ಸಚಿವರನ್ನಾಗಿ ನೇಮಕ ಮಾಡಲಾಗಿತ್ತು. ರಷ್ಯಾ ನಿರ್ಮಿತ ಎಸ್‌ಯು–35 ಯುದ್ಧವಿಮಾನಗಳನ್ನು, ಎಸ್–400 ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಿದ್ದಕ್ಕಾಗಿ ಲಿ ಮೇಲೆ ಅಮೆರಿಕ ನಿರ್ಬಂಧ ಹೇರಿತ್ತು. ಈ ವಿರೋಧದ ನಡುವೆಯೇ ಅವರನ್ನು ರಕ್ಷಣಾ ಸಚಿವರನ್ನಾಗಿ ಚೀನಾ ನೇಮಕ ಮಾಡಿತ್ತು.

## ಲಿ ಶಂಗ್‌ಫು ತನಿಖೆಗೆ ಒಳಪಡಿಸಲಾಗಿದೆ: ಅಮೆರಿಕ

**ನ್ಯೂಯಾರ್ಕ್:** ಚೀನಾದ ರಕ್ಷಣಾ ಸಚಿವ, ಜನರಲ್ ಲಿ ಶಂಗ್‌ಫು ಅವರನ್ನು ಭ್ರಷ್ಟಾಚಾರ ಆರೋಪದ ಮೇಲೆ ರಹಸ್ಯ ಸ್ಥಳದಲ್ಲಿರಿಸಿ ಚೀನಾ ತನಿಖೆಗೆ ಒಳಪಡಿಸಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಮೆರಿಕದ ಇಬ್ಬರು ಉನ್ನತ ಅಧಿಕಾರಿಗಳು ಹೇಳಿರುವುದಾಗಿ 'ದಿ ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

ಚೀನಾದ ಅಣ್ವಸ್ತ್ರ ಪಡೆಯ ಉಸ್ತುವಾರಿ ವಹಿಸಿದ್ದ ಇಬ್ಬರು ಉನ್ನತ ಕಮಾಂಡರ್‌ಗಳನ್ನು ಹಠಾತ್ ತೆಗೆದುಹಾಕಿದ ನಂತರ, ಸೇನಾ ದಂಗೆಯ ಬಗ್ಗೆ ಎದ್ದಿದ್ದ ಊಹಾಪೋಹಗಳಿಗೆ ಇದು ಮತ್ತಷ್ಟು ಪುಷ್ಟಿ ನೀಡಿದೆ. ಈ ತನಿಖೆಯು ಕಮ್ಯುನಿಸ್ಟ್ ಪಕ್ಷದ ನಾಯಕ ಷಿ ಜಿನ್‌ಪಿಂಗ್ ಅವರು ಸೇನೆ ಮೇಲೆ ಇಟ್ಟಿರುವ ವಿಶ್ವಾಸ, ವಿದೇಶಗಳಲ್ಲಿ ಪ್ರಭಾವ ಬೀರುವ ಮಹತ್ವಾಕಾಂಕ್ಷೆ ಮತ್ತು ಸ್ವದೇಶದಲ್ಲಿ ಅವರ ಪ್ರಾಬಲ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

'ಲಿ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವುದು ಬಹುತೇಕ ಖರೆ. ಇದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್‌ಗೆ ಮುಖಭಂಗವೇ. ಇದನ್ನು ಬಹಿರಂಗವಾಗಿ ಹೇಳಿಕೊಳ್ಳದಿದ್ದರೂ ಚೀನಿ ಜನತೆ ಗಮನಿಸುತ್ತಾರೆ. ಷಿ ಜಿನ್‌ಪಿಂಗ್ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಜನರು ಒತ್ತಾಯಿಸದಿದ್ದರೂ ಒಬ್ಬ ಆಡಳಿತಗಾರನಾಗಿ ಜಿನ್‌ಪಿಂಗ್ ಅವರ ಪ್ರತಿಷ್ಠೆಯನ್ನು ಈ ಬೆಳವಣಿಗೆ ಹಾಳು ಮಾಡಲಿದೆ' ಎಂದು ತೈಪೆಯ ಚಿಂತಕರ ಚಾವಡಿ ಎನಿಸಿದ ನ್ಯಾಷನಲ್ ಡಿಫೆನ್ಸ್ ಆ್ಯಂಡ್ ಸೆಕ್ಯುರಿಟಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಪೀಪಲ್ಸ್ ಲಿಬರೇಶನ್ ಆರ್ಮಿಯ ವಿಷಯ ತಜ್ಞರಾದ ಸು ತ್ಸು-ಯುನ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಎರಡು ವಾರಗಳಿಗಿಂತಲೂ ಹೆಚ್ಚು ಸಮಯದಿಂದ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಲಿ ಅವರು ಸದ್ಯ ಎಲ್ಲಿದ್ದಾರೆ ಎಂದು ಶುಕ್ರವಾರ ಸುದ್ದಿಗಾರರು ಪ್ರಶ್ನಿಸಿದಾಗ, ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್, ಈ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಪ್ರತಿಕ್ರಿಯಿಸಿದ್ದರು.

## ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ಪುತ್ತೂರು | ₹4500-7300 |
| ತಿಪಟೂರು | ₹8000-8600 |
| ತುರುವೇಕೆರೆ | ₹8300-8300 |

## ಮುಂಬೈ ಧಾರಣೆ

### ಶೇಂಗಾ

16-9-2023

| | |
|---|---|
| ಜಾವಾ 70/80(ಹೊಸ) | 12400-12500 |
| ಜಾವಾ 80/90(ಹೊಸ) | 12100-12200 |
| ದಪ್ಪ ಮಧ್ಯಪ್ರದೇಶ(ಹೊಸ) | 11000-11100 |
| ದಪ್ಪ ಗುಜರಾತ್(ಹೊಸ) | 11900-12000 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1850(1850) |
| ಒಂದು ವಾರದ ಡೆಲಿವರಿ | 1845(1845) |
| ಸೋಯಾ ಕಚ್ಚಾ | 850(845) |
| ಪಾಮ್ ವಾರದ ಡೆಲಿವರಿ | 818(818) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 700(800) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 58,950 (58,900)
ಬೆಳ್ಳಿ ಕೆ.ಜಿ 71,575 (71,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers
ಆಟೋ ಚಾಲಕರು ಬೇಕಾಗಿದ್ದಾರೆ ಇಲೆಕ್ಟ್ರಿಕ್ ಆಟೋ ಬಾಡಿಗೆಗೆ ಲಭ್ಯವಿದೆ 'ಬ್ಯಾಟರಿ ವೆಚ್ಚ ಕಂಪನಿ ಬರಿಸುತ್ತದೆ' ಪಾರ್ಟ್ ಟೈಮ್ /ಫುಲ್ ಟೈಮ್ ಹಾಗು ನೈಟ್ ಶಿಫ್ಟ್ ಲಭ್ಯವಿದೆ ಆಕರ್ಷಕ ಸಂಬಳ 20000/- ವರೆಗೂ ಪಡೆಯಿರಿ ಕೂಡಲೇ ಸೇರಿಕೊಳ್ಳೋವವರಿಗೆ ಆಕರ್ಷಕ ಬೋನಸ್ ನೀಡಲಾಗುವುದು ಆಸಕ್ತಿಯುಳ್ಳವರು ಮಿಸ್ ಕಾಲ್ ನೀಡಿ 08068960971 / 8496991633

General
ಬೇಕಾಗಿದ್ದಾರೆ: ರಾಜ್ಯಾದ್ಯಂತ ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500–47,000/–. PUC Degree. 8861041526, 9945791526

ಛಾಬ್ರಿಯಾ & ಸನ್ಸ್ ಕಂಪನಿಗೆ ಡೆಲಿವರಿ ಮತ್ತು ಆಫೀಸ್ ಬಾಯ್ಸ್ ಬೇಕಾಗಿದ್ದಾರೆ.ಸ್ಯಾನಿಟರಿ, ಟೈಲ್ಸ್ ಶೋರೂಂಗಾಗಿ. ಕಮರ್ಷಿಯಲ್ ಸ್ಟ್ರೀಟ್ ಹತ್ತಿರ. ESI& PF. ಕರೆ: 9164887571

Hospital & Medical Jobs
12ನೇ ತೇರ್ಗಡೆ ಮತ್ತು ರೇಡಿಯಾಲಜಿ/ ರೇಡಿಯಾಗ್ರಫಿಯಲ್ಲಿ 2ವರ್ಷಗಳ ಡಿಪ್ಲೊಮಾ ಪೂರ್ಣಗೊಳಿಸಿ. ಅಥವಾ ಅನುಭವಿ ರೂ.20,000/- 72999 44645, 78068 04714

Marketing & Sales
LOCAL REP. Retired from Defence Promote Technical Textiles Rs. 5000 per month. Work from home Commission 2%. resume@urjafabrics.com

Part-Time Jobs
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Teachers/ Professors
ಬೇಕಾಗಿದ್ದಾರೆ. ವಿಶೇಷ ಮಕ್ಕಳ ಶಾಲೆಗೆ ವಿಶೇಷ ಶಿಕ್ಷಕರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ: 9036037737

ರಿಯಲ್ ಎಸ್ಟೇಟ್ ಬೈಯಿಂಗ್
Farm House/ Land/ Resorts
Multiple Locations
ವಾಣಿಜ್ಯಕ, ಶೈಕ್ಷಣಿಕ ಉದ್ದೇಶಕ್ಕಾಗಿ ಬೆಂಗಳೂರು ಹಾಗೂ ಸುತ್ತಮುತ್ತ 2 ರಿಂದ 5 ಎಕರೆ ಜಮೀನು ಬೇಕಾಗಿರುತ್ತದೆ . ಸ್ಪಷ್ಟ ಶೀರ್ಷಿಕೆ ಹೊಂದಿರುವವರು ಮಾತ್ರ ಸಂಪರ್ಕಿಸಬೇಕು : 7019742489

ರಿಯಲ್ ಎಸ್ಟೇಟ್ ಸೆಲ್ಲಿಂಗ್
Commercial Building
Yeshwanthpur
CORNER COMMERCIAL property for sale in yeshwantpur Measuring 30/60 Interested contact 9448617261

Industrial & Factory
Tumkur
PROPERTY FOR sale in KSSIDC Industrial Estate BH road, Tumkur 5000 sft. mb 8105340624

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕ ನೋಟೀಸ್
ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., (ನೊಂ. ಜೆ.ಆರ್.ಬಿ.ಎಎಂಡಿ: 14:2009–2010) ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560094. ಫೋ.ನಂ. 080–2351 1414 / 2341 1416
58ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆ
ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಯ 2022–23ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ 23–09–2023ರ ಶನಿವಾರ ಮಧ್ಯಾಹ್ನ 2–00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರ ಅಧ್ಯಕ್ಷತೆಯಲ್ಲಿ, ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಪೋಸ್ಟ್ ಆಫೀಸ್ ರಸ್ತೆ ಸಂಜಯನಗರ, ಬೆಂಗಳೂರು– 560094 ಈ ಆವರಣದಲ್ಲಿ ನಡೆಸಲಾಗುವುದೆಂದು ಸಂಘದ ಸದಸ್ಯರೆಲ್ಲರಿಗೂ ಈಗಾಗಲೇ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಿದೆ, ಆಹ್ವಾನ ಪತ್ರ ತಲುಪದೇ ಇದ್ದ ಪಕ್ಷದಲ್ಲಿ ಇದೇ ಆಹ್ವಾನ ಪತ್ರ ಎಂದು ಸದಸ್ಯರು ತಿಳಿದು, ವಾರ್ಷಿಕ ಮಹಾ ಸಭೆಗೆ ಹಾಜರಾಗಲು ಕೋರಲಾಗಿದೆ. ಸಂಘದ ಉಪನಿಯಮದ ಸಂಖ್ಯೆ 7(6)ರ ಪ್ರಕಾರ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರು ಮಹಾ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ ಸಹಿ/– (ಮಹೇಶ್. ಎಂ.ಎಸ್) ಕಾರ್ಯದರ್ಶಿ ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್. ಬೆಂಗಳೂರು– 560 094.
ಸ್ಥಳ: ಬೆಂಗಳೂರು
ದಿನಾಂಕ: 16–09–2023

ವ್ಯಾಪಾರ
Business to Business
Electrical Goods/ Appliances
FOR SALE Hot Air Oven 4' X6'X 5.5', 12KW, TEM:290C with Trolley for Paint Drying 9845000247

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ
Astrology
★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ಪ್ರವಾಸ
Travel
ದಸರಾ ವಿಶೇಷ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ: 7ದಿನಗಳ ಸಿಂಗಾಪುರ್ ಮತ್ತು ಮಲೇಶಿಯಾ. 8 ದಿನಗಳ ಮುಕ್ತಿನಾಥ ಪ್ರವಾಸ ನೇಪಾಳ. 5ದಿನಗಳ ಕಾಶ್ಮೀರ್. 9 ದಿನಗಳ ವಿಯೆಟ್ನಾಂ,ಕಾಂಬೋಡಿಯ. 6ದಿನಗಳ ದುಬೈ,ಅಬುದಾಬಿ,ಶಾರ್ಜಾ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9880079588
ಗುಜರಾತ್ ಪ್ರವಾಸ 12ದಿನ 26.10.23. ನೇಪಾಳ, ಮುಕ್ತಿನಾಥ್,ಕಾಶಿ, 11ದಿನ 21.11.23. ಸಿಂಗಪುರ್ ಮಲೇಶಿಯಾ 7ದಿನ 4.12.23. ಪುರಿಜಗನ್ನಾಥ್ ಪ್ರವಾಸ 3ದಿನ 15.12.23. ರಾಜಸ್ಥಾನ್ ಪ್ರವಾಸ 9ದಿನ 20.12.23.ನಂದಿನಿ ಟೂರಿಸ್ಟ್ 9916574089
19/10/23 ಗುಜರಾತ್ ಟೂರ್ ವಿಮಾನದಲ್ಲಿ 34000/ ಮತ್ತು 3/12/23 ರಿಂದ ನೇಪಾಳ ಕಾಶಿ ಪ್ರಯಾಗ್ 26000/. ಶ್ರೀ ರಾಮ್ ಟೂರ್. 9108933383, 9606600383.
7 ದಿನಗಳ ಶ್ರೀಲಂಕಾ, 6 ದಿನಗಳ ಬಾಲಿ, 10 ದಿನಗಳ ಕಾಂಬೋಡಿಯಾ & ವಿಯಟ್ನಾಂ, 7/11 ದಿನಗಳ ಸಿಂಗಪುರ, ಮಲೇಷ್ಯಾ & ಥೈಲ್ಯಾಂಡ್, 7 ದಿನಗಳ ಜಪಾನ್ ಭಟ್ ಟ್ರಾವೆಲ್ಸ್ :9844037295

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in E-mail: cdoce1@kiadb.in
ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–14/228/2023–24 ದಿನಾಂಕ: 14.09.2023
ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಸಿ.ಇ.ಐ (ವಿದ್ಯುತ್) ಪರವಾನಗಿ ಹೊಂದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ರನ್ನು ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು: ಮೈಸೂರು ವಲಯ ವ್ಯಾಪ್ತಿಯಲ್ಲಿ ಬರುವ ಮೈಸೂರು ಜಿಲ್ಲೆಯ ಹೆಬ್ಬಾಳ, ಬೆಳಗೋಳ, ಕೂರ್ಗಳ್ಳಿ, ಬೆಳವಾಡಿ, ಹೂಟಗಳ್ಳಿ, ಮಂಡ್ಯ ಜಿಲ್ಲೆಯ ಹೆಬ್ಬಾಳ 2ನೇ ಹಂತ ಮತ್ತು ಕೊಡಗು ಜಿಲ್ಲೆಯ ಕುಶಾಲನಗರ ಕೈಗಾರಿಕಾ ಪ್ರದೇಶಗಳಲ್ಲಿನ ರಸ್ತೆ ದೀಪಗಳನ್ನು ದುರಸ್ಥಿ, ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.10.2023 ಸಂಜೆ 4.30 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/1328/Zen/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬಸವನಗುಡಿ ವಿಭಾಗ, ಚನ್ನಮ್ಮನಕೆರೆ, ವಿದ್ಯಾಪೀಠ ಬನಶಂಕರಿ 3ನೇ ಹಂತ, ಬೆಂಗಳೂರು.
ಸಂಖ್ಯೆ: ಕಾಪಾಅ/ಬಗು/ಇ-ಪ್ರೊಕ್/03/2023–24 ದಿನಾಂಕ: 16.09.2023
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ದತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ ಸಂ. | ಪ್ಯಾಕೇಜಿನ ಹೆಸರು/ವರ್ಗೀಕರಣ | ಟೆಂಡರಿಗಿಟ್ಟ ಮೊತ್ತ (₹.ಲಕ್ಷಗಳಲ್ಲಿ) | ಇಎಂಡಿ (₹.ಗಳಲ್ಲಿ) |
|---|---|---|---|
| 1. | 2023–24ನೇ ಸಾಲಿಗೆ ವಾರ್ಡ್ ಸಂಖ್ಯೆ–156 ಶ್ರೀನಗರದಲ್ಲಿ ರಸ್ತೆ, ಚರಂಡಿ ಮತ್ತು ಪಾದಚಾರಿ–ಮಾರ್ಗಗಳ ಕಾಮಗಾರಿಗಳ ನಿರ್ವಹಣೆ ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ) | 55.00 | 110000.00 |
| 2. | 2023–24ನೇ ಸಾಲಿಗೆ ವಾರ್ಡ್ ಸಂಖ್ಯೆ–163 ಕತ್ರಿಗುಪ್ಪೆಯಲ್ಲಿ ರಸ್ತೆ, ಚರಂಡಿ ಮತ್ತು ಪಾದಚಾರಿ–ಮಾರ್ಗಗಳ ಕಾಮಗಾರಿಗಳ ನಿರ್ವಹಣೆ ಮಾಡುವುದು. (2ನೇ ಕರೆ) (ಪ.ಜಾತಿ) | 55.00 | 55000.00 |
| 3. | 2023–24ನೇ ಸಾಲಿಗೆ ವಾರ್ಡ್ ಸಂಖ್ಯೆ–162 ಗಿರಿನಗರದಲ್ಲಿ ರಸ್ತೆ, ಚರಂಡಿ ಮತ್ತು ಪಾದಚಾರಿ–ಮಾರ್ಗಗಳ ಕಾಮಗಾರಿಗಳ ನಿರ್ವಹಣೆ ಮಾಡುವುದು. (2ನೇ ಕರೆ) (ಪ.ಜಾತಿ) | 55.00 | 55000.00 |
| 4. | 2023–24ನೇ ಸಾಲಿಗೆ ವಾರ್ಡ್ ಸಂಖ್ಯೆ–164 ವಿದ್ಯಾಪೀಠದಲ್ಲಿ ರಸ್ತೆ, ಚರಂಡಿ ಮತ್ತು ಪಾದಚಾರಿ–ಮಾರ್ಗಗಳ ಕಾಮಗಾರಿಗಳ ನಿರ್ವಹಣೆ ಮಾಡುವುದು. (2ನೇ ಕರೆ) (ಪ.ಪಂಗಡ) | 55.00 | 55000.00 |
| 5. | 2023–24ನೇ ಸಾಲಿಗೆ ವಾರ್ಡ್ ಸಂಖ್ಯೆ–154 ಬಸವನಗುಡಿಯಲ್ಲಿ ರಸ್ತೆ, ಚರಂಡಿ ಮತ್ತು ಪಾದಚಾರಿಮಾರ್ಗಗಳ ಕಾಮಗಾರಿಗಳ ನಿರ್ವಹಣೆ ಮಾಡುವುದು. (2ನೇ ಕರೆ) (ಸಾಮಾನ್ಯರಿಗೆ) | 55.00 | 110000.00 |

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಹೊಸ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ 16.09.2023ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 07.10.2023ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 07.10.2023ರ ಸಂಜೆ 4.00 ಗಂಟೆಯವರೆಗೆ. (4) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ–ದಕ್ಷಿಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011 ಇಲ್ಲಿ ದಿನಾಂಕ 22.09.2023ರ ಸಂಜೆ 4.00 ಗಂಟೆಗೆ ನಡೆಸಲಾಗುವುದು. (5) ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 10.10.2023ರ ಸಂಜೆ 4:00 ಗಂಟೆಗೆ. (6) ಆರ್ಥಿಕ ಬಿಡ್ಡನ್ನು ದಿನಾಂಕ: 11.10.2023ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು. (7) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kpp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ

## ಪಾಕ್: 330ಕ್ಕೆ ಏರಿದ ಪೆಟ್ರೋಲ್, ಡೀಸೆಲ್ ಬೆಲೆ

**ಇಸ್ಲಾಮಾಬಾದ್ (ಪಿಟಿಐ):** ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಪಾಕಿಸ್ತಾನದಲ್ಲಿ ಹಣದುಬ್ಬರ ಪ್ರಮಾಣ ಎರಡಂಕಿಗೆ ತಲುಪಿರುವಾಗಲೇ ದೇಶದ ಹಂಗಾಮಿ ಸರ್ಕಾರವು ಇಂಧನ ಬೆಲೆ ಏರಿಕೆ ಮಾಡಿದೆ. ಇದರಿಂದ ಪೆಟ್ರೋಲ್ ಮತ್ತು ಡೀಸೆಲ್ ದರವು ಲೀಟರ್‌ಗೆ ಪಾಕಿಸ್ತಾನದ ಕರೆನ್ಸಿಯಲ್ಲಿ 330 ರೂಪಾಯಿಗೆ (₹92.52) ತಲುಪಿದ್ದು, ಇದು ದೇಶದ ಇತಿಹಾಸದಲ್ಲೇ ದಾಖಲೆಯ ಮಟ್ಟದ ಏರಿಕೆಯಾಗಿದೆ.

ಹಂಗಾಮಿ ಪ್ರಧಾನಿ ಅನ್ವರ್ ಉಲ್ ಹಕ್ ಕಾಕರ್ ಅವರು ಇದಕ್ಕೆ ಅನುಮತಿ ನೀಡಿದ ನಂತರ, ಹಣಕಾಸು ಸಚಿವಾಲಯ ಶುಕ್ರವಾರ ರಾತ್ರಿ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 26.02 ರೂಪಾಯಿ ಮತ್ತು ಡೀಸೆಲ್ ಬೆಲೆಯನ್ನು 17.34 ರೂಪಾಯಿ ಹೆಚ್ಚಿಗೆ ಮಾಡಿದೆ.

## 'ಜಾಹ್ನವಿಗೆ ಮರಣೋತ್ತರ ಸ್ನಾತಕೋತ್ತರ ಪದವಿ'

**ಸಿಯಾಟಲ್ (ಪಿಟಿಐ):** ಅಮೆರಿಕದ ಸಿಯಾಟಲ್‌ನಲ್ಲಿ ವೇಗವಾಗಿ ಸಾಗುತ್ತಿದ್ದ ಪೊಲೀಸ್ ವಾಹನ ಹರಿದು ಮೃತಪಟ್ಟಿದ್ದ ಭಾರತದ ವಿದ್ಯಾರ್ಥಿನಿ ಜಾಹ್ನವಿ ಕಂದುಲ(23) ಅವರಿಗೆ ಮರಣೋತ್ತರವಾಗಿ ಸ್ನಾತಕೋತ್ತರ ಪದವಿ ನೀಡಲಾಗುವುದು ಎಂದು ನಾರ್ಥ್‌ಈಸ್ಟ್ರನ್ ವಿಶ್ವವಿದ್ಯಾಲಯದ ಕುಲಪತಿ ಕೆನ್ನೆಥ್ ಡಬ್ಲ್ಯು. ಹೆಂಡರ್‌ಸನ್ ತಿಳಿಸಿದ್ದಾರೆ.

'ಅವರ ಕುಟುಂಬಕ್ಕೆ ಪದವಿಯನ್ನು ಹಸ್ತಾಂತರಿಸಲಾಗುವುದು' ಎಂದು ಕುಲಪತಿ ಹೇಳಿದ್ದಾರೆ. ವಿಶ್ವವಿದ್ಯಾಲಯದ ಸಿಯಾಟಲ್ ಕ್ಯಾಂಪಸ್‌ನಲ್ಲಿ ಮಾಹಿತಿ ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದ ಜಾಹ್ನವಿ ಡಿಸೆಂಬರ್‌ನಲ್ಲಿ ಪದವಿ ಪಡೆಯಬೇಕಿತ್ತು.

## ಕೆನಡಾ: ವಿದ್ಯಾರ್ಥಿ ಮೇಲೆ ದಾಳಿ, ಭಾರತ ಖಂಡನೆ

**ಟೊರಂಟೊ (ಪಿಟಿಐ):** ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದಲ್ಲಿ 17 ವರ್ಷದ ಸಿಖ್ ಸಮುದಾಯದ ವಿದ್ಯಾರ್ಥಿ ಮೇಲೆ ಈಚೆಗೆ ನಡೆದ ದಾಳಿಯನ್ನು ಭಾರತ ಖಂಡಿಸಿದೆ. 'ತನಿಖೆ ನಡೆಸಿ, ದುಷ್ಕರ್ಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಭಾರತದ ಕಾನ್ಸುಲೇಟ್ ಜನರಲ್ ಅವರು ಇಲ್ಲಿನ ಸ್ಥಳೀಯ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ರಾಜ್ಯಮಟ್ಟದ ಪುರುಷರ ಮತ್ತು ಮಹಿಳೆಯರ ಅಥ್ಲೆಟಿಕ್ ಕೂಟ

# ಅಭಿನ್, ಕೀರ್ತನಾಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉಡುಪಿಯ ಅಭಿನ್ ಬಿ. ದೇವಾಡಿಗ ಮತ್ತು ಕೀರ್ತನಾ ಅವರು ಇಲ್ಲಿ ಆರಂಭವಾದ ರಾಜ್ಯಮಟ್ಟದ ಅಥ್ಲೆಟಿಕ್ ಕೂಟದಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 200 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಅಭಿನ್ 20.90 ಸೆ.ಗಳಲ್ಲಿ ಗುರಿ ತಲುಪಿದರು. ಮಹಿಳೆಯರ ವಿಭಾಗದಲ್ಲಿ ಕೀರ್ತನಾ 24.68 ಸೆ.ಗಳೊಂದಿಗೆ ಮೊದಲಿಗರಾದರು.

**ಮೊದಲ ದಿನದ ಫಲಿತಾಂಶ:** ಪುರುಷರ ವಿಭಾಗ: 200 ಮೀ. ಓಟ: ಅಭಿನ್ ಬಿ. ದೇವಾಡಿಗ (ಉಡುಪಿ; ಕಾಲ: 20.90 ಸೆ.)–1, ಬಾಲಕೃಷ್ಣ (ಹಾಸನ)–2, ತಿಥೇಶ್ ಎಚ್.ಪಿ.ಶೆಟ್ಟಿ (ದಕ್ಷಿಣ ಕನ್ನಡ)–3

400 ಮೀ. ಹರ್ಡಲ್ಸ್: ಎಂ.ಡಿ. ಅಮರನಾಥ್ (ಉಡುಪಿ; ಕಾಲ: 52.95 ಸೆ.)–1, ಆದೇಶ್ ಜಿ. ಹೆಗ್ಡೆ (ಬೆಂಗಳೂರು)–2, ಪ್ರಣಾಮ್ ಡಿ. ಶೆಟ್ಟಿ (ಉಡುಪಿ)–3

800 ಮೀ. ಓಟ: ತುಷಾರ್ ಬಿ.ಕೆ (ಬೆಂಗಳೂರು; ಕಾಲ: 1 ನಿ. 53.08 ಸೆ.)–1, ಕೆ.ಸೂರ್ಯ (ಡಿವೈಇಎಸ್ ಬೆಂಗಳೂರು)–2, ರಾಹುಲ್ ಚೌಧರಿ (ಮೈಸೂರು)–3

5,000 ಮೀ. ಓಟ: ಶಿವಾಜಿ ಪಿ.ಮಾದಪ್ಪ (ಉತ್ತರ ಕನ್ನಡ; ಕಾಲ: 14 ನಿ. 57.8 ಸೆ.)–1, ವೈಭವ್ ಮಾರುತಿ ಪಾಟೀಲ (ಡಿವೈಇಎಸ್ ಬೆಂಗಳೂರು)–2, ಗುರುಪ್ರಸಾದ್ (ಕೆಎಂಪಿ)–3

ಡಿಸ್ಕಸ್ ಥ್ರೋ: ನಾಗೇಂದ್ರ ಅಣ್ಣಪ್ಪ ನಾಯ್ಕ್ (ಉತ್ತರ ಕನ್ನಡ; ದೂರ: 50.89 ಮೀ.)–1, ಮುಹಮ್ಮದ್ ಸಕ್ಲೇನ್ ಅಹ್ಮದ್ (ಮೈಸೂರು)–2, ಸಮಿತ್ (ಮಂಗಳೂರು)–3

ಲಾಂಗ್‌ಜಂಪ್: ಎಸ್.ಆರ್ಯ (ಬೆಂಗಳೂರು, ದೂರ: 7.86 ಮೀ.)–1, ಪುರುಷೋತ್ತಮ (ಹಾಸನ)–2, ರಾಧಾಕೃಷ್ಣನ್ (ಬೆಂಗಳೂರು)–3

ಶಾಟ್‌ಪಟ್: ರಾಹುಲ್ ಕಶ್ಯಪ್ (ಮೈಸೂರು: ದೂರ: 16.47 ಮೀ.)–1, ಪ್ರಜ್ವಲ್ ಎಂ.ಶೆಟ್ಟಿ–2, ಮನು (ಮೈಸೂರು)–3

**ಮಹಿಳೆಯರ ವಿಭಾಗ:** 200 ಮೀ. ಓಟ: ಕೀರ್ತನಾ (ಉಡುಪಿ; ಕಾಲ: 24.68 ಸೆ.)–1, ಸಿಮಿ ಎನ್.ಎಸ್. (ಉತ್ತರ ಕನ್ನಡ)–2, ಹರ್ಷಿಣಿ ಆರ್. (ಕೆಐಎಸ್‌ಸಿಇ ಬೆಂಗಳೂರು)–3

400 ಮೀ. ಹರ್ಡಲ್ಸ್: ದೀಕ್ಷಿತಾ ಆರ್.ಜಿ. (ಆಳ್ವಾಸ್; ಕಾಲ: 1 ನಿ. 02.3 ಸೆ.)–1, ಲಕ್ಷ್ಮಿ ಜಿ.ಎಂ. (ಫ್ರೂಷನ್ ಕ್ಲಬ್)–2

800 ಮೀ. ಓಟ: ಅಶ್ವಿತಾ ಇ.ಬಿ. (ಫ್ರೂಷನ್ ಅಥ್ಲೆಟಿಕ್ ಕ್ಲಬ್; ಕಾಲ: 2 ನಿ. 11.9 ಸೆ.)–1, ಉಷಾ ಆರ್. (ಮೈಸೂರು)–2, ದೀಪಾ ಶ್ರೀ (ಆಳ್ವಾಸ್)–3

5,000 ಮೀ. ಓಟ: ಚೈತ್ರಾ ದೇವಾಡಿಗ (ಆಳ್ವಾಸ್; ಕಾಲ: 17 ನಿ. 59 ಸೆ.)–1, ತೇಜಸ್ವಿ ಎನ್.ಎಲ್ (ಕೆವಿಎಸ್‌ಪಿ)–2, ಎಚ್.ಎಂ.ಹರ್ಷಿತಾ (ಡಿವೈಇಎಸ್, ಬೆಂಗಳೂರು)–3

ಲಾಂಗ್‌ಜಂಪ್: ಶ್ರೀದೇವಿಕಾ ವಿ.ಎಸ್. (ಆಳ್ವಾಸ್; ದೂರ: 5.80 ಮೀ.)–1, ಭೂಮಿಕಾ ಕೆ.ಎಸ್ (ಶಿವಮೊಗ್ಗ)–2, ಅಕ್ಷತಾ (ಧಾರವಾಡ)–3

ಹೈಜಂಪ್: ಪಲ್ಲವಿ ಪಾಟೀಲ (ಯಾದಗಿರಿ; ಎತ್ತರ: 1.60 ಮೀ.)

ಡಿಸ್ಕಸ್ ಥ್ರೋ: ಕಲಾವತಿ ಬಸಪ್ಪ (ಎಕೆಎಎಫ್ ಬೆಂಗಳೂರು; ದೂರ: 40.96 ಮೀ.)–1, ಮಾಧುರ್ಯ (ಉಡುಪಿ)–2, ಸುಷ್ಮಾ ಎಂ.ಎನ್ (ಮೈಸೂರು)–3

ಮಹಿಳೆಯರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಅಗ್ರಸ್ಥಾನ ಪಡೆದ ಕಲಾವತಿ (ಎಡಚಿತ್ರ) ಹಾಗೂ 800 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದ ಅಶ್ವಿತಾ

## ಡಿಎಚ್ ಕಪ್: ಐಕ್ಯಿಯಾ ಜಯಭೇರಿ

**ಬೆಂಗಳೂರು:** ಗೋಲಿನ ಮಳೆಗರೆದ ಐಕ್ಯಿಯಾ ತಂಡ, ಇಲ್ಲಿ ನಡೆಯುತ್ತಿರುವ ಟ್ರುಆಲ್ಟ್ ಬಯೋಎನರ್ಜಿ ಡಿಎಚ್ ಕಪ್–2023 'ಫೈವ್ ಎ ಸೈಡ್' ಕಾರ್ಪೊರೇಟ್ ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ತನ್ನ ಎರಡೂ ಪಂದ್ಯಗಳನ್ನು ಗೆದ್ದುಕೊಂಡಿತು.

ಮೊದಲ ಪಂದ್ಯದಲ್ಲಿ 3–0 ಗೋಲುಗಳಿಂದ ಮಾಯಾ ಎಸ್ಟೇಟ್ ತಂಡವನ್ನು ಮಣಿಸಿದರೆ, ಎರಡನೇ ಪಂದ್ಯದಲ್ಲಿ 19–0 ಯಿಂದ ಬ್ರಿಗೇಡ್ ಗ್ರೂಪ್ ವಿರುದ್ಧ ಗೆದ್ದಿತು.

ಇತರ ಪಂದ್ಯಗಳಲ್ಲಿ ದಿ ಟಿಮ್‌ಕೆನ್ ಕಂಪನಿ 12–1 ರಿಂದ ಬ್ರಿಗೇಡ್ ಗ್ರೂಪ್ ವಿರುದ್ಧ; ಬಿಗ್ ಬಾಸ್ಕೆಟ್ 4–2 ರಿಂದ ಆಡೋಬಿ ವಿರುದ್ಧ; ವಿಶೇಷ್ ನವ್ಹೋಟೆಕ್ 14–2 ರಿಂದ ಮಾಯಾ ಎಸ್ಟೇಟ್ ವಿರುದ್ಧ; ಎಂಯು ಸಿಗ್ಮಾ 7–2 ರಿಂದ ಮಶ್ರೆಖ್ ವಿರುದ್ಧ; ಬಾಷ್ 15–1 ರಿಂದ ಜಾನ್ ಡಿಸ್ಟಿಲರೀಸ್ ವಿರುದ್ಧ; ಸ್ವಿಸ್ ರೇ 3–2 ರಿಂದ ಟಿವಿಎಸ್ ಮೋಟರ್ ಕಂ. ವಿರುದ್ಧ; ಎಂಯು ಸಿಗ್ಮಾ 6–1 ರಿಂದ ಜೆನೆಕ್ಸ್ ವಿರುದ್ಧವೂ ಗೆದ್ದವು.

## ಒಸಿಎ ಅಥ್ಲೀಟ್ ಸಮಿತಿಗೆ ಸೈನಾ?

ಸೈನಾ ನೆಹ್ವಾಲ್

**ಹಾಂಗ್‌ಝೌ, ಚೀನಾ (ಪಿಟಿಐ):** ಒಲಿಂಪಿಯನ್ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಅವರನ್ನು ಏಷ್ಯನ್ ಕ್ರೀಡಾಕೂಟದ ಮೊಟ್ಟಮೊದಲ ಅಥ್ಲೀಟ್‌ಗಳ ಸಮಿತಿಗೆ ದಕ್ಷಿಣ ಏಷ್ಯಾ ವಲಯದ ಪ್ರತಿನಿಧಿಯಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ (ಒಸಿಎ) ಗೆ ಚುನಾವಣೆ ನಡೆಸಲಾಗುತ್ತದೆ. ಅಥ್ಲೀಟ್‌ಗಳ ಸಮಿತಿ ಹತ್ತು ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಅದಕ್ಕಾಗಿ 26 ಮಂದಿಯನ್ನು ನಾಮನಿರ್ದೇಶನ ಮಾಡಲಾಗಿದೆ.

'ಒಸಿಎದ ಪಶ್ಚಿಮ ಏಷ್ಯಾ, ಕೇಂದ್ರ ಏಷ್ಯಾ, ದಕ್ಷಿಣ ಏಷ್ಯಾ, ದಕ್ಷಿಣಪೂರ್ವ ಏಷ್ಯಾ ಮತ್ತು ಪೂರ್ವ ಏಷ್ಯಾ ವಲಯಗಳಿಂದ ಒಬ್ಬ ಪುರುಷ ಹಾಗೂ ಒಬ್ಬ ಮಹಿಳಾ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುವುದು. ಹತ್ತು ಸದಸ್ಯರ ಆಯ್ಕೆಗೆ ಮತದಾನ ನಡೆಯಲಿದೆ. ಅದರ ದಕ್ಷಿಣ ಏಷ್ಯಾದಿಂದ ಸೈನಾ ಅವರೊಬ್ಬರನ್ನೇ ನಾಮನಿರ್ದೇಶನ ಮಾಡಲಾಗಿದೆ. ಆದ್ದರಿಂದ ಅವರ ಆಯ್ಕೆ ಬಹುತೇಕ ಖಚಿತ' ಎಂದು ಮೂಲಗಳು ತಿಳಿಸಿವೆ.

ಚೀನಾದ ಹಾಂಗ್‌ಝೌನಲ್ಲಿರುವ ಏಷ್ಯನ್ ಕ್ರೀಡಾ ಗ್ರಾಮದಲ್ಲಿ ಅದು ಮತಪೆಟ್ಟಿಗೆಗಳನ್ನು ಸ್ಥಾಪಿಸಲಾಗಿದೆ. ಕ್ರೀಡಾಪಟುಗಳು ತಮಗೆ ಅನುಕೂಲವಾದ ಮತಪೆಟ್ಟಿಗೆಯಲ್ಲಿ ಮತ ಚಲಾಯಿಸಬಹುದು. ಸೆಪ್ಟೆಂಬರ್ 18ರಿಂದ ಅಕ್ಟೋಬರ್ 6ರವರೆಗೆ ಮತದಾನ ಮಾಡಲು ಅವಕಾಶವಿದೆ. 7ರಂದು ಫಲಿತಾಂಶ ಪ್ರಕಟಿಸಲಾಗುವುದು. ಚುನಾವಣೆ ಕುರಿತು ಒಸಿಎ ಬಹಳಷ್ಟು ಪ್ರಚಾರ ಮಾಡುತ್ತಿದೆ.

## ಮಲಾನ್ ಶತಕ: ಸರಣಿ ಗೆದ್ದ ಇಂಗ್ಲೆಂಡ್

**ಲಂಡನ್ (ರಾಯಿಟರ್ಸ್):** ಡೇವಿಡ್ ಮಲಾನ್ (127 ರನ್) ಅವರ ಶತಕ ಮತ್ತು ಮೊಯೀನ್ ಅಲಿ (50ಕ್ಕೆ 4) ಅವರ ಕೈಚಳಕದ ನೆರವಿನಿಂದ ಇಂಗ್ಲೆಂಡ್ ತಂಡ, ನಾಲ್ಕನೇ ಹಾಗೂ ಅಂತಿಮ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 100 ರನ್‌ಗಳಿಂದ ಮಣಿಸಿತು.

ಈ ಗೆಲುವಿನೊಂದಿಗೆ ಜೋಸ್ ಬಟ್ಲರ್ ಬಳಗ ಸರಣಿಯನ್ನು 3–1 ರಿಂದ ಜಯಿಸಿತು. ಲಾರ್ಡ್ಸ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 311 ರನ್ ಗಳಿಸಿತು. ಮಲಾನ್ 114 ಎಸೆತಗಳಲ್ಲಿ 14 ಬೌಂಡರಿ ಹಾಗೂ 3 ಸಿಕ್ಸರ್‌ಗಳ ನೆರವಿನಿಂದ 127 ರನ್ ಕಲೆಹಾಕಿದರು.

ಮೊಯೀನ್ ಸ್ಪಿನ್ ದಾಳಿಗೆ ಪರದಾಡಿದ ನ್ಯೂಜಿಲೆಂಡ್, 38.2 ಓವರ್‌ಗಳಲ್ಲಿ 211 ರನ್‌ಗಳಿಗೆ ಆಲೌಟಾಯಿತು.

**ಸಂಕ್ಷಿಪ್ತ ಸ್ಕೋರ್:** ಇಂಗ್ಲೆಂಡ್ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 311 (ಡೇವಿಡ್ ಮಲಾನ್ 127, ಜೊ ರೂಟ್ 29, ಜೋಸ್ ಬಟ್ಲರ್ 36, ಲಿಯಾಮ್ ಲಿವಿಂಗ್‌ಸ್ಟೋನ್ 28, ರಚಿನ್ ರವೀಂದ್ರ 60ಕ್ಕೆ 4, ಟ್ರೆಂಟ್ ಬೌಲ್ಟ್ 69ಕ್ಕೆ 2, ಡೆರಿಲ್ ಮಿಚೆಲ್ 40ಕ್ಕೆ 2) ನ್ಯೂಜಿಲೆಂಡ್ 38.2 ಓವರ್‌ಗಳಲ್ಲಿ 211 (ವಿಲ್ ಯಂಗ್ 24, ಹೆನ್ರಿ ನಿಕೊಲ್ಸ್ 41, ರಚಿನ್ ರವೀಂದ್ರ 61, ಮೊಯೀನ್ ಅಲಿ 50ಕ್ಕೆ 4, ವಿಲಿ 28ಕ್ಕೆ 1, ಕರನ್ 21ಕ್ಕೆ 1) ಫಲಿತಾಂಶ: ಇಂಗ್ಲೆಂಡ್‌ಗೆ 100 ರನ್ ಗೆಲುವು


ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–1/ಎJM/Ten.Nofi/2023–24/987
ದಿನಾಂಕ: 14.09.2023
**ಟೆಂಡರ್ ಪ್ರಕಟಣೆ**
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ –2000 ರಂತೆ)
ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಸಂಡೂರು ಮತ್ತು ಬಳ್ಳಾರಿ ತಾಲ್ಲೂಕಿನ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:14–09–2023** ರಿಂದ **25–09–2023** ರಂದು ಸಂಜೆ **4.00** ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ: 26–09–2023** ರಂದು ಸಂಜೆ **5.00** ಗಂಟೆಗೆ ತೆರೆಯಲಾಗುವುದು ಹಾಗೂ **ದಿನಾಂಕ: 21–09–2023** ರಂದು ಬೆಳಗ್ಗೆ **11.00** ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ. ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗದಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ: 21–09–2023** ರ ಸಂಜೆ **4.00** ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರ್‌ಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/291/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್ ಹಾವೇರಿ)
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾವೇರಿ
ಎ ಬ್ಲಾಕ್, 2ನೇ ಮಹಡಿ 8 (ಬಿ) ಜಿಲ್ಲಾಡಳಿತ ಭವನ, ಹಾವೇರಿ–581110,
ಫ್ಯಾಕ್ಸ್ & ದೂರವಾಣಿ ಸಂಖ್ಯೆ : 08375–249109
E-mail : dao.haveri09@gmail.com,
ಕ್ರಸಂ:ಜಿ.ಆ.ಅ.ಕ.ಹಾ/22/ಹೊ.ಗು.ಸಿ.ಟೆ/2023–24 ದಿನಾಂಕ: 15/09/2023
**ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ**
2023–24ನೇ ಸಾಲಿಗೆ ಹಾವೇರಿ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯ ಅಧೀನ ಆಸ್ಪತ್ರೆಗಳು/ಚಿಕಿತ್ಸಾಲಯಗಳಿಗೆ ಮಾನವ ಹೊರ ಸಂಪನ್ಮೂಲ ಸಂಸ್ಥೆ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಅವಶ್ಯವಿರುವ ಗ್ರೂಪ್–ಡಿ ನೌಕರರ ಸೇವೆಯನ್ನು ಪಡೆದುಕೊಳ್ಳಲು ನೋಂದಾಯಿತ ಮಾನವ ಹೊರಸಂಪನ್ಮೂಲ ಸಂಸ್ಥೆಯವರಿಂದ ಇ–ಪ್ರೋಕ್ಯೂರಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡಂತೆ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್ ಸೈಟ್ **(https://kppp.karnataka.gov.in)** ನಿಂದ ಪಡೆಯಬಹುದು.
**ಅಲ್ಪಾವಧಿ ಮರು ಇ–ಟೆಂಡರಿನ ಪ್ರಮುಖ ಘಟನಾವಳಿಗಳು :**
**Schedule of Events** (1) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **16/09/2023** (2) ಟೆಂಡರ್‌ನ ಅಂದಾಜು ಮೌಲ್ಯ ರೂ. **20.40** ಲಕ್ಷ (3) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **27/09/2023** ಸಾಯಂಕಾಲ 4.30 ಗಂಟೆಯವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ : **29/09/2023** ರಂದು ಬೆಳಿಗ್ಗೆ 11.00 ಗಂಟೆಗೆ (5) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ತಿಳಿಸಲಾಗುವದು (6) ಪಾವತಿಸಬೇಕಾದ ಇ.ಎಂ.ಡಿ ಮೊತ್ತ 2.5% ರೂ. **0.51** ಲಕ್ಷ (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, (ರಜಾ ದಿನಗಳನ್ನು ಹೊರತುಪಡಿಸಿ) ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಹಾವೇರಿ.
ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/209/2023–24

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ವಿಜಯಪುರ ಅರಣ್ಯ ವಿಭಾಗ, ವಿಜಯಪುರ
ಕ್ರ.ಸಂ:ಬಿ1/ಬಜೆಟ್/ಅರಣ್ಯೀಕರಣ ಟೆಂಡರ್/2023–24/568 ದಿನಾಂಕ:28.08.2023
**ಅರಣ್ಯೀಕರಣ ಕಾಮಗಾರಿಗಳ ಸಂಕ್ಷಿಪ್ತ ಟೆಂಡರ್ ಪ್ರಕಟಣೆ**
**(ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)**
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ 2023–24ನೇ ಸಾಲಿನಲ್ಲಿ ಕೈಗೊಳ್ಳುವ ಅರಣ್ಯೀಕರಣ ಕಾಮಗಾರಿಗಳಿಗೆ Standard Tender Document KW-1 ರ ನಿಬಂಧನೆಗೊಳಪಟ್ಟಂತೆ ಐಟಂವಾರು ಗುತ್ತಿಗೆಯನ್ನು www.e-proc.karnataka.gov.in ವೆಬ್‌ಸೈಟ್ ಮೂಲಕ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ: KFD/2023-24/OW/WORK_INDENT2896, 2897, 2898 & 2899
ಈ ಮುಂತಾದ ಟೆಂಡರ್‌ಗಳ ವಿವರಗಳನ್ನು ದಿನಾಂಕ: 30.08.2023 ರವರೆಗೆ ಪಡೆದುಕೊಳ್ಳಬಹುದು.
ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಈ ಕೆಳಗಿನಂತಿವೆ.
1. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 27.09.2023 ರಂದು ಬೆಳಿಗ್ಗೆ 11.00 ಗಂಟೆಯವರೆಗೆ
2. ಟೆಕ್ನಿಕಲ್ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 29.09.2023 ರಂದು ಬೆಳಿಗ್ಗೆ 11.00 ಗಂಟೆಗೆ.
ನಿಗದಿತ ಅವಧಿಯಲ್ಲಿ ಟೆಂಡರ್ ಬಾರದೇ ಇದ್ದಲ್ಲಿ ಮರು ಟೆಂಡರ ಅವಧಿಯನ್ನು ಮುಂದಿನ ಒಂದು ವಾರಗಳವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು ಅಥವಾ ದೂರವಾಣಿ ಸಂಖ್ಯೆ 08352–272165 ಕ್ಕೆ ಕರೆ ಮಾಡಿ ತಿಳಿದುಕೊಳ್ಳಬಹುದಾಗಿದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯಪುರ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/156/ಕೆಎಸ್‌ಎಂಸಿಎ/2023–24

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ದೂ: 080–22220436, ಇಮೇಲ್: aigrcomp@karnataka.gov.in
ಸಂಖ್ಯೆ: ಕಾಂಪ್/16/2022–23 ದಿನಾಂಕ: 16–09–2023
**ಟೆಂಡರ್ ಪ್ರಕಟಣೆ–2ನೇ ಕರೆ**
ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಛೇರಿಗಳಲ್ಲಿ ಹೊಸದಾಗಿ ಅಳವಡಿಸಲಾಗಿರುವ ಐಟಿ ಹಾರ್ಡ್‌ವೇರ್‌ಗಳ ಜೊತೆಗೆ ಸಂಬಂಧಿಸಿದ ಭಾಗಗಳನ್ನು ಮೂರನೇ ಪಕ್ಷಕಾರರಿಂದ ತಪಾಸಣೆ ನಡೆಸಲು ಸಂಸ್ಥೆಯನ್ನು ಆಯ್ಕೆ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿ ಹೊಂದಿರುವ ಏಜೆನ್ಸಿಗಳು ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: **16.10.2023ರ ಸಂಜೆ 5.00 ಗಂಟೆಯವರೆವಿಗೂ** ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಸಹಾಯಕ **ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ)** ಇವರನ್ನು ಸಂಪರ್ಕಿಸಿ.
ಸಹಿ/–
ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ)
DIPR/CP/YC/1336/2023-24

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮ ಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು–560022. ದೂರವಾಣಿ ಸಂಖ್ಯೆ: 080–23472850/23371695
ಇ–ಮೇಲ್: apmcbangalore22@gmail.com
ಸಂಖ್ಯೆ:ಕೃಮಾಇ/ಕೃಉಮಾಸ/ಬೆಂ/ಅಭಿವೃದ್ಧಿ ವಿಭಾಗ/2460/2023–24 ದಿನಾಂಕ: 15–09–2023
**ಸಂಕ್ಷಿಪ್ತ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**
ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2022–23ನೇ ಸಾಲಿನ RIDF-28 ಯೋಜನೆಯಡಿ **ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಕಾಂಕ್ರೀಟ್ ರಸ್ತೆ, ಡಾಂಬರ್ ರಸ್ತೆ, ಚರಂಡಿ ಮತ್ತು ಅಂಗಡಿ ನಿರ್ಮಾಣ ಕಾಮಗಾರಿಗಳಿಗಾಗಿ** ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ 1ನೇ ದರ್ಜೆ (ಸಿವಿಲ್) ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ Standard Tender Document KW-4 ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ **ರೂ. 8,24,42,892/– ಗಳು,** ಇ.ಎಂ.ಡಿ ಮೊತ್ತ **ರೂ. 12,37,000/– ಗಳು,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05–10–2023 ರಂದು ಸಂಜೆ 5.00 ಗಂಟೆಗೆ,** ಷರತ್ತು–ವ–ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಹಾಗೂ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದು.
ಸಹಿ/– ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು
ವಾಸಾಸಂಇ/ವಾ.ಪ್ರ/1324/ಅಡ್ವರ್ಟೋರ್/2023–24

ಸಕಾಲ ಮಿಷನ್
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)
ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು.
ದೂರವಾಣಿ: 080–22032857
ಸಂಖ್ಯೆ:ಸಿಆಸುಇ 6 ಎಸ್‌ಪಿಎಂ 2023 ದಿನಾಂಕ:13.09.2023
**ಅಧಿಸೂಚನೆ**
ಸಕಾಲ ಮಿಷನ್ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಇ–ಆಡಳಿತ ಯೋಜನೆಯಾಗಿದ್ದು, ಹೆಚ್ಚಿನ ವಿವರಗಳು www.sakala.kar.nic.in ನಲ್ಲಿ ಲಭ್ಯವಿದೆ. ಸಕಾಲ ಮಿಷನ್ ಕರ್ತವ್ಯಗಳನ್ನು ನಿರ್ವಹಿಸಲು 1 ವರ್ಷದ (ವಿಸ್ತರಿಸಬಹುದಾದ) ಅವಧಿಯವರೆಗೆ ರಾಜ್ಯ ಮಾಹಿತಿ ತಂತ್ರಜ್ಞಾನ ಸಮಾಲೋಚಕರು–01, ಹೆಚ್ಚುವರಿ ನಿರ್ವಹಣಾ ಸಮಾಲೋಚಕರು–01 ಮತ್ತು ಪ್ರೋಗ್ರಾಮರ್ಸ್–02 ಹುದ್ದೆಗಳ **ಹೊರಗುತ್ತಿಗೆ ಮೂಲಕ** ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಹುದ್ದೆಯ ಕುರಿತ ಹೆಚ್ಚಿನ ವಿವರಗಳಿಗೆ www.sakala.kar.nic.in ಭೇಟಿ ನೀಡಿ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.09.2023, ಸಂಜೆ 5.00 ಗಂಟೆಯವರೆಗೆ.**
- ನಿಗದಿತ ಸಮಯದ ನಂತರ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು.
- ಅರ್ಜಿಗೆ ನಿಗದಿಪಡಿಸಲಾದ ನಮೂನೆಯನ್ನು www.sakala.kar.nic.in ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಭರ್ತಿ ಮಾಡಿದ ಅರ್ಜಿಗಳನ್ನು aosakala@karnataka.gov.in ಗೆ ಇ–ಮೇಲ್ ಮಾಡತಕ್ಕದ್ದು.

ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಬೇರೆ ಬೇರೆ ಯಾಗಿ ಅರ್ಜಿಗಳನ್ನು ಸಲ್ಲಿಸಬೇಕು.
ಸಹಿ/– ಆಡಳಿತಾಧಿಕಾರಿ (ಪ್ರ)
ಸಕಾಲ ಮಿಷನ್, ಸಿಆಸು ಇಲಾಖೆ(ಇ–ಆಡಳಿತ)
ವಾಸಾಸಂಇ/ವಾಪ್ರ/ಜಿಎ/1270/2023–24

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಗದಗ ವಿಭಾಗ, ಗದಗ
ಸಂಖ್ಯೆ/ವಾಕರಸಾ/ಗವಿ/ಸಂಚಾರ/ವಾಣಿಜ್ಯ:1122/2023 ದಿ: 15–09–2023
**ಇ–ಟೆಂಡರ್ ಪ್ರಕಟಣೆ ಸಂಖ್ಯೆ : 03/2023**
(ಇ–ಪ್ರಕ್ಯೂರಮೆಂಟ್ ಮೂಲಕ)
ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗದಗ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ, ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಿಗೆದಾರರನ್ನು ಹಾಗೂ ಬಸ್ ನಿಲ್ದಾಣದ ಆವರಣ, ಶೌಚಾಲಯ, ಮೂತ್ರಾಲಯಗಳಿಗೆ ಸ್ವಚ್ಛತಾ ಗುತ್ತಿಗೆದಾರರನ್ನು ಆಯ್ಕೆ ಮಾಡಲು (ಕೊಟೇಷನ್) ಇ–ಪ್ರಕ್ಯೂರಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಸ್ತಾವೇಜಗಳನ್ನು ಇ–ಪ್ರಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ : **http/www.kppp.karnataka.gov.in** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ : **04–10–2023** ರಂದು 17:00 ಗಂಟೆಯವರೆಗೆ ಆನ್‌ಲೈನ ಅರ್ಜಿಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಇ–ಪ್ರಕ್ಯೂರಮೆಂಟ್ ಸೆಲ್‌ನಿಂದ DSC(Digital Signature Certificate) ಪಡೆದಿರುವ ಅಧೀಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ದಿನಾಂಕ : **06–10–2023** ರಂದು ಬೆಳಿಗ್ಗೆ 11.00 AM ಗಂಟೆಗೆ ಟೆಂಡರ ತೆರೆಯಲಾಗುವದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಹೆಲ್ಪಡೆಸ್ಕ್ ಸಂಖ್ಯೆ : **080–22371090, 080–22340060** ನ್ನು ಸಂಪರ್ಕಿಸಿ ಅಥವಾ ವಿಭಾಗೀಯ ಕಛೇರಿ, ವಾ.ಕ.ರ.ಸಾ ಸಂಸ್ಥೆ ಗದಗ ವಿಭಾಗ ಗದಗ ಇವರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ : **7760991802** (ವಿಭಾಗೀಯ ಸಂಚಲನಾಧಿಕಾರಿಗಳು), **9611684924** (ವಿಷಯ ನಿರ್ವಾಹಕ) ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಇ–ಟೆಂಡರ್‌ನಲ್ಲಿ ಭಾಗವಹಿಸುವವರು ಇ–ಟೆಂಡರ್ ಪ್ರಕಟಣೆ ಸಂಖ್ಯೆ : 03/2023 ರ ಮತ್ತು ಇ–ಟೆಂಡರ್ Document ನಲ್ಲಿ ನಮೂದಿಸಿದ ಷರತ್ತು ಮತ್ತು ನಿಭಂದನೆಗಳಿಗೆ ಭದ್ದರಾಗಿರತಕ್ಕದ್ದು. ಕಾರಣ ನೀಡದೇ ಇ–ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ಇ–ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ವಾಸಾಸಂಇ/ಗದಗ/ಕೆಎಸ್‌ಎಂಸಿಎ/180/23–24 ವಾ.ಕ.ರ.ಸಾ. ಸಂಸ್ಥೆ ಗದಗ ವಿಭಾಗ ಗದಗ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ)
ನಂ.1, ಡಾ: ಸಿದ್ದಯ್ಯ ಪುರಾಣಿಕ್ ರಸ್ತೆ, ಕೆಹೆಚ್‌ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು–560 079. ಮಿಂಚ್ ಅಂಚೆ: md.ksmscl@gmail.com
ನಂ.ಹೆಚ್‌ಎಫ್‌ಡಬ್ಲ್ಯೂ/ಕೆಎಸ್‌ಎಂಎಸ್‌ಸಿಎಲ್/ಹೊರಗುತ್ತಿಗೆ/ಟೆಂಡರ್/13/2021-22 ದಿನಾಂಕ: 15/09/2023
**ಮಾನವ ಸಂಪನ್ಮೂಲ ಟೆಂಡರ್ ಪ್ರಕಟಣೆ**
ಉಲ್ಲೇಖ: ಟೆಂಡರ್ ಅಧಿಸೂಚನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/ಕೆಎಸ್‌ಎಂಎಸ್‌ಸಿಎಲ್/ಹೊರಗುತ್ತಿಗೆ/ಟೆಂಡರ್/13/2021-22 ದಿನಾಂಕ: 15/09/2023
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
**1. ಕೆ.ಎಸ್.ಎಂ.ಎಸ್.ಸಿ.ಎಲ್ ಹಾಗೂ ಅಧೀನದ ಜಿಲ್ಲಾ ಔಷಧ ಉಗ್ರಾಣಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಬಗ್ಗೆ.**
ತಾಂತ್ರಿಕ: ವಿವರಣೆ, ಇಎಂಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಲಾಗಿದ್ದು, ಟೆಂಡರ್‌ಗಳ ದಸ್ತಾವೇಜನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ **https://eproc.karnataka.gov.in** ನಲ್ಲಿ ದಿನಾಂಕ: **16.09.2023** ರಿಂದ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು, (ಆಡಳಿತ ಮತ್ತು ಸಂಗ್ರಹಣೆ)
DIPR/CP/RO1323/AAPL/2023-24 ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು.

**08 ದಿನದ ಹೆಣ್ಣು ಮಗುವಿನ ಜೈವಿಕ ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ**

ದಿನಾಂಕ:25.08.2023 ರಂದು ಸಂಜೆ 07.40ರ ವೇಳೆಗೆ ಮೈಸೂರು ತಾಲ್ಲೂಕಿನ ಕೇರ್ಗಳ್ಳಿಯಿಂದ ಮರಟಿ ಕ್ಯಾತನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಆಗ ತಾನೇ ಜನಿಸಿದ ಹೆಣ್ಣು ಮಗುವನ್ನು ಅಪರಿಚಿತರು ಬಿಟ್ಟು ಹೋಗಿದ್ದು, ಮೈಸೂರು ಜಿಲ್ಲೆಯ ಜಯಪುರ ಪೊಲೀಸ್ ಠಾಣೆಯಲ್ಲಿ ಪೋಷಕರ ಪತ್ತೆಗೆ ಪ್ರಕರಣ ದಾಖಲು ಮಾಡಲಾಗಿದ್ದು, ಮಗುವಿನ ತಾತ್ಕಾಲಿಕ ಪಾಲನೆ ಮತ್ತು ರಕ್ಷಣೆಗಾಗಿ ಮೈಸೂರಿನ ದತ್ತು ಕೇಂದ್ರದಲ್ಲಿ ದಾಖಲಿಸಲಾಗಿರುತ್ತದೆ. ಈ ಮಗುವಿನ ಜೈವಿಕ ಪೋಷಕರು ಯಾರಾದರು ಇದ್ದಲ್ಲಿ ಈ ಕೆಳಗೆ ನೀಡಲಾಗಿರುವ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸುವುದು. **ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ನಂ:15–17, ಮೊದಲನೇ ಮಹಡಿ, ಅಂಜನಾದ್ರಿ ರಸ್ತೆ, ವಿಜಯನಗರ, 04ನೇ ಹಂತ, 02ನೇ ಫೇಸ್, ಮೈಸೂರು, ದೂರವಾಣಿ ಸಂಖ್ಯೆ: 0821–2543003. ಮಗುವಿನ ಮಾಹಿತಿ: 1)** ತೂಕ: 3.100 ಕೆ.ಜಿ **2)** ಎತ್ತರ: 44 ಸೆ.ಮೀ **3)** ಬಣ್ಣ: ಬಿಳಿ
ಸಹಿ/– (ಯೋಗೇಶ್ ಎನ್.ಟಿ.), ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
DIPR/DDMYS/KSMCA/358/2023-24

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ
ಸಂ: 04/ 2023-2024 ದಿನಾಂಕ: 15-09-2023
**ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕಟಣೆ**
ಐಟಂವಾರು ದರದ ಟೆಂಡರುಗಳ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW- 1&2 ರ ರೀತಿ ಒಂದು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ 16-09-2023 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ:25-09-2023 ಸಂಜೆ 4.00 ಗಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:26-09-2023 ಸಂಜೆ 4.30 ಘಂಟೆವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:27-09-2023 ಸಂಜೆ 5.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು [ಅಂದಾಜು ಮೊತ್ತ 50.00 ಲಕ್ಷದೊಳಗಿನ ಕಾಮಗಾರಿಗಳಿಗೆ] ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್ ರಂತೆ. ಕಾಲಮಿತಿ: ಮಳೆಗಾಲ ಸೇರಿ 2/4/6 ತಿಂಗಳು ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.41.70 ಲಕ್ಷಗಳು ಕನಿಷ್ಠ ರೂ.3.00 ಲಕ್ಷಗಳು, ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಕಾ.ಇಂ., ಲೋ.ಇ., ವಿಭಾಗ, ಮಂಡ್ಯ

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್ ಧಾರವಾಡ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ, ವಿಭಾಗ, ಧಾರವಾಡ
ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.1/ಇ–ಟೆಂಡರ/2023–24/586
ದಿನಾಂಕ : 16.09.2023
**ಅಲ್ಪಾವಧಿ ಟೆಂಡರ ಪ್ರಕಟಣೆ/2023–24**
**(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)**
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಕುಡಿಯುವ ನೀರಿನ ಕಾಮಗಾರಿಗಳ ಅಲ್ಪಾವಧಿ ಟೆಂಡರ ಕರೆಯಲಾಗಿದೆ.
ಕಾಮಗಾರಿಯ ವಿವರ ಈ ಕೆಳಗಿನಂತಿದೆ.
ಧಾರವಾಡ ತಾಲೂಕ : ವರ್ಗ : ಸಾಮಾನ್ಯ, ಇಡೆಂಟ್ ನಂ: RWSSD/2023-24/WS/WORK_INDENT5456
ಟೆಂಡರಗಿಟ್ಟ ಮೊತ್ತ ರೂ. **59.89** lakhs
**ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ.(Calander of Events)**
(1) ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯುರಮೆಂಟ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ : **17.09.2023** ರಿಂದ **26.09.2023** ರ 16.30 ಘಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **27.09.2023** ಸಾಯಂಕಾಲ 4.30 ಘಂಟೆಗೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ
ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪಡೆಯಬಹುದು. ಟೆಂಡರ ಫಾರ್ಮುಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ–ಪ್ರೋಕ್ಯೂರಮೆಂಟ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ವಾಸಾಸಂಇ/ಧಾ/ಕೆಎಸ್‌ಎಂಸಿಎ/282/2023–24 ಗ್ರಾ.ಕು.ನೀ. & ನೈ ವಿಭಾಗ, ಧಾರವಾಡ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಬ್ಬಳ್ಳಿ–580025
ದೂರವಾಣಿ ಸಂಖ್ಯೆ / ಫ್ಯಾಕ್ಸ್ ಸಂಖ್ಯೆ : (0836) 2322251
ಇ–ಮೇಲ್: apmchubli@gmail.com
ಸಂ:ಕೃಮಾಇ:ಕೃಉಮಾಸ(ಹು):ಅಭಿವೃದ್ಧಿ:1685:2023–24 ದಿ:15/09/2023
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಹುಬ್ಬಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ CONSTRUCTION OF C.C.ROAD AND RCC DRAIN AT MAIN MARKET YARD OF APMC HUBBALLI UNDER NABARD-28 SCHEME ಕಾಮಗಾರಿಗೆ "KW-4" ರಡಿಯಲ್ಲಿ ಕರ್ನಾಟಕ ಸರ್ಕಾರದ ಹೊಸ ಆವೃತ್ತಿಯ kppp.karnataka.gov.in ಪೋರ್ಟಲ್‌ನಲ್ಲಿ APMC/2023-24/RD/WORK_INDENT26 ಇ–ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯಿಂದ ನೊಂದಾಯಿತ 01 ನೇ ದರ್ಜೆ ಗುತ್ತಿಗೆದಾರರು ದಿನಾಂಕ : **05/10/2023** ರ ಸಂಜೆ 4–00 ಗಂಟೆಯ ಒಳಗಾಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಹೊಸ ಆವೃತ್ತಿಯ **kppp.karnataka.gov.in** ವೆಬ್‌ಸೈಟ್‌ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ.
ಸಹಿ/– (ಮೇರುನಂದನ್ ಕೆ.ಬಿ.) ಕಾರ್ಯದರ್ಶಿ, ಕೃ.ಉ.ಮಾ.ಸ., ಹುಬ್ಬಳ್ಳಿ
ಸಹಿ/– (ಎಸ್.ಬಿ. ನ್ಯಾಮಗೌಡ) ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಹುಬ್ಬಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.
ಮಾನಿಮಂ/238/ಹಿಪಅ/ಗಣೆ/ಪಸಾಸ/2023–24/ ದಿನಾಂಕ:
**ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ**
ಮೆ. ಎಸ್‌ಎಲ್‌ಆರ್ ಮೆಟಾಲಿಕ್ಸ್ ಲಿಮಿಟೆಡ್, ರವರು ಸರ್ವೆ ನಂ. 632, 633, 634, 635, 636, 637, 638, 639, 640, 641, 642, 643, 644, 646, 648, 649, 650, 651, 652, 653, 654, 677 ಮತ್ತು ಇತರೆ, ನಾರಾಯಣದೇವರ ಕೆರೆ ಮತ್ತು ಲೋಕಪ್ಪನಹೊಳೆ ಗ್ರಾಮ, (ಮರಿಯಮ್ಮನ ಹಳ್ಳಿ ಹತ್ತಿರ), ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮಿನಿ ಸ್ಟೀಲ್ ಪ್ಲಾಂಟ್‌ನ ಉಕ್ಕಿನ ಉತ್ಪಾದನೆಯ ಸಾಮರ್ಥ್ಯವನ್ನು 0.32 MTPA ಯಿಂದ 0.73 MTPAಗೆ ಹೆಚ್ಚಿಸುವ ಮೂಲಕ ಸ್ಟೀಲ್ ಪ್ಲಾಂಟ್ ವಿಸ್ತರಣೆಯನ್ನು ಕೈಗೊಳ್ಳಲು ಪ್ರಸ್ತಾಪಿಸಿದೆ. ಸದರಿ ಪ್ರಸ್ತಾವಿತ ವಿಸ್ತರಣೆಯ ಉತ್ಪನ್ನಗಳ ವಿವರ – 6.0 LTPA ಸಾಮರ್ಥ್ಯದ ಸಿಂಟರ್ ಸ್ಥಾವರ ($75m^2$), 4.65 LTPA ಸಾಮರ್ಥ್ಯದ ಬ್ಲಾಸ್ಟ್ ಫರ್ನೇಸ್ ($380\ m^2$) (ಹಾಟ್ ಮೆಟಲ್/ಪಿಗ್ ಐರನ್), 9 MW ಸಾಮರ್ಥ್ಯದ BF ಅನಿಲ ಆಧಾರಿತ ಕ್ಯಾಪ್ಟಿವ್ ವಿದ್ಯುತ್ ಸ್ಥಾವರ (42 TPH ಬಾಯ್ಲರ್), 4.25 LTPA ಸಾಮರ್ಥ್ಯದ ಸ್ಟೀಲ್ ಮೆಲ್ಟ್ ಶಾಪ್, 4.10 LTPA ಸಾಮರ್ಥ್ಯದ ರೋಲಿಂಗ್ ಮಿಲ್ ಶಾಪ್, 100 TPH ಸಾಮರ್ಥ್ಯದ ಸ್ಲ್ಯಾಗ್/ಸ್ಕಲ್ ಕ್ರಷರ್(2x50TPH) (ಬೈ ಪ್ರಾಡಕ್ಟ್) ಮತ್ತು ಸಹಾಯಕ ಘಟಕಗಳಾದ 750 TPD ಸಾಮರ್ಥ್ಯದ ಏರ್ ಸೆಪರೇಷನ್ ಪ್ಲಾಂಟ್, 30 TPH ಸಾಮರ್ಥ್ಯದ ಪಲ್ವರೈಸ್ಡ್ ಕೋಲ್ ಇಂಜೆಕ್ಷನ್ ಮತ್ತು 100 TPD ಸಾಮರ್ಥ್ಯದ ಅದಿರು/ಕಲ್ಲು ಕ್ರಷರ್ ವಿಸ್ತಾರಣಾ ಘಟಕಗಳ ಯೋಜನೆಯನ್ನು ಅಸ್ತಿತ್ವದಲ್ಲಿರುವ 94.73 ಹೆಕ್ಟೇರ್ (234 ಎಕರೆ) ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿರುತ್ತಾರೆ.
ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: F. No. IA-J-11011/257/2013-IA.II (IND-I) ದಿನಾಂಕ: 15.02.2023 ಹಾಗೂ ಉದ್ದಿಮೆಯವರು ನೀಡಿದ ನಿವೇದನೆಯ ಪತ್ರ ದಿನಾಂಕ: 10.07.2023 ಹಾಗೂ ಪ್ರಾದೇಶಿಕ ಅಧಿಕಾರಿ, ವಿಜಯನಗರ, ಇವರ ಪತ್ರ ದಿನಾಂಕ: 22.08.2023 ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.
**ಯೋಜನೆಯ ವಿವರಗಳು ಕೆಳಕಂಡಂತಿವೆ:**

| | |
|---|---|
| **1 ಕಂಪನಿಯ ಹೆಸರು ಮತ್ತು ವಿಳಾಸ :** ಮೆ. ಎಸ್‌ಎಲ್‌ಆರ್ ಮೆಟಾಲಿಕ್ಸ್ ಲಿಮಿಟೆಡ್, ನಾರಾಯಣದೇವರಕೆರೆ, ಲೋಕಪ್ಪನಹೊಳೆ ಗ್ರಾಮದ ಹತ್ತಿರ, ವಿಜಯನಗರ ಜಿಲ್ಲೆ–583 222. | |
| **2 ಉದ್ದೇಶಿತ ಯೋಜನೆಯ ಸ್ಥಳ:** ಸರ್ವೆ ನಂ. 632, 633, 634, 635, 636, 637, 638, 639, 640, 641, 642, 643, 644, 646, 648, 649, 650, 651, 652, 653,654, 677 ಮತ್ತು ಇತರೆ, ನಾರಾಯಣ ದೇವರ ಕೆರೆ ಮತ್ತು ಲೋಕಪ್ಪನಹೊಳೆ ಗ್ರಾಮ, (ಮರಿಯಮ್ಮನ ಹಳ್ಳಿ ಹತ್ತಿರ), ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ. | |
| **3 ಉದ್ದೇಶಿತ ಯೋಜನೆಯ ವಿವರ:** ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮಿನಿ ಸ್ಟೀಲ್ ಪ್ಲಾಂಟ್‌ನ ಉಕ್ಕಿನ ಉತ್ಪಾದನೆಯ ಸಾಮರ್ಥ್ಯವನ್ನು 0.32 MTPA ಯಿಂದ 0.73 MTPAಗೆ ಹೆಚ್ಚಿಸುವ ಮೂಲಕ ಸ್ಟೀಲ್ ಪ್ಲಾಂಟ್ ವಿಸ್ತರಣೆಯನ್ನು ಕೈಗೊಳ್ಳಲು ಪ್ರಸ್ತಾಪಿಸಿದೆ. ಸದರಿ ಪ್ರಸ್ತಾವಿತ ವಿಸ್ತರಣೆಯ ಉತ್ಪನ್ನಗಳ ವಿವರಗಳು ಮೇಲಿನಂತೆ. | |
| **4 ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ : 17.10.2023 (ಮಂಗಳವಾರ), ಸಮಯ : ಬೆಳಗ್ಗೆ 11.00 ಗಂಟೆ, ಸ್ಥಳ : ಯೋಜನೆಯ ಸ್ಥಳ, ಮೆ. ಎಸ್‌ಎಲ್‌ಆರ್ ಮೆಟಾಲಿಕ್ಸ್ ಲಿಮಿಟೆಡ್, ಸರ್ವೆ ನಂ. 632, 633, 634, 635, 636, 637, 638, 639, 640, 641, 642, 643, 644, 646, 648, 649, 650, 651, 652, 653,654, 677 ಮತ್ತು ಇತರೆ, ನಾರಾಯಣ ದೇವರ ಕೆರೆ ಮತ್ತು ಲೋಕಪ್ಪನಹೊಳೆ ಗ್ರಾಮ, (ಮರಿಯಮ್ಮನ ಹಳ್ಳಿ ಹತ್ತಿರ), ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.** | |

5 ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ: ಅ) ಜಿಲ್ಲಾಧಿಕಾರಿಗಳ ಕಛೇರಿ, ವಿಜಯನಗರ ಜಿಲ್ಲೆ, ಹೊಸಪೇಟೆ ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ವಿಜಯನಗರ ಜಿಲ್ಲೆ, ಹೊಸಪೇಟೆ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ವಿಜಯನಗರ ಜಿಲ್ಲೆ, ಹೊಸಪೇಟೆ. ಈ) ತಹಶೀಲ್ದಾರರ ಕಾರ್ಯಲಯ, ಹಗರಿಬೊಮ್ಮನಹಳ್ಳಿ ತಾಲ್ಲೂಕು ಉ) ಗ್ರಾಮ ಪಂಚಾಯತ್ ಕಾರ್ಯಾಲಯ, ನಾರಾಯಣ ದೇವರ ಕೆರೆ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು. ಊ) ಗ್ರಾಮ ಪಂಚಾಯತ್ ಕಾರ್ಯಾಲಯ, ಲೋಕಪ್ಪನಹೊಳೆ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು. ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯನಗರ. ಋ) ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. ಎ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.
**ಸೂಚನೆ:** ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : kspcb.gov.in ನಲ್ಲಿ ಪಡೆಯಬಹುದು.**
ಸಹಿ/–
ಸದಸ್ಯ ಕಾರ್ಯದರ್ಶಿ
" ಏಕ ಬಳಕೆ ಪ್ಲಾಸ್ಟಿಕ್ ಉಪಯೋಗಿಸುವುದನ್ನು ನಿಲ್ಲಿಸಿ"

ಕ್ರಿಕೆಟ್: ಫೈನಲ್‌ನಲ್ಲಿ ಇಂದು ರೋಹಿತ್ ಶರ್ಮಾ ಪಡೆಗೆ ಶ್ರೀಲಂಕಾ ಸವಾಲು

# ಪ್ರಶಸ್ತಿ ಬರ ನೀಗಿಸುವ ಛಲ

ಕೊಲಂಬೊ (ಪಿಟಿಐ): ಭಾರತ ಕ್ರಿಕೆಟ್ ತಂಡವು ಕಳೆದ ಐದು ವರ್ಷಗಳಿಂದ ಎದುರಿಸುತ್ತಿರುವ ಪ್ರಶಸ್ತಿ ಬರವನ್ನು ನೀಗಿಸಿಕೊಳ್ಳಲು ಸಿದ್ಧವಾಗಿದೆ.

ಭಾನುವಾರ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ಏಷ್ಯಾ ಕಪ್ ಫೈನಲ್‌ನಲ್ಲಿ ಭಾರತ ತಂಡವು ಶ್ರೀಲಂಕಾ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಜಯಿಸುವ ನೆಚ್ಚಿನ ತಂಡವಾಗಿ ರೋಹಿತ್ ಶರ್ಮಾ ಬಳಗ ಕಣಕ್ಕಿಳಿಯಲಿದೆ.

ರೋಹಿತ್ ಶರ್ಮಾ

2018ರಲ್ಲಿ ಭಾರತ ತಂಡವು ಏಕದಿನ ಮಾದರಿಯ ಏಷ್ಯಾಕಪ್ ಜಯಿಸಿತ್ತು. ಅದರ ನಂತರ ಏಕದಿನ, ಟಿ20 ವಿಶ್ವಕಪ್ ಹಾಗೂ ಏಷ್ಯಾ ಕಪ್ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿಲ್ಲ. ಈ ವೈಫಲ್ಯದ ಒಟಕ್ಕೆ ತಡೆಯೊಡ್ಡಿ ಪ್ರಶಸ್ತಿಗೆ ಮುತ್ತಿಕ್ಕಲು ಕಾಲ ಕೂಡಿ ಬಂದಿದೆ. ಏಕೆಂದರೆ ಕಾಗದದ ಮೇಲೆ ಭಾರತ ತಂಡವೇ ಶ್ರೀಲಂಕೆಗಿಂತ ಬಲಿಷ್ಠವಾಗಿ ಕಾಣುತ್ತಿದೆ.

ಆದ್ದರಿಂದ ರೋಹಿತ್, ವಿರಾಟ್ ಕೊಹ್ಲಿ, ರವೀಂದ್ರ ಜಡೇಜ, ಕೆ.ಎಲ್. ರಾಹುಲ್, ಜಸ್‌ಪ್ರೀತ್ ಬೂಮ್ರಾ, ಸಿರಾಜ್ ಅವರಂತಹ ಅನುಭವಿ ಆಟಗಾರರಿರುವ ಭಾರತ ತಂಡದ ಎದುರು ಜಯಿಸುವುದು ಲಂಕೆಗೆ ಸುಲಭದ ಮಾತಲ್ಲ. ಆದರೆ ಸೂಪರ್ ಫೋರ್ ಹಂತದಲ್ಲಿ ಲಂಕಾ ತಂಡವು ಗಳಿಸಿದ ಗೆಲುವುಗಳು ಗಮನ ಸೆಳೆದಿದ್ದವು. ಅದೂ ಪಾಕಿಸ್ತಾನ ತಂಡವನ್ನು ನಿರ್ಣಾಯಕ ಪಂದ್ಯದಲ್ಲಿ ಸೋಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಈ ಪಂದ್ಯದಲ್ಲಿ ಮಿಂಚಿದ್ದ ಬ್ಯಾಟರ್‌ಗಳಾದ ಕುಶಾಲ ಮೆಂಡಿಸ್, ಆಲ್‌ರೌಂಡರ್ ಚರಿತ ಅಸಲಂಕಾ ಹಾಗೂ ಸದೀರ ಸಮರವಿಕ್ರಮ ಅವರನ್ನು ಕಟ್ಟಿಹಾಕಲು ಭಾರತದ ಬೌಲಿಂಗ್ ಪಡೆ ಪರಿಣಾಮಕಾರಿ ತಂತ್ರಗಾರಿಕೆ ಹೆಣೆಯಲೇಬೇಕು.

ದಸುನ್ ಶನಕಾ

ಅಮೋಘ ಲಯದಲ್ಲಿರುವ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್, ರವೀಂದ್ರ ಜಡೇಜ, ವೇಗಿ ಬೂಮ್ರಾ ಅವರನ್ನು ಎದುರಿಸಲು ಲಂಕಾದ ಬ್ಯಾಟರ್‌ಗಳೂ ಸಿದ್ಧರಾಗಬೇಕಿದೆ. ಆದರೆ ನಾಲ್ಕರ ಘಟ್ಟದ ಕೊನೆಯ ಪಂದ್ಯದಲ್ಲಿ ಬಾಂಗ್ಲಾ ಎದುರಿನ ಪಂದ್ಯದಲ್ಲಿ ಗಾಯಗೊಂಡಿದ್ದ ಆಲ್‌ರೌಂಡರ್ ಅಕ್ಷರ್ ಪಟೇಲ್ ಫೈನಲ್‌ನಲ್ಲಿ ಆಡುತ್ತಿಲ್ಲ. ಮುಂಬರುವ ಆಸ್ಟ್ರೇಲಿಯಾ ವಿರುದ್ಧದ ಸರಣಿಗೂ ಅವರು ಲಭ್ಯರಾಗುವುದು ಅನುಮಾನ.

ಲಂಕಾ ತಂಡದಲ್ಲಿರುವ ಸ್ಪಿನ್ನರ್ ದುನಿತ್ ವೆಲ್ಲಾಳಗೆ, ಧನಂಜಯ ಡಿಸಿಲ್ವಾ ಮತ್ತು ಚರಿತ ಅಸಲಂಕಾ ಅವರ ಮೇಲೆ ನಾಯಕ ದಸುನ್ ಶನಕಾಗೆ ಹೆಚ್ಚು ವಿಶ್ವಾಸವಿದೆ. ಪಂದ್ಯಕ್ಕೆ ತಿರುವು ನೀಡಬಲ್ಲ ಸಾಮರ್ಥ್ಯ ಈ ಬೌಲರ್‌ಗಳಿಗೆ ಇದೆ. ಆದರೆ ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ ಶುಭಮನ್ ಗಿಲ್, ರನ್ ಯಂತ್ರ ಕೊಹ್ಲಿ, ಲಯ ಕಂಡುಕೊಂಡಿರುವ ರಾಹುಲ್ ಹಾಗೂ ಇಶಾನ್ ಕಿಶನ್ ಅವರನ್ನು ಕಟ್ಟಿಹಾಕುವುದೇ ಲಂಕಾ ಬೌಲರ್‌ಗಳ ಮುಂದಿರುವ ಕಠಿಣ ಗುರಿಯಾಗಿದೆ.

**ಮಳೆ ಸಾಧ್ಯತೆ:** ಲಂಕಾದಲ್ಲಿ ನಡೆದ ಏಷ್ಯಾ ಕಪ್ ಟೂರ್ನಿಯ ಬಹುತೇಕ ಎಲ್ಲ ಪಂದ್ಯಗಳ ಸಂದರ್ಭದಲ್ಲಿಯೂ ಮಳೆ ಬಂದಿತ್ತು. ಭಾನುವಾರವೂ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆಯು ತಿಳಿಸಿದೆ.

ಇದೇ ಕಾರಣಕ್ಕಾಗಿ ಸೋಮವಾರವನ್ನು ಮೀಸಲು ದಿನವನ್ನಾಗಿ ನಿಗದಿಪಡಿಸಲಾಗಿದೆ. ಸೂಪರ್ ಫೋರ್ ಹಂತದಲ್ಲಿ ಭಾರತ –ಪಾಕಿಸ್ತಾನ ಪಂದ್ಯದ ಸಂದರ್ಭ ಮಳೆ ಬಂದಿತ್ತು. ಆಗ ಕೂಡ ಮರುದಿನ ಪಂದ್ಯವನ್ನು ಮುಂದುವರಿಸಲಾಗಿತ್ತು.

| ಬಲಾಬಲ (ಏಕದಿನ ಕ್ರಿಕೆಟ್) | |
|---|---|
| ಪಂದ್ಯ | 166 |
| ಭಾರತ ಜಯ | 97 |
| ಶ್ರೀಲಂಕಾ ಜಯ | 57 |
| ಟೈ | 1 |
| ಫಲಿತಾಂಶವಿಲ್ಲ | 11 |
| ಏಷ್ಯಾಕಪ್ ಗೆಲುವು (ಏಕದಿನ, ಟಿ20 ಸೇರಿ) | |
| ಭಾರತ | 7 |
| ಶ್ರೀಲಂಕಾ | 6 |
| ಪಾಕಿಸ್ತಾನ | 2 |

| ಈ ಟೂರ್ನಿಯ ಪ್ರಮುಖ ಅಂಶಗಳು | |
|---|---|
| *ಹೆಚ್ಚು ರನ್ ಗಳಿಸಿದವರು | |
| ಶುಭಮನ್ ಗಿಲ್ (ಭಾರತ) | 275 |
| * ಹೆಚ್ಚು ವಿಕೆಟ್ ಗಳಿಸಿದವರು | |
| ಪಥಿರಾಣ (ಶ್ರೀಲಂಕಾ) | 11 |
| ಶ್ರೇಷ್ಠ ಬೌಲಿಂಗ್ | |
| ಕುಲದೀಪ್ (ಭಾರತ) | 25ಕ್ಕೆ5 |
| ಹೆಚ್ಚು ಸಿಕ್ಸರ್ | |
| ರೋಹಿತ್ (ಭಾರತ) | 11 |
| ಹೆಚ್ಚು ಬೌಂಡರಿ | |
| ಶುಭಮನ್ ಗಿಲ್ (ಭಾರತ) | 29 |

**ತಂಡಗಳು**

**ಭಾರತ:** ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಶ್ರೇಯಸ್ ಅಯ್ಯರ್, ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಇಶಾನ್ ಕಿಶನ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ (ಉಪನಾಯಕ), ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಪ್ರಸಿದ್ಧಕೃಷ್ಣ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್.

**ಶ್ರೀಲಂಕಾ:** ದಸುನ್ ಶನಕಾ (ನಾಯಕ), ಪಥುಮ್ ನಿಸಾಂಕ, ದಿಮುತ್ ಕರುಣರತ್ನೆ, ಕುಶಾಲ ಪೆರೇರಾ, ಕುಶಾಲ ಮೆಂಡಿಸ್ (ಉಪನಾಯಕ), ಚರಿತ ಅಸಲಂಕಾ, ಧನಂಜಯ್ ಡಿಸಿಲ್ವಾ, ಸದೀರ ಸಮರವಿಕ್ರಮ, ಮಹೀಷ ತೀಕ್ಷಣ, ಕಸುನ್ ರಜಿತಾ, ದುಶಾನ್ ಹೇಮಂತ, ಬಿನುರಾ ಫರ್ನಾಂಡೊ, ಪ್ರಮೋದ ಮಧುಶಾನ್.

**ಪಂದ್ಯ ಆರಂಭ: ಮಧ್ಯಾಹ್ನ 3**
**ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

# ಸುಮಿತ್ ನಗಾಲ್‌ಗೆ ಗೆಲುವು

## ಡೇವಿಸ್ ಕಪ್: ಭಾರತ– ಮೊರೊಕ್ಕೊ 1–1 ಸಮಬಲ

ಭಾರತಕ್ಕೆ ಸಮಬಲ ತಂದಿತ್ತ ಸುಮಿತ್ ನಗಾಲ್

ಲಖನೌ (ಪಿಟಿಐ): ರಣ ಬಿಸಿಲು ಮತ್ತು ಅತೀವ ಸೆಕೆಯ ವಾತಾವರಣದಲ್ಲಿ ಆರಂಭವಾದ ಡೇವಿಸ್ ಕಪ್ ವಿಶ್ವ ಗುಂಪು 2ರ ಹಣಾಹಣಿಯಲ್ಲಿ ಭಾರತ ಮತ್ತು ಮೊರೊಕ್ಕೊ ತಂಡಗಳು ಶನಿವಾರ ಮೊದಲ ದಿನದ ಗೌರವವನ್ನು ಹಂಚಿಕೊಂಡವು. ಬಳಲಿದ ಶಶಿಕುಮಾರ್ ಮುಕುಂದ್ ಮೊದಲ ಸಿಂಗಲ್ಸ್ ಪಂದ್ಯವನ್ನು ಅರ್ಧದಲ್ಲೇ ಬಿಟ್ಟುಕೊಟ್ಟರೆ, ಸುಮಿತ್ ನಗಾಲ್ ಸುಲಭ ಗೆಲುವಿನೊಡನೆ ತಂಡವನ್ನು ಕಾಪಾಡಿದರು.

ಪಂದ್ಯಕ್ಕೆ ಮೊದಲು ಕೆಲಕಾಲ ಮಳೆಯಾಯಿತು. ಇದು ಸೆಕೆಯನ್ನು ಇನ್ನಷ್ಟು ಹೆಚ್ಚಿಸಿ, ಆಟಗಾರರಿಗೆ ಸವಾಲಿನ ಪರಿಸ್ಥಿತಿ ಎದುರಾಯಿತು. ಡೇವಿಸ್ ಕಪ್‌ಗೆ ಪದಾರ್ಪಣೆ ಮಾಡಿದ ಶಶಿಕುಮಾರ್ ಮೊದಲ ಸಿಂಗಲ್ಸ್‌ನಲ್ಲಿ ಯಾಸಿನ್ ದ್ಲಿಮಿ ವಿರುದ್ಧ ಮೂರು ಗಂಟೆ ಐದು ನಿಮಿಷಗಳ ಕಾಲ ಬೆವರು ಹರಿಸಿದ ನಂತರ ಪಂದ್ಯ ಮುಂದುವರಿಸಲಾಗದೇ ಬಿಟ್ಟುಕೊಟ್ಟರು.

26 ವರ್ಷದ ಆಟಗಾರ ಆ ಹಂತದಲ್ಲಿ 7-6 (4), 5-7, 1-4 ರಿಂದ ಹಿನ್ನಡೆಯಲ್ಲಿದ್ದರು. ಮೂರನೇ ಸೆಟ್ ಸ್ಕೋರ್ 1-2 ರಲ್ಲಿ ಹಿಂದೆಯಿದ್ದಾಗಲೇ ಅವರು 'ವೈದ್ಯಕೀಯ ವಿರಾಮ' (ಮೆಡಿಕಲ್ ಟೈಮ್‌ಔಟ್) ಕೇಳಿದ್ದರು. ಎರಡು ಗೇಮ್‌ಗಳ ನಂತರ ಆಟ ಮುಂದುವರಿಸಲಾಗದೇ, ಕುಂಟಿಕೊಂಡು ಕೋರ್ಟ್‌ನಿಂದ ನಿರ್ಗಮಿಸಿದರು. ಇದು 20 ವರ್ಷದ ಯಾಸಿನ್ ದ್ಲಿಮಿ ಅವರಿಗೂ ಚೊಚ್ಚಲ ಪಂದ್ಯವಾಗಿತ್ತು.

ಇಬ್ಬರ ನಡುವೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ದೊಡ್ಡ ವ್ಯತ್ಯಾಸವಿದ್ದರೂ ಅದು ಗಣನೆಗೆ ಬರಲಿಲ್ಲ. ಮುಕುಂದ್ 192ನೇ ಸ್ಥಾನದಲ್ಲಿದ್ದರೆ, ದ್ಲಿಮಿ 365ನೇ ಸ್ಥಾನದಲ್ಲಿದ್ದಾರೆ. ಆದರೆ ಭಾರತದ ಆಟಗಾರ ಆರಂಭದಿಂದಲೇ ಹೋರಾಟದಲ್ಲಿ ತೊಡಗಬೇಕಾಯಿತು.

ಎರಡನೇ ಸಿಂಗಲ್ಸ್‌ನಲ್ಲಿ ನಗಾಲ್ ನಿರೀಕ್ಷೆಯಂತೆ ಆ್ಯಡಂ ಮೌಂಡಿರ್ ವಿರುದ್ಧ ಜಯಗಳಿಸಿ ಭಾರತಕ್ಕೆ ಸಮಾಧಾನ ಮೂಡಿಸಿದರು. ರ‍್ಯಾಂಕಿಂಗ್‌ನಲ್ಲಿ 156ನೇ ಸ್ಥಾನದಲ್ಲಿರುವ ನಗಾಲ್ 6-3, 6-3 ರಲ್ಲಿ ಜಯಗಳಿಸಿದರು. ಮೌಂಡಿರ್ ರ‍್ಯಾಂಕಿಂಗ್‌ನಲ್ಲಿ 779ನೇ ಸ್ಥಾನದಲ್ಲಿದ್ದಾರೆ.

ಮೊದಲ ಸಿಂಗಲ್ಸ್ ಬೋರು ಮತ್ತು ದೀರ್ಘವಾದಂತೆ ಕಂಡರೆ, ಎರಡನೇ ಸಿಂಗಲ್ಸ್ ಬಿರುಸಿನಿಂದ ಕೂಡಿತ್ತು. ಇಬ್ಬರಿಂದಲೂ ಪ್ರಬಲ ಹೊಡೆತಗಳು ಕಂಡುಬಂದವು. ಉತ್ತಮ ಲಯದಲ್ಲಿರುವ ನಗಾಲ್ ನಿರ್ಣಾಯಕ ಹಂತದಲ್ಲಿ ಪಾಯಿಂಟ್‌ಗಳನ್ನು ಪಡೆದರು. ಮೌಂಡಿರ್ ಅವರಿಗೆ ಹೋಲಿಸಿದರೆ, ಅವರ ಸ್ವಯಂಕೃತ ತಪ್ಪುಗಳೂ ಕಡಿಮೆಯಿದ್ದವು.

ಈ ಪಂದ್ಯದ ಮೂಲಕ ಡೇವಿಸ್ ಕಪ್‌ಗೆ ವಿದಾಯ ಹೇಳಿರುವ ಕರ್ನಾಟಕದ ರೋಹನ್ ಬೋಪಣ್ಣ ಅವರು ಭಾನುವಾರ ಯೂಕಿ ಭಾಂಬ್ರಿ ಅವರೊಂದಿಗೆ ಡಬಲ್ಸ್ ಪಂದ್ಯದಲ್ಲಿ ಎಲಿಯೋಟ್ ಬೆಂಚಿತ್ರಿತ್– ಯೂನೆಸ್ ಲಲಾಮಿ ರಾಲರೋಸಿ ಜೋಡಿಯನ್ನು ಎದುರಿಸಲಿದ್ದಾರೆ.

ನಾಲ್ಕನೇ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾಕ್ಕೆ ಜಯ

# ಕ್ಲಾಸೆನ್ ಬೀಸಾಟಕ್ಕೆ ಬೆಚ್ಚಿದ ಆಸ್ಟ್ರೇಲಿಯಾ

ಶತಕ ಬಾರಿಸಿದ ಸಂಭ್ರಮದಲ್ಲಿ ಕ್ಲಾಸೆನ್

ಸೆಂಚೂರಿಯನ್ (ದಕ್ಷಿಣ ಆಫ್ರಿಕಾ), (ಎಪಿ): ಹೆನ್ರಿ ಕ್ಲಾಸೆನ್ ಅವರ ಸ್ಫೋಟಕ ಶತಕದ (83 ಎಸೆತಗಳಲ್ಲಿ 174) ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ನಾಲ್ಕನೇ ಏಕದಿನ ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 164 ರನ್‌ಗಳಿಂದ ಸುಲಭವಾಗಿ ಸೋಲಿಸಿತು. ಐದು ಪಂದ್ಯಗಳ ಸರಣಿ ಈಗ 2-2 ಸಮಬಲಗೊಂಡಿದೆ.

ದಕ್ಷಿಣ ಆಫ್ರಿಕಾ ಶುಕ್ರವಾರ ನಡೆದ ಈ ಪಂದ್ಯದಲ್ಲಿ 50 ಓವರುಗಳಲ್ಲಿ 5 ವಿಕೆಟ್‌ಗೆ 416 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಐದನೇ ಕ್ರಮಾಂಕದಲ್ಲಿ ಆಡಿದ ಅವರು 13 ಬೌಂಡರಿ ಮತ್ತು ಅಷ್ಟೇ ಸಂಖ್ಯೆಯ ಸಿಕ್ಸರ್‌ಗಳನ್ನು ಸಿಡಿಸಿ ಪ್ರವಾಸಿ ತಂಡದ ಬೌಲರ್‌ಗಳ ಬೆವರಿಳಿಸಿದರು. ಇದು ದಕ್ಷಿಣ ಆಫ್ರಿಕಾ ಬ್ಯಾಟರ್ ಒಬ್ಬರು ಗಳಿಸಿದ ನಾಲ್ಕನೇ ಅತ್ಯಧಿಕ ಮೊತ್ತ. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಅವರು ಬೌಂಡರಿ ಬಳಿ ಕ್ಯಾಚ್ ನೀಡಿದರು. ಡೇವಿಡ್ ಮಲನ್ 45 ಎಸೆತಗಳಲ್ಲಿ 82 ರನ್ ಸಿಡಿಸಿದರು. ರಸಿ ವಾನ್‌ಡರ್ ಡಸೆನ್ 62 ರನ್ ಕೊಡುಗೆಯಿತ್ತರು.

ವಿಕೆಟ್ ಗಳಿಸಲು ವಿಫಲರಾದ ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ 10 ಓವರುಗಳಲ್ಲಿ 113 ರನ್ ನೀಡಿ ಅತ್ಯಂತ ದುಬಾರಿ ಬೌಲರ್ ದಾಖಲೆಯನ್ನು ಮಿಕ್ ಲೂಯಿಸ್ ಜೊತೆ ಹಂಚಿಕೊಂಡರು. ಆಸ್ಟ್ರೇಲಿಯಾದ ಲೂಯಿಸ್ 2006ರಲ್ಲಿ ಜೊಹಾನೆಸ್‌ಬರ್ಗ್‌ನಲ್ಲಿ ನಡೆದ ಪಂದ್ಯದಲ್ಲಿ ಇಷ್ಟೇ ರನ್ (10-0-113-0) ಕೊಟ್ಟಿದ್ದರು. ಆ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದ ದೊಡ್ಡ ಮೊತ್ತವನ್ನು (4 ವಿಕೆಟ್‌ಗೆ 434) ಯಶಸ್ವಿಯಾಗಿ ದಾಟಿತ್ತು.

ಈ ಮೊತ್ತಕ್ಕೆ ಉತ್ತರವಾಗಿ ಆಸ್ಟ್ರೇಲಿಯಾ ಬಿರುಸಿನ ಆಟವಾಡಿದರೂ 34.5 ಓವರುಗಳಲ್ಲಿ 252 ರನ್ ಗಳಿಸಲಷ್ಟೇ ಶಕ್ತವಾಯಿತು. ಆಸ್ಟ್ರೇಲಿಯಾ ಪರ ಅಲೆಕ್ಸ್ ಕ್ಯಾರಿ 77 ಎಸೆತಗಳಲ್ಲಿ 99 ರನ್ ಗಳಿಸಿ ಗಮ ಸೆಳೆದರು. ಲುಂಗಿ ಗಿಡಿ 51 ರನ್ನಿಗೆ 4 ವಿಕೆಟ್ ಪಡೆದರು. ರಬಾಡ 3 ವಿಕೆಟ್ ಪಡೆದರು.

ಆದರೆ ಟ್ರಾವಿಸ್ ಹೆಡ್ ಅವರು ಗಾಯಾಳಾಗಿರುವುದು ಆಸ್ಟ್ರೇಲಿಯಾಕ್ಕೆ ಚಿಂತೆ ಮೂಡಿಸಿದೆ. ಮೂರು ವಾರಗಳಲ್ಲಿ ಭಾರತದಲ್ಲಿ ನಡೆಯುವ ವಿಶ್ವಕಪ್‌ಗೆ ಅವರು ಲಭ್ಯರಾಗುವ ಬಗ್ಗೆ ಸಂದೇಹ ಮೂಡಿದೆ.

# 'ಬ್ರಿಜ್‌ಭೂಷಣ್‌ರನ್ನು ದೋಷಮುಕ್ತಗೊಳಿಸಿಲ್ಲ'

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪ ಹೊಂದಿರುವ ಕುಸ್ತಿ ಫೆಡರೇಷನ್ ನಿರ್ಗಮಿತ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಸರ್ಕಾರ ರಚಿಸಿದ ಮೇಲ್ವಿಚಾರಣಾ ಸಮಿತಿಯು ಅವರನ್ನು ದೋಷಮುಕ್ತಗೊಳಿಸಿಲ್ಲ ಎಂದು ದೆಹಲಿ ಪೊಲೀಸರು ನಗರದ ನ್ಯಾಯಾಲಯಕ್ಕೆ ಶನಿವಾರ ತಿಳಿಸಿದ್ದಾರೆ.

ಪ್ರಕರಣದಲ್ಲಿ ಸಿಂಗ್ ವಿರುದ್ಧ ಆರೋಪ ಹೊರಿಸಬೇಕೇ ಎನ್ನುವ ಸಂಬಂಧ ನಡೆದ ವಿಚಾರಣೆಯ ವೇಳೆ ಅಡಿಷನಲ್ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಜಸ್ಪಾಲ್ ಅವರ ಮುಂದೆ ಪೊಲೀಸರು ಈ ಹೇಳಿಕೆ ನೀಡಿದ್ದಾರೆ.

'ಮೇಲ್ವಿಚಾರಣಾ ಸಮಿತಿ ಸಿಂಗ್ ಅವರನ್ನು ದೋಷಮುಕ್ತಗೊಳಿಸಿಲ್ಲ. ಸಮಿತಿಯು ಶಿಫಾರಸುಗಳನ್ನಷ್ಟೇ ನೀಡಿದೆ. ನಿರ್ಧಾರವನ್ನು ತಿಳಿಸಿಲ್ಲ. ಅವರ ವಿರುದ್ಧದ ಆರೋಪಗಳು ನಿರಾಧಾರ ಅಥವಾ ಸುಳ್ಳು ಎಂದು ಎಲ್ಲಿಯೂ ತಿಳಿಸಿಲ್ಲ' ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅತುಲ್ ಶ್ರೀವಾತ್ಸವ ಅವರು ನ್ಯಾಯಾಲಯಕ್ಕೆ ತಿಳಿಸಿದರು.

'ಸಿಂಗ್ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಕ್ರಮ ವಹಿಸಬೇಕು ಎಂದು ಅವರು ನ್ಯಾಯಾಲಯಕ್ಕೆ ಒತ್ತಾಯಿಸಿದರು. ಐಪಿಸಿಯ 354ನೇ ವಿಧಿಯನ್ವಯ (ಹೆಣ್ಣಿನ ಘನತೆಗೆ ಧಕ್ಕೆಯುಂಟುಮಾಡುವುದು) ಕಣ್ಸನ್ನೆ ಮಾಡುವುದೂ ಅಪರಾಧ ಎನಿಸುತ್ತದೆ ಎಂದು ಹೇಳಿದರು.

ದೆಹಲಿ ಪೊಲೀಸರು ಜೂನ್ 15ರಂದು ಆರು ಬಾರಿಯ ಸಂಸದ ಸಿಂಗ್ ವಿರುದ್ಧ ಐಪಿಸಿಯ 354, 354 ಎ (ಲೈಂಗಿಕ ಪೀಡನೆ), 354 ಡಿ (ಹಿಂಬಾಲಿಸುವಿಕೆ) ಮತ್ತು 506ರ (ಬೆದರಿಕೆ ಒಡ್ಡುವುದು) ಅಡಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸಿಂಗ್, ಶನಿವಾರ ವಿಚಾರಣೆಯ ವೇಳೆ ಹಾಜರಾಗಿದ್ದರು. ಸಿಂಗ್ ವಿರುದ್ಧ ಆರೋಪಗಳಿಗೆ ಸಂಬಂಧಿಸಿ ದೆಹಲಿ ಪೊಲೀಸರು ಸೆ. 23ರಂದು ವಾದ ಮುಂದುವರಿಸಲಿದ್ದಾರೆ.

ನವದೆಹಲಿಯಲ್ಲಿ ಖ್ಯಾತನಾಮ ಕುಸ್ತಿಪಟುಗಳ ಧರಣಿಯ ನಂತರ, ಸಿಂಗ್ ವಿರುದ್ಧ ಮಹಿಳಾ ಕುಸ್ತಿಪಟುಗಳು ಮಾಡಿದ ಆರೋಪಗಳ ತನಿಖೆಗೆ ಸಂಬಂಧಿಸಿ ಕೇಂದ್ರ ಕ್ರೀಡಾ ಸಚಿವಾಲಯವು ಬಾಕ್ಸಿಂಗ್ ತಾರೆ ಎಂ.ಸಿ.ಮೇರಿ ಕೋಮ್ ನೇತೃತ್ವದಲ್ಲಿ ಮೇಲ್ವಿಚಾರಣಾ ಸಮಿತಿ ನೇಮಿಸಿತ್ತು.

# ಭಾರತದ ಕುಸ್ತಿಪಟುಗಳ ಶುಭಾರಂಭ

ಬೆಲ್ಗ್ರೇಡ್ (ಪಿಟಿಐ): ಭಾರತದ ನಾಲ್ಕೂ ಮಂದಿ ಫ್ರೀಸ್ಟೈಲ್ ಕುಸ್ತಿಪಟುಗಳು ಶನಿವಾರ ಆರಂಭವಾದ ವಿಶ್ವ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ತಮ್ಮ ತಮ್ಮ ಸೆಣಸಾಟಗಳಲ್ಲಿ ಜಯ ಸಾಧಿಸಿದರು. 70 ಕೆ.ಜಿ. ವಿಭಾಗದಲ್ಲಿ ಅಭಿಮನ್ಯು, ವಿಶ್ವದ ಏಳನೇ ಕ್ರಮಾಂಕದ ಪೈಲ್ವಾನ್ ಇಹೋರ್ ನಿಕಿಫೋರಕ್ ಅವರ ಮೇಲೆ ಅಚ್ಚರಿಯ ಜಯಗಳಿಸಿದರು.

ವಿಶ್ವ 23 ವರ್ಷದೊಳಗಿನವರ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಅಭಿಮನ್ಯು 19-9 ರಿಂದ ಉಕ್ರೇನ್‌ನ ನಿಕಿಫೋರಕ್ ಅವರನ್ನು ಮಣಿಸಿದರು. ಎದುರಾಳಿಯನ್ನು ಚಿತ್ ಮಾಡಿ ಅವರು ಜಯಗಳಿಸಿದರು. ಭಾರತದ ಪೈಲ್ವಾನ್ ವಿಶ್ವ ಕ್ರಮಾಂಕದಲ್ಲಿ 26ನೇ ಸ್ಥಾನದಲ್ಲಿದ್ದಾರೆ.

ಅವರು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಮಾಲ್ಡೋವಾದ ನಿಕೊಲಾಯ್ ಗ್ರಾಮೆಝ್ ಅವರನ್ನು ಎದುರಿಸುವರು.

ಆಕಾಶ್ ದಹಿಯಾ ತಮ್ಮ ಮೊದಲ ಸುತ್ತಿನ ಪಂದ್ಯದಲ್ಲಿ ಮಾಲ್ಡೋವಾದ ಎದುರಾಳಿ ಲಿಯೊಮಿಡ್ ಕೊಲೆಸ್ನಿಕ್ ಅವರನ್ನು 10-5 ರಿಂದ ಸೋಲಿಸಿದರು. 21ನೇ ಕ್ರಮಾಂಕದ ದಹಿಯಾ, ಮುಂದಿನ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಜಹಾಂಗಿರ್ ಮಿರ್ಜಾ ತುರಬೋವ್ ಅವರನ್ನು ಎದುರಿಲಿದ್ದಾರೆ. ಇಲ್ಲಿ ಆರನೇ ಶ್ರೇಯಾಂಕ ಪಡೆದಿರುವ ತುರಬೋವ್ 2021ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು

ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಸಂದೀಪ್ ಮಾನ್ ಅವರು 86 ಕೆ.ಜಿ. ವಿಭಾಗದಲ್ಲಿ ಉತ್ತರ ಮ್ಯಾಸಿಡೋನಿಯಾದ ಡೆಜಾನ್ ಮಿಟ್ರೋವ್ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಸೋಲಿಸಿದರು. ಅವರು ಎರಡನೇ ಕ್ವಾಲಿಫಿಕೇಷನ್ ಸುತ್ತಿನಲ್ಲಿ ಚೀನಾದ ಲಿನ್ ಝುಷೆನ್ ಅವರನ್ನು ಎದುರಿಸುವರು.

125 ಕೆ.ಜಿ. ವಿಭಾಗದಲ್ಲಿ ಸುಮಿತ್ ಅವರು ಜಪಾನ್‌ನ ತೈಕಿ ಯಮಾಮಟೊ ಅವರನ್ನು ಸೋಲಿಸಿದರು.

# ವಿಶ್ವಕಪ್ ಟೂರ್ನಿಗೆ ನಸೀಂ ಅಲಭ್ಯ

ದುಬೈ (ಪಿಟಿಐ): ಭಾರತದಲ್ಲಿ ಮುಂದಿನ ತಿಂಗಳು ಆರಂಭವಾಗಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಪಾಕಿಸ್ತಾನ ತಂಡದ ವೇಗಿ ನಸೀಂ ಷಾ ಅಲಭ್ಯರಾಗಿದ್ದಾರೆ.

20 ವರ್ಷದ ನಸೀಂ ಈಚೆಗೆ ಏಷ್ಯಾಕಪ್ ಟೂರ್ನಿಯ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಭಾರತದ ಎದುರು ಆಡುವಾಗ ಗಾಯಗೊಂಡಿದ್ದರು. ಅವರ ಬಲಭುಜಕ್ಕೆ ಗಾಯವಾಗಿತ್ತು. ಕೊಲಂಬೊದಲ್ಲಿಯೇ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ, ಎಂ.ಆರ್. ಐ ಸ್ಕ್ಯಾನಿಂಗ್ ಕೂಡ ಮಾಡಲಾಯಿತು. ಗಾಯ ತುಸು ಗಂಭೀರವಾಗಿದೆ ಎಂಬ ವರದಿ ಬಂದಿದ್ದು, ಇಂಗ್ಲೆಂಡ್‌ನ ಪರಿಣತ ವೈದ್ಯರಿಂದ ಅಭಿಪ್ರಾಯ ಪಡೆಯಲೂ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಂದಾಗಿದೆ.

'ಪಾಕ್ ಕ್ರಿಕೆಟ್ ಮಂಡಳಿಯ ವೈದ್ಯಕೀಯಬಳಗವು ನಸೀಂ ಅವರ ಆರೈಕೆ ಮಾಡುತ್ತಿದೆ. ಭುಜದ ಮಾಂಸಖಂಡದ ಗಾಯಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

# ಶಿವಂ ಮಾವಿ ಬದಲು ಆಕಾಶ್‌ದೀಪ್

ನವದೆಹಲಿ (ಪಿಟಿಐ): ಬಂಗಾಳದ ವೇಗದ ಬೌಲರ್ ಆಕಾಶ್ ದೀಪ್ ಅವರು, ಗಾಯಾಳು ಶಿವಂ ಮಾವಿ ಬದಲು ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಬೆನ್ನು ನೋವಿನಿಂದ ಬಳಲುತ್ತಿರುವ ಮಾವಿ, ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಬಿಸಿಸಿಐ ತಿಳಿಸಿದೆ.

ಮಹಿಳೆಯರ ತಂಡದಲ್ಲಿ ಒಂದು ಬದಲಾವಣೆ ಮಾಡಲಾಗಿದ್ದು, ಮಂಡಿನೋವಿನ ಕಾರಣ ಟೂರ್ನಿಯಿಂದ ಹೊರಬಿದ್ದಿರುವ ಎಡಗೈ ವೇಗಿ ಅಂಜಲಿ ಸರವಣೆ ಬದಲು ಪೂಜಾ ವಸ್ತ್ರಕರ್‌ಗೆ ಅವಕಾಶ ದೊರೆತಿದೆ.

ಏಷ್ಯನ್ ಗೇಮ್ಸ್‌ನಲ್ಲಿ ಟಿ20 ಮಾದರಿಯಲ್ಲಿ ಕ್ರಿಕೆಟ್ ಟೂರ್ನಿ ನಡೆಯಲಿದ್ದು, ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳನ್ನು ಕ್ರಮವಾಗಿ ಋತುರಾಜ್ ಗಾಯಕವಾಡ್ ಹಾಗೂ ಹರ್ಮನ್‌ಪ್ರೀತ್ ಮುನ್ನಡೆಸಲಿದ್ದಾರೆ.

ಪ್ರಜಾವಾಣಿ
# ಭಾನುವಾರದ ಪುರವಣಿ
ಭಾನುವಾರ, 17 ಸೆಪ್ಟೆಂಬರ್ 2023

ದೇಶದುದ್ದಗಲ
ವಚನ ನೃತ್ಯದ ಬಳ್ಳಿ 3

# ಧಾರಾವಿ ಕನ್ನಡಿಗರ ಧಾರಾವಾಹಿ

ಮುಂಬೈನ ಧಾರಾವಿಯಲ್ಲಿ ವಾಸವಿರುವ ಕನ್ನಡಿಗರ ಸಂಖ್ಯೆ ಕಡಿಮೆಯೇನಿಲ್ಲ. ಇರಲೊಂದು ಗೂಡು ಸಿಕ್ಕರೆ ಸಾಕು ಎಂದು ಹುಡುಕಾಡುವ ಇಲ್ಲಿನವರ ಬದುಕಿನ ಸೂಕ್ಷ್ಮಗಳನ್ನು ಗಮನಿಸಿದರೆ ಧಾರಾವಾಹಿಯೊಂದನ್ನು ನೋಡಿದಂತೆ ಭಾಸವಾಗುತ್ತದೆ.

ಪತ್ನಿ ಶರಣಮ್ಮ ಜೊತೆ ಭೀಮರಾಯ ಚಿಲ್ಕಾ

ಮಳೆಗಾಲದಲ್ಲಿ ಧಾರಾವಿಯ ಬಣ್ಣ ಹೀಗೆ ಬದಲಾಗುತ್ತದೆ...

**ರಾಹುಲ ಬೆಳಗಲಿ**

‘ಸರ್, ಮುಂಬೈ ಇನ್ನೇನಿದ್ದರೂ ಎತ್ತರೆತ್ತರ ಬೆಳೆಯಬೇಕು. ಅಡ್ಡಡ್ಡ-ಉದ್ದುದ್ದ ಬೆಳೆಯೋಕೆ ಜಾಗವೇ ಇಲ್ಲ’ ಎಂದು ಸೂಕ್ಷ್ಮವಾಗಿ ಹೇಳಿದರು ಯಾದಗಿರಿಯ ಭೀಮರಾಯ ಚಿಲ್ಕಾ. ದಾರಿಯುದ್ದಕ್ಕೂ ಒಂದು ಬದಿ ಬಹು ಅಂತಸ್ತಿನ ಬೃಹತ್ ಕಟ್ಟಡಗಳು, ಮತ್ತೊಂದು ಬದಿ ಸಮುದ್ರ ತೋರಿಸುತ್ತ ಟ್ಯಾಕ್ಸಿಯಲ್ಲಿ ಕರೆದೊಯ್ಯುತ್ತಿದ್ದ ಅವರು ತಕ್ಷಣವೇ ಎಡಕ್ಕೆ ತಿರುಗಿಸುವಂತೆ ಚಾಲಕನಿಗೆ ಸನ್ನೆ ಮಾಡಿದರು. ‘ಇಗೋ ಇಲ್ಲಿ ನೋಡಿ ಅಂಬಾನಿ ಮನೆ’ ಎಂದ ಅವರು, ನಮ್ಮನ್ನು ಕೆಳಗಿಳಿಸಲಿಲ್ಲ. ಕಿಟಕಿಯ ಗಾಜನ್ನಷ್ಟೇ ಕೆಳಗಿಳಿಸಿ, ಅಲ್ಲಿಯೇ ಎರಡು ಸುತ್ತು ಹಾಕಿಸಿದರು. ಇಬ್ಬರು ಬಂದೂಕುಧಾರಿಗಳ ಜೊತೆಗೆ ಕಪ್ಪು ಉಡುಪಿನಲ್ಲಿ ಬಿಗಿ ಬಂದೋಬಸ್ತ್‌ಗೆಂದು ನಿಯೋಜಿತರಾಗಿದ್ದ ಕಟ್ಟುಮಸ್ತಾದ ನಾಲ್ವರನ್ನು ತೋರಿಸಿದರು.

‘27 ಅಂತಸ್ತಿನ ‘ಆ್ಯಂಟಿಲಿಯಾ’ ಹೆಸರಿನ ಈ ದೊಡ್ಡ ಮನೆಯಲ್ಲಿ ಜಗತ್ತೇ ಇದೆ. ಇದರ ಬೆಲೆ ₹ 15 ಸಾವಿರ ಕೋಟಿ. ಯಾವುದಕ್ಕೂ ಕೊರತೆ ಇಲ್ಲ. ಆದರೆ, ಇದರ ಎದುರು ನಾವು ಎರಡು ಕ್ಷಣ ನಿಲ್ಲುವುದಿರಲಿ, ಒಂದು ನೊಣ ಕೂಡ ಇಲ್ಲಿ ಸುಳಿಯಲು ಸಾಧ್ಯವಿಲ್ಲ’ ಎಂದರು. ‘ಮುಂಬೈಯಲ್ಲಿ ಎಲ್ಲರಿಗೂ ಹೀಗೆ ಐಷಾರಾಮಿ ಬಂಗಲೆ ಕಟ್ಟಿಕೊಳ್ಳಲು ಆಗಲ್ಲ. ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್, ರಸ್ತೆ ಬದಿ ಜೋಪಡಿ ಸಿಕ್ಕರೆ ಪುಣ್ಯ’ ಎಂದು ಹೇಳಿ ಮೌನವಾದರು. ಉದ್ಯಮಿ ಟಾಟಾ ಮನೆತನದ ನಿವಾಸ, ಶಾರುಖ್ ಖಾನ್ ಪ್ರೀತಿಯ ‘ಮನ್ನತ್’ನತ್ತ ಮಾತು ಹೊರಳಿತು. ಅವುಗಳನ್ನು ತೋರಿಸುವ ಉಮೇದು ಅವರಿಗಿತ್ತು. ಒಂದೇ ಸಂಜೆಯಲ್ಲಿ ಇಡೀ ಮುಂಬೈ ಸುತ್ತು ಹಾಕಿಸುವ ಅದಮ್ಯ ಉತ್ಸಾಹವೂ ಇತ್ತು. ಅವರ ಬೆನ್ನನ್ನು ಮೆಲ್ಲನೆ ತಟ್ಟಿ, ‘ನಿಮ್ಮ ಮನೆ ದೊಡ್ಡದಾ? ಎಷ್ಟು ರೂಮ್ ಇವೆ? ಎಷ್ಟು ಜನ ಇದ್ದೀರಿ?’ ಎಂದು ಕುತೂಹಲಕ್ಕೆ ಕೇಳಿದೆ.

ಮೇಲಿನ ಮಹಡಿ ಏರಲು ಏಣಿ ವ್ಯವಸ್ಥೆ

‘ಅದೇನು ಕೇಳ್ತೀರಾ? ಈ ಟ್ಯಾಕ್ಸಿ ಅರ್ಧದಷ್ಟು ನಮ್ಮ ಮನೆಯಿದೆ. ಅಲ್ಲಿಂದ ಎಂಟು ಅಡಿ, ಇಲ್ಲಿಂದ ಆರು ಅಡಿ ಹೆಜ್ಜೆ ಹಾಕಿದರೆ ಮನೆ ಮುಗಿಯಿತು. ಇಷ್ಟು ಜಾಗದಲ್ಲೇ ತಂದೆ-ತಾಯಿ, ತಮ್ಮ, ಹೆಂಡತಿ, ಮೂರು ತಿಂಗಳ ಕೂಸು ಸೇರಿ ಆರು ಜನ ಇದ್ದೀವಿ’ ಎಂಬ ಉತ್ತರ ಸಿಕ್ಕಿತು. ‘ಅದ್ಹೇಗೆ ಸಾಧ್ಯ, ಅಷ್ಟು ಕಿರಿದಾದ ಜಾಗದಲ್ಲಿ ಹೇಗೆ ಇರುತ್ತೀರಿ’ ಎಂದು ಪ್ರಶ್ನಿಸಿ, ಯೋಚನೆಗೆ ಬಿದ್ದೆ. ಹಾಗಿದ್ದರೆ, ಮನೆ ನೋಡಲೇಬೇಕು ಎಂದು ಪಟ್ಟು ಹಿಡಿದೆ.

‘ಯು’ ಟರ್ನ್ ತೆಗೆದುಕೊಂಡ ಟ್ಯಾಕ್ಸಿ ಅಲ್ಲಿ, ಇಲ್ಲಿ ಸುತ್ತುಹಾಕಿ ಕೊನೆಗೆ ನಿಂತಿದ್ದು ಧಾರಾವಿ ಪ್ರದೇಶದಲ್ಲಿ. ಅಲ್ಲಿ ಇಳಿದು ಸಂದಿಗೊಂದಿಗಳಲ್ಲಿ ನುಸುಳಿ, ಪುಟ್ಟ ಪುಟ್ಟ ಚರಂಡಿಗಳನ್ನು ದಾಟಿ, ಕಿರಿದಾದ ದಾರಿಯಲ್ಲಿ ಹುಷಾರಾಗಿ ಒಂದೊಂದೆ ಹೆಜ್ಜೆ ಇಡತೊಡಗಿದೆ. ನೋಡುನೋಡುತ್ತಿದ್ದಂತೆ ಅಲ್ಲಿ ಮುಂಬೈಯ ಇನ್ನೊಂದು ಮುಖ ಅನಾವರಣಗೊಂಡಿತು. ಆರರಿಂದ ಎಂಟು ಅಡಿ ವಿಸ್ತೀರ್ಣದ ಸಾಲು ಮನೆಗಳು. ಒಂದು ಬೈಕ್ ಕೂಡ ಹೋಗದಷ್ಟು ಕಿರಿದಾದ ದಾರಿಯ ಎದುರು ಬದುರು ಪುಟ್ಟ ಕೋಣೆಗಳಂತೆ ಮನೆಗಳಿದ್ದರೆ, ಅಷ್ಟು ಸಣ್ಣ ಜಾಗದಲ್ಲಿಯೇ ಪುಟ್ಟ ಪುಟ್ಟ ಕಚೇರಿಗಳೂ ಕಂಡವು. ಜೊತೆಗೆ ತರಬೇತಿ ಕೇಂದ್ರಗಳು, ಕಿರಾಣಿ ಅಂಗಡಿಗಳು, ಸ್ವಯಂ ಸೇವಾ ಸಂಸ್ಥೆಗಳ ಶಾಖೆಗಳು.

ಭೀಮರಾಯ ಅವರ ಮನೆ ಹೊಕ್ಕಾಗ, ಮನೆಯೋ, ಅಡುಗೆಕೋಣೆಯೋ, ಗಂಟು ಮೂಟೆಗಳ ಕೊಠಡಿಯೋ ಅಥವಾ ಶೌಚಾಲಯವೋ ಎಂದು ಗೊಂದಲವಾಯಿತು. ‘ಇದೇನೂ ಅಲ್ಲ’ ಎಂದು ಹೇಳಿ, ಅಲ್ಲಿಯೇ ಇದ್ದ ಪುಟ್ಟ ಏಣಿ ಹತ್ತಿಸಿ ಮೇಲಿನ ಮಹಡಿಗೆ ಕರೆದೊಯ್ದಾಗ, ಪುಟಾಣಿ ಅಡುಗೆಮನೆ ಮತ್ತು ಶೌಚಾಲಯದ ದರ್ಶನವಾಯಿತು. ‘ಇನ್ನೂ ಇದೆ... ಬನ್ನಿ’ ಎಂದು ಅಲ್ಲಿ ಮತ್ತೆ ಏಣಿ ಹತ್ತಿಸಿದರು. ಅಲ್ಲಿ ಮತ್ತೊಂದು ಕೋಣೆ. ನೀವೆಲ್ಲರೂ ಇಲ್ಲಿ ಹೇಗೆ ಇರುತ್ತೀರಿ ಎಂದು ಕೇಳುವಷ್ಟರಲ್ಲಿ, ‘ನೆಲಮಹಡಿಯಲ್ಲಿ ತಮ್ಮ, ಅಡುಗೆಮನೆಯಲ್ಲಿ ತಂದೆ-ತಾಯಿ ಮತ್ತು ಈ ಕೋಣೆಯಲ್ಲಿ ನಾನು, ಪತ್ನಿ ಮತ್ತು ಕೂಸು ಇರುತ್ತೇವೆ’ ಎಂದು ತಡ ಮಾಡದೇ ಹೇಳಿದರು.

ಏಷ್ಯಾದ ದೊಡ್ಡ ಕೊಳೆಗೇರಿ ಪ್ರದೇಶಗಳಲ್ಲಿ ಒಂದಾದ ‘ಧಾರಾವಿ’ಯ ಜೀವಾಳವೇ ಇಂಥ ಮನೆಗಳು. ದೇಶದ ಪ್ರತಿಯೊಂದು ರಾಜ್ಯದವರಿಗೂ ಆಶ್ರಯ ನೀಡಿ ‘ಮಿನಿ ಇಂಡಿಯಾ’ದಂತೆ ಇರುವ ಈ ಪ್ರದೇಶದಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮಂದಿ ವಾಸವಿದ್ದಾರೆ. 2 ಕಿ.ಮೀ.ನಷ್ಟು ವ್ಯಾಪ್ತಿಯುಳ್ಳ ಈ ಪ್ರದೇಶದ ಅಂದಾಜು ವಿಸ್ತೀರ್ಣ 557 ಎಕರೆ. ‘ಕೂರಲು, ಮಲಗಲು ಕಿಂಚಿತ್ ಜಾಗ ಸಿಕ್ಕರೂ ಸಾಕು’ ಎಂದು ಬಯಸುವವರಿಗೆ ಇಲ್ಲಿ ನಿರಾಸೆ ಆಗುವುದಿಲ್ಲ. ಈ ಆಶಾಭಾವದಿಂದಲೇ ಲಕ್ಷಾಂತರ ಸಂಖ್ಯೆಯಲ್ಲಿ ಕನ್ನಡಿಗರು, ತೆಲುಗರು, ತಮಿಳರು, ಮಲಯಾಳಿಗಳು ಸೇರಿದಂತೆ ದೇಶದ ಮೂಲೆಮೂಲೆಯ ಜನರಿಗೆ ಇಲ್ಲಿ ಪುಟ್ಟ ಆಶ್ರಯ ತಾಣ ಮಾಡಿಕೊಂಡು ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ.

ಯಾದಗಿರಿ ಜಿಲ್ಲೆಯ ಕೊಂಕಲ್‌ನಿಂದ 40 ವರ್ಷಗಳ ಹಿಂದೆ ಸ್ನೇಹಿತರೊಂದಿಗೆ ಕೆಲಸ ಹುಡುಕಿಕೊಂಡು ಮುಂಬೈಗೆ ಬಂದ ಭೀಮರಾಯ ಅವರ ತಂದೆ ಭೀಮಶಾ ಅವರು ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ ಕೆಲಸ ಮಾಡಿದರು. ಧಾರಾವಿಯಲ್ಲಿ ಆಗಿನ ಕಾಲಕ್ಕೆ ₹40 ಸಾವಿರಕ್ಕೆ ಜಾಗ ಪಡೆದು, ಪುಟ್ಟ ಮನೆ ನಿರ್ಮಿಸಿಕೊಂಡರು. ಈಗ ಅದೇ ಮನೆ, ಜಾಗ ಸೇರಿ ಒಟ್ಟು ದರ ₹ 30 ಲಕ್ಷದ ಆಸುಪಾಸು ಇದೆ. ಒಂದು ಕೊಠಡಿಯ ಮನೆಯ ಬಾಡಿಗೆ ₹ 1 ಸಾವಿರ, ಎರಡಕ್ಕಿಂತ ಹೆಚ್ಚು ಕೊಠಡಿಗಳು ಇರುವ ಮನೆಗೆ ₹ 2 ಸಾವಿರಕ್ಕೂ ಹೆಚ್ಚು ಬಾಡಿಗೆ. ಇಲ್ಲಿನ ನಿವಾಸಿಗಳ ಪ್ರಕಾರ, ಮನೆ ದೊಡ್ಡದೋ-ಚಿಕ್ಕದೋ ಎಂಬುದಕ್ಕಿಂತ ಇರಲಿಕ್ಕೆ ಜಾಗ ಸಿಕ್ಕಿತು ಎನ್ನುವುದಷ್ಟೆ ಮುಖ್ಯ. ಈ ಪುಟ್ಟ ಮನೆಗಳು ಮನುಷ್ಯರಿಗೆ ಅಷ್ಟೇ ಸೀಮಿತವಲ್ಲ; ನಾಯಿ, ಬೆಕ್ಕು, ಪಕ್ಷಿ, ಇಲಿಮರಿಗಳು ಮುಂತಾದವೂ ಕುಟುಂಬದ ಸದಸ್ಯರಂತೆಯೇ ಇವೆ.

ಆಸಕ್ತಿಕರ ಸಂಗತಿಯೆಂದರೆ, ಇಲ್ಲಿ ನೀರಿನ ಸಮಸ್ಯೆಯಿಲ್ಲ ಮತ್ತು ಜಾಗ ಹೊರತುಪಡಿಸಿ ಸೌಲಭ್ಯಗಳ ಕೊರತೆಗಳಿಲ್ಲ. ಕುಡಿಯಲು ಮತ್ತು ಬಳಸಲು ನೀರು ಸಿಗುತ್ತದೆ. ಆದರೆ, ಪುಟ್ಟ ಲೋಟದಿಂದ ದೊಡ್ಡ ಟ್ಯಾಂಕ್‌ವರೆಗೆ ಶೇಖರಿಸಿಡುವುದೇ ಸವಾಲು. ಮುಂಬೈನ ಪ್ರತಿಷ್ಠಿತ ಪ್ರದೇಶಗಳಲ್ಲಿ ದೊರೆಯುವ ಪ್ರತಿಯೊಂದು ವಸ್ತು ಇಲ್ಲೂ ಸಿಗುತ್ತದೆ. ‘ಅವರು ಮಾಲ್‌ಗಳಲ್ಲಿ ಖರೀದಿಸಿದರೆ, ನಾವು ಇಲ್ಲಿನ ಕಿರಾಣಿ ಅಂಗಡಿ ಮತ್ತು ಸಣ್ಣಪುಟ್ಟ ಗೃಹ ಕೈಗಾರಿಕೆಗಳಲ್ಲಿ ಕೊಳ್ಳುತ್ತೇವೆ’ ಎಂದು ಸ್ವಾಭಿಮಾನದಿಂದ ಹೇಳುತ್ತಾರೆ.

3ನೇ ಪುಟಕ್ಕೆ...

# ಜಾಮ್ ತಕ್ಕ ತಕ್ಕ ತಕ್ಕ...

**ಎಸ್. ವಿಷ್ಣುಕುಮಾರ್**

ನನ್ನೂರು ‘ಟುಮುಕಿ’ ಹೆಸರಿನ ಜಿಲ್ಲೆಯದ್ದು ಅರ್ಥಾತ್ ತುಮಕೂರು ಜಿಲ್ಲೆಯದ್ದು. ಕರಡಿ-ತಿಪಟೂರು ಆಸುಪಾಸಿನಲ್ಲೇ ಬೆಳೆದು ದೊಡ್ಡವನಾದವನು ನಾನು. ಈಗ 46 ವರ್ಷ ವಯಸ್ಸು. ಕರಡಿ ನನ್ನ ಅಮ್ಮನೂರು. ಅಪ್ಪನ ಕೆಲಸದ ನಿಮಿತ್ತ ಬಾಳಿ ಬದುಕಿದ್ದೆಲ್ಲ ತಿಪಟೂರು.

ಚಿಕ್ಕಂದಿನಿಂದ ‘ಜಗ್ಗಣಕ ಜಗ್ಗ ಜಗ್ಗ-ಜಗ್ಗಣಕ ಜಗ್ಗ ಜಗ್ಗ...’ ಎಂಬ ತಮಟೆಯ ನಾದ ಕೇಳಿಸಿಕೊಳ್ಳುತ್ತಲೇ ಬೆಳೆದ ನಾನು, ಅದನ್ನು ನುಡಿಸುತ್ತಿದ್ದ ಬಂಧು-ಮಿತ್ರರನ್ನೂ ಬಲು ಚೋದ್ಯದಿ ನೋಡುತ್ತಿದ್ದುಂಟು. ಪಂಚಾಯಿತಿಕೆಯದ್ದೋ, ಸರ್ಕಾರದ್ದೋ ಜರೂರು ವಾರ್ತೆಗಳನ್ನು ಊರಮಂದಿಗೆ ತಲುಪಿಸಲಿಕ್ಕಾಗಿ ತಮಟೆ ಬಡಿಯುತ್ತಾ ಊರತುಂಬ ‘ಸಾರುಹಾಕುವ ಅಂದಾನಣ್ಣ’ನನ್ನು ನಾನು ಶಾಲೆ ಕಿಟಕಿಯಿಂದ ಇಣುಕಿಣುಕಿ ನೋಡುತ್ತಿದ್ದುದೂ ಇದೆ.

ತಮಟೆ ಬಡಿಯುವ ಅಂದಾನಣ್ಣ, ಹನುಮಣ್ಣ, ಗೌಡದಾಸೇಣ್ಣ ಮತ್ತವರ ಮಗ ರಂಗಾ ಇವರನ್ನೆಲ್ಲ ಕುತೂಹಲ, ಗೌರವಾದರಗಳಿಂದ ನೋಡುತ್ತಿದ್ದ ಬಾಲಕರಾದ ನಮ್ಮ ಕಣ್ಣಿಗೆ ಅವರು ಎಲ್ಲಿಂದಲೋ ಅವತರಿಸಿ ಬಂದ ಅನ್ಯಲೋಕಿಗಳಂತೆ ಕಾಣುತ್ತಿದ್ದರು. ಅವರು ಬಾರಿಸುತ್ತಿದ್ದ ತಮಟೆಯ ನಾದ ನಮ್ಮ ಎಳವೆಯಲ್ಲಿ ಕಿವಿಮೇಲೆ ಬಿದ್ದಿತೆಂದರೆ, ಅಪರಿಚಿತ ಅಂತಃಕರಣವೊಂದು ಜಾಗೃತವಾಗುತ್ತಿತ್ತು. ಒಂದೇ ಕಡೆ ನಿಲಲಾರದವರನ್ನೂ, ಕಷ್ಟಪಟ್ಟು ನಿಂತವರನ್ನೂ ಚಕಿತರನ್ನಾಗಿಸುತ್ತಿತ್ತು. ತಮಟೆ ಬಾರಿಸುತ್ತಾ ಅವರು ಸಮೀಪ ಬಂದಂತೆಲ್ಲಾ ನಾದ ನಮ್ಮ ಮೈ ಮನಸ್ಸನ್ನು ಹೊಕ್ಕಿ ಬೆಚ್ಚಗಾಗಿಸುತ್ತಿತ್ತು; ಸುಮ್ಮಸುಮ್ಮನೆ ಹುಚ್ಚೆದ್ದು ಕುಣಿದೇಬಿಡಬೇಕು ಎಂಬಂತೆ ರೋಮಾಂಚನಗೊಳಿಸುತ್ತಿತ್ತು!

> ವಯಸ್ಸು, ಜಾತಿಯ ಹಂಗಿಲ್ಲದೆ ತಮಟೆ ಕಲಿಸುವ ಶಿಬಿರವನ್ನು ಭರತ್ ಡಿಂಗ್ರಿ ಇತ್ತೀಚೆಗೆ ನಡೆಸಿಕೊಟ್ಟರು. ಶಿಬಿರಾರ್ಥಿಯೊಬ್ಬರು ತಮ್ಮ ಅನುಭವ ಸಾರವನ್ನು ಇಲ್ಲಿ ಅಕ್ಷರಕ್ಕಿಳಿಸಿದ್ದಾರೆ.

ಈ ಜೀವಮಾನದಲ್ಲಿ ಒಂದಿಲ್ಲೊಂದು ಒಂದು ದಿನ ಇದನ್ನು ಕಲಿಯಲೇಬೇಕು ಎಂದು ತೀವ್ರವಾಗಿ ನನ್ನನ್ನು ಕಾಡಿದ ವಾದ್ಯ ಈ ತಮಟೆ. ಚಿಕ್ಕ ವಯಸ್ಸಿನಿಂದ ನೋಡಿರುವ, ಕೇಳಿರುವ ವಾದ್ಯ ಇದು. ಇದನ್ನು ಕಲಿಯುವ ಆಸೆ ಆಗಿನಿಂದಲೂ ಇದ್ದರೂ ಎಲ್ಲಿ ಕಲಿಯಬೇಕು, ಹೇಗೆ ಕಲಿಯಬೇಕು, ಯಾರನ್ನು ಕೇಳಿ, ಎಲ್ಲಿ ಹೇಳಿಸಿಕೊಂಡು ಕಲಿಯಬೇಕು ಎಂಬೆಲ್ಲ ಗೊಂದಲದಿಂದಾಗಿ ತಮಟೆ ನುಡಿಸುವುದನ್ನು ಕಲಿಯಬಕೆಂಬ ಆಸೆಯನ್ನೇ ಬಿಟ್ಟೇಬಿಟ್ಟಿದ್ದೆ. ‘ಮುನಿ ಬಕಾಲ-ಕೆ.ಬಿ. ಸಿದ್ಧಯ್ಯ’ನವರ ಖಂಡಕಾವ್ಯ ‘ದಕ್ಲಕಥಾ ದೇವಿ’ ಆಧಾರಿತ ನಾಟಕದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಗೆಳೆಯ ಡಿಂಗ್ರಿ ಭರತ್ ಮತ್ತು ಸ್ನೇಹಿತರು ಒಗ್ಗೂಡಿ, ‘ಜಂಗಮ ಪದ’ ಹಾಗೂ ‘ದಿ ಕೊಲಾಜ್’ ಸಹಭಾಗಿತ್ವದಲ್ಲಿ ಬೆಂಗಳೂರಿನ ‘ಸ್ಫೂರ್ತಿ-ಧಾಮ’ದ ಅಂಗಳದಲ್ಲಿ ಒಂದು ವಾರದ ತಮಟೆ ಶಿಬಿರವನ್ನು ಆಯೋಜಿಸಿದ್ದರು. ಇದರಲ್ಲಿ ವಿವಿಧ ಕ್ಷೇತ್ರಗಳಿಂದ ಬಂದ ಸುಮಾರು 15 ಮಂದಿ ಶಿಬಿರಾರ್ಥಿಗಳಿದ್ದರು. ಅವರಲ್ಲಿ ನಾನೂ ಒಬ್ಬ. ವಿಶೇಷ ಅಂದರೆ, ಯಾವುದೇ ವಯಸ್ಸಿನ ಮಿತಿ ಇರಲಿಲ್ಲ; ಕಲಿವ ಮನಸುಗಳ ಉಪಸ್ಥಿತಿಯಷ್ಟೆ ಪ್ರಮುಖವಾಗಿತ್ತು. ನಾಟಕಕಾರ ಮತ್ತು ಸಂಸ್ಕೃತಿ ಚಿಂತಕ ರಾಜಪ್ಪ ದಳವಾಯಿ ಕೂಡ ಶಿಬಿರಾರ್ಥಿಗಳಲ್ಲಿ ಒಬ್ಬರಾಗಿದ್ದರು.

3ನೇ ಪುಟಕ್ಕೆ...



# ಟೆನಿಸ್ ದೊರೆ ಜೊಕೊವಿಚ್

**ರಾಮಚಂದ್ರ ಎಂ.**

> ನ್ಯಾಟೊ ಪಡೆ ನಡೆಸಿದ ದಾಳಿಯಿಂದ ಸರ್ಬಿಯಾ ನೆಲಸಮವಾಗಿತ್ತು. ಅದನ್ನು ಕಂಡಿದ್ದ ಪೋರ ನೊವಾಕ್ ಜೊಕೊವಿಚ್ ಅವರು ಈಗ ಟೆನಿಸ್‌ನ 24 ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳ ಮಹಾದೊರೆ.

**ಅಮೆರಿಕದ** ಪೀಟ್ ಸಾಂಪ್ರಾಸ್ 14 ಗ್ರ್ಯಾನ್ ಸ್ಲಾಮ್‌ಗಳನ್ನು ಗೆದ್ದು 2003ರಲ್ಲಿ ನಿವೃತ್ತರಾದಾಗ, ಟೆನಿಸ್ ಪಂಡಿತರು ಹಾಗೂ ಅಭಿಮಾನಿಗಳು ಪುರುಷರ ಟೆನಿಸ್‌ನ ಈ ದಾಖಲೆಯನ್ನು ಮುರಿಯುವುದು ಬಹುತೇಕ ಅಸಾಧ್ಯ ಎಂದೇ ನಂಬಿದ್ದರು. ಆದರೆ ಅಲ್ಲಿಂದ ಆರೇ ವರ್ಷಗಳಲ್ಲಿ ಸಾಂಪ್ರಾಸ್ ಅವರ ಗರಿಷ್ಠ ಗ್ರ್ಯಾನ್ ಸ್ಲಾಮ್‌ಗಳ ದಾಖಲೆಯನ್ನು ಸ್ವಿಜರ್‌ಲೆಂಡ್‌ನ ರೋಜರ್ ಫೆಡರರ್ ಮುರಿದು ಟೆನಿಸ್‌ನ ಹೊಸ ದಾಖಲೆ ಸೃಷ್ಟಿಸಿದರು. ಆ ವೇಳೆ ಅವರ ಗ್ರ್ಯಾನ್ ಸ್ಲಾಮ್ ಬೇಟೆಯ ಹಾದಿಯಲ್ಲಿ ತೀವ್ರ ಪ್ರತಿರೋಧ ಒಡ್ಡಿದ್ದು ಸ್ಪೇನ್‌ನ ರಫೆಲ್ ನಡಾಲ್ ಒಬ್ಬರೇ. ಇಡೀ ಟೆನಿಸ್ ಜಗತ್ತೇ ಈ ದಿಗ್ಗಜರಿಬ್ಬರ ಆಟವನ್ನು ಸವಿಯುತ್ತಾ, ಇವರಿಗೆ ಸವಾಲೊಡ್ಡುವ ಇನ್ನೊಬ್ಬ ಟೆನಿಸ್ ಪಟು ಬರಲು ಸಾಧ್ಯವೇ ಇಲ್ಲ ಎಂದುಕೊಂಡಿದ್ದಾಗಲೇ, ಎಲ್ಲರ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿ ಬೆಳಕಿಗೆ ಬಂದವರು ಸರ್ಬಿಯಾದ ನೊವಾಕ್ ಜೊಕೊವಿಚ್!

ಸೆಪ್ಟೆಂಬರ್ 10ರಂದು ನ್ಯೂಯಾರ್ಕ್‌ನ ಆರ್ಥರ್ ಆ್ಯಷ್ ಕೋರ್ಟ್‌ನಲ್ಲಿ ನಡೆದ ಯು.ಎಸ್ ಓಪನ್ ಫೈನಲ್‌ನಲ್ಲಿ ರಷ್ಯಾದ ಡೇನಿಲ್ ಮೆಡ್ವೆಡೇವ್ ಅವರನ್ನು ನಿರಾಯಾಸವಾಗಿ ನೇರ ಸೆಟ್‌ಗಳಿಂದ ಮಣಿಸಿ, ತಮ್ಮ 24ನೇ ಗ್ರ್ಯಾನ್ ಸ್ಲಾಮ್ ಅನ್ನು ಮುಡಿಗೇರಿಸಿಕೊಂಡು ಬೀಗಿದರು ಮೂವತ್ತಾರರ ಹರೆಯದ ಜೊಕೊವಿಚ್. ಈ ಗೆಲುವು ಟೆನಿಸ್‌ನ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಕ್ಷಣ ಎಂದರೂ ಉತ್ಪ್ರೇಕ್ಷೆಯಲ್ಲ. ಏಕೆಂದರೆ, 2003ರಲ್ಲಿ ಮೊದಲ ಬಾರಿಗೆ ವೃತ್ತಿಪರ ಟೆನಿಸ್ ಆಡಲು ಅರ್ಹತೆ ಪಡೆದು ಕಣಕ್ಕಿಳಿದಿದ್ದ ಹದಿನಾರರ ಪೋರ ಜೊಕೊವಿಚ್ ಅವರನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಹಲವಾರು ಬಾರಿ ತಮ್ಮ ಪಂದ್ಯದ ಬಳಿಕ, ಆಗಿನ ದಿಗ್ಗಜ ಆಟಗಾರರಾದ ಫೆಡರರ್, ನಡಾಲ್, ಶರಾಪೋವಾ ಹಾಗೂ ಸೆರೆನಾ ವಿಲಿಯಮ್ಸ್‌ರ ಹಾವ-ಭಾವಗಳನ್ನು ನಕಲು ಮಾಡಿ, ಕೋರ್ಟ್‌ನಲ್ಲಿ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸುತ್ತಿದ್ದ ಹದಿಹರೆಯದ ಜೊಕೊವಿಚ್ ದಿಟವಾಗಿಯೂ ವೃತ್ತಿಪರ ಟೆನಿಸ್ ಆಟಗಾರನೇ ಎಂದು ಕೆಲವು ಮಾಜಿ ಆಟಗಾರರು ಟೀಕಿಸಿದ್ದರು. ಹೀಗೆ ಆರಂಭದಿಂದಲೂ ತಮ್ಮ ವಿಭಿನ್ನ ನಡವಳಿಕೆಯಿಂದ ಟೆನಿಸ್ ಜಗತ್ತಿನ ಕೆಂಗಣ್ಣಿಗೆ ಗುರಿಯಾಗಿದ್ದ ಜೊಕೊವಿಚ್ ಇಂದು ‘ಓಪನ್ ಎರಾ’ದಲ್ಲಿ ಅತ್ಯಧಿಕ 24 ಗ್ರ್ಯಾನ್ ಸ್ಲಾಮ್‌ಗಳನ್ನು ಗೆದ್ದು, ಪುರುಷರ ಟೆನಿಸ್‌ನಲ್ಲಿ ಯಾರೂ ಏರದ ಶಿಖರವನ್ನೇರಿದ ಪರಿ ಮಾತ್ರ ನಿಜಕ್ಕೂ ಅದ್ವಿತೀಯ.

24ನೇ ಗ್ರ್ಯಾನ್ ಸ್ಲಾಮ್ ಗೆದ್ದ ಹೆಮ್ಮೆಯ ಕ್ಷಣ

1987ರ ಮೇ 22ರಂದು ಸರ್ಬಿಯಾದಲ್ಲಿ ಜನಿಸಿದ ಜೊಕೊವಿಚ್ ತಮ್ಮ ನಾಲ್ಕನೇ ವಯಸ್ಸಿಗೆ ತಂದೆ ಕೊಡಿಸಿದ ಟೆನಿಸ್ ರ‍್ಯಾಕೆಟ್ ಹಿಡಿದು ಆಟದ ಬಗೆಗೆ ಒಲವು ಬೆಳೆಸಿಕೊಂಡರು. ನ್ಯಾಟೊ ಪಡೆ ಸರ್ಬಿಯಾದ ಮೇಲೆ ದಾಳಿ ನಡೆಸಿದಾಗ ಕಣ್ಣೆದುರಿಗೆ ತನ್ನ ದೇಶ ಅಕ್ಷರಶಃ ನೆಲಸಮವಾಗಿದ್ದನ್ನು ಕಂಡು ದಿಗ್ಭ್ರಮೆಗೊಂಡಿದ್ದ ಪೋರ ಅವನು.

ಆ ದುರಂತದ ವೇಳೆ ಅವರ ಕುಟುಂಬ ಜೀವ ಉಳಿಸಿಕೊಳ್ಳಲು ಪಟ್ಟ ಪಾಡು ಅಷ್ಟಿಷ್ಟಲ್ಲ. ಎಳೆಯ ವಯಸ್ಸಿಗೆ ದೊಡ್ಡ ಮಟ್ಟದ ಸಾವು-ನೋವುಗಳನ್ನು ತೀರಾ ಸಾಮಾನ್ಯ ಆಗುಹೋಗುಗಳಂತೆ ಕಂಡಿದ್ದ ಜೊಕೊವಿಚ್ ಗಟ್ಟಿಗನಾದನು. ಈ ಸವಾಲುಗಳನ್ನು ಹಿಮ್ಮೆಟ್ಟಿದ ಹುಡುಗ ತನ್ನ ಟೆನಿಸ್ ಕಲಿಕೆಯನ್ನು ಮಾತ್ರ ನಿಲ್ಲಿಸದೆ ಒಂದೊಂದೇ ಹೆಜ್ಜೆ ಇಡುತ್ತಾ ಆಟದಲ್ಲಿ ಮುಂದುವರೆಯುತ್ತಾ ಹೋದನು. ಜೆಲೆನಾ ಗೆನ್ಸಿಚ್‌ರ ಗರಡಿಯಲ್ಲಿ ಆಟದ ಮೊದಲ ಪಟ್ಟುಗಳನ್ನು ಕಲಿತು ಆ ಬಳಿಕ ಗಡಿ ದಾಟಿ ಜರ್ಮನಿಯಲ್ಲಿ ವೃತ್ತಿಪರ ಕಲಿಕೆಯಲ್ಲಿ ತೊಡಗಿಕೊಂಡ ಎಳೆಯ ಜೊಕೊವಿಚ್‌ನ ಪ್ರತಿಭೆ ಅನಾವರಣಗೊಳ್ಳಲು ಹೆಚ್ಚು ಸಮಯ ಹಿಡಿಯಲಿಲ್ಲ. ಕಿರಿಯರ ಪಂದ್ಯಾವಳಿಗಳಲ್ಲಿ ಸಾಲು-ಸಾಲು ಗೆಲುವುಗಳನ್ನು ಪಡೆದು ಮೇಲ್ಮಟ್ಟಕ್ಕೆ ತೇರ್ಗಡೆ ಹೊಂದಿ ತಮ್ಮ ಮೊದಲ ಗ್ರ್ಯಾನ್ ಸ್ಲಾಮ್ ಅನ್ನು 2008ರ ಆಸ್ಟ್ರೇಲಿಯನ್ ಓಪನ್ ಗೆಲ್ಲುವ ಮೂಲಕ ತಮ್ಮ ತೆಕ್ಕೆಗೆ ಹಾಕಿಕೊಂಡಾದಾಗ ಜೊಕೊವಿಚ್ ಅವರಿಗೆ ಕೇವಲ ಇಪ್ಪತ್ತರ ಪ್ರಾಯ. ಘಟಾನುಘಟಿಗಳಾದ ಫೆಡರರ್ ಮತ್ತು ನಡಾಲ್ ಇನ್ನೂ ತಮ್ಮ ಉತ್ತುಂಗದಲ್ಲಿರುವಾಗಲೇ ಟೆನಿಸ್‌ನ ಮೂರನೇ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿ, ಪೈಪೋಟಿ ನೀಡಲಾರಂಭಿಸಿದ ಅವರಿಗೆ ಮತ್ತೊಂದು ಗ್ರ್ಯಾನ್ ಸ್ಲಾಮ್ ಗೆಲ್ಲಲು 2011ರವರೆಗೂ ಕಾಯಬೇಕಾದರೂ ವೃತ್ತಿಬದುಕಿನಲ್ಲಿ ಅಲ್ಲಿಂದ ಮತ್ತೆಂದೂ ಸರ್ಬಿಯಾದ ಈ ಅಪರೂಪದ ಪ್ರತಿಭೆ ಹಿಂದುರಿಗಿ ನೋಡಲಿಲ್ಲ.

3ನೇ ಪುಟಕ್ಕೆ...

# ಅಲ್ಲಮ ಜಗತ್ತನ್ನು ಅಂಗೈ ಮೇಲಿರಿಸಿದ ಆಕರ ಗ್ರಂಥ

ವಿಮರ್ಶೆ

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಕನ್ನಡ ನಾಡಿನ ಚರಿತ್ರೆಯಲ್ಲಿ ವಚನ ಚಳವಳಿ ಒಂದು ಮಹತ್ವದ ಕಾಲಘಟ್ಟವಾದರೆ, ಅಲ್ಲಮ ಪ್ರಭುಗಳು ಆ ಚಳವಳಿಯ ನಡುವಿನ ಬಹುದೊಡ್ಡ ಬೆರಗು. ಅನುಭವ ಮಂಟಪದ ಪರಿಕಲ್ಪನೆಯ ಅಡಿಯಲ್ಲಿ ಅಲ್ಲಿನ ಎಲ್ಲ ಬಗೆಯ ಮಹಾ ಮನಸ್ಸುಗಳ ಜೊತೆ ಅನುಸಂಧಾನ ನಡೆಸಿದ ಮಹಾಚೇತನ ಅದು. ಜಗತ್ತಿನ ತತ್ವಜ್ಞಾನಿಗಳ, ದಾರ್ಶನಿಕರ, ಅನುಭಾವಿಗಳ ವಲಯದಲ್ಲಿ ಅಲ್ಲಮನಿಗೆ ಅಲ್ಲಮ ಮಾತ್ರ ಸಾಟಿ ಎಂಬ ವಿಧೇಯಕದ ಮಹಾ ಪ್ರತಿಭೆ ಅದು. ಅದನ್ನು ಶೈವ ಪ್ರತಿಭೆ ಎಂದು ಕರೆದವರಿದ್ದಾರೆ. ಜಾಗತಿಕ ವ್ಯಾಪ್ತಿಯಲ್ಲಿ ಹುಟ್ಟಿರುವ ಎಲ್ಲ ಜ್ಞಾನ ಮೀಮಾಂಸೆಗಳ ಜೊತೆಯಲ್ಲಿ ಸಂವಾದಿಸಬಲ್ಲ ಶಕ್ತಿಯಿರುವ ಬಹುಜ್ಞತೆಯ ಅನುಭಾವಿ ಎಂದು ಹಲವರು ಗುರುತಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ವಲಯದಲ್ಲಿ ಇಂಥ ಮಹಾ ಪ್ರತಿಭೆಯನ್ನು ಕುರಿತು ತಮ್ಮ ತಮ್ಮ ಜ್ಞಾನ ಮಿತಿಯೊಳಗೆ ಅರ್ಥೈಸಹೊರಟ ವಿದ್ವಾಂಸರ ದಂಡೇ ಇದೆ. ಸೃಜನಶೀಲ ಸಾಹಿತ್ಯದ ತೆಕ್ಕೆಗೆ ತಂದುಕೊಂಡಂತೆ ಕವಿಗಳು, ಸಾಹಿತಿಗಳು ಅಲ್ಲಮ ಪ್ರಭೆಯನ್ನು ವರ್ತಮಾನದ ವಿದ್ಯಮಾನಗಳ ಪ್ರೇರಣೆಯ ಆವರಣದಲ್ಲಿ ಮರು ನಿರೂಪಿಸಲು ಪ್ರಯತ್ನಿಸಿದ್ದಾರೆ. ಕಥೆ, ಕಾದಂಬರಿ, ಕಾವ್ಯ, ಜೀವನ ಚರಿತ್ರೆಗಳ ಪ್ರಕಾರಗಳಲ್ಲಿ ಈ ಮರು ನಿರೂಪಣೆಯ ಕಾರ್ಯ ನಡೆದಿದೆ.

ಇದಕ್ಕೂ ಪೂರ್ವದಲ್ಲಿ ಹರಿಹರ, ಚಾಮರಸ, ಎಳಂದೂರು ಹರೀಶ್ವರ ಇವರು ಅಲ್ಲಮನ ಬಗ್ಗೆ ಕಾವ್ಯಕೃತಿಗಳನ್ನು ರಚಿಸಿದ್ದಾರೆ. ತೆಲುಗು ಕವಿ ಪಾಲ್ಕುರಿಕೆ ಸೋಮನಾಥನ 'ಬಸವಪುರಾಣ'ದಲ್ಲಿ, ಭೀಮಕವಿಯ ಬಸವಪುರಾಣದಲ್ಲಿ ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದಲ್ಲಿ, ಲಕ್ಕಣನ ಶಿವತತ್ವ ಚಿಂತಾಮಣಿಯಲ್ಲಿ, ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯದಲ್ಲಿ, ಚನ್ನಪ್ಪ ಕವಿಯ ಶರಣ ಲೀಲಾಮೃತದಲ್ಲಿ, ಅಲ್ಲಮ ಪ್ರಭುವಿನ ಜೀವನ ಚಿತ್ರಣವನ್ನು ತಾತ್ವಿಕ ಚಿಂತನೆಗಳನ್ನು ಪ್ರಾಸಂಗಿಕವಾಗಿ ಮರುನಿರೂಪಿಸಿರುವುದೂ ಆಗಿದೆ. ರಗಳೆ, ಖಂಡಕಾವ್ಯ, ಮಹಾಕಾವ್ಯಗಳ ಕನ್ನಡ ಪ್ರಜ್ಞೆಯ ಸಂವೇದನಾಶೀಲ ಕವಿಗಳು ಕಂಡ ಅಲ್ಲಮಪ್ರಭು ವ್ಯೋಮ ಮೂರುತಿ, ತಮದ ಮಾಯೆಗೆ ಸಿಗದ ದ್ಯುಮಣಿ ಅಲ್ಲಮ, ಸುಜ್ಞಾನ ನಿರಹಂಕಾರಕ್ಕೆ ಜನಿಸಿದ ಶಿವಸ್ವರೂಪ ಲಿಂಗತತ್ವವೇ ಅಲ್ಲಮ. ಆದರೆ ಈ ಎಲ್ಲ ಕಾವ್ಯಕೃತಿಗಳು ಅಲ್ಲಮನನ್ನು ಒಬ್ಬ ಚಾರಿತ್ರಿಕ ವ್ಯಕ್ತಿಯಾಗಿ ಚಿತ್ರಿಸುವುದಕ್ಕಿಂತ ಒಬ್ಬ ಪೌರಾಣಿಕ ಪ್ರಭೆಯ ಶಕ್ತಿಯಾಗಿ ಪ್ರತಿಮಾ ವಿಧಾನದಲ್ಲಿ ಚಿತ್ರಿಸಿರುವುದೇ ಹೆಚ್ಚಾಗಿದೆ. ಇಂಥ ವಸ್ತು ವಿನ್ಯಾಸದ ನಡುವೆ ಅಲ್ಲಲ್ಲಿ ಚಾರಿತ್ರಿಕ ಹೊಳಹುಗಳು ಸುಳಿದರೂ ಅದು ರೂಪಕ ಪ್ರತಿಮಾನಿಷ್ಠ ಸಂವೇದನೆಗೆ ದಕ್ಕಿದ ಮಹಾಶೈವ ಪ್ರತಿಭೆ. ಆದರೆ ಅಲ್ಲೆಲ್ಲಾ ಅಲ್ಲಮನ ಜ್ಞಾನ ಮೀಮಾಂಸೆಯನ್ನು ಕೆಲವರಾದರೂ ಹೆಚ್ಚು ಜಿಜ್ಞಾಸೆಗೆ ಒಳಪಡಿಸಿರುವ ರೀತಿಯಲ್ಲಿ ಹಲವು ಪ್ರಸಂಗಗಳ ಮರುನಿರ್ಮಾಣ ಮಾಡಿದ್ದಾರೆ. ಹನ್ನೆರಡನೇ ಶತಮಾನದ ಚಾರಿತ್ರಿಕ ವ್ಯಕ್ತಿಗಳಾದ ಸಿದ್ಧರಾಮ, ಅಕ್ಕ, ಮುಕ್ತಾಯಕ್ಕ ಮೊದಲಾದವರ ಜೊತೆಯೊಳಗಿನ ಅಲ್ಲಮನ ಸಂವಾದ ಅಲ್ಲಮ ವಚನಗಳ ಆಕರ ಮೂಲಗಳಿಂದ ಆಕೃತಿ ಪಡೆದಿರುವುದು ವಿದಿತಸತ್ಯ. ಶೂನ್ಯ ಸಂಪಾದನಾಕಾರರುಗಳಾದ ಶಿವಗಣ ಪ್ರಸಾದಿ ಮಹದೇವಯ್ಯ, ಹಲಗೆ ದೇವರು, ಗುಮ್ಮಳಾಪುರದ ಸಿದ್ಧಲಿಂಗ ಯತಿಗಳು, ಗೂಳೂರು ಸಿದ್ಧ ವೀರಣ್ಣೊಡೆಯರು ತಮ್ಮ ತಮ್ಮ ಶೂನ್ಯ ಸಂಪಾದನೆಗಳಲ್ಲಿ ಪ್ರಭುದೇವರ ವ್ಯಕ್ತಿತ್ವವನ್ನು ದೀಪ್ತವಾಗಿಸಿರುವ ಬಗೆ ಹರಿಹರ ಚಾಮರಸರು ಚಿತ್ರಿಸಿದ ಅಲ್ಲಮ ವ್ಯಕ್ತಿತ್ವವನ್ನು ಆಧರಿಸಿದಂತೆ ಹರಿದಿದ್ದರೂ ಅವರು ವಚನಾಧಾರಗಳ ನೆಲೆಯಲ್ಲಿ ಕಾಣಿಸಿರುವ ಅಲ್ಲಮಪ್ರಭೆ ಅನನ್ಯವಾದುದು.

ಅಲ್ಲಮನ ಈ ಬಗೆಯ ಜೀವನಗಾಥೆಯನ್ನು ಅವನ ವಚನಗಳೊಟ್ಟಿಗೆ ಪರಿಭಾವಿಸಿ ಸಂಶೋಧನೆ ವಿಶ್ಲೇಷಣೆಗಳನ್ನು ನವೋದಯ, ಪ್ರಗತಿಶೀಲ, ನವ್ಯ ಹಾಗೂ ನವ್ಯೋತ್ತರ ಕನ್ನಡ ವಿಮರ್ಶಕರು ನಡೆಸಿದ್ದಾರೆ. ನವೋದಯಕಾಲದ ವಿಮರ್ಶಕರಲ್ಲಿ ದೇಸಾಯಿ ಪಾಂಡುರಂಗರಾಯರು, ದ.ರಾ. ಬೇಂದ್ರೆ, ಎಂ.ಆರ್.ಶ್ರೀ., ಡಾ. ಎಲ್. ಬಸವರಾಜು, ಎಚ್. ತಿಪ್ಪೇರುದ್ರಸ್ವಾಮಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ.ಎಂ. ಕಲಬುರ್ಗಿ, ಎಂ.ಎಸ್. ವೃಷಭೇಂದ್ರಸ್ವಾಮಿ, ಪ್ರಭುಶಂಕರ, ಡಾ. ಜಿ.ಎಸ್. ಶಿವರುದ್ರಪ್ಪ ಮುಂತಾದವರು ಗಮನಾರ್ಹರಾಗಿದ್ದಾರೆ. ಇವರ ಅಧ್ಯಯನ ಸ್ವರೂಪ ಕೇವಲ ಅಲ್ಲಮ ವಚನಗಳನ್ನಾಧರಿಸಿರದೆ, ಇದುವರೆಗೆ ಬಂದಿರುವ ಅಲ್ಲಮ ಕೇಂದ್ರಿತ ಕಾವ್ಯ ಕೃತಿಗಳನ್ನು ತೌಲನಿಕ ಅಧ್ಯಯನಕ್ಕೆ ಒಳಗುಮಾಡುತ್ತಾ ಅಲ್ಲಮನೊಟ್ಟಿಗೆ ವಚನ ಚಳವಳಿ, ವಚನಕಾರರು ಹಾಗೂ ಅವರ ನಡುವೆ ಅಲ್ಲಮಪ್ರಭುವಿನ ಔನ್ನತ್ಯವನ್ನು ಕಾಣಿಸುವುದೇ ಆಗಿದೆ. ಲೌಕಿಕದಿಂದ ಅಲೌಕಿಕದ ಕಡೆ ನಡೆದ ಅನುಭಾವಿ ಅಲ್ಲಮ ದರ್ಶನ ಈ ಮಾರ್ಗದ ಬಹುತೇಕ ವಿಮರ್ಶಕರ ದೃಷ್ಟಿಯಾಗಿದೆ. ಆದರೆ ಅಲ್ಲಮನ ನಿಜವಾದ ಅಲ್ಲಮತ್ವದ ಶೋಧನೆಯೆಂದರೆ ಹೊರಗಿನ ಆಕರಗಳ ಅಧ್ಯಯನ ಪ್ರಾಧಾನ್ಯಕ್ಕಿಂತ ಅಲ್ಲಮ ವಚನಗಳ ನೇರವಾದ ಅಧ್ಯಯನ ಮಾಡುವುದರಿಂದ ಮಾತ್ರ ಸಾಧ್ಯ. ಈ ಅಧ್ಯಯನ ವಚನ ಪಠ್ಯ ಕೇಂದ್ರಿತವಾಗದೆ ಅಲ್ಲಿಯ ಚಿಂತನೆಗಳ ಪ್ರಭಾವಳಿಯಲ್ಲಿ ಜಾಗತಿಕ ವ್ಯಾಪ್ತಿಯಲ್ಲಿ ಬರುವ ಎಲ್ಲ ಧರ್ಮಮತ ಪಂಥಗಳ ತಾತ್ವಿಕ ಜಿಜ್ಞಾಸೆಗೆ ಮುಖಾಮುಖಿ ಮಾಡುತ್ತಾ ನಡೆಸುವುದರಲ್ಲಿದೆ. ಅಲ್ಲಮನ ಕಾಲದಲ್ಲಿಯೇ ಇದ್ದ ಮತ್ತು ಆಗಿಹೋಗಿದ್ದ ವ್ಯಕ್ತಿ ಚೇತನಗಳ ಮತ ಪಂಥಗಳ ಪ್ರಭಾವ ಅಲ್ಲಮನ ತಾತ್ವಿಕತೆಗೆ ಹೇಗೆ ಪೂರಕವಾಗಿದೆ, ಹೇಗೆ ಅವನ ವಿರೋಧಕ್ಕೆ ಒಳಗಾಗಿದೆ ಎಂಬುದನ್ನೂ ವಿಶ್ಲೇಷಣೆಗೆ ಒಡ್ಡುವ ಅಗತ್ಯವಿದೆ.

ನವೋದಯ ನಂತರದ ಕನ್ನಡ ವಿಮರ್ಶಾಲೋಕ ಈ ದಾರಿಯಲ್ಲಿ ಕ್ರಮಿಸಿದಂತೆ ಅಲ್ಲಮ ಪ್ರಭುವಿನ ಅರಿವಿನ ವಿಸ್ತಾರವನ್ನು ಬಯಲುಗೊಳಿಸಲು ಪ್ರಯತ್ನಶೀಲವಾಗಿದೆ. ಈ ಬಗೆಯ ವಿನೂತನ ಚಿಂತನೆಯನ್ನು ನಡೆಸಿದವರಲ್ಲಿ ಡಿ.ಆರ್. ನಾಗರಾಜ ಅಗ್ರಮಾನ್ಯರು. ಅವರು ಅಲ್ಲಮಪ್ರಭುವನ್ನು ಶೈವಪ್ರತಿಭೆ ಎಂದು ಗುರುತಿಸುವಲ್ಲಿ ತೋರಿರುವ ಜಾಗತಿಕ ವ್ಯಾಪ್ತಿಯ ದಾರ್ಶನಿಕರ ತತ್ವಜ್ಞಾನಿಗಳ, ಮತಪಂಥಗಳ ಜೊತೆಗಿನ ಅನುಸಂಧಾನ ವಿಸ್ತಾರವಾದುದು. ಇಂಥ ಬಹುಜ್ಞತೆಯ ವಿಮರ್ಶೆ ಮಾತ್ರ ಅಲ್ಲಮನ ಆಳ ವಿಸ್ತಾರಗಳನ್ನು ಅನಾವರಣ ಮಾಡಲು ಸಾಧ್ಯ. ಆದರೆ ನಮ್ಮ ಕನ್ನಡದ ವಿಮರ್ಶಾವಿವೇಕ ಯಾವುದನ್ನೂ ಸುಮ್ಮನೆ ಒಪ್ಪುವುದಿಲ್ಲ; ಸಹಜವಾಗಿ ಇವರ ಚಿಂತನೆಗಳನ್ನೂ ಡಾ. ಚಂದ್ರಶೇಖರ ನಂಗಲಿಯವರು ಪ್ರಶ್ನಿಸಿದಂತೆ ಭಿನ್ನ ನೆಲೆಯಲ್ಲಿ ವಿಶ್ಲೇಷಣೆ ನಡೆಸಿದ್ದಾರೆ. ಜಾಗತಿಕ ವ್ಯಾಪ್ತಿಗಿಂತ ನೆಲಮೂಲ ಚಿಂತನೆಯ ಆಳದಲ್ಲಿ ಅಲ್ಲಮಪ್ರಭೆಯ ಅನನ್ಯತೆಯನ್ನು ಅವರು ಗುರುತಿಸುತ್ತಾರೆ. ಈ ಬಗೆಯ ದೇಸಿ ಚಿಂತನೆ, ಜಾಗತಿಕ ನೆಲೆಯ ವಿಸ್ತಾರದ ಆಲೋಚನೆಗಳಿಗೆ ಅಲ್ಲಮತ್ವವನ್ನು ಮುಖಾಮುಖಿಯಾಗಿಸಿ ವಿಶ್ಲೇಷಣೆ ನಡೆಸಿದ ವಿಮರ್ಶಕರಲ್ಲಿ ಡಾ. ಕೆ.ವಿ. ಎನ್., ನಟರಾಜ್ ಬೂದಾಳು, ಬಸವರಾಜ ಕಲ್ಗುಡಿ, ಜಿ.ಎಸ್. ಅಮೂರ, ಓ.ಎಲ್.ಎನ್., ಸರ್ಫರಾಜ್, ಜಿ.ಎಂ. ಹೆಗ್ಗಡೆ, ವೀಣಾ ಬನ್ನಂಜೆ, ಬಿ. ಜನಾರ್ದನ ಭಟ್, ನರಹಳ್ಳಿ ಮುಂತಾಗಿ ಪಟ್ಟಿ ದೊಡ್ಡದಿದೆ. ಇವರ ಚರ್ಚೆ ವರ್ತಮಾನದ ವಿಸಂಗತಿಗಳನ್ನು ಅಧ್ಯಾಹಾರ ಭಾವದಲ್ಲಿ ಚಿಂತನೆಯ ಕಕ್ಷೆಗೆ ತೆಗೆದುಕೊಳ್ಳುತ್ತಾ ಅನುಭಾವಿಕತೆಯ ಅರ್ಥವನ್ನು ನೆಲಮುಖೀ ಜೀವನ ಸಾಂಗತ್ಯದಲ್ಲಿ ಕಾಣಿಸುವುದೇ ಆಗಿದೆ.

ಅಲ್ಲಮತ್ವದ ನಿಜವಾದ ದರ್ಶನವೆಂದರೆ ಈ ಎಲ್ಲ ಬಗೆಯ ಅಧ್ಯಯನಗಳನ್ನು ಒಟ್ಟಂದದಲ್ಲಿ ಇಟ್ಟುಕೊಂಡಂತೆ ಕನ್ನಡ ಪ್ರಜ್ಞೆ ಅಲ್ಲಮ ಪ್ರಭೆಯ ಜೊತೆ ಸಮಗ್ರತೆಯಲ್ಲಿ ಹೇಗೆ ಸಂವಾದಿಸಿದೆ ಎಂಬುದನ್ನು ನೋಡುವುದರಲ್ಲಿದೆ. ಇಂಥ ಅಧ್ಯಯನ ವಿಶೇಷತೆಗೆ ಅಧಿಕೃತ ಮಾದರಿ ಗ್ರಂಥವಾಗಿ 'ಅಲ್ಲಮ ಅಧ್ಯಯನ ಲೋಕ' ಸಂಪಾದಿತ ಕೃತಿ ಮೂಡಿಬಂದಿದೆ. ಈ ಕೃತಿಯ ಗೌರವ ಸಂಪಾದಕರು ಡಾ. ನಾ. ಮೊಗಸಾಲೆಯವರು. ಈ ಕೃತಿಯ ಐವತ್ತು ಲೇಖನಗಳನ್ನು ಅವುಗಳ ಗುಣಾತ್ಮಕತೆಯ ಆಧಾರದಲ್ಲಿ ಆಯ್ಕೆ ಮಾಡಿ ಸಂಪಾದಿಸಿರುವವರು ಡಾ. ಜಿ.ಎಂ. ಹೆಗ್ಗಡೆಯವರು. ಇದೊಂದು ಪರಿಶ್ರಮ ಪೂರ್ಣ ಸಂಪಾದನೆ. ಇಂಥ ಕೃತಿಯ ಮಹತ್ವವನ್ನು ಮನಗಂಡಂತೆ ಈ ವಿದ್ವಾಂಸ ಜೋಡಿ ಈ ಅಲ್ಲಮ ಅಧ್ಯಯನ ಲೋಕವನ್ನು ಸಂಪಾದಿಸಿದ್ದಾರೆ. ಇದಕ್ಕೆ ಅಧ್ಯಯನ ಪೂರ್ಣವಾದ ಪ್ರಸ್ತಾವನೆಯನ್ನು ಡಾ. ಜಿ.ಎಂ. ಹೆಗ್ಗಡೆಯವರು ಬರೆದಿದ್ದಾರೆ. ಅಲ್ಲಮ ಪ್ರತಿಭೆಯ ಅಧ್ಯಯನಕ್ಕೆ ಇದೊಂದು ಅತ್ಯಮೂಲ್ಯ ಆಕರ ಗ್ರಂಥ. ❖

**ಅಲ್ಲಮ ಅಧ್ಯಯನ ಲೋಕ**
ಗೌರವ ಸಂಪಾದಕರು: ನಾ. ಮೊಗಸಾಲೆ
ಸಂಪಾದಕರು: ಜಿ.ಎಂ. ಹೆಗಡೆ
ಪ್ರ: ಅಲ್ಲಮ ಅಧ್ಯಯನಪೀಠ, ಕಾಂತಾವರ
ಸಂ: 9448110034

ಪು: 946 ₹900

# ಬೆಳಾರ ಭಾಷೆಯ ಕೊನೆಯ ಕೊಂಡಿ ಕಳಚಿತು

ದೇಸಿ

ಎ.ಮುರಿಗೆಪ್ಪ

**ಯುನೆಸ್ಕೊದ** ಇತ್ತೀಚಿನ ವರದಿಯ ಪ್ರಕಾರ ಜಗತ್ತಿನ 6000ರ ಆಸುಪಾಸಿನ ಭಾಷೆಗಳಲ್ಲಿ ಸುಮಾರು 2500 ಭಾಷೆಗಳು ಅಳಿವಿನ ಅಂಚಿನಲ್ಲಿವೆ. ಕಳೆದ ಮೂರು ವರ್ಷಗಳಲ್ಲಿ 200ಕ್ಕೂ ಮಿಕ್ಕ ಭಾಷೆಗಳು ಅಳಿವಿಗೆ ಒಳಗಾಗಿವೆ. ಭಾರತವು ಹೆಚ್ಚು ಅಳಿವಿನಂಚಿನಲ್ಲಿರುವ ಭಾಷೆಗಳನ್ನು ಹೊಂದಿದ್ದು, 196 ಭಾಷೆಗಳು ಅಪಾಯದ ಸ್ಥಿತಿಯಲ್ಲಿವೆ. ಭಾರತದ ಬಹು ಭಾಷಿಕ ಸ್ವರೂಪವನ್ನು ಉಳಿಸಿಕೊಳ್ಳಲು ಕ್ರಮ ಕೈಗೊಳ್ಳಲು ಭಾರತ ಸರ್ಕಾರ ಚಿಂತನೆ ನಡೆಸಿತ್ತು. ರಾಷ್ಟ್ರದುದ್ದಕ್ಕೂ ಅಳಿವಿನಂಚಿನಲ್ಲಿರುವ ಭಾಷೆಗಳನ್ನು ಅಧ್ಯಯನಕ್ಕೆ ಒಳಪಡಿಸಿ, ದಾಖಲೆಗಳನ್ನು ತಯಾರಿಸಲು ಸಂಘ–ಸಂಸ್ಥೆಗಳನ್ನು ಗುರುತಿಸಿ ವಿಶೇಷ ಧನಸಹಾಯವನ್ನು ನೀಡಿತು. ಕರ್ನಾಟಕದ ಕಲಬುರ್ಗಿಯಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯದ ಅಳಿವಿನಂಚಿನ ಭಾಷೆಗಳ ವಿಭಾಗವು ಈ ನಿಟ್ಟಿನಲ್ಲಿ ಚರ್ಚಿಸಿ ಪ್ರಸ್ತುತ ಕರ್ನಾಟಕದ ಹತ್ತು ಭಾಷೆಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಿತು. ಅವುಗಳಲ್ಲಿ ಬೆಳಾರ ಭಾಷೆಯೂ ಒಂದು.

ಬೆಳಾರ ಭಾಷೆ ಇಂದು ಬಳಕೆಯಿಂದ ಮರೆಯಾಗಿದೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೊಸಂಗಡಿಯ ಸುತ್ತಮುತ್ತ ಎಡಮೊಗೆ, ಉಳ್ಳೂರು, ಕಾರೂರು, ಆಲೂರು, ಹೊಸಬಾಳು, ರಟ್ಟಾಡಿ ಮತ್ತು ಅಮಾಸೆಬೈಲು ಎಂಬ ಗ್ರಾಮಗಳಲ್ಲಿ ಬೆಳಾರ ಸಮುದಾಯದ ಸದಸ್ಯರಿದ್ದಾರೆ. ಬೆಳಾರ ಸಮುದಾಯದ ಸದಸ್ಯರು ವಲಸೆ ಬಂದವರು. ಈ ಸಮುದಾಯ ಬಹಳ ವರ್ಷಗಳಿಂದ ಈ ಪ್ರದೇಶದಲ್ಲಿ ವಾಸವಿದೆ. ಈ ಸಮುದಾಯದವರು ತಾವು ವಾಸಿಸುವ ಗ್ರಾಮಗಳಲ್ಲಿ ಚಿಕ್ಕ ಮನೆಗಳನ್ನು ಕಟ್ಟಿಕೊಂಡು ಹೆಚ್ಚಾಗಿ ಕಲ್ಲು ಕಡಿಯುವ ಶ್ರಮದಾಯಕ ಕೆಲಸ ಹಾಗೂ ಕೃಷಿಕ ಬದುಕನ್ನು ನಡೆಸಿಕೊಂಡು ಬಂದಿದ್ದಾರೆ. ಸುಮಾರು 500 ಜನರುಳ್ಳ ಸೀಮಿತ ಸಂಖ್ಯೆಯ ಈ ಸಮುದಾಯದಲ್ಲಿ ಕೆಲವರಷ್ಟೆ ಉನ್ನತ ವ್ಯಾಸಂಗ ಪೂರೈಸಿ ಎಂಜಿನಿಯರ್ ಆಗಿದ್ದಾರೆ, ನ್ಯಾಯವಾದಿಗಳಾಗಿದ್ದಾರೆ ಹಾಗೂ ಇನ್ನಿತರ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಳಾರ ಸಮುದಾಯದ ಕೆಲವರು ಹೆಸರಾಂತ ಯಕ್ಷಗಾನ ಕಲಾವಿದರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಒಂದಿಬ್ಬರು ಗ್ರಾಮ ಪಂಚಾಯಿತಿ ಸದಸ್ಯರೂ ಆಗಿದ್ದಾರೆ.

ಸಿದ್ದ ಬೆಳಾರ

ಬೆಳಾರ ಸಮುದಾಯದ ಹಿಂದಿನ ತಲೆಮಾರಿನವರು ಬೆಳಾರ ಭಾಷೆಯನ್ನು ಮಾತನಾಡುತ್ತಿದ್ದರು. ಆದರೆ ಇಂದು ಬೆಳಾರ ಸಮುದಾಯದ ಸದಸ್ಯರು ತಮ್ಮ ಸಂಪರ್ಕಕ್ಕಾಗಿ ಕುಂದಾಪುರದ ಕನ್ನಡಕ್ಕೆ ಬದಲಾಗಿದ್ದಾರೆ. ಬೆಳಾರ ಭಾಷೆಯು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಗಮನಕ್ಕೆ ಬಂದ ನಂತರ ಅಳಿವಿನಂಚಿನ ಭಾಷೆಗಳ ಸಂರಕ್ಷಣಾ ಯೋಜನೆಯ ನಿಯೋಜಕರಾಗಿದ್ದವರಲ್ಲಿ ನಾನು, ಪ್ರೊ ಚೆ. ರಾಮಸ್ವಾಮಿ, ಹರಿಹರ, ಸ್ಥಳೀಯವಾಗಿ ಸುಬ್ರಮಣ್ಯ ಶೆಟ್ಟಿ ಅವರ ಸಹಕಾರದೊಂದಿಗೆ ಬಳಾರ ಭಾಷೆಯ ಅಧ್ಯಯನಕ್ಕೆ ಮುಂದಾಗಿದ್ದೆವು.

ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಈ ಹಿಂದೆ ಬೆಳಾರ ಭಾಷೆಯನ್ನು ಮಾತನಾಡುತ್ತಿದ್ದ ಸುಮಾರು 80 ವರ್ಷ ವಯಸ್ಸಿನ ಸಿದ್ದ ಬೆಳಾರ ಎಂಬುವವರ ಪರಿಚಯವಾಗಿತ್ತು. ಮಾತನಾಡಲು ಬೇರೆ ಯಾರೂ ಇಲ್ಲದ ಕಾರಣ ಅವರಿಗೂ ಬೆಳಾರೆ ಭಾಷೆ ಮರೆತುಹೋಗಿತ್ತು. ಮುಂದೆ ಅವರನ್ನು ಭೇಟಿ ಮಾಡಿ ಭಾಷಾ ಸಾಮಗ್ರಿಯನ್ನು ಸಂಗ್ರಹಿಸತೊಡಗಿದಂತೆ ಅವರು ನೆನಪಿಸಿಕೊಂಡು ಬೆಳಾರ ಭಾಷೆಯ ಸಾಮಗ್ರಿಯನ್ನು ಒದಗಿಸಿದರು. ಬೆಳಾರ ಭಾಷೆಯ ಅಧ್ಯಯನ ನಡೆಸಿದ ಮೇಲೆ, ಆ ಭಾಷೆಯ ವ್ಯಾಕರಣವನ್ನು ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯ ಪ್ರಕಟಿಸಿತು. ಇತ್ತೀಚೆಗೆ ಸಿದ್ದ ಬೆಳಾರ ಅವರು ನಿಧನರಾದರು. ಇದರಿಂದಾಗಿ ಬೆಳಾರ ಭಾಷೆಯ ಕೊನೆಯ ಕೊಂಡಿ ಕಳಚಿದಂತಾಯಿತು. ಸಿದ್ದ ಅವರ ನಿಧನದಿಂದಾಗಿ ತೀವ್ರ ಅಳಿವಿನ ಅವಸ್ಥೆಯಲ್ಲಿದ್ದ ಭಾಷಾರೂಪವೊಂದು ಅವಸಾನಗೊಂಡಂತಾಯಿತು.

ಎಚ್.ಎ. ಸ್ಟ್ರೋಕ್ ಅವರು ಮದರಾಸು ಪ್ರಾಂತ್ಯ ದಕ್ಷಿಣ ಕನ್ನಡದ 1894ರ ಮೊದಲನೆಯ ಸಂಪುಟ(ಮ್ಯಾನುಯೆಲ್)ದಲ್ಲಿ ಬೆಳಾರ ಭಾಷೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಂತರ 1985ರಲ್ಲಿ ಸ್ಟುವರ್ಟ್ ಅವರು ಸಾಮಗ್ರಿಯ ಪುನರ್ ಸಂಗ್ರಹಣೆ ಮಾಡಿದ್ದಾರೆ. ದಕ್ಷಿಣ ಕನ್ನಡ ಸಂಪುಟದ ಪ್ರಕಾರ ಬೆಳಾರ ಸಮುದಾಯದ ಪುರುಷರ ಸಂಖ್ಯೆ 419 ಮತ್ತು ಸ್ತ್ರೀಯರ ಸಂಖ್ಯೆ 255. ಒಟ್ಟು ಜನಸಂಖ್ಯೆ 674. ಅವರು 41 ಸಂಕೇತೀಕರಿಸಿದ ಪದಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಸ್ಟುವರ್ಟ್ ಅವರ ಪ್ರಕಾರ ಅವರು ಬೆತ್ತದ ಕೆಲಸ ಮಾಡುತ್ತಿದ್ದರು. ಪ್ರೊ. ಡಿ.ಎನ್.ಎಸ್ ಭಟ್ ಅವರು ಬೆಳಾರ ಭಾಷೆಯ ನಾಮಪದ ಮತ್ತು ಕ್ರಿಯಾಪದಗಳ ವ್ಯಾಕರಣ ವಿವರವನ್ನು ಕುರಿತು ಲೇಖನವನ್ನು ಬರೆದಿದ್ದಾರೆ. ಪ್ರೊ. ಡಿ.ಎನ್.ಎಸ್. ಭಟ್ ಅವರ ಪ್ರಕಾರ ಬೆತ್ತದ ಬುಟ್ಟಿಗಳನ್ನು ತಯಾರಿಸುತ್ತಿದ್ದರು. ಸೀಮಿತ ಸಂಖ್ಯೆಯಲ್ಲಿರುವ ಬೆಳಾರ ಸಮುದಾಯದ ಯುವಕರಿಗೆ ಉದ್ಯೋಗಗಳಲ್ಲಿ ಅವಕಾಶವನ್ನು ಕಲ್ಪಿಸುವುದರ ಮೂಲಕ ಬೆಳಾರ ಸಮುದಾಯವನ್ನು ಅಭಿವೃದ್ಧಿ ಪಡಿಸಬಹುದಾಗಿದೆ.

ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯದ ಯೋಜನೆಯಡಿಯಲ್ಲಿ ನನ್ನ ಬೆಳಾರ ಭಾಷೆಯ ವ್ಯಾಕರಣ ಪ್ರಕಟಣೆ ಮತ್ತು ಪ್ರೊ.ಡಿ.ಎನ್.ಎಸ್. ಭಟ್ಟ ಅವರು ಲೇಖನದಿಂದಾಗಿ ಅವಸಾನಗೊಂಡ ಭಾಷೆಯೊಂದು ದಾಖಲೀಕರಣಗೊಂಡು ಉಳಿಯುವಂತಾಯಿತು. ❖

# ಭಜನೆ ಪದಗಳ ಖೈನೂರು ಮುಲ್ಲಾ ಅಲ್ಲೀಸಾಬ

ಭಜನೆ ಪದಗಳ ಅಲ್ಲೀಸಾಹೇಬರು ನನ್ನದು 'ಕೃಷ್ಣಪ್ಪನ ಖೈನೂರು, ಸಿಂದಗಿ ತಾಲೂಕು ವಿಜಯಪುರ ಜಿಲ್ಲೆ' ಎಂದು ಕುಣಿದಾಡುವ ಕಂಠದಲ್ಲಿ ಥಟ್ಟಂತ ಉತ್ತರಿಸುತ್ತಿದ್ದರು. ಧರ್ಮದೆಲ್ಲೆ ಮೀರಿ ದೇವರನ್ನು ಭಜಿಸುತ್ತಿದ್ದ ಸಾಹೇಬರೀಗ ಮಾತು ಮುಗಿಸಿದ್ದಾರೆ..



ನುಡಿನಮನ

ಮಲ್ಲಿಕಾರ್ಜುನ ಕಡಕೋಳ

**ಕೆಲವು** ನಿಮಿಷಗಳ ಕಾಲ ನಿವಾಂತ ಕುಂತು ಮೈ ಮರೆತವರಂತೆ ನಾವಿಬ್ಬರೂ ಮಾತಾಡುವುದನ್ನು ಕಂಡು ಜತೆಗೆ ಬಂದಿದ್ದವರು, 'ಕಲ್ಲೂರಲ್ಲಿ ಶ್ರಮ ಆಗಿದೆ, ಅಲ್ಲೀಸಾಹೇಬ ಅಲ್ಲಿಗೆ ಹೋಗಬೇಕಾಗಿದೆ' ಎನ್ನುವುದನ್ನು ನೆನಪಿಸಿದರು. ನಮ್ಮ ಕಡೆಗೆ 'ಶ್ರಮ' ಆಗಿದೆ ಎಂದರೆ 'ಸಾವು' ಆಗಿದೆ ಎಂದರ್ಥ. ಶ್ರಮದ ಪಾರ್ಥಿವ ಶರೀರ ದರ್ಶನ ಮಾಡಿ, ಅಲ್ಲೀಸಾಹೇಬ ಭಜನೆ ಹಾಡುಗಳನ್ನು ಅಲ್ಲಿ ಹಾಡಬೇಕಾದ ಸೂಚನೆ ಅದಾಗಿತ್ತು. ನಾವು ಮಾತಾಡುವುದು ಮತ್ತಷ್ಟು ಇತ್ತು ಎನ್ನುವಾಗಲೇ ಅಲ್ಲೀಸಾಹೇಬರಿಗೆ ಅಲ್ಲೇ ಬೀಳ್ಕೊಟ್ಟೆ.

ಅವರ ಹುಟ್ಟೂರು ಕೃಷ್ಣಪ್ಪನ ಖೈನೂರು, ಅವಧೂತ ಪರಂಪರೆಯ ಬೇರುಗಳಿರುವ ಊರು. ಅಲ್ಲಿನ ಕಂಬಾರ ರಾಚವ್ವ ಅನುಭಾವದ ಕವಯತ್ರಿ. ಊರ ಹೊರಗಿನ ಗುಂಪಾ, ಊರಲ್ಲಿರುವ ಕೆಳಗಿನ ಮತ್ತು ಮೇಲಿನ ಮಠಗಳು ಅಂತಹ ಪರಂಪರೆಯ ತಾಣಗಳು. ಖೈನೂರು ಕೃಷ್ಣಪ್ಪನೆಂದರೆ ಕಡಕೋಳ ಮಡಿವಾಳಪ್ಪನ ಶಿಷ್ಯಗುರುಪುತ್ರ ಮತ್ತು ವಿಮಲ ಕವಿತ್ವದ ತತ್ವಪದಕಾರ. ಅದೇ ಖೈನೂರು ನನ್ನದೆನ್ನುವ ಉಮೇದಿನ ಸಾಧಕಜೀವಿ ಅಲ್ಲೀಸಾಬ. ಪರಾತ್ಪರ ಕವಿ ಕೃಷ್ಣಪ್ಪನೇ ಅಲ್ಲೀಸಾಬನ ಮೈ ಮನ ತುಂಬಿಬಂದ ಹದುಳಪ್ರೀತಿ. ಅಲ್ಲೀಸಾಹೇಬನ ಪರಾಕಾಷ್ಠೆಯ ಸ್ವರದಲ್ಲಿ ಕೃಷ್ಣಪ್ಪನ ತತ್ವಪದಗಳೇ ಕೊರಳತುಂಬಿ ಕೇಳುತ್ತವೆ.

ಅಲ್ಲೀಸಾಹೇಬನ ಅಪ್ಪ ಅಮೀನಸಾಹೇಬರು ಗುರುದೇವ ರಾನಡೆಯವರ ಒಡನಾಡಿ ಮಹೇಶ್ವರಪ್ಪ ಅವರಿಂದ ಗುರುಬೋಧೆ ಪಡೆದವರು. 'ನಿಜಗುಣಶಾಲಿ' ಮಹೇಶ್ವರಪ್ಪ ಲೋಕನುಡಿಯಲ್ಲಿ ಮೈಸೂರಪ್ಪ ಎಂದೇ ಪ್ರಸಿದ್ಧರು. ಗಡ್ಡಜಡೆಯ ಮೇಲೆತ್ತರದ ನಿಲುವಿನ ಅವರು ಅಷ್ಟೇ ಎತ್ತರದ ಅನುಭಾವ ಸಂಪನ್ನರು. ಅಂತಹ ಸಂಪನ್ನರ ಶಿಶುಮಗನಾದ ಆತ ಹಿಂದೂ ದೈವಗಳ ಗದ್ದುಗೆ, ಪಾದಗಟ್ಟೆ ಕಲ್ಲುಗಳನ್ನು ಸಿದ್ಧಮಾಡುವಲ್ಲಿ ಸಿದ್ಧಹಸ್ತ. ಹಾಗಂತ ಇತರೆ ಧರ್ಮದ ಗೋರಿಗಳಿಗೆ ಸಿದ್ಧಹಸ್ತನೆಂದಲ್ಲ. ಕಡಕೋಳ ಸೀಮೆಯ ಅನೇಕ ಗದ್ದುಗೆ ಕಟ್ಟೆಗಳ ಆಳೆತ್ತರದ ಕಲ್ಲುಗಳೆಲ್ಲ 'ಖೈನೂರು ಮುಲ್ಲಾ' ಅಮೀನಸಾಹೇಬನ ಶಿಲಾಕಾಯಕದ ಶಿಲೆಗಳು.

ಅರ್ಧ ಶತಮಾನದ ಹಿಂದೆ ಕಡಕೋಳದಲ್ಲಿ ತತ್ವಪದಗಳನ್ನು ಪರಂಪರಾಗತ ಸ್ವರಶಿಸ್ತು ಪಾಲಿಸಿ ಹಾಡುವ ಪದಕಾರರೇ ತುಂಬಿದ್ದರು. ಗವಿ ಭೀಮಾಶಂಕರ ಅವಧೂತರು, ಗೌಡಪ್ಪ ಸಾಧು, ಅಬ್ದುಲ್ಲಾ, ಸಾಧು ಶಿವಣ್ಣ, ಪೂಜೇರಿ ನಿಂಗಪ್ಪ, ಹುಡೇದ ಎಲ್ಲಪ್ಪ ಇನ್ನೂ ಅನೇಕರು ಏಕತಾರಿ ಪದ ಮತ್ತು ಪದಾರ್ಥಗಳನ್ನು ಹಾಳತವಾಗಿ ಬಾಳುವಲ್ಲಿ ಬಲಭೀಮರು. ಇಂಥವರ ಸಾಹಚರ್ಯದಿಂದ ಅಮೀನಸಾಹೇಬರಿಗೆ ತತ್ವಪದಗಳ ಹುಲುಸಾದ ಹುಗ್ಗಿ ಸಂಭ್ರಮ. ತನಗೆ ದಕ್ಕಿದ ತತ್ವಪದಗಳ ಈ ಮಹಾಪ್ರಸಾದವನ್ನು ಮಕ್ಕಳಾದ ಅಲ್ಲೀಸಾಬ ಮತ್ತು ಆದೀಮಸಾಬನಿಗೂ ಹಂಚಿ ಹಾಡುದೀಕ್ಷೆ ನೀಡಿದ್ದ.

ನಿತ್ಯ ಜೀವನದ ಒಕ್ಕಲುತನದ ಜತೆಗೆ ಭಜನೆ ಪದಗಳನ್ನು ಹೆಂಡತಿ ಭಾನುಮಾ ಜೊತೆಗೂಡಿ ಹಾಡುವ ಕಾಯಕ. ಅದು ಬಳುವಳಿಯಾಗಿ ಮಕ್ಕಳಿಗೂ ದಕ್ಕಿದೆ. ಅಲ್ಲೀಸಾಹೇಬ ಅದೇ ಹಾದಿಯ ಅಂತಃಕರಣದ ಪಯಣಿಗ. ಮಡಿವಾಳಪ್ಪ ಮತ್ತು ಅವನ ಶಿಷ್ಯರ ತತ್ವಪದಗಳ ಹಾಡುಗಾರ. ಅಪ್ಪ–ಮಕ್ಕಳು ರಾತ್ರಿ ಹಗಲೆಲ್ಲಾ ಏಕತ್ರ ಮಾಡಿ ಹಾಡಿದರೂ ಮುಗಿಯದಷ್ಟು ಮಡಿವಾಳ ಪ್ರಭುವಿನ ಪದಗಳ ರಾಶಿ. ಇದು ಖೈನೂರು ಮುಲ್ಲಾ ಕುಟುಂಬ ಸಾಗಿಬಂದ ಪರಂಪರೆ.

'ಎತ್ತಹೋದೆ ಎನ್ನ ಹಡೆದವ್ವ/ಮರ್ತ್ಯವು ಮುಳುಗಿತು ಎನಗವ್ವ/ಮುಂದೆ ದುಸ್ತರ ದಿನಗಳೆಯಲಿ ಹ್ಯಂಗವ್ವ'–ತನ್ನ ಹೆತ್ತವ್ವ ಸತ್ತಾಗ ಖೈನೂರು ಕೃಷ್ಣಪ್ಪ ರಚಿಸಿದ ಈ ತತ್ವಪದವನ್ನು ಭಾವತುಂಬಿ ಹಾಡುವ ಅಲ್ಲೀಸಾಹೇಬನ ಧ್ವನಿ ಮತ್ತು ದೇಹಭಾಷೆ ಕಾಡುಕಟುಕರ ಹೃನ್ಮನಗಳಲ್ಲಿ ತೇವಭಾವ ಭರಿಸಬಲ್ಲದು.

'ಎಲ್ಲಿಯ ಬ್ರಾಹ್ಮಣರ ಕೃಷ್ಣಪ್ಪ, ಎಲ್ಲಿಯ ಮುಸುಲರ ಅಲ್ಲೀಸಾಬ ಅಮೀನಸಾಬರು?' ಹಾಗಂತ ಕೆಲವು ಮಡಿವಂತ ಮನಸುಗಳು ಮಾತಾಡುತ್ತವೆ. ಹೀಗೆ ಹಂಗಿಸಿ ಮಾತಾಡುವ ಮಡಿವಂತ ಮಂಡ ಮೂಳರಿಗೆ ಮುಲ್ಲಾ ಅಲ್ಲೀಸಾಹೇಬನ ಬಲ್ಲೇಕ ಮಡಿವಾಳಪ್ಪನ ನುಡಿದಿವ್ಯದ ಪದ ಅಗ್ನಿಕುಂಡದ ಹಾಡಾಗಿ ಹೀಗೆ ಕುಟುಕುತ್ತದೆ:

'ಮುಡಿಚೆಟ್ಟಿನೊಳು ಬಂದು/ಮುಟ್ಟಿತಟ್ಟೇನಂತೀರಿ/ ಮುಟ್ಟಾದ ಮೂರು ದಿನಕ/ಹುಟ್ಟಿ ಬಂದೀರಿ ನೀವು/ ಮುಡುಚೆಟ್ಯಾವಲ್ಯಾದ ಹೇಳಣ್ಣ'.

ರುದ್ರಮುನಿ ಶಿವಾಚಾರ್ಯರಿಗೂ ಅಲ್ಲೀಸಾಹೇಬನೆಂದರೆ ಎಲ್ಲಿಲ್ಲದ ಪ್ರೀತಿ. ಈ ಬಾರಿಯ ಶ್ರಾವಣ ಮಾಸದ ಚಿಣಮಗೇರಿ ಗುರುಸ್ಥಳ ಗುಡ್ಡದ ಪಾದಯಾತ್ರೆಯಲ್ಲಿ ಅಲ್ಲೀಸಾಹೇಬಗೆ ಭಜನಾ ತಂಡದ ಮುಂಚೂಣಿ ನಾಯಕತ್ವ ನೀಡಿ ಗೌರವಿಸಿದರು.

ಅನಕ್ಷರಸ್ಥನಾದ ಆತನಿಗೆ ಬುದ್ಧಿ ಬಂದಾಗಿನಿಂದಲೂ ಪ್ರತಿನಿತ್ಯವೂ ನಡಕೊಂಡೇ ಕಡಕೋಳಕ್ಕೆ ಹೋಗಿ ಮಡಿವಾಳಪ್ಪನ ಕರ್ತೃಗದ್ದುಗೆಗೆ ಸಾಷ್ಟಾಂಗ ಹಾಕುವುದನ್ನು ನಿಯಮದಂತೆ ಪಾಲಿಸುತ್ತಾ ಬಂದಿದ್ದಾನೆ. ಹಾಗೆ ಮಾಡಿದಾಗಲೇ ಅವನ ಮನಸಿಗೇನೋ ಆನಂದ. ಜೀವಕ್ಕೆ ಸಮಾಧಾನ. ಎತ್ತುಗಳ ನಿತ್ಯ ಬೇಸಾಯದ ಕ್ರಿಯೆಗಳನ್ನು ಆರಂಭಿಸುವಾಗ ಮಹಾಂತ ಮಡಿವಾಳ ಧ್ಯಾನವೇ ಮೊದಲು. ಹತ್ತಾರು ಎಕರೆ ಹೊಲಗಳನ್ನು ಉತ್ತಿ ಬಿತ್ತುವಲ್ಲಿ ಅಲ್ಲೀಸಾಬ ನಿಷ್ಣಾತ. ಸದ್ಗುರುನಾಥ ಇಪ್ಪತ್ತೆಕರೆ ಹೊಲ ದಯಪಾಲಿಸಿದ್ದಾನೆಂಬ ಭಕ್ತಿ ವಿನಯಗಳ ವಿನಮ್ರತೆ.

ಅಲ್ಲೀಸಾಹೇಬ ಮತ್ತು ಅವನ ಪತ್ನಿ ಮಾಬಣ್ಣಿ ಇಬ್ಬರೂ ಈಗ್ಗೆ ಇಪ್ಪತ್ತು ವರುಷಗಳ ಹಿಂದೆ ಗಡಿನಾಡಿನ ನೀಲೂರಪ್ಪನ ಬಳಿ ಗುರುಪದೇಶ ಪಡೆದು ನೀಲೂರು ಮೈಬೂಬ ಸುಬಾನಿ ದರ್ಗಾದ ಶಿಶುಮಕ್ಕಳಾಗಿದ್ದಾರೆ. ಗುರು ನೀಲೂರಪ್ಪ ತೊಡಿಸಿ ಹರಸಿದ ಹಸಿರು ಶಾಲು ಸದಾ ಅವನ ಹೆಗಲ ಮೇಲೆ. ಅದು ಅಲ್ಲಾ ಮತ್ತು ಅಲ್ಲಮನ ಸಂಕೇತ ಎಂಬ ನಂಬುಗೆ ಅಲ್ಲೀಸಾಹೇಬನದು. ತಲೆ ಮೇಲೆ ಬಿಳಿ ಟೊಪ್ಪಿಗೆ. ಬಿಳಿ ಧೋತರ ಅಂಗಿ. ಒಮ್ಮೊಮ್ಮೆ ಲುಂಗಿ. ಹಣೆಗೆ ಭಸ್ಮ ವಿಭೂತಿ. ಅದೆಲ್ಲವೂ ಗುರು ನೀಲೂರಪ್ಪ ತೋರಿದ ತಿಳಿಬೆಳಕಿನ ದಾರಿ. ಅದು ಮಹಾಂತ ಮಡಿವಾಳಪ್ಪನ ಮಹಾಮಾರ್ಗವಂತೆ. ❖

**ಕವನ**
ಪಾಪುಗುರು ದಾವಣಗೆರೆ ಅವರ **ನಾನೇ...**
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

**ಕಥೆ**
ಪಂಜಾಬಿ ಮೂಲ: ಜಗತಾರಜೀತ್ ಸಿಂಗ್
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್ ಅವರ **ಮಾನಚಿತ್ರ**
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

**ಸಾದರ ಸ್ವೀಕಾರ**
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ bhanuvara@prajavani.co.in

## ಮೊದಲ ಓದು

### ನಾಡಿನ ಸಾಧಕರ ಪರಿಚಯಿಸುವ ಹೊತ್ತಿಗೆ

**ಡಾ.ಎನ್.ಕೆ.ವೆಂಕಟರಮಣ** ಅವರು ಇಂಗ್ಲಿಷ್‌ನಲ್ಲಿ ರಚಿಸಿದ ಕೃತಿ 'ಮಹಾಮಹಿಮರು'. ಇದನ್ನು ಡಾ.ಕೆ. ಆರ್.ಕಮಲೇಶ್ ಸಂಪಾದಕತ್ವದಲ್ಲಿ ಕನ್ನಡಕ್ಕೆ ಅನುವಾದಿಸಲಾಗಿದೆ. 'ಜಗತ್ತಿನ ನಾಗರಿಕತೆ ಮತ್ತು ಸಂಸ್ಕೃತಿ ಆ ಜನಾಂಗದಲ್ಲಿ ಜನಿಸಿದ ಮಹಾಪುರುಷರ ಮೇಲೆ ನಿಂತಿರುತ್ತದೆ. ಅವರು ತಮ್ಮ ಕಾಲದ ಜನರನ್ನು ಸನ್ಮಾರ್ಗದಲ್ಲಿ ನಡೆಸಿದ ಮಹಾನುಭಾವರು' ಎಂದು ಲೇಖಕರು ಪ್ರಾರಂಭದಲ್ಲಿಯೇ ಹೇಳುತ್ತಾರೆ. ಅದರಂತೆ ಇಡೀ ಕೃತಿ ನಾಡಿನ ಹಲವಾರು ಯೋಗಿಗಳು, ಸಾಧಕರು, ಆಧ್ಯಾತ್ಮಿಕ ವ್ಯಕ್ತಿಗಳ ಕಿರುಪರಿಚಯ ಮಾಡಿಕೊಡುತ್ತದೆ.

ಪುಸ್ತಕವನ್ನು ಮೂರು ನೋಟಗಳಾಗಿ ವಿಂಗಡಿಸಲಾಗಿದೆ. ಮೊದಲ ನೋಟದಲ್ಲಿ ಯೋಗ ಪಿತಾಮಹ ಪತಂಜಲಿ ಮಹರ್ಷಿಗಳಿಂದ ಹಿಡಿದು ಶ್ರೀ ಶರವಣ ಬಾಬಾರವರೆಗೆ ನಾಡಿನ ಪ್ರಮುಖ ಯೋಗಿಗಳ ಕುರಿತ ಬರಹಗಳಿವೆ. ಸಂತರು, ಬಾಬಾಗಳು, ಯೋಗಿಗಳು, ಮಠಾಧೀಶರ ಕುರಿತು ಕಿರುನೋಟ ಒದಗಿಸುವ ಬರಹಗಳಿವು. ಎರಡನೇ ನೋಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ನಾಡಿನ ಸಾಧಕರ ಬಗೆಗಿನ ಬರಹಗಳಿವೆ. ವಿಜ್ಞಾನ ಮತ್ತು ಸಂಗೀತದ ಕೊಡುಗೆಗಳ ಕುರಿತಾದ ಲೇಖನವಿದೆ.

ಮೂರನೇ ನೋಟದಲ್ಲಿ ವೈದ್ಯಕೀಯ, ವಿಜ್ಞಾನ ಜಗತ್ತಿನ ಕುರಿತು ಲೇಖಕರು ಮಾತನಾಡುತ್ತಾರೆ. ವೈದ್ಯವೃತ್ತಿಯ ಕಷ್ಟ–ಸುಖಗಳನ್ನು ತೆರೆದಿಡುತ್ತಾರೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾನವಸಂಪನ್ಮೂಲವನ್ನು ಅವಲೋಕಿಸುವ ಬರಹವಿಲ್ಲಿ ಸಿಗುತ್ತದೆ. 'ಈ ಕೃತಿ ಒಂದು ಸಾರ್ಥಕ ಶಬ್ದಚಿತ್ರಗಳ ಸಂಕಲನ. ಡಾ.ಎನ್.ಕೆ.ವೆಂಕಟರಮಣ ಅವರು 'ಬ್ರೈನ್‌ವಾಯ್ಸ್' ಪತ್ರಿಕೆಗಾಗಿ ಬರೆದ ಇಂಗ್ಲಿಷ್ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಪ್ರಾಚೀನ ಋಷಿಗಳಿಂದ ತೊಡಗಿ ಅರ್ವಾಚೀನ ಮಹಾಪುರುಷರವರೆಗೆ ಮಿಡಿದ ಭಾವಲಹರಿಗಳು ಓದುಗರನ್ನು ಆವರಿಸಿಕೊಂಡು ಬಾಳ್ವೆಗೆ ಬೆಳಕಾಗುತ್ತವೆ' ಎಂದು ಕಬ್ಬಿನಾಲೆ ವಸಂತ ಭಾರದ್ವಾಜರು ಕೃತಿಯ ಬೆನ್ನುಡಿಯಲ್ಲಿ ಹೇಳಿದ್ದಾರೆ. ❖




**ಮಹಾಮಹಿಮರು**
ಮೂಲ:ಡಾ.ಎನ್.ಕೆ.ವೆಂಕಟರಮಣ
ಕನ್ನಡಕ್ಕೆ: ಡಾ.ಕೆ.ಆರ್.ಕಮಲೇಶ್
ಪ್ರ:ಕಾಮಧೇನು ಪುಸ್ತಕ ಭವನ
ಸಂ:9945002444

ಪು: 336 ₹375

### ವೈಜ್ಞಾನಿಕ ತಿಳಿವಳಿಕೆ ನೀಡುವ ಕೃತಿ

**ಕಿರುತೆರೆಯ** 'ಥಟ್ ಅಂತ ಹೇಳಿ' ಕಾರ್ಯಕ್ರಮದ ಮೂಲಕ ಪರಿಚಿತರಾಗಿರುವ ಡಾ. ನಾ.ಸೋಮೇಶ್ವರ ಅವರು ಮೂಢನಂಬಿಕೆಗಳ ಕುರಿತು ಜಾಗೃತಿ ಮೂಡಿಸಲು ಈ ಕೃತಿ ರಚಿಸಿದ್ದಾರೆ. 2014ರಲ್ಲಿ 'ಮೂಢನಂಬಿಕೆ, ಕಾನೂನು ಮತ್ತು ಟೆಲಿವಿಷನ್' ಎಂಬ ಹೆಸರಿನಲ್ಲಿ ಸೋಮೇಶ್ವರ ಅವರೇ ಬರೆದಿದ್ದ ಕೃತಿಯ ಪರಿಷ್ಕೃತ ಹೊತ್ತಿಗೆ ಇದಾಗಿದೆ.

ಭಾರತದಲ್ಲಿದ್ದ ಮೂಢನಂಬಿಕೆಗಳು, ಪ್ರಸ್ತುತ ಚಾಲ್ತಿಯಲ್ಲಿರುವ ಮೂಢನಂಬಿಕೆಗಳನ್ನು ಉಲ್ಲೇಖಿಸುತ್ತಾ, ಜನರಲ್ಲಿ ಆಗಬೇಕಾದ ಬದಲಾವಣೆಗಳನ್ನು ಸೋಮೇಶ್ವರ ಅವರು ಈ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಮೌಢ್ಯ ಮತ್ತು ಭಗವಾನ್ ಬುದ್ಧ, ಭಾರತೀಯ ಟೆಲಿವಿಷನ್ ಮತ್ತು ಕಾನೂನು, ಮೌಢ್ಯದ ವಿರುದ್ಧ ಇರುವ ಕಾನೂನು, ಜನರು ನಡೆಯಬೇಕಾದ ದಾರಿ ಹೀಗೆ ಒಟ್ಟು 12 ಅಧ್ಯಾಯಗಳಲ್ಲಿ ಈ ಕೃತಿಯನ್ನು ಕಟ್ಟಿಕೊಡಲಾಗಿದೆ.

ಲೇಖಕರು ನೇರವಾಗಿ ಮೂಢನಂಬಿಕೆಗಳ ಲೋಕಕ್ಕೆ ಇಳಿಯದೆ, ಮಾನವನ ವಿಕಾಸದ ಹಂತಗಳನ್ನು ಪರಿಚಯಿಸುತ್ತಾ, ಸತಿ ಪದ್ಧತಿ ನಿರ್ಮೂಲನೆ, ಬಾಲ್ಯ ವಿವಾಹಕ್ಕೆ ಕಡಿವಾಣ ಮುಂತಾದ ಕ್ರಾಂತಿಕಾರಿ ನಿಲುವಳಿಗಳನ್ನು ಉಲ್ಲೇಖಿಸುತ್ತಾ ಹೆಜ್ಜೆ ಇಟ್ಟಿದ್ದಾರೆ. ಮೂಢನಂಬಿಕೆಯ ಹಲವು ಮುಖಗಳನ್ನು ಅವರಿಲ್ಲಿ ಪರಿಚಯಿಸಿದ್ದಾರೆ. ಕೃತಿಯಲ್ಲಿ ಮುಖ್ಯವಾಗಿ ದೃಶ್ಯ ಮಾಧ್ಯಮಗಳ ಮೂಲಕ ಮೂಢನಂಬಿಕೆಗಳು ಮತ್ತಷ್ಟು ಜನರನ್ನು ತಲುಪುತ್ತಿರುವ ಘಟನೆಗಳನ್ನು ಉಲ್ಲೇಖಿಸಲಾಗಿದೆ. 'ವಿಧಾನಸೌಧದ ಮೇಲೆ ಗೂಬೆ' ಕೂತ ಘಟನೆ, 'ಮಳೆಗಾಗಿ ಕಪ್ಪೆಗಳ ಮದುವೆ' ಮುಂತಾದ ಮೂಢನಂಬಿಕೆಗಳನ್ನು ಅವರಿಲ್ಲಿ ವಿಶ್ಲೇಷಿಸಿದ್ದಾರೆ. ❖




**ಮೌಢ್ಯ ಮತ್ತು ಟೆಲಿವಿಷನ್**
ಲೇ: ಡಾ. ನಾ.ಸೋಮೇಶ್ವರ
ಪ್ರ: ವಿಕ್ರಮ್ ಪ್ರಕಾಶನ
ಸಂ: 9740994008

ಪು: 149 ₹140

### ಲಂಕೇಶರ ಮಣ್ಣಿನ ಕಸುವಿಗೆ ಮಸೂರ

**ಪಿ. ಲಂಕೇಶ್** ಅವರ ಬರಹಗಳನ್ನು ಈ ಹೊತ್ತಿಗೆ ಅನ್ವಯಿಸಿ ನೋಡುವ ಮನಸ್ಸುಗಳು ನಮ್ಮ ನಡುವೆ ಇವೆ. ಅವರ ಓದನ್ನು ಪುನರ್‌ವಿಮರ್ಶಿಸುತ್ತಾ, ಸಾಲುಗಳ ನಡುವಿನ ಅರ್ಥ–ತತ್ವವನ್ನು ಅರ್ಥೈಸುತ್ತಾ ಬಂದ ಕೆಲವರೂ ಇದ್ದಾರೆ. ಕೃತಿಕಾರ ಸುರೇಶ್ ನಾಗಲಮಡಿಕೆ ಅದನ್ನು ಅಕಡೆಮಿಕ್ ಶಿಸ್ತಿನಿಂದ ಮಾಡಿದ್ದಾರೆ. ಲಂಕೇಶರು ಬದುಕನ್ನು ನೋಡಿದ್ದ ರೀತಿ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಗಳು ಉಂಟುಮಾಡಿದ್ದ ಅವಸ್ಥೆಗಳನ್ನು ಅವರು ಪರಾಮರ್ಶಿಸಿದ್ದು ಹೇಗೆನ್ನುವುದಕ್ಕೆ ಸುರೇಶ್ ನಾಗಲಮಡಿಕೆ ಪಾತಾಳಗರಡಿ ಹಾಕಿದ್ದಾರೆ. ಲಂಕೇಶರ ನೆಪದಲ್ಲಿ ಕನ್ನಡ ಕಥನ, ಬಹುನೆಲೆಯ ಸಮಾಜ ಮತ್ತು ಲಂಕೇಶರ ಕಥಾಲೋಕ, ಲಂಕೇಶರ ಕಾದಂಬರಿ ಲೋಕ ಎಂದು ಕೃತಿಕಾರರು ಭಾಗಗಳಾಗಿ ವಿಂಗಡಿಸಿಕೊಂಡು, ತಮ್ಮ ಅರ್ಥೈಸುವಿಕೆಯನ್ನು ಮಂಡಿಸಿದ್ದಾರೆ. ಲಂಕೇಶರ ಸಾಹಿತ್ಯದ ಈ ಹಿಂದಿನ ವಿಮರ್ಶೆಗಳನ್ನು ಅಲ್ಲಗಳೆಯದೆ, ಸಮಕಾಲೀನ ಸಂದರ್ಭದಲ್ಲಿ ಸಾಹಿತ್ಯದ ವಿದ್ಯಾರ್ಥಿಯಾಗಿ ತಾವು ಅವರನ್ನು ಗ್ರಹಿಸುತ್ತಿರುವುದು ಹೇಗೆ ಎನ್ನುವುದನ್ನು ಹೇಳಲು ಹೊರಟಿರುವುದಾಗಿ ಲೇಖಕರು ಮೊದಲೇ ತಿಳಿಸಿರುವುದು ಅವರ ವಿನಯಕ್ಕೆ ಸಾಕ್ಷಿ.

'ಲಂಕೇಶರು ತಮ್ಮ ಕತೆಗಳಲ್ಲಿ ಹುಡುಕುವ ಮನುಷ್ಯನ ಕೇಡಿಗುಣಗಳು ಹುಟ್ಟುಗುಣದಿಂದ ಬರುವವಲ್ಲ; ಅಥವಾ ತಾವಾಗಿ ರೂಢಿಸಿಕೊಂಡವೂ ಅಲ್ಲ. ಹಲವು ಬಾರಿ ಅವು ತಮ್ಮ ವರ್ತನೆಗಳಿಗೆ ಮತ್ತು ಕಾಲಕ್ಕೆ ಅನುಗುಣವಾಗಿ ಬರುತ್ತವೆ. ಕೆಲವರು ಇದರಿಂದ ಎಚ್ಚೆತ್ತು ಬದಲಾಗಬಹುದು, ಇನ್ನೂ ಹಲವರು ಬದಲಾವಣೆಗೆ ಒಗ್ಗುವುದಿಲ್ಲ. ಹಾಗಂತ ಮನುಷ್ಯನನ್ನು ಸದಾ ಸಂಶಯದಿಂದ, ಮನಸ್ಸಿನ ರೋಗಿಷ್ಟತನದಿಂದ ನೋಡಿದರೂ ಕಷ್ಟವೇ. ಇಲ್ಲಿ ಜೀವನಪ್ರೇಮ ಮತ್ತು ಬದುಕುವ ಆಸೆ ಭಗ್ನವಾಗುತ್ತದೆ. ಹೀಗೆ ಗ್ರಹಿಸಬೇಕಾದಾಗ ಅನುಭವ ಜಗತ್ತು ಪ್ರಾಮಾಣಿಕತೆಯಿಂದ ಮಾಗಬೇಕಾಗುತ್ತದೆ...' ಹೀಗೆ ಕೃತಿಯಲ್ಲಿ ಒಂದೆಡೆ ಸುರೇಶ್ ನಾಗಲಮಡಿಕೆ ಬರೆಯುತ್ತಾ ಹೋಗಿದ್ದಾರೆ. ಲಂಕೇಶರ ಸಾಹಿತ್ಯಸೃಷ್ಟಿಗೆ ಸಂವಾದಿಯಾಗಿ ಅವರು ಈ ಹೊತ್ತಿನ ಚೌಕಟ್ಟಿಗೆ ಅದನ್ನು ಒಗ್ಗಿಸುವ ಬಗೆಗೆ ಇದೊಂದು ಉದಾಹರಣೆಯಷ್ಟೆ. ಪುಸ್ತಕದಲ್ಲಿ ಇಂತಹ ವಿಚಾರಗಳು ಭರ್ತಿಯಾಗಿವೆ. ❖




**ಮಣ್ಣಿನ ಕಸುವು–ಲಂಕೇಶ್ ಕಥನ ಕುರಿತ ಅಧ್ಯಯನ**
ಲೇ: ಸುರೇಶ್ ನಾಗಲಮಡಿಕೆ
ಪ್ರ: ದೀಪಂಕರ ಪುಸ್ತಕ, ನಾಗಲಮಡಿಕೆ, ಪಾವಗಡ
ಸಂ: 9886279441

ಪು: 176 ₹210

# ದೇಶದುದ್ದಗಲ ವಚನ ನೃತ್ಯದ ಬಳ್ಳಿ

ವಿಶಾಖ ಎನ್.

ಹಲವು ವರ್ಷಗಳ ಹಿಂದಿನ ಮಾತು. ಸಿ. ಅಶ್ವತ್ಥ್ ಕೆಲವು ವಚನಗಳನ್ನು ಆರಿಸಿ, ಅವಕ್ಕೆ ಸ್ವರ ಸಂಯೋಜನೆ ಮಾಡಿದ್ದರು. ಯಾರೋ ಒಬ್ಬರು ಮಠಾಧೀಶರು ಅವುಗಳ ಧ್ವನಿಮುದ್ರಿಸಲು ಬೇಕಾದ ಖರ್ಚು ಭರಿಸುವುದಾಗಿ ಭರವಸೆ ನೀಡಿದ್ದರು. ಇನ್ನೇನು ರೆಕಾರ್ಡಿಂಗ್ ಶುರುವಾಗಬೇಕು ಎನ್ನುವಷ್ಟರಲ್ಲಿ ಅವರು ಕೈಕೊಟ್ಟರು. ಆಗ ತಮ್ಮ ಬಳಿ ಇದ್ದ ಪುಟ್ಟ ವ್ಯಾನನ್ನು ಮಾರಾಟ ಮಾಡಿ, ವಚನಗಳ ಧ್ವನಿಮುದ್ರಣದ ಕೆಲಸವನ್ನು ಅಶ್ವತ್ಥ್ ಮುಗಿಸಿದ್ದರು. ಆಮೇಲೆ ಆ ವಚನಗೀತೆಗಳ ಐದು ಸಿ.ಡಿ.ಗಳೂ ಬಿಡುಗಡೆಯಾದವು. ಆ ವಚನಗಳಲ್ಲಿ 10 ವಚನಗಳನ್ನು ಆಯ್ದು, ಸ್ನೇಹ ಕಪ್ಪಣ್ಣ ಸಾರಥ್ಯದಲ್ಲಿ ನೃತ್ಯರೂಪಕ್ಕೆ ಒಗ್ಗಿಸಿ, 62 ದಿನಗಳಲ್ಲಿ 52 ಪ್ರದರ್ಶನಗಳನ್ನು 24 ಹೆಣ್ಣುಮಕ್ಕಳ ತಂಡ ಹಲವು ರಾಜ್ಯಗಳಲ್ಲಿ ನೀಡಿ ಬಂದಿತು. ಇಡೀ ಸಂಚಾರ ನಡೆದದ್ದು ಒಂದು ಬಸ್‌ನಲ್ಲಿ. ಅಶ್ವತ್ಥ್ ತಮ್ಮ ವ್ಯಾನನ್ನು ಮಾರಾಟ ಮಾಡಿ ಧ್ವನಿಮುದ್ರಿಸಿದ್ದ ವಚನಗಳು ಹೀಗೆ ಬಸ್‌ನಲ್ಲಿ ವಿವಿಧೆಡೆ ಸಂಚರಿಸಿ ಬಂದಿರುವುದು ಸಂಸ್ಕೃತಿ ಸೋಜಿಗ.

ವಚನಗೀತೆ ನೃತ್ಯವಾದಾಗ...

> ಭರತನಾಟ್ಯದ 24 ಕಲಾವಿದೆಯರು ದೇಶದ ಹಲವು ರಾಜ್ಯಗಳಲ್ಲಿ 62 ದಿನ ಬಸ್‌ನಲ್ಲೇ ಸಂಚರಿಸಿ, ವಚನಗಳ ನೃತ್ಯಾಭಿವ್ಯಕ್ತಿ ಮಾಡಿ ಬಂದಿದ್ದಾರೆ. ಇಂಥದೊಂದು ಪರಿಕಲ್ಪನೆಯನ್ನು ಸಾಕಾರಗೊಳಿಸಿದ ಸ್ನೇಹ ಕಪ್ಪಣ್ಣ ಅವರದ್ದೀಗ ಸಾರ್ಥಕ ನಗು.

ಕೋವಿಡ್ ವ್ಯಾಪಕವಾಗುವ ಮೊದಲೇ ಅಶ್ವತ್ಥ್ ಅವರ ಆಯ್ದ ವಚನಗಳಿಗೆ ನೃತ್ಯರೂಪ ನೀಡುವ ಕೆಲಸಕ್ಕೆ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬೆನ್ನುತಟ್ಟಿದ್ದರು. ಆಗ ಅವರ ಶಾಲೆಯ ನೂರು ಮಕ್ಕಳಿಗೆ ನೃತ್ಯ ಕಲಿಸುವ ಕೆಲಸವನ್ನು ಸ್ನೇಹ ಕಪ್ಪಣ್ಣ ಕೈಗೆತ್ತಿಕೊಂಡರು. ಮೊದಲ ಪ್ರದರ್ಶನಕ್ಕೆ ವ್ಯಕ್ತವಾದ ಪ್ರತಿಕ್ರಿಯೆ ನೀರಸವಾಗಿತ್ತು. ಜನಪದ ಹಾಗೂ ವಚನಗಳನ್ನು ಹದವಾಗಿ ಬೆರೆಸಿದ ಶೈಲಿಯ ನೃತ್ಯದ ಮಧ್ಯೆ ವಚನಗಳಿಗೆ ಶಿವಾಚಾರ್ಯ ಸ್ವಾಮೀಜಿ ಅವರೇ ತಮ್ಮ ಕಂಠದಲ್ಲಿ ಧ್ವನಿಮುದ್ರಿಸಿದ್ದ ಅರ್ಥವನ್ನೂ ಕೇಳಿಸುವ ಪ್ರಯೋಗ ಅದಾಗಿತ್ತು. ಆ ಮಕ್ಕಳು ಮುಂಬೈಗೆ ಹೋಗಿ ಮೂರು ಕಡೆ ಪ್ರದರ್ಶನ ನೀಡಿದರು. ಒಂದೊಂದೂ ಪ್ರದರ್ಶನ ಆದಮೇಲೆ ಅಲ್ಲಿನ ಕನ್ನಡಿಗರೇ ಸ್ವಪ್ರೇರಣೆಯಿಂದ ಹಣದ ಕೊಡುಗೆ ನೀಡಿದರು. ಖರ್ಚು ತೂಗಿಸಿಕೊಂಡು ಹೋಗಲು ಅದರಿಂದ ಸಾಧ್ಯವಾಯಿತು. ಮೂರನೇ ಪ್ರದರ್ಶನದ ನಂತರ ಅಲ್ಲಿನ ಕೊಡುಗೈಗಳನ್ನು ಕಂಡು ಸ್ವಾಮೀಜಿ ಕಣ್ತುಂಬಿಕೊಂಡು ನಿಂತಿದ್ದು ಶ್ರೀನಿವಾಸ ಜಿ. ಕಪ್ಪಣ್ಣ ಅವರಿಗೆ ಈಗಲೂ ಕಣ್ಣಿಗೆ ಕಟ್ಟಿದಹಾಗಿದೆ.

ಅಶ್ವತ್ಥ್ ಎಂದೋ ಸಂಯೋಜಿಸಿದ್ದ ವಚನಗೀತೆಗಳನ್ನು ನೃತ್ಯರೂಪಕ್ಕೆ ಒಗ್ಗಿಸಬೇಕೆಂಬ ಕನಸು ಕುಡಿಯೊಡೆದದ್ದು ಕಪ್ಪಣ್ಣ ಹಾಗೂ ಸ್ವಾಮೀಜಿ ನಡುವೆ ನಡೆದ ಸಂವಾದದಿಂದ. ಅಶ್ವತ್ಥ್ ಸ್ವರ ಸಂಯೋಜನೆಯ ವಚನಗಳು ಸಿ.ಡಿ. ರೂಪದಲ್ಲಿ ಬಿಡುಗಡೆ ಆದದ್ದೂ ಕಪ್ಪಣ್ಣ ಅವರ ಪ್ರಯತ್ನದಿಂದ, ಉದ್ಯಮಿ ಷಡಕ್ಷರಿ ಅವರ ನೆರವಿನಿಂದ. ಕೋವಿಡ್ ಕಳೆದ ಮೇಲೆ ಮತ್ತೆ ಆ ವಚನಗಳನ್ನು ದೇಶದ ಉದ್ದಗಲ ನೃತ್ಯರೂಪದ ಮೂಲಕ ಹರಡಬೇಕೆಂಬ ಮಹದಾಸೆ ಮೂಡಿತು. ಹಿಂದಿಗೆ ಅನುವಾದಗೊಂಡ ವಚನ ನೃತ್ಯದ ಪರಿಕಲ್ಪನೆ ಬೇರೆ ರಾಜ್ಯಗಳಲ್ಲೂ ಸಂಚರಿಸಿದ್ದು ಹಾಗೆ. ಹಿಂದಿ ಕವಿ ಕುಲವಂತ ಸಿಂಗ್ ಹಾಗೂ ಮುಂಬೈನ ವಿಜ್ಞಾನಿ ಸುರೇಶ್ ಕುಮಾರ್ ಅನುವಾದ ಮಾಡಿಕೊಟ್ಟರು. ಈ ವರ್ಷ ಜುಲೈ 2ರಂದು ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಆಡಿಟೋರಿಯಂನಲ್ಲಿ ಪ್ರಾರಂಭವಾದ ಸಂಚಾರ ಅಂತ್ಯಗೊಂಡಿದ್ದು ಸಾಣೇಹಳ್ಳಿಯ ಬಯಲು ಮಂದಿರದಲ್ಲಿ, ಸೆಪ್ಟೆಂಬರ್ 2ರಂದು. ಕರ್ನಾಟಕವಷ್ಟೆ ಅಲ್ಲದೆ ತೆಲಂಗಾಣ, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಜಾರ್ಖಂಡ್, ಬಿಹಾರ, ಉತ್ತರ ಪ್ರದೇಶ, ದೆಹಲಿ, ಚಂಡೀಗಢ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ... ಇಲ್ಲೆಲ್ಲ 24 ನೃತ್ಯಗಾರ್ತಿಯರನ್ನು ಒಳಗೊಂಡ ತಂಡವು 62 ದಿನ ಬಸ್‌ನಲ್ಲೇ ಸಂಚರಿಸಿ ಪ್ರದರ್ಶನ ನೀಡಿ ಬಂದಿತು.

ಶ್ರೀನಿವಾಸ ಜಿ. ಕಪ್ಪಣ್ಣ, ಸ್ನೇಹ ಕಪ್ಪಣ್ಣ ಹಾಗೂ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

## ಹೀಗೆಲ್ಲ ಹಬ್ಬಿತು ವಚನ ಸಾಹಿತ್ಯ

ಶರಣ ಸಾಹಿತ್ಯದಲ್ಲಿ ನನಗೆ ವಿಶೇಷ ಒಲವು. ಕನ್ನಡಿಗರು ಇರುವೆಡೆ ಅಷ್ಟೇ ಅಲ್ಲದೆ ಬೇರೆ ಕಡೆಯೂ ಶರಣ ಸಾಹಿತ್ಯ ಅನುರಣಿಸಬೇಕು. ಅದರಲ್ಲಿ ಬಂಡಾಯ–ದಲಿತ ಪ್ರಜ್ಞೆ ಇದೆ, ಮಹಿಳಾ ಸ್ವಾತಂತ್ರ್ಯದ ಪ್ರತಿಪಾದನೆ ಇದೆ, ಮೌಢ್ಯ ಸಲ್ಲದೆನ್ನುವ ಪಾಠವಿದೆ. 2007ರಲ್ಲಿ ಶರಣ ಸಾಹಿತ್ಯ ಆಧರಿಸಿದ ನಾಲ್ಕು ನಾಟಕಗಳನ್ನು ಹಿಂದಿಯಲ್ಲಿ ರಚಿಸುವಂತೆ ಮಾಡಿ ಪ್ರದರ್ಶಿಸಿದ್ದೆವು. 2013ರಲ್ಲೂ ಎರಡು ಹಿಂದಿ ನಾಟಕಗಳು ವಚನ ಸಾಹಿತ್ಯದ ಮಹತ್ವ ಸಾರಿದ್ದವು. ಈಗ ನೃತ್ಯಕ್ಕೆ ವಚನಗಳನ್ನು ಒಗ್ಗಿಸಿದರೆ ಹೇಗೆ ಎಂಬ ಪ್ರಯೋಗಕ್ಕೆ ಕೈಹಾಕಿ, ಗೆದ್ದಂತಾಗಿದೆ. ಜನಪದ ನೃತ್ಯ ಮಾಡುವವರನ್ನು ಸೇರಿಸಿ, ಅವರಿಂದ ವಚನಗೀತೆಗಳಿಗೆ ನೃತ್ಯ ಮಾಡಿಸಿ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಅವರು ಈ ಪ್ರಯೋಗ ಕಂಡಮೇಲೆ ಹೇಳಿದರು. ಅದರ ವೆಚ್ಚವನ್ನೂ ಭರಿಸಲು ಅವರು ಮುಂದಾಗಿದ್ದಾರೆ. ವಚನ ಸಾಹಿತ್ಯ ಹೀಗೆಲ್ಲ ಹಬ್ಬುತ್ತ ಇರುವುದೇ ಸಂತಸದ ವಿಚಾರ.

**–ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ,**
ಸಾಣೇಹಳ್ಳಿ

'ನಾವು ಈ ವಚನಗಳನ್ನು ನೃತ್ಯಕ್ಕೆ ಒಗ್ಗಿಸುವ ಕೆಲಸ ಕೈಗೆತ್ತಿಕೊಂಡಾಗ ಪ್ರೊಡಕ್ಷನ್ ಕ್ವಾಲಿಟಿ ನ್ಯಾಷನಲ್ ಲೆವೆಲ್‌ಗೆ ಇರಬೇಕು ಎಂದು ನಿರ್ಧರಿಸಿದೆವು. ಭರತನಾಟ್ಯದಲ್ಲಿ ವಿದ್ವತ್ ಆದವರು, ರಂಗಪ್ರವೇಶ ಆದವರನ್ನಷ್ಟೆ ಆಯ್ಕೆ ಮಾಡಿಕೊಂಡೆವು. ಬೆಂಗಳೂರಿನ ಕಪ್ಪಣ್ಣ ರಂಗಮಂದಿರಲ್ಲಿ ಒಂದು ತಿಂಗಳು ತಾಲೀಮು ನಡೆಸಿ, ವಚನಗಳನ್ನು ನೃತ್ಯರೂಪಕ್ಕೆ ಒಗ್ಗಿಸಿದೆವು. ಬಳಸುವ ಪರಿಕರಗಳೆಲ್ಲ ಬಸ್‌ನಲ್ಲಿ ಸಲೀಸಾಗಿ ಇಡುವಂತೆ ಇರಬೇಕು, ಹಾಗೆ ನೋಡಿಕೊಳ್ಳಲು ನೆರವಾದವರು ಮಾಲತೇಶ ಬಡಿಗೇರ. 44 ವಚನಗಳಲ್ಲಿ ಹತ್ತನ್ನು ಇದಕ್ಕಾಗಿ ಆಯ್ಕೆಮಾಡಿಕೊಂಡೆವು. ಸ್ವಾಮೀಜಿ ಕಂಠದಲ್ಲಿ ಇದ್ದ ಅರ್ಥವನ್ನು ಹಿಂದಿಗೆ ಅನುವಾದ ಮಾಡಿಸಿ, ಬೇರೆಯವರ ಕಂಠದಲ್ಲಿ ಧ್ವನಿಮುದ್ರಿಸಿದೆವು. ವಸ್ತ್ರಾಲಂಕಾರದ ಹೊಣೆಯನ್ನು ಜಾನಕಿರಾಮನ್ ಕೆ. ವಹಿಸಿಕೊಂಡರೆ, ಸವಿತಾ ಜೋಸೆಫ್ ಎಂಬುವವರು ಹೇರ್‌ಸ್ಟೈಲ್ ಹಾಗೂ ಮೇಕಪ್ ಅನ್ನು ಕಲಾವಿದೆಯರು ತಾವೇ ಮಾಡಿಕೊಳ್ಳುವಂತೆ ಕಮ್ಮಟ ನಡೆಸಿದರು. ಜೀವನಗೌಡ, ಲವಕುಮಾರ್ ಧ್ವನಿ ಮತ್ತು ಬೆಳಕಿನ ಜವಾಬ್ದಾರಿ ವಹಿಸಿಕೊಂಡರು. ಕೋಲಾಟ, ನಂದಿಧ್ವಜ, ತಾಳಗಳು, ಡಮರುಗ ಇವನ್ನೆಲ್ಲ ಬಳಸಿದ ನೃತ್ಯ ಸಂಯೋಜನೆ ಕಣ್ಣು–ಮನಸ್ಸಿಗೆ ಹಿತವಾಗುವಂತೆ ಮೂಡಿಬಂತು'–ಯೋಜನೆ ಸಾಕಾರಗೊಂಡ ಬಗೆಯನ್ನು ಸ್ನೇಹ ಕಪ್ಪಣ್ಣ ವಿವರಿಸಿದ್ದು ಹೀಗೆ.

'ತೆಲಂಗಾಣದ ತೆಲುಗು ವಿಶ್ವವಿದ್ಯಾಲಯದಲ್ಲಿ ಪ್ರದರ್ಶನ ನಡೆದಾಗ ಅಲ್ಲಿನವರು ಈ ಪ್ರಸ್ತುತಿಯನ್ನು ತೆಲುಗಿನಲ್ಲಿ ಮಾಡಿಕೊಡಿ ಎಂದು ಕೇಳಿದರು. ಮಹಾರಾಷ್ಟ್ರದಲ್ಲಿ ಪ್ರದರ್ಶಿಸಿದಾಗ ಸರ್ಕಾರದ ಯೋಜನೆಯೊಂದನ್ನು ಬಳಸಿ ಇದನ್ನು ಅಲ್ಲಿ ಇನ್ನಷ್ಟು ಪ್ರದರ್ಶಿಸುವ ಅವಕಾಶವಿದ್ದು, ಮರಾಠಿ ಭಾಷೆಗೆ ಅನುವಾದಿಸಿಕೊಡುವಂತೆ ಅಲ್ಲಿನ ಮುಖ್ಯಮಂತ್ರಿ ಕಚೇರಿಯಿಂದ ಬೇಡಿಕೆ ಇಟ್ಟರು. ಖರಗ್‌ಪುರದಲ್ಲಿ ಪ್ರದರ್ಶನ ನಡೆದಾಗ ಮಹಿಳಾ ವಿಶ್ವವಿದ್ಯಾಲಯದ 1500 ಜನರಿದ್ದರು. ಬಂಗಾಳಿ ಭಾಷೆಯಲ್ಲಿ ಇದನ್ನು ಮಾಡಿಕೊಡಿ ಎಂದು ಕೇಳಿದವರೂ ಇದ್ದರು. ಹೀಗೆ ನಾವು ಹೋದಕಡೆಯೆಲ್ಲ ಸ್ಮರಣೀಯ ಅನುಭವಗಳು ದಕ್ಕಿವೆ' ಎಂದರು ಶ್ರೀನಿವಾಸ ಜಿ. ಕಪ್ಪಣ್ಣ.

ಒಟ್ಟು 62 ದಿನಗಳಲ್ಲಿ ಬಸ್‌ನಲ್ಲಿ ಕಲಾರಾಧಕರದ್ದು ಏನಿಲ್ಲವೆಂದರೂ 12 ಸಾವಿರ ಕಿ.ಮೀ. ಪ್ರಯಾಣ. ಕೆಲವೆಡೆ ಉಳಿದುಕೊಳ್ಳುವ, ಊಟದ ವ್ಯವಸ್ಥೆಯಲ್ಲಿ ವ್ಯತ್ಯಾಸವಾಗಿತ್ತು. ಇಂತಹ ಎಲ್ಲ ಸಮಸ್ಯೆಗಳನ್ನೂ ಮೀರಿ, ವೇದಿಕೆ ಮೇಲೆ ಕಲಾವಿದೆಯರು ನೃತ್ಯ ಲಾಲಿತ್ಯವನ್ನು ಕಾಣಿಸಿದರು. ದಣಿವೆನ್ನುವುದೇ ಇಲ್ಲವೆಂಬಂತೆ ವಚನಗಳ ಸಾರ–ಸತ್ವವನ್ನು ಅದರ ಗಂಧ–ಗಾಳಿಯೇ ಇಲ್ಲದೆಡೆಯೂ ಪಸರಿಸಿದರು. ಒಂದೊಂದೂ ಪ್ರದರ್ಶನದ ನಂತರದ ನೆಮ್ಮದಿಯ ನಿಟ್ಟುಸಿರಿಗೆ ಈಗ ಸಿಕ್ಕಿರುವುದು ಸಾರ್ಥಕ್ಯದ ಅರ್ಥ.

## ಧಾರಾವಿ....

ಒಂದನೇ ಪುಟದಿಂದ...

ಸ್ವಯಂ ಉದ್ಯೋಗ ಕಂಡುಕೊಂಡಿರುವ ಇಲ್ಲಿನ ಬಹುತೇಕ ಮಂದಿ ಅಕ್ಷರಸ್ಥರಾಗಿದ್ದು, ಜಾತಿ–ಧರ್ಮದ ತಾರತಮ್ಯ ಮಾಡದೇ ಅಲ್ಲಿನ ಸುತ್ತಮುತ್ತಲ ನಿವಾಸಿಗಳಿಗೂ ಉದ್ಯೋಗ ನೀಡಿದ್ದಾರೆ.

ಮಲಮೂತ್ರ ವಿಸರ್ಜನೆಗೆ ಅಲ್ಲಿನ ಬೃಹನ್ ಮುಂಬೈ ಪಾಲಿಕೆಯು ಸಾರ್ವಜನಿಕ ಶೌಚಾಲಯ ನಿರ್ಮಿಸಿಕೊಟ್ಟಿದೆ. ಅದರ ಬಳಕೆಗೆ ಕೆಲ ಕಡೆ ₹ 2 ಶುಲ್ಕವಿದ್ದರೆ, ಇನ್ನೂ ಕೆಲ ಕಡೆ ಸಂಪೂರ್ಣ ಉಚಿತ. ಗಣೇಶೋತ್ಸವ, ಈದ್, ಓಣಂ, ಕ್ರಿಸ್‌ಮಸ್ ಸೇರಿ ವಿವಿಧ ಹಬ್ಬಗಳನ್ನು ಜೊತೆಗೂಡಿ ಆಚರಿಸುವ ಕಾರಣ ಇಲ್ಲಿನ ನಿವಾಸಿಗಳು ವೈವಿಧ್ಯಮಯ ಸಂಸ್ಕೃತಿ ಅರಿಯುವುದರ ಜೊತೆಗೆ ಹಲವು ಭಾಷೆಗಳನ್ನು ಕಲಿತಿದ್ದಾರೆ. ಪರಸ್ಪರರ ಜೀವನಶೈಲಿಗಳನ್ನು ಹತ್ತಿರದಿಂದ ಕಂಡುಕೊಂಡಿದ್ದಾರೆ.

'ಕಲ್ಯಾಣ ಕರ್ನಾಟಕದ ಜಿಲ್ಲೆಯವರೇ ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ. ಇಲ್ಲಿನ ಆಂಧ್ರ ಕರ್ನಾಟಕ ದಲಿತ ವರ್ಗಗಳ ಸಂಘವು ಕನ್ನಡ ಉಳಿಸುವ ಕಾಯಕದ ಜೊತೆಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಸಂಸ್ಥೆಯನ್ನು ನಡೆಸುತ್ತದೆ. ಕಡಿಮೆ ಶುಲ್ಕವಿದೆ. ಬಡಮಕ್ಕಳಿಗೆ ಉಚಿತ ಶಿಕ್ಷಣದ ವ್ಯವಸ್ಥೆಯೂ ಇದೆ. ಅಲ್ಲದೇ ಇಲ್ಲಿ ನಾವು ಪೂಜಿಸುವ ದೇವರ ದೇವಸ್ಥಾನಗಳಿವೆ. ವಿವಿಧ ಸಂಘ–ಸಂಸ್ಥೆಯವರು ಧಾರ್ಮಿಕ ಕಾರ್ಯಗಳ ಜೊತೆ ಸಮಾಜಸೇವೆಯನ್ನೂ ಮಾಡುತ್ತಾರೆ' ಎಂದು ಹೇಳುವ ಶಂಕರಪ್ಪ ಅವರಿಗೆ ಧಾರಾವಿ ಪ್ರದೇಶವು ಎಲ್ಲವನ್ನೂ ಧಾರೆಯೆರೆದಿದೆ. ಸಂಕಷ್ಟ, ಸವಾಲು ಮತ್ತು ಅಭದ್ರತೆ ಇದ್ದರೂ ಅದು ಸೋಕದಂತೆ ಕಾಪಿಟ್ಟುಕೊಂಡು ಬಂದಿರುವ ಧಾರಾವಿ ಎಂಬ ತಾಯಿಯ ಮಡಿಲಿನಿಂದ ದೂರ ಹೋಗಲು ಶಂಕರಪ್ಪ ಅವರಂತಹ ಬಹುತೇಕ ಜನ ಬಯಸುವುದಿಲ್ಲ.

'ಧಾರಾವಿಯಲ್ಲಿನ ಎಲ್ಲಾ ಮನೆ, ಜೋಪಡಿ, ಕಟ್ಟಡಗಳನ್ನು ತೆರವುಗೊಳಿಸಿ ಚೆಂದದ ಮನೆಗಳನ್ನು ಕಟ್ಟಿಸಿಕೊಡುವ ಭರವಸೆ ಹಲವು ಸಲ ಸಿಕ್ಕಿದೆ. ಆದರೆ, ಕಾರ್ಯರೂಪಕ್ಕೆ ಬಂದಿಲ್ಲ. ಪುಟ್ಟ ಪುಟ್ಟ ಮನೆಗಳಲ್ಲಿ ಪರಸ್ಪರ ಉಸಿರು ತಾಗಿಸಿಕೊಂಡು ಕೋವಿಡ್ ದಿನಗಳಲ್ಲೇ ಬದುಕಿದ ನಮಗೆ ಇನ್ನು ಯಾವ ಭಯವೂ ಇಲ್ಲ. ಆದರೆ, ಜಗತ್ತು ಬದಲಾದಂತೆ ನಮ್ಮ ಜೀವನವೂ ಬದಲಾಗಬೇಕು ಎಂಬ ಪುಟ್ಟ ಆಸೆ ನಮ್ಮದು. ದೊಡ್ಡ ಮನೆ ಇರಬೇಕು, ಖಾಸಗೀತನಕ್ಕೆ ಅವಕಾಶ ಸಿಗಬೇಕು, ನಿಮ್ಮಂತೆಯೇ ನಾವು ಇದ್ದೇವೆ ಎಂಬುದನ್ನು ಜಗತ್ತಿಗೆ ಸಾರಿ ಹೇಳಬೇಕು ಎಂಬ ಬಯಕೆ ಇದೆ. ಮುಂದಿನ ಪೀಳಿಗೆಯವರು ಇದೇ ಧಾರಾವಿಯಲ್ಲೇ ಬದುಕಬಹುದು. ಆದರೆ, ವೇಗವಾಗಿ ಓಡುತ್ತಿರುವ ಜಗತ್ತಿನ ಜೊತೆ ಸೆಣಸಾಡುವರೇ ಎಂಬ ಪ್ರಶ್ನೆ ಪದೇ ಪದೇ ಕಾಡುತ್ತದೆ. ಸ್ಲಂ ನಿವಾಸಿಗಳು ಎನ್ನುವ ಬದಲು ನಮ್ಮ ನಿವಾಸಿಗಳು ಎಂದು ಮುಂಬೈನವರು ಕರೆದು ಆಪ್ತವಾಗಿ ಮಾತನಾಡುವ ದಿನಗಳು ಬರುತ್ತವೆಯೇ' ಎಂಬ ನಿರೀಕ್ಷೆ ಧಾರಾವಿ ನಿವಾಸಿಗಳದ್ದು.

ಕಿರಿದಾದ ಮನೆಯಲ್ಲಿ ಅರಮನೆಯಂತಹ ಪ್ರೀತಿ ತೋರಿದ ಭೀಮರಾಯ ಮತ್ತು ಕುಟುಂಬ ಸದಸ್ಯರು, 'ಜಾಗ ಚಿಕ್ಕದಿರಬಹುದು. ಆದರೆ, ನಮ್ಮ ಮನಸ್ಸು ದೊಡ್ಡದು. ಆಪ್ತರಿಗೆ ಯಾವಾಗಲೂ ಪ್ರೀತಿಯ ಸ್ವಾಗತವಿದೆ. ಸಂಕೋಚಪಡದೇ ಎಷ್ಟು ದಿನಗಳಾದರೂ ನಮ್ಮೊಂದಿಗೆ ಇರಿ. ಮುಂಬೈ ಜೊತೆ ಧಾರಾವಿಯನ್ನು ಇನ್ನಷ್ಟು ಪರಿಚಯಿಸುತ್ತೇವೆ' ಎನ್ನುತ್ತ ಬೀಳ್ಕೊಟ್ಟರು. ಅಲ್ಲಿಂದ ನಿರ್ಗಮಿಸುವಾಗ, ಬೀಳ್ಕೊಡುವವರ ಸಂಖ್ಯೆ ಹೆಚ್ಚುತ್ತಲೇ ಇತ್ತು.



ಒಂದು ಬೈಕ್ ಓಡಿಸಲಷ್ಟೇ ಜಾಗವಿರುವ ಧಾರಾವಿಯ ಗಲ್ಲಿಗಳು

## ಟೆನಿಸ್ ದೊರೆ...



ಒಂದನೇ ಪುಟದಿಂದ...

ಫೆಡರರ್ ಬಲಾಢ್ಯವಾಗಿರುವ ಅವರ ನೆಚ್ಚಿನ ಹುಲ್ಲುಹಾಸಿನ ವಿಂಬಲ್ಡನ್ ಕೋರ್ಟ್‌ನಲ್ಲಿ ಮೂರು ಫೈನಲ್‌ಗಳಲ್ಲಿ ಅವರನ್ನು ಸೋಲಿಸಿ ಒಟ್ಟು ಏಳು ವಿಂಬಲ್ಡನ್ ಗೆಲ್ಲುವುದು ಮಾತ್ರವಲ್ಲದೆ, 'ಕಿಂಗ್ ಆಫ್ ಕ್ಲೇ' ಎಂದೇ ಹೆಸರುವಾಸಿಯಾಗಿರುವ ನಡಾಲ್ ಅವರನ್ನೂ ಜೊಕೊವಿಚ್ ಫ್ರೆಂಚ್ ಓಪನ್‌ನ ಕ್ಲೇ ಅಂಗಳದಲ್ಲಿ ಎರಡು ಬಾರಿ ಮಣಿಸಿ ಒಟ್ಟು ಮೂರು ಬಾರಿ ಫ್ರೆಂಚ್ ಓಪನ್ ಗೆದ್ದಿದ್ದಾರೆ. ಇದರೊಟ್ಟಿಗೆ ಫೆಡೆರರ್-ನಡಾಲ್ ಇಬ್ಬರ ಎದುರಿಗೂ ಹೆಚ್ಚು ಪಂದ್ಯಗಳನ್ನು ಗೆದ್ದು ಜೊಕೊವಿಚ್ ಪ್ರಾಬಲ್ಯ ಮೆರೆದಿದ್ದಾರೆ. ಅದಲ್ಲದೆ ಎದುರಾಳಿ ಮ್ಯಾಚ್ ಪಾಯಿಂಟ್ ಪಡೆದು ಗೆಲುವಿನ ಹೊಸ್ತಿಲಲ್ಲಿರುವಾಗ, ಒತ್ತಡದ ನಡುವೆ ಕೊಂಚವೂ ವಿಚಲಿತರಾಗದೆ ಸೋಲಿನ ದವಡೆಯಿಂದ ಗೆಲುವನ್ನು ಕಸಿದುಕೊಳ್ಳುವ ಜೊಕೊವಿಚ್‌ರ ಆಟ ನೋಡುವುದೇ ಒಂದು ಹಬ್ಬ. ಈ ಬಗೆಯಲ್ಲಿ ಹತ್ತಾರು ಬಾರಿ ಮೇರು ಆಟಗಾರರ ಮೇಲೆ ಜಯ ಸಾಧಿಸಿರುವುದು ಅವರ ಗಟ್ಟಿತನಕ್ಕೆ ಹಿಡಿದ ಕನ್ನಡಿ.

ಆಕ್ರಮಣಕಾರಿ ಬಲಗೈ ಬೇಸ್‌ಲೈನ್ ಆಟಗಾರ ಆಗಿರುವ ಜೋಕೊವಿಚ್‌ರ ಫೋರ್ ಹ್ಯಾಂಡ್ ಮತ್ತು ಎರಡು-ಕೈಗಳ ಬ್ಯಾಕ್ ಹ್ಯಾಂಡ್ ಹೊಡೆತಗಳೂ ಅಷ್ಟೇ ಪರಿಣಾಮಕಾರಿ. ಇನ್ನು ಜೋರಾಗಿ ಸರ್ವ್ ಮಾಡುವ ಅವರು ಪಾದರಸದಂತೆ ಕೋರ್ಟ್‌ನ ತುಂಬೆಲ್ಲಾ ಸಂಚರಿಸುವುದನ್ನು ನೋಡಿ ಕಣ್ತುಂಬಿಸಿಕೊಳ್ಳಬೇಕೆಂಬುದುದೇ ಸಹಸ್ರಾರು ಟೆನಿಸ್ ಪ್ರಿಯರ ಹೆಬ್ಬಯಕೆಯಾಗಿದೆ. ಅತ್ಯಧಿಕ ಕಾಲ ಅಗ್ರ ಶ್ರೇಯಾಂಕಿತ ಆಟಗಾರನಾಗಿರುವ ದಾಖಲೆಯ ಜೊತೆಗೆ ಅತಿ ಹೆಚ್ಚು ಎಟಿಪಿ ಪಂದ್ಯಾವಳಿಗಳನ್ನೂ ಗೆದ್ದು ಆಟದಲ್ಲಿ ಎಲ್ಲಾ ಬಗೆಯ ದಾಖಲೆಯಗಳನ್ನು ತಮ್ಮದಾಗಿಸಿಕೊಂಡಿರುವ ಜೋಕೊವಿಚ್ ಟೆನಿಸ್‌ನ ಅನಭಿಷಕ್ತ ದೊರೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

## ಜಾಮ್ ತಕ್ಕ ತಕ್ಕ ತಕ್ಕ...

ಒಂದನೇ ಪುಟದಿಂದ...

ಶಿಬಿರದ ಮೊದಲ ದಿನ ತಮಟೆಯ ಪರಿಚಯ, ಅದನ್ನು ಹೇಗೆ ಹದವಾಗಿ ಕಾಯಿಸಬೇಕು, ಹೇಗೆ ಹಿಡಿಯಬೇಕು, ಹೇಗೆ ಬಾರಿಸಬೇಕು ಎಂಬುದನ್ನು ಪ್ರಾಯೋಗಿಕವಾಗಿ ಹೇಳಿಕೊಡಲಾಯಿತು. ಮುಖ್ಯವಾಗಿ, ತಮಟೆಗೆ ಯಾವುದೇ ಶಿಸ್ತುಬದ್ಧ ನೋಟ್ಸ್ ಇರುವುದಿಲ್ಲ ಎಂಬುದನ್ನು ಅರಿತ ಗೆಳೆಯ ಡಿಂಗ್ರಿ ಭರತ್ ತಾವೇ ಸ್ವತಃ ರೂಢಿಸಿಕೊಂಡ, ರೂಪಿಸಿಕೊಂಡ ವಿಶಿಷ್ಟ ಶೈಲಿಯ 'ಬೀಟ್'ಗಳನ್ನು ನುಡಿಸುತ್ತಾ, ಶಿಬಿರಾರ್ಥಿಗಳಿಗೂ ಹೇಳಿಕೊಟ್ಟರು.

'ಜಾಮ್ ತಕ್ಕ ತಕ್ಕ ತಕ್ಕ/ಜಾಮ್ ಜಾಮ್ ತಕ್ಕ ತಕ್ಕ ತಕ್ಕ/ಜಾಮ್ ತಕ್ಕ ತಕ್ಕ ತಕ್ಕ/ಜಾಮ್ ಜಾಮ್ ತಕ್ಕ ತಕ್ಕ ತಕ್ಕ/ಜಾಮ್ ತಕ್ಕ ತಕ್ಕ ತಕ್ಕ/ ಜಾಮ್ ಜಾಮ್ ತಕ್ಕ ತಕ್ಕ ತಕ್ಕ/ತಕ್ ಜಾಮ್ ತಕ್ ಜಾಮ್ ತಕ್ ಜಾಮ್ ತಕ್... ಹೀಗೆ ಏಳು ದಿನಗಳಲ್ಲಿ ಎಂಟು ಬೀಟ್‌ಗಳ ಮೂಲಕ ವಿಶಿಷ್ಟ ನಾದ-ಲಯಗಳ ಪರಿಚಿತ ಅನುಭವ ಲೋಕವೇ ಶಿಬಿರದಲ್ಲಿ ಮತ್ತೆ ತೆರೆದುಕೊಂಡಂತಾಯಿತು.

ದಿನವೂ ಮಧ್ಯಾಹ್ನ 3ರಿಂದ ರಾತ್ರಿ 8ರ ವರೆಗೆ ಕಲಿಕೆ ಇರುತ್ತಿತ್ತು. ನಿತ್ಯವೂ ಭರತ್ ಡಿಂಗ್ರಿ ಒಂದು ಬೀಟ್ ಅನ್ನು ಪ್ರತಿ ಶಿಬಿರಾರ್ಥಿಗೂ ಲಕ್ಷ್ಯ ಕೊಟ್ಟು ಕಲಿಸುತ್ತಿದ್ದರು. ಮರುದಿನ ಬೆಳಿಗ್ಗೆ ಆ ಬೀಟ್ ಅನ್ನು ಅಭ್ಯಾಸ ಮಾಡಿ, ಒಪ್ಪಿಸಬೇಕಿತ್ತು. ಇನ್ನೂ ಪಕ್ಕಾ ಆಗಬೇಕಿದ್ದರೆ ಅದನ್ನೂ ಹೇಳಿಕೊಡುತ್ತಿದ್ದರು. ಹೀಗೆ ಎಂಟು ಬೀಟ್‌ಗಳನ್ನು ಕಲಿತ ನಂತರ ಕೊನೆಯ ದಿನ ಎಲ್ಲರೂ ಸೇರಿ ಅಷ್ಟೂ ಬೀಟ್‌ಗಳನ್ನು ನುಡಿಸಿದ್ದು ಸಾರ್ಥಕ್ಯದ ಕ್ಷಣ.

ನನ್ನ ಪ್ರಕಾರ ತಮಟೆ ಒಂದು ವಾದ್ಯವಷ್ಟೇ ಅಲ್ಲ; ಅದು ಸಮುದಾಯಗಳ ಅಧಿಕಾರಯುತ Void ಅನ್ನು ಬಗೆದು ತನ್ನ ಇರವನ್ನು ದಿಟ್ಟವಾಗಿ ಸ್ಥಾಪಿಸುವ Voice ಇದ್ದಂತೆ.

ಸಾಮಾನ್ಯವಾಗಿ, ಧರಣಿ-ಪ್ರತಿಭಟನೆ-ಹಬ್ಬ-ಮದುವೆ-ಸಾವುಗಳ ಸಂದರ್ಭದಲ್ಲಿ ಮಾತ್ರ ಕೇಳಿಸುವ ವಾದ್ಯದಂತೆ ಇದು ಅನಿಸಿದರೂ, ಬಹು ಸಮಾಜಗಳ ನೋವಿಗೂ, ನಲಿವಿಗೂ ರಮಾರಮ್ಮನೆ ಸದ್ದುಸ್ಫೋಟಿಸಿ ವಿಜೃಂಭಿಸುವ ಏಕೈಕ ವಾದ್ಯವೂ ಹೌದು.

ಇದನ್ನು ನುಡಿಸುವುದೇ ಒಂದು ಅದ್ಭುತ ಅನುಭವ. ತಮಟೆ ಬಾರಿಸುವ ಅನುಭವದ ಪರಮಾನಂದಕ್ಕೆ ಅವಮಾನದ ಕಾರಣದಿಂದಾಗಿ ಬಹಳಷ್ಟು ಜನ ತೆರೆದುಕೊಳ್ಳದೇ ಇರುವುದು ಬೇಸರದ ಸಂಗತಿ. ಅಸ್ಪೃಶ್ಯತೆಯ ವೈದಿಕ-ಸೋಂಕು ಅಂಟಿಸಿ ಕೈಬಿಟ್ಟಿರುವ ತಮಟೆಯನ್ನು ಪರಿಶಿಷ್ಟರು ಮಾತ್ರ ಬಾರಿಸಲಿ.... ಎಂಬ ಚಾತುರ್ವರ್ಣ್ಯ ಕಟ್ಟಳೆಯಿದ್ದಂತಿದೆ!

ಸಂಸ್ಕೃತಿ ಚಿಂತಕ ರಾಜಪ್ಪ ದಳವಾಯಿ ಅವರೂ ಸೇರಿದಂತೆ ಶಿಬಿರಾರ್ಥಿಗಳು

ಶಿಬಿರಾರ್ಥಿಗೆ ತಮಟೆ ನುಡಿಸುವುದನ್ನು ಕಲಿಸುತ್ತಿರುವ ಭರತ್ ಡಿಂಗ್ರಿ

ತಮಟೆ ನಾದ ನುಡಿವುದೆಂದರೆ, ನೆಲ-ಸಮಾಜಗಳ ನಿಸರ್ಗವಿವೇಕ ಜಗಕೆ ಹಬ್ಬಿದಂತೆ. ತಮಟೆ ನಾದ ನುಡಿವುದೆಂದರೆ, ಪ್ರಾಣ ಮೈದುಂಬಿದಂತೆ. ತಮಟೆ ನಾದ ನುಡಿವುದೆಂದರೆ ಸದ್ದಿಲ್ಲದಂತಿಹ ಸರ್ವಜ್ಞರ ಸದ್ದು ಸ್ಫೋಟಿಸಿದಂತೆ. ತಮಟೆ ನಾದ ನುಡಿವುದೆಂದರೆ, ಸಮನಾಗಿ ಬದುಕುವ ಹಕ್ಕನ್ನೇ ಕಸಿದುಕೊಂಡಿದ್ದ ಸವರ್ಣೀಯರ ಸದ್ದಡಗಿದಂತೆ... ಸತ್ತಂತಿಹರನೂ ಬಡಿದೆಚ್ಚರಿಸಬಲ್ಲ ತಮಟೆ ನಾದ ನಾಡಿನ, ನಾಳಿನ ಸನ್ನದು. ಇದು, ನೆಲ-ಸಮುದಾಯಗಳ ಪಾಲಿಗೆ 'ಅಧಿಕಾರದಾಚೆಗಿನ ಅಧಿಕಾರ'ವಿದ್ದಂತೆ.

ಈಗ ಚರ್ಮದ ಬದಲಿಗೆ ಫೈಬರ್ ತಮಟೆಗಳೂ ಮಾರುಕಟ್ಟೆಗೆ ಬಂದಿವೆ. ಮಾದಿಗ ಸಮುದಾಯದ ಸಾಂಸ್ಕೃತಿಕ ವಾದ್ಯ ಪರಂಪರೆಯಂತೆ ಮಾತ್ರ ಸೀಮಿತವಾಗಿದ್ದ ತಮಟೆ, ಈಗ ಎಲ್ಲಾ ಸಮಾಜಗಳಿಗೂ ಆಕರ್ಷಕವಾಗಿ ಕಾಣುತ್ತಿದೆ. ಅಸ್ಪೃಶ್ಯರ ಪ್ರತಿಭಾವಂತ ವಾದನ ಕೌಶಲಗಳನ್ನು ಇದು ಸಂಕೇತಿಸುತ್ತದೆ. ಈಗಲಾದರೂ ಮತ್ತೆ ತಮಟೆ ಬಾರಿಸುವುದನ್ನು ಪೂರ್ತಿ ಕಲಿಯಬೇಕು ಎಂಬ ದೊಡ್ಡ ಆಸೆ ಮೂಡಿದೆ.

(ಲೇಖಕರು ಚಿತ್ರ ಕಲಾವಿದರು)

## ಮುನ್ನೋಟ 17-09-2023 ರಿಂದ 23-09-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1
ಎಲ್ಲಾ ಸನ್ನಿವೇಶಗಳು ನಿಮ್ಮ ಪರ ಇರುತ್ತವೆ ಎಂದು ಭ್ರಮಿಸಿಕೊಳ್ಳುವುದು ತಪ್ಪು. ಪರಿಶ್ರಮ ಮತ್ತು ಬುದ್ಧಿವಂತಿಕೆಯನ್ನು ಬಳಸಿ ಮಾಡಿದ ಕೆಲಸಗಳಲ್ಲಿ ಸಂಪೂರ್ಣ ಜಯವಿರುತ್ತದೆ. ಸೋಮಾರಿತನವನ್ನು ದೂರ ಇಡುವುದು ಒಳ್ಳೆಯದು. ನಿಮ್ಮ ಸಂಘಟನಾ ಶಕ್ತಿಯನ್ನು ಬೇರೆಯವರು ದುರುಪಯೋಗ ಮಾಡಿಕೊಳ್ಳಬಹುದು. ಸಂಗಾತಿಯು ಮನೆಯಲ್ಲಿ ಅಶಾಂತಿ ಉಂಟುಮಾಡಬಹುದು.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮಾಡುವ ಕೆಲಸಗಳಲ್ಲಿ ತೃಪ್ತಿ ಮತ್ತು ಸಂತೋಷವಿರುತ್ತದೆ. ಮಗನ ವಿಷಯದಲ್ಲಿ ಸಂತೋಷವಾದ ಸುದ್ದಿ ಕೇಳುವಿರಿ. ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಚೇತರಿಕೆ ಕಾಣಬಹುದು. ಹಣಕಾಸಿನ ಸ್ಥಿತಿ ಪ್ರಗತಿಯತ್ತ ಸಾಗುತ್ತದೆ. ಕಾರ್ಯಕ್ಷೇತ್ರದಲ್ಲಿ ಕೆಲಸದ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ. ಕೋರ್ಟು ಕಚೇರಿ ಕೆಲಸಗಳಲ್ಲಿ ಹೆಚ್ಚಿನ ಅಲೆದಾಟವಿರುತ್ತದೆ. ಸರ್ಕಾರಿ ಸಹಾಯಧನ ಸರಾಗವಾಗಿ ಹರಿದು ಬರುತ್ತದೆ.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಪ್ರತಿನಿತ್ಯದ ಕೆಲಸಗಳ ಜೊತೆ ಹೊಸ ಹೊಸ ಕೆಲಸಗಳು ನಿಮ್ಮ ಹೆಗಲೇರುತ್ತವೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಆಶೀರ್ವಾದ ದೊರೆಯುತ್ತದೆ. ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲೇಬೇಕು. ಪೊಲೀಸ್ ವೃತ್ತಿಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರದ ಊರಿಗೆ ಹೋಗಲೇ ಬೇಕಾದ ಸಂದರ್ಭವಿದೆ. ಖರ್ಚಿಗೆ ಕಡಿವಾಣ ಹಾಕಬೇಕಾದ ಅಗತ್ಯವಿದೆ.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ
ಉದ್ಯೋಗದಲ್ಲಿ ಮುಜುಗರ ತರುವಂತಹ ಸಂದರ್ಭಗಳು ಎದುರಾದರೂ ಅದನ್ನು ದಾಟಿ ಬರುವ ಶಕ್ತಿ ನಿಮಗಿರುತ್ತದೆ. ಗೃಹಣಿಯರಿಗೆ ಕುಟುಂಬ ಸದಸ್ಯರಿಂದ ಮೆಚ್ಚುಗೆಯ ಅಥವಾ ಹೊಗಳಿಕೆಯ ಮಾತುಗಳು ಕೇಳಿ ಬರಬಹುದು. ಲೆಕ್ಕಪತ್ರ ಗುಮಾಸ್ತರುಗಳು ಮಾಡುವ ತಪ್ಪಿನಿಂದ ಇಲಾಖೆಗೆ ಕೆಟ್ಟ ಹೆಸರು ಬರುವ ಸಾಧ್ಯತೆ ಇದೆ ಎಚ್ಚರವಹಿಸಿ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರ ನಡೆದು ಲಾಭವಿರುತ್ತದೆ.

**ಸಿಂಹ** — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಲು ಇದ್ದ ಕಾನೂನು ತೊಂದರೆಗಳು ಪರಿಹಾರವಾಗುತ್ತವೆ. ನಿಮ್ಮ ಮಕ್ಕಳು ಆಡುವ ಮಾತುಗಳು ನಿಮಗೆ ಸ್ವಲ್ಪ ಗಾಸಿ ಉಂಟುಮಾಡಬಹುದು. ನವೀನ ರೀತಿಯ ಸ್ತ್ರೀಯರ ಉಡುಪುಗಳನ್ನು ಮಾರುವವರಿಗೆ ಹೆಚ್ಚಿನ ಲಾಭವಿರುತ್ತದೆ. ಹಿರಿಯ ಅಧಿಕಾರಿಗಳಿಗೆ ನಂಬಿಕಸ್ಥ ಸೇವಕರುಗಳು ದೊರೆಯುತ್ತಾರೆ.

**ಕನ್ಯಾ** — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾಣಿಜ್ಯ ಬೆಳೆಯನ್ನು ಬೆಳೆಯುವವರಿಗೆ ಉತ್ತಮ ಆದಾಯವಿರುತ್ತದೆ. ಇಷ್ಟಪಟ್ಟ ಆಭರಣವನ್ನು ಮನಸ್ಸು ಮಾಡಿ ಪಡೆಯುವಿರಿ. ತವರು ಮನೆಯಿಂದ ಆಸ್ತಿ ಅಥವಾ ಹಣ ದೊರೆಯಬಹುದು. ಹಣಕಾಸಿಗೆ ಸಂಬಂಧಿಸಿದ ಯಾವುದೇ ದೊಡ್ಡ ಹೂಡಿಕೆಗಳು ಈಗ ಬೇಡ. ವರ್ಗಾವಣೆಗಾಗಿ ಮಾಡಿದ್ದ ಪ್ರಯತ್ನಗಳು ಫಲ ಕೊಡುವುದು ಕಡಿಮೆ. ಲೇವಾದೇವಿ ವ್ಯವಹಾರವನ್ನು ನಡೆಸುವವರಿಗೆ ಹೆಚ್ಚಿನ ನಷ್ಟ ಆಗಬಹುದು.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಪೂರ್ವ ಆಲೋಚನೆಯಂತೆ ಕುಟುಂಬದಲ್ಲಿನ ಕೆಲಸಗಳು ನಿಧಾನವಾಗಿ ಆಗುತ್ತವೆ. ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಇದ್ದರೂ ಅದನ್ನು ಬಳಸುವ ಬಗ್ಗೆ ಸರಿಯಾಗಿ ಆಲೋಚನೆ ಮಾಡಿ. ಲೆಕ್ಕಪರಿಶೋಧಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ ಇದೆ. ಆರೋಗ್ಯದ ಸುಧಾರಣೆಗಾಗಿ ಆಹಾರ ಕ್ರಮಗಳನ್ನು ವ್ಯತ್ಯಾಸ ಮಾಡಿಕೊಳ್ಳುವಿರಿ. ಅತಿಯಾದ ಮಾನಸಿಕ ಚಿಂತೆ ಕಾಡುವ ಸಾಧ್ಯತೆ ಇದೆ.

**ವೃಶ್ಚಿಕ** — ವಿಶಾಖಾ 4 ಅನೂರಾಧ, ಜ್ಯೇಷ್ಠ
ನಿಮ್ಮ ಕೆಲವೊಂದು ಬುದ್ಧಿವಂತಿಕೆಯ ತೀರ್ಮಾನಗಳು ನಿಮಗೆ ಗೌರವ ತರುತ್ತವೆ. ಕಾನೂನು ಪಂಡಿತರಿಗೆ ಬೇಡಿಕೆ ಹೆಚ್ಚಾಗಿ ಆದಾಯವು ಹೆಚ್ಚುತ್ತದೆ. ಲಲಿತ ಕಲಾ ಕ್ಷೇತ್ರದಲ್ಲಿರುವವರಿಗೆ ಸೂಕ್ತ ಗೌರವ ದೊರೆಯುತ್ತದೆ. ಕರ್ತವ್ಯ ಕೊರತೆಯಿಂದಾಗಿ ಉಲ್ಲಾಸವನ್ನು ಕಳೆದುಕೊಳ್ಳುವ ಸಂದರ್ಭವಿರುತ್ತದೆ. ಮಕ್ಕಳು ವಿದ್ಯಾಭ್ಯಾಸದಲ್ಲಿ ಆಲಸ್ಯ ತೋರಬಹುದು. ಮಕ್ಕಳ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ.

**ಧನುಸ್ಸು** — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮಕ್ಕಳ ಹೆಸರಿನಲ್ಲಿ ಹರಕೆಯ ರೂಪದಲ್ಲಿ ಮಾಡಬೇಕಾಗಿರುವ ಕೆಲಸಗಳನ್ನು ಮಾಡಲು ಮುಂದಾಗುವಿರಿ. ಅದಿರು ಸಂಬಂಧಿತ ಕಚ್ಚಾ ವಸ್ತುಗಳನ್ನು ಮಾರುವವರಿಗೆ ಲಾಭವಿರುತ್ತದೆ. ದಿನಗೂಲಿ ಕಾರ್ಮಿಕರಿಗೆ ಹೆಚ್ಚು ಶ್ರಮದಿಂದ ಹೆಚ್ಚು ಆದಾಯ ಈಗ ಗಳಿಸುವ ಅವಕಾಶ ಇದೆ. ಹೆಚ್ಚು ಒಡನಾಟ ಹೊಂದಿದ ವ್ಯಕ್ತಿಗಳ ಮಾತುಗಳು ಮನಸ್ಸಿಗೆ ಬೇಸರ ತರಬಹುದು.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮನ್ನು ಗೌರವದಿಂದ ಕಾಣುವ ಜನರ ಜೊತೆ ಕಾಲ ಕಳೆಯುವ ಯೋಗವಿದೆ. ವ್ಯವಹಾರಗಳಲ್ಲಿ ಎಲ್ಲಾ ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ಕಂಡರೂ ಒಳಗೆ ಮೋಸ ನಡೆಯುತ್ತಿರುತ್ತದೆ. ಎಂಜಿನಿಯರ್‌ಗಳಿಗೆ ಹೊಸ ಉದ್ಯೋಗಗಳು ದೊರೆಯುವ ಸಾಧ್ಯತೆ ಇದೆ. ನಿಮ್ಮ ವ್ಯವಹಾರಗಳಲ್ಲಿ ಹೊಸ ವ್ಯಕ್ತಿಯ ಪರಿಚಯವಾಗಿ ಅವರಿಂದ ವ್ಯವಹಾರಗಳು ಹೆಚ್ಚು ಅಭಿವೃದ್ಧಿಯನ್ನು ಹೊಂದುವುದು.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಾಹನ ತಂತ್ರಜ್ಞರಿಗೆ ವಿಪುಲ ಅವಕಾಶಗಳು ದೊರೆತು ಹೊಸ ಉದ್ಯೋಗ ಅಥವಾ ಹೊಸ ರೀತಿಯ ಸಂಪಾದನೆಯ ಮಾರ್ಗಗಳು ದೊರೆಯುತ್ತವೆ. ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಮತ್ತು ಮಾರಾಟ ಮಾಡುವವರ ವ್ಯವಹಾರ ವಿಸ್ತರಣೆಯಾಗುತ್ತದೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಗಳಿಗೆ ಆಡಳಿತ ವರ್ಗದಿಂದ ಹೆಚ್ಚಿನ ಅನುಕೂಲಗಳು ದೊರೆಯುತ್ತವೆ.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಕುಟುಂಬದಲ್ಲಿ ನಡೆದ ಹಳೆಯ ಕಹಿ ಘಟನೆಗಳನ್ನು ಕೆದಕುವುದರಿಂದ ನಿಮಗೆ ಹಾನಿ. ಒಡಹುಟ್ಟಿದವರೊಡನೆ ಹೊಂದಾಣಿಕೆ ಮಾಡಿಕೊಳ್ಳುವುದು ಬಹಳ ಒಳ್ಳೆಯದು. ವೃತ್ತಿರಂಗದಲ್ಲಿ ನಮಗಿಂತ ಪರಿಣತರು ಇರುತ್ತಾರೆ ಎಂಬುದನ್ನು ಗಮನಿಸಿ. ವ್ಯಾಪಾರದಲ್ಲಿನ ಬಂಡವಾಳ ಹೆಚ್ಚಿಸುವ ಬಗ್ಗೆ ಹೆಚ್ಚು ಗಮನ ಕೊಡಿ. ವಾಹನ ಚಾಲನೆ ಮಾಡುವಾಗ ಬಹಳ ಎಚ್ಚರಿಕೆ ಇರಲಿ.

## ಪದಬಂಧ 2807



**ಮೇಲಿನಿಂದ ಕೆಳಕ್ಕೆ**
1. ದುಃಖದಿಂದ ಕೂಡಿದ ಅಂಜಿಕೆ 3
2. ಋತುಗಳ ರಾಜನ ನಾಮಾಂಕಿತ ಪಡೆದವ 4
3. ಕರ್ನಾಟಕದ ಬೆಟ್ಟ ಗುಡ್ಡಗಳ ಸೌಂದರ್ಯದ ಬೀಡು 4
4. ಬಡವನಿಗೆ ಕೋಪ ಬಂದಾಗ ಗುರಿಯಾಗುವ ದಂತ ಮೂಲ 3
6. ಕುದಿಯುವ ನೀರಿನ ಶಬ್ದ 4
7. ಮಳೆಗಾಲದಲ್ಲಿ ಸಿಕ್ಕಸಿಕ್ಕ ಹಾಗೆಲ್ಲಾ ಬೆಳೆಯುವ ಅಣಬೆ 4
8. ಸದಾ ಯುದ್ಧ ನಡೆಯುವ ನಿವಾಸ 5
10. ಜನರಿಗೆ ಜನ್ಮ ನೀಡಿದ ಮಾತೆ 3
12. ಹತ್ತು ವಸ್ತುಗಳನ್ನು ಒಳಗೊಂಡ ಊದುಬತ್ತಿ 3
13. ನಮ್ಮ ಕನ್ನಡ ನಾಡಿನ ಉಚ್ಛ್ರಾಯ ಸ್ಥಿತಿ 7
14. ವಿಧಿಲಿಖಿತಕ್ಕೆ ಒಡ್ಡಿದ ಹಣೆ 3
15. ಗಿಡಗಳನ್ನು ಮಕ್ಕಳಂತೆ ಪೋಷಿಸಿ ಬೆಳೆಸುವ ಶಾಲೆ 3
16. ಮಹಾಭಾರತದಲ್ಲಿ ಭೀಮ ದುರ್ಯೋಧನರಿಗೆ ನಡೆದ ಯುದ್ಧ 5
18. ನಿಜವಾಗಿಯೂ ಯಾವುದೇ ಯೋನಿಯಲ್ಲಿ ಹುಟ್ಟದಿರುವ 4
19. ವಿದ್ಯೆಯಲ್ಲಿ ಪರಿಣತಿ ಪಡೆದ ಸರಸ್ವತಿ ಪುತ್ರ 4
21. ಭಾದ್ರಪದದಲ್ಲಿ ಬರುವ ತಾಯಿ ಮಗನಿಗೆ ಸಡಗರದ ಆಚರಣೆ 5
22. ರಾಜನನ್ನು ಪ್ರತಿನಿಧಿಸುವ ರಾಜನ ಭಾರಿ ಬಂಟ 4
23. ನೋವನ್ನು ನೀಗುವವ 4

**ಎಡದಿಂದ ಬಲಕ್ಕೆ**
1. ಹಾಗೆ ನಡೆಯಲು ಸಾಧ್ಯವೇ ಇಲ್ಲ 4
3. ಧರ್ಮ ಪಿತಾಮಹನ ಹೆಸರಲ್ಲಿ ಮಂಡಿಸುವ ತರ್ಕ 4
5. ವಧುವರರನ್ನು ಬಂಧಿಸುವ ಹಾರ 5
9. ಸ್ವರ್ಗಕ್ಕೆ ವ್ಯತಿರಿಕ್ತವಾದ ಸ್ಥಳದಲ್ಲಿ ನಡೆಸುವ ಬದುಕು 5
11. ತೀರಾ ಸಮೀಪವರ್ತಿ 3
12. ವನದಲ್ಲಿ ಬೆಳೆದ ಸುವಾಸಿತ ಸೊಪ್ಪು 3
16. ಮೂರಡಿಯ ಆನೆಯ ಜೊತೆ ಬರುವ ಶಿವ ಪ್ರಿಯೆ 4
17. ನವಗ್ರಹಗಳಲ್ಲಿ ಸೂರ್ಯ ಮತ್ತವನ ಪುತ್ರ 4
18. ದೀರ್ಘವಾಗಿ ಎಂದೆಂದೂ ಇರುವಂತಹದ್ದು 3
20. ಹತ್ತು ವರ್ಷಗಳ ಕಾಲಮಾನ 3

## ಪದಬಂಧ ಉತ್ತರ -2806

**ಮೇಲಿಂದ ಕೆಳಕ್ಕೆ**

1.ಸನಾತನ 2.ಲಕುಮಿಕರ 3.ಸಮಭಾವ 4.ರವಿಕಾಂತಿ 6.ತರಕಾರಿದರ 8.ನವಕರ್ನಾಟಕ 14.ಸಂಗಮೇಶ್ವರ 15.ಜಂಬೂದ್ವೀಪ 16.ಕಲಿಯುಗ 18.ಸಹದೇವ

**ಎಡದಿಂದ ಬಲಕ್ಕೆ**

1.ಸಸ್ಯಶ್ಯಾಮಲ 3.ಸಪ್ತಸಾಗರ 5.ಭಾರತ 7.ನಮನ 9.ಲಕೀವ 10.ರಸೀತಿ 11.ವಕ್ತಾರ 12. ಜಟಕ 13.ರಿಕಾಪು 14.ಸಂಪದ 15.ಜಂಜಾಟ 16.ಕರಗ 17.ರಭಸ 19.ಕದಲಿ 20.ಪದಪ್ರಯೋಗ 21.ರಜತೋತ್ಸವ

# ಬಾಲಪ್ರತಿಭೆಗಳ ಪುಳಕದಲ್ಲಿ

## ಶುಭಾ ಮುದ್ಗಲ್

ಧ್ಯಾನೇಶ್ವರಿ ಫಾಡ್ಕೆ

ರಾಹುಲ್ ವೆಲ್ಲಾಲ

ಭೋಟು ಖಾನ್

ರೋಹನ್ ದಾಸ್

ಭೂಮಿಜಾ
ಪ್ರಸ್ತುತಪಡಿಸುವ
'ಭವಿಷ್ಯದ ಹಾಡುಗಾರರು'
**ದಿನಾಂಕ:**
ಭಾನುವಾರ, 17 ಸೆಪ್ಟೆಂಬರ್ 2023
**ಸಮಯ:** ಸಂಜೆ 7 ಗಂಟೆಗೆ
**ಸ್ಥಳ:** ಎಂಎಲ್‌ಆರ್ ಕನ್ವೆನ್ಷನ್ ಸೆಂಟರ್, ಜೆ.ಪಿ. ನಗರ

### ಇವರೇ ಬಾಲಪ್ರತಿಭೆಗಳು

- **ರಾಹುಲ್ ವೆಲ್ಲಾಲ** - ಕರ್ನಾಟಕ ಸಂಗೀತ. ನಾಲ್ಕನೇ ವಯಸ್ಸಿನಿಂದ ಹಾಡುಗಾರಿಕೆಯಲ್ಲಿ ತೊಡಗಿದ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಬಾಲಪ್ರತಿಭೆ. ಗ್ಲೋಬಲ್ ಚೈಲ್ಡ್ ಪ್ರಾಡಿಜಿ 2020 ಪ್ರಶಸ್ತಿ, ಷಣ್ಮುಖಾನಂದ ಎಂ ಎಸ್ ಸುಬ್ಬಲಕ್ಷ್ಮಿ ಫೆಲೋಶಿಪ್, ಡೆಕ್ಕನ್ ಹೆರಾಲ್ಡ್ ಚೇಂಜ್ ಮೇಕರ್ 2022 ಪ್ರಶಸ್ತಿ, ಬೈಜೂಸ್ ಯಂಗ್ ಜೀನಿಯಸ್ ಪ್ರಶಸ್ತಿ, ಏಳು ರಾಷ್ಟ್ರಗಳಲ್ಲಿ ಕಛೇರಿ ನೀಡಿರುವ ಅತ್ಯಂತ ಕಿರಿಯ ಹಾಡುಗಾರ ದಾಖಲೆ.
- **ಧ್ಯಾನೇಶ್ವರಿ ಫಾಡ್ಕೆ** - ಮೂರು ವರ್ಷದವಳಾದಾಗಿನಿಂದ ಹಿಂದೂಸ್ತಾನಿ ಸಂಗೀತ ಕಲಿಕೆ. 'ಸ ರೆ ಗ ಮಾ ಪ ಲಿಟಲ್ ಚಾಮ್ಪ್ಸ್ 2022' ಎರಡನೇ ಸ್ಥಾನ, ಸುಪ್ರಸಿದ್ಧ ಆಶಾ ಭೋಸ್ಲೆ ಅವರು ಸ್ಥಾಪಿಸಿರುವ ಸ್ವರ ಆಶಾ ಪ್ರಶಸ್ತಿ.
- **ಭೋಟು ಖಾನ್** - ರಾಜಸ್ಥಾನದ ಪುಟ್ಟ ಕುಂದ ಹಳ್ಳಿಯ ಭೋಟು ಖಾನ್ ಮಾಂಗಾನಿಯಾರ್ ಸಂಗೀತದ ಬಾಲ ಪ್ರತಿಭೆ. ನಾಲ್ಕನೇ ವರ್ಷದಿಂದ ವೇದಿಕೆಗಳಲ್ಲಿ ಹಾಡುತ್ತಿದ್ದಾನೆ.
- **ರೋಹನ್ ದಾಸ್** - ಸೂಪರ್ ಸ್ಟಾರ್ ಸಿಂಗರ್ ಕಾರ್ಯಕ್ರಮದಲ್ಲಿ ದೇಶವನ್ನೇ ದಿಗ್ಭ್ರಮೆಗೊಳಿಸಿದ ಪ್ರತಿಭೆ. ಆಗಲೇ ಬೆಂಗಾಲಿ ಚಲನಚಿತ್ರಗಳಿಗೆ ಹಿನ್ನೆಲೆ ಗಾಯನ ನೀಡಿ ಜನಪ್ರಿಯ. ವೇದಿಕೆ ಕಾರ್ಯಕ್ರಮಗಳಿಗೂ ಹೆಸರುವಾಸಿ.

**ಪ್ರತಿಭಾ ನಂದಕುಮಾರ್**

ನಗರದ ಜೆ.ಪಿ.ನಗರದ ಎಂಎಲ್‌ಆರ್ ಕನ್ವೆಷನ್ ಸೆಂಟರ್ ಎಳೆಯ ಪ್ರತಿಭೆಗಳ ಕಂಠಗಳ ರಾಗಾಲಾಪವನ್ನು ಪ್ರತಿಧ್ವನಿಸುತ್ತಾ ಕಂಪನಗಳನ್ನು ಉಂಟುಮಾಡುತ್ತಿದೆ. ಹೆಸರಾಂತ ಗಾಯಕಿ ಶುಭಾ ಮುದ್ಗಲ್ ಅವರು ಎಳೆಯ ಪ್ರತಿಭೆಗಳನ್ನು ತಯಾರು ಮಾಡುತ್ತಿದ್ದಾರೆ. ಇದೇ ಭಾನುವಾರ(ಸೆ.17) ಸಂಜೆ ನಡೆಯಲಿರುವ ಕಾರ್ಯಕ್ರಮದಲ್ಲಿ ಬಾಲಪ್ರತಿಭೆಗಳಾದ ರಾಹುಲ್ ವೆಲ್ಲಾಲ ಕರ್ನಾಟಕ ಸಂಗೀತವನ್ನು, ಧ್ಯಾನೇಶ್ವರಿ ಫಾಡ್ಕೆ ಹಿಂದೂಸ್ತಾನಿ ಸಂಗೀತವನ್ನು, ರೋಹನ್ ದಾಸ್ ಬೆಂಗಾಲಿ ಜಾನಪದ ಸಂಗೀತವನ್ನು ಮತ್ತು ಅತ್ಯಂತ ಕಿರಿಯ ಏಳು ವರ್ಷದ ಭೋಟು ಖಾನ್ ಮಾಂಗಾನಿಯಾರ್ ಸಂಗೀತವನ್ನು ಹಾಡಿ ರಂಜಿಸಲಿದ್ದಾರೆ.

ಗಾಯತ್ರಿ ಕೃಷ್ಣ ಅವರ ಕನಸಿನ ಕೂಸು 'ಭೂಮಿಜಾ' ಸಂಗೀತ ಜಗತ್ತಿನಲ್ಲಿ ಪ್ರತಿಭೆಗಳಿಗೆ ವೇದಿಕೆಯನ್ನೊದಗಿಸುವ ಶ್ಲಾಘನಾರ್ಹ ಕೆಲಸದಲ್ಲಿ ತೊಡಗಿದೆ. 'ಜ್ಯಾಕ್ ಫ್ರೂಟ್ 23' ಭೂಮಿಜಾದ ಐದನೇ ಸಂಗೀತ ಸಮ್ಮೇಳನ. ಹಲವಾರು ಕಮ್ಮಟಗಳು ಮತ್ತು ಕಾರ್ಯಕ್ರಮಗಳನ್ನು ಒಳಗೊಂಡ ಈ ಸಮ್ಮೇಳನ ಈ ಬಾರಿ ಶುಭಾ ಮುದ್ಗಲ್ ಅವರ ನಿರ್ದೇಶನದಲ್ಲಿ ಬಹಳ ವಿಶಿಷ್ಟವಾಗಿ ರೂಪುಗೊಂಡಿದೆ. ಕಮ್ಮಟದಲ್ಲಿ ತೊಡಗಿಕೊಂಡಿದ್ದ ಶುಭಾ ಮುದ್ಗಲ್ ಅವರು ಬಿಡುವಿನಲ್ಲಿ ಹಂಚಿಕೊಂಡ ಆಲೋಚನೆಗಳಿವು...

'ಅಸಂಖ್ಯಾತ ಬಾಲ ಪ್ರತಿಭೆಗಳು ಶಾಸ್ತ್ರೀಯ ಸಂಗೀತದಲ್ಲಿ ಬಹಳ ಗಂಭೀರವಾಗಿ ತೊಡಗಿಕೊಂಡಿದ್ದಾರೆ ಎಂದರೆ ನಿಮಗೆ ಆಶ್ಚರ್ಯವಾಗುತ್ತದೆಯೇ? ಅವರನ್ನು ಯಾರೂ ಬಲವಂತವಾಗಿ ಅದಕ್ಕೆ ತಳ್ಳಿಲ್ಲ, ಬದಲಿಗೆ ತಾವಾಗಿ ಅದಕ್ಕೆ ಒಲಿದಿದ್ದಾರೆ. ಪೂರ್ಣಾವಧಿಯಲ್ಲಿ ಶಾಸ್ತ್ರೀಯ ಸಂಗೀತವನ್ನೇ ವೃತ್ತಿಮಾಡಿಕೊಳ್ಳಲೂ ಅವರು ಬಯಸುತ್ತಾರೆ. ಆದರೆ ನಮ್ಮ ಸಮಾಜದಲ್ಲಿ ಪ್ರಸ್ತುತ ಇರುವ ಪರಿಸ್ಥಿತಿ ನೋಡಿದರೆ ಅದು ಸಾಧ್ಯವೇ ಎನ್ನಿಸುತ್ತಿದೆ. ಪ್ರಾಕ್ಟಿಕಲ್ ಸಮಸ್ಯೆಗಳ ಜೊತೆಗೆ ಅವರ ಮಾನಸಿಕ, ಭಾವನಾತ್ಮಕ ಸಮಸ್ಯೆಗಳೂ ಸೇರಿ ಅವರ ಭವಿಷ್ಯದ ಬಗ್ಗೆ ಚಿಂತಿಸುವಂತೆ ಮಾಡುತ್ತವೆ. ಶಾಸ್ತ್ರೀಯ ಸಂಗೀತವನ್ನೇ ನಂಬಿ ಅವರು ಅದನ್ನೇ ಜೀವನಾಧಾರ ಮಾಡಿಕೊಳ್ಳಬಹುದೇ?

'ಎಷ್ಟೋ ವರ್ಷಗಳಿಂದ ಹೆಸರಾಂತ ಕಲಾವಿದರು ಬೇರೆ ವೃತ್ತಿಯಲ್ಲಿ ತೊಡಗಿಕೊಂಡೇ ಹಾಡುಗಾರಿಕೆಯನ್ನೂ ಮಾಡಿದ್ದಾರೆ ನಿಜ. ಆದರೆ ಇವತ್ತು ಪರಿಸ್ಥಿತಿ ಅಷ್ಟು ಸುಲಭವಿಲ್ಲ. ಸಾಧ್ಯ ಎಂದು ವಾದಿಸುವವರಿಗೆ ವಾಸ್ತವದ ಅರಿವಿಲ್ಲ ಎನ್ನಬೇಕಾಗುತ್ತದೆ. ಕೆಲವೇ ಕಲಾವಿದರಿಗೆ ಆ ಅದೃಷ್ಟ ಇರುತ್ತದೆ. ನಾನೂ ಅಂತಹವರಲ್ಲಿ ಒಬ್ಬಳು. ನಮ್ಮ ಮನೆಯವರ ಬೆಂಬಲದ ಜೊತೆಗೇ ಸಂಗೀತದಿಂದಲೇ ಜೀವನೋಪಾಯ ಮಾಡಿಕೊಳ್ಳುವ ಅದೃಷ್ಟ ನನಗೆ ದಕ್ಕಿದೆ. ಎಷ್ಟು ಕಲಾವಿದರು ಹಾಗೆ ಹೇಳಬಲ್ಲರು? ಇವತ್ತು ಜನಪ್ರಿಯ ಕಲೆಯ ಮುಂದೆ ಶಾಸ್ತ್ರೀಯ ಕಲೆಗಳು ಅವಗಣನೆಗೆ ಒಳಗಾಗಿವೆ. ಆಕಾಶವಾಣಿಯಂತಹ ಸರ್ಕಾರಿ ಮಾಧ್ಯಮಗಳಲ್ಲಿ ಹಾಡುವುದು ಗೌರವದ ಮಾತು ಸರಿ, ಆದರೆ ಕಲಾವಿದರಿಗೆ ಸಾವಿರದ ಐನೂರು ಕೊಟ್ಟರೆ ಹೇಗೆ? ಕಲಾವಿದರ ಸಂಭಾವನೆ ಕುರಿತು ಚಿಂತಿಸದೇ ಇದ್ದರೆ ಶಾಸ್ತ್ರೀಯ ಕಲೆಗಳು ಹೇಗೆ ಉಳಿಯುತ್ತವೆ? ಶಾಸ್ತ್ರೀಯ ಸಂಗೀತ ಕಛೇರಿಗೆ ಜನರು ಬರುವುದಿಲ್ಲ, ಫ್ಯೂಷನ್ ಮ್ಯೂಸಿಕ್‌ಗಾದರೆ ಬರುತ್ತಾರೆ ಎನ್ನುತ್ತಾರೆ. ಫ್ಯೂಷನ್ ಮ್ಯೂಸಿಕ್ ಬಗ್ಗೆ ನನಗೇನೂ ತಕರಾರಿಲ್ಲ, ನನಗೂ ಅದು ಇಷ್ಟವೇ. ಆದರೆ ಇಷ್ಟಪಟ್ಟು ಮಾಡುವುದು ಬೇರೆ, ಒತ್ತಾಯಪೂರ್ವಕ ಮಾಡುವುದು ಬೇರೆ. ಪ್ರತಿ ಕಲಾವಿದರೂ ತಮ್ಮದೇ ಸ್ವತಂತ್ರ ಆಯ್ಕೆಗಳನ್ನು ಮಾಡಬೇಕಾಗುತ್ತದೆ. ಈ ಎಳೆಯ ಪ್ರತಿಭೆಗಳು ಇದೇ ತಾನೇ ತಮ್ಮ ಛಾಪು ಮೂಡಿಸಲು ಹೊರಟಿರುವಾಗ ಹೇಗೆ ತಾನೇ ಇಂತಹ ಗಟ್ಟಿ ನಿರ್ಧಾರಗಳನ್ನು ಮಾಡಲು ಸಾಧ್ಯ?

'ನಮ್ಮ ಸಂಸ್ಕೃತಿ ನಮ್ಮ ಪರಂಪರೆ ಉಳಿಸಬೇಕು ಅಂತ ಬರೀ ತುಟಿಮೇಲಿನ ಬೆಂಬಲ ಕೊಟ್ಟು ವೇದಿಕೆಗಳಲ್ಲಿ ಭಾಷಣ ಮಾಡಿ ಟಿಕೆಟ್ ಖರೀದಿಸಿ ಬರದಿದ್ದರೆ ಹೇಗೆ? ಟಿಕೆಟ್ ಭಾರಿ ಬೆಲೆಯದೇನಿಲ್ಲ. ಒಂದು ಸ್ಟ್ಯಾಂಡ್ ಅಪ್ ಕಾಮಿಡಿ ಶೋಗೆ ಇದರ ಆರುಪಟ್ಟು ಹೆಚ್ಚು ಬೆಲೆಯ ಟಿಕೆಟ್ ಇಟ್ಟರೂ ಅರ್ಧಗಂಟೆಯಲ್ಲಿ ಮಾರಾಟವಾಗಿಬಿಡುತ್ತದೆ. ನನಗೆ ಸ್ಟ್ಯಾಂಡ್ ಅಪ್ ಕಾಮಿಡಿ ಕಲಾವಿದರ ಬಗ್ಗೆ ಏನೂ ತಕರಾರಿಲ್ಲ. ನನಗೂ ಇಷ್ಟ. ಆದರೆ ಸಮಾಜ ನಮ್ಮ ಶಾಸ್ತ್ರೀಯ ಕಲೆಗಳನ್ನು ಉಳಿಸಿ ಬೆಳೆಸುವ ಬಗ್ಗೆ ಗಟ್ಟಿ ನಿರ್ಧಾರ ತೆಗೆದುಕೊಳ್ಳಬೇಕಲ್ಲವೇ? ಎಳೆಯ ಪ್ರತಿಭೆಗಳೇನೋ ತಯಾರಾಗುತ್ತಿದ್ದಾರೆ, ಅವರಿಗೆ ನೀವು ಪ್ರೋತ್ಸಾಹ ಕೊಡಲು ಸಿದ್ಧರಿರುವಿರೆ?'

ಇಷ್ಟು ಹೇಳಿದ ಮೇಲೆ ಶುಭಾ ಅವರಿಗೆ ಹಾಗಾದರೆ ಈ ಎಳೆಯ ಕಲಾವಿದರಿಗೆ ನೀವೇನು ಭರವಸೆ ಕೊಡುತ್ತೀರಿ ಎಂದು ಪ್ರಶ್ನೆ ಹಾಕಿದೆ. ಅದಕ್ಕೆ ಅವರು ಹೀಗೆಂದರು: 'ಒಬ್ಬ ಗುರುವಾಗಿ ನಾನು ಅವರಿಗೆ ಯಾವುದೇ ಫೀಸು ತೆಗೆದುಕೊಳ್ಳದೇ ಕಲಿಸುತ್ತೇನೆ. ಸಂಗೀತ ಕಲಿಸುವುದರಲ್ಲಿ ನಾನು ಯಾವುದೇ ಮಿತಿ ಹಾಕಿಕೊಳ್ಳುವುದಿಲ್ಲ. ಆದರೆ ಅವರ ಜೀವನಾಧಾರದ ಬಗ್ಗೆ ನಾನು ಭರವಸೆ ಕೊಡಲು ಸಾಧ್ಯವಿಲ್ಲ. ತಂದೆ-ತಾಯಿಗಳು ಮಕ್ಕಳ ವೃತ್ತಿ ಬದುಕಿನ ಬಗ್ಗೆ ಕಳವಳ ವ್ಯಕ್ತಪಡಿಸಿದರೆ ಅದನ್ನು ನಾನು ಅಲ್ಲಗಳೆಯಲಾಗುವುದಿಲ್ಲ. ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ರಿಹರ್ಸಲ್ ಸಮಯದಲ್ಲಿ ನನಗೆ ಗಂಟಲು ಉಬ್ಬಿ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿತ್ತು (ಈ ಮಾತು ಹೇಳುವಾಗ ಶುಭಾ ಮುದ್ಗಲ್ ಅವರ ಕಣ್ಣಾಲಿಗಳು ನಿಜಕ್ಕೂ ತುಂಬಿಕೊಂಡವು). ಈ ಮಕ್ಕಳಲ್ಲಿ ಕೆಲವರು ತಮ್ಮ ಊರು ಬಿಟ್ಟು ಎಲ್ಲಿಗೂ ಪ್ರಯಾಣ ಮಾಡಿದವರೇ ಅಲ್ಲ. ಈ ಹೊಸ ಊರಿನಲ್ಲಿ ಅಪರಿಚಿತ ವೇದಿಕೆಯಲ್ಲಿ ಅವರು ಮನಸೋ ಸಂಗೀತವನ್ನು ಅಷ್ಟು ಭವ್ಯ ದಿವ್ಯವಾಗಿ ಹಾಡುತ್ತಿದ್ದರೆ ಅವರ ಜನ್ಮಜಾತ ಪ್ರತಿಭೆಗೆ ಪುಳಕಿತಳಾಗುತ್ತಿದ್ದೆ. ಅವರ ಈ ಪ್ರತಿಭೆಗೆ ತಕ್ಕ ಮನ್ನಣೆ ಸಿಗಲಿ, ಅವರು ಶಾಸ್ತ್ರೀಯ ಸಂಗೀತವನ್ನೇ ಉಸಿರಾಗಿಸಿಕೊಂಡು ಮುಂದುವರಿಯುವ ಅವಕಾಶ ಅವರಿಗೆ ಸಿಗಲಿ ಎಂದು ಪ್ರಾರ್ಥಿಸಿದೆ.' ❖

---

# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



## ಡಣ್ಣ ಚಿಕ್ಕು ಕ್ಷೀರ್ಯಸ್ಫು ಕಥೆಯ — ಪುಂಗಿ ಪೀಕಲಾಟ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

**ಊರಿನ ಜಾತ್ರೆಗೆ ಹಾವಾಡಿಗನೊಬ್ಬ ಬಂದಿದ್ದ. ನೆರೆದ ಜನರೆದುರು ಹಾವಿದ್ದ ಬುಟ್ಟಿಯನ್ನು ತೆರೆದು ಪುಂಗಿ ಊದಲಾರಂಭಿಸಿದ. ಆತ ಎಷ್ಟೇ ಜೋರಾಗಿ ಪುಂಗಿ ಊದಿದರೂ ಬುಟ್ಟಿಯಲ್ಲಿದ್ದ ಹಾವು ಏಳಲೇ ಇಲ್ಲ. ಹಾವಾಡಿಗನಿಗೆ ಸಿಟ್ಟು ಬಂದು ಮತ್ತಷ್ಟು ಜೋರಾಗಿ ಊದಲಾರಂಭಿಸಿದ. ಅಷ್ಟರಲ್ಲೇ ಹಾವಾಡಿಗನ ಹಿಂದೆ ಇದ್ದ ಕಾಡಿನಿಂದ ಮೂರ್ನಾಲ್ಕು ಹಾವುಗಳು ಮೆಲ್ಲನೆ ಆತನ ಹಿಂದೆ ಬಂದಿದ್ದವು. ಅವುಗಳಲ್ಲಿ ಒಂದು ಹಾವು ಹೆಡೆಯೆತ್ತಿ ಬುಸ್‌ಗುಟ್ಟಿದ್ದನ್ನು ಕಂಡು ಹಾವಾಡಿಗ ಬೆಚ್ಚಿಬಿದ್ದ.**




## ಮೋ(G)ನ — ENGLISH

ಇಲ್ಲಿ 'LL' ಅಕ್ಷರಗಳನ್ನು ಕೊಡಲಾಗಿದೆ. ನೀವು ಹಿಂದೆ ಇನ್ನೆರಡು ಅಕ್ಷರ ತುಂಬಿ ನಾಲ್ಕಕ್ಷರಗಳ ಪದ ರಚಿಸಿ

| | | | | |
|---|---|---|---|---|
| 1 | | | L | L |
| 2 | | | L | L |
| 3 | | | L | L |
| 4 | | | L | L |
| 5 | | | L | L |
| 6 | | | L | L |
| 7 | | | L | L |
| 8 | | | L | L |
| 9 | | | L | L |
| 10 | | | L | L |
| 11 | | | L | L |
| 12 | | | L | L |
| 13 | | | L | L |
| 14 | | | L | L |

## ಪದಗಳ ಸರಮಾಲೆ

ಇಲ್ಲಿ ಒಂದು ಪದ ಕೊಡಲಾಗಿದೆ. ಅವುಗಳ ಅಕ್ಷರಗಳು ಆರಂಭದಿಂದ 1–2–3 ಸೇರಿ ಒಂದು ಪದವಾದರೆ, 2–3–4 ಸೇರಿ ಮತ್ತೊಂದು ಪದ, 3–4–5 ಸೇರಿ ಮತ್ತೊಂದು ಪದ, 4–5–6 ಸೇರಿ ಮತ್ತೊಂದು, 5–6–7 ಸೇರಿ ಮತ್ತೊಂದು, 6–7–8 ಸೇರಿ ಮತ್ತೊಂದು ಹಾಗೂ 7–8–9 ಸೇರಿ ಮತ್ತೊಂದು ಪದ ಹೀಗೆ ಹೂವಿನ ಮಾಲೆ ಹೆಣೆದಂತೆ ಒಂದಕ್ಕೊಂದು ಬೆಸುಗೆಯಾಗಿ ಸರಮಾಲೆಯಾಗಿದೆ. ಓದಿ ಖುಷಿ ಪಡಿರಿ.

**1 2 3 4 5 6 7 8 9**
**ಪ್ರಸಂಗಮಕರಗಳೆಯ**

## ಗಣಿತದಲ್ಲಿ ಗರ್ದಿ ಗಮ್ಮತ್ತು

### ಫಿಬೋನಾಚಿ ಸಂಖ್ಯಾ ಸರಣಿ

ಯಾವುದಾದರೊಂದು ಅಂಕಿ ಬರೆಯಿರಿ. ಅದೇ ಅಂಕಿಯನ್ನು ಮತ್ತೊಮ್ಮೆ ಅದರ ಕೆಳಗೆ ಬರೆಯಿರಿ. ಈಗ ಆ ಎರಡೂ ಅಂಕಿ ಕೂಡಿಸಿ ಮೂರನೇ ಸಂಖ್ಯೆಯಾಗಿ ಮೇಲಿನ ಅಂಕಿಗಳ ಕೆಳಗೆ ಬರೆಯಿರಿ. ಈಗ ಎರಡನೇ ಸಂಖ್ಯೆ ಹಾಗೂ ಮೂರನೇ ಸಂಖ್ಯೆ ಕೂಡಿಸಿ. ಅದರ ಕೆಳಗೆ ಬರೆಯಿರಿ. ಹೀಗೆ ಪಟ್ಟಿಯನ್ನು ನಿಮಗೆ ಸಾಕಾಗುಷ್ಟು ಬೆಳೆಸಿರಿ. ಈಗ ಈ ಪಟ್ಟಿಯಲ್ಲಿ ಮೇಲಿನಿಂದ ಕ್ರಮವಾಗಿ ಎಲ್ಲಿಯವರೆಗೆ ಕೂಡಿಸಬೇಕಾಗಿದೆಯೋ ಅದನ್ನು ಅರೆಕ್ಷಣದಲ್ಲಿ ಮಾಡಬಹುದು. ಹೇಗೆ?

ಹೀಗೆ: ನೀವು ಮೊದಲ ಅಂಕಿಯಿಂದ ಎಲ್ಲಿಯವರೆಗೆ ಕೂಡಿಸಬೇಕಾಗಿದೆಯೋ ಆ ಸಂಖ್ಯೆಯ ಮುಂದಿನ ಸಂಖ್ಯೆ ಬಿಟ್ಟು ಮುಂದಿನ ಸಂಖ್ಯೆಯಲ್ಲಿ ಆರಂಭದ ಸಂಖ್ಯೆ ಕಳೆದರೆ ಮೊತ್ತ ಸಿಗುವುದು.

| ಉದಾ: 1 | ಉದಾ: 2 |
|---|---|
| 1 | 2 |
| 1 | 2 |
| 2 | 4 |
| 3 | 6 |
| 5 | 10 |
| 8 | 16 |
| 13 | 26 |
| 21 | 42 |
| 34 | 68 |
| 55 | 110 |
| 89 | ...... (ಮುಂದುವರಿಕೆ) |
| 144 | |
| 233 | |
| 377 | |
| 610 | |
| 987 | |
| 1597 | |
| 2584 ↓ | |

ಉದಾ: 1 ಇಲ್ಲಿ 1ರಿಂದ 610ರವರೆಗಿನ ಸಂಖ್ಯೆಗಳನ್ನು ಕೂಡಿಸಬೇಕಿದ್ದರೆ , 610ರ ಮುಂದಿನ ಸಂಖ್ಯೆ ಬಿಟ್ಟು ಮುಂದಿನ ಸಂಖ್ಯೆ ಎಂದರೆ 1597.
1597–1(ಮೊದಲ ಅಂಕಿ) ಉತ್ತರ = 1596
ಇದೇ ರೀತಿ ನೀವು ಲೆಕ್ಕ ಮಾಡಿ ನೋಡಿ.

## ಸ್ವಲ್ಪ ಯೋಚನೆ ಮಾಡಿ

ಒಬ್ಬ ರೈತ ಚಕ್ಕಡಿ ಹೊಡೆದುಕೊಂಡು ಹೋಗುವಾಗ ದಾರಿಯಲ್ಲಿ ಅದರಲ್ಲಿದ್ದ ತನ್ನ ಗೆಳೆಯನಿಗೆ ಕೇಳಿದ; ಈ ಚಕ್ಕಡಿಯಲ್ಲಿ 'ಗಿ'ಯಿಂದ ಕೊನೆಗೊಳ್ಳುವ ಐದು ಪದಗಳಿವೆ. ಅವು ಯಾವುವು? ನೀವು ಹೇಳಿ ನೋಡೋಣ...

## ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಭವ | ಮರು | ಲಹ
ಸಂತ | ಗಂಧ | ತರಿ

**ಅಕ್ಷರ ಪಟ್ಟಿ**

ಸಂ | ಕ | ವ | ಕ | ಖಾ | ಶ್ರೀ
ನ | ರಿ | ಸ | ಕ | ಸು | ಕ

## ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ:
**majakoora@prajavani.co.in**

## ಕಳೆದ ಸಂಚಿಕೆಯ ಸರಿ ಉತ್ತರಗಳು

**ಪದಬೆಸುಗೆ**
1.ಸಿಂಬಳಪ 2.ಸಂಕಟಕ 3.ಗೀಜಗಲಿ 4.ಸವಾರಿಧಿ 5.ಟಗರುಡ 6.ಸನಾದಿನಿ

**ಜಾಣಪದ ಆಟ**
1.ತಿಜೋರಿ 2.ಹಗುರ 3.ಒಳಗೆ 4.ಬಿಹಾರಿ 5.ನಡುವೆ 6.ಕಾವಲು 7.ನೇತಾರ 8.ಕಾಯಿಸು 9.ಸುಸ್ವರ 10.ಗರತಿ

**ಸ್ವಲ್ಪ ಯೋಚನೆ ಮಾಡಿ**
ಗೌಡ್ರೊ_ತ್ತಾಡ್ಲ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಸೃಜನಾ ಟಿ.ಆರ್
ಹೊಸಪೇಟೆ

ಗೌತಮ್
ಗಬ್ಬೂರು

ಜಾನ್ವಿ ಎಂ.ತಾಳಿಕೋಟಿ
ಹುಬ್ಬಳ್ಳಿ


ಸುಬ್ರಹ್ಮಣ್ಯ ಬಿ.
ಗದಗ

ಯುತಿಕಾ ಜಿ.
ದಾವಣಗೆರೆ

ಸಮೀಕ್ಷ ಸಿ.
ಬೆಂಗಳೂರು